ಸಮಕಾಲೀನ ಸಾಂಸ್ಕೃತಿಕ ಟಿಪ್ಪಣಿಗಳು

ಡಿ ಎಸ್ ನಾಗಭೂಷಣ

ನೀರೆಲ್ಲವೂ ತೀರ್ಥ



೧೯೫೨ರ ಫೆಬ್ರುವರಿ ೧ರಂದು ಬೆಂಗಳೂರು ಗ್ರಾಮಾಂತರ ಜಿಲ್ಲೆ ಹೊಸಕೋಟೆ ತಾಲ್ಲೂಕಿನ ತಿಮ್ಮಸಂದ್ರದಲ್ಲಿ, ಶಾಲಾ ಮಾಸ್ತರರಾಗಿದ್ದ **ಸಿ.ಹೆಚ್.ಸೂರಾಚಾರ್** ಹಾಗೂ **ಗೌರಮ್ಮ** ದಂಪತಿಗಳ ಎರಡನೇ ಮಗನಾಗಿ ಜನಿಸಿದ **ಡಿ.ಎಸ್.ನಾಗಭೂಷಣ**, ಅದೇ ಜಿಲ್ಲೆಯ ಹಸಿಗಾಳ ಮತ್ತು ತ್ಯಾಮಗೊಂಡ್ಲುಗಳಲ್ಲಿ ಶಾಲಾ ಶಿಕ್ಷಣ ಮುಗಿಸಿ, ಬೆಂಗಳೂರು ವಿಶ್ವವಿದ್ಯಾನಿಲಯದಿಂದ ಗಣಿತಶಾಸ್ತ್ರದಲ್ಲಿ ೧೯೭೧ರಲ್ಲಿ ಆನರ್ಸ್ ಮತ್ತು ೧೯೭೩ರಲ್ಲಿ ಸ್ನಾತಕೋತ್ತರ ಪದವಿಗಳನ್ನು ಪಡೆದವರು. ೧೯೭೫ರಲ್ಲಿ ದೆಹಲಿಯ ಆಕಾಶವಾಣಿ ಕೇಂದ್ರದ ಸುದ್ದಿ ವಿಭಾಗದಲ್ಲಿ ತಮ್ಮ ವೃತ್ತಿ ಜೀವನವನ್ನು ಆರಂಭಿಸಿದ ಇವರು, ಅದೇ ಸಂಸ್ಥೆಯ ವಿವಿಧ ಕೇಂದ್ರಗಳಲ್ಲಿ ವಿವಿಧ ಹುದ್ದೆಗಳಲ್ಲಿ ೩೦ ವರ್ಷಗಳ ಕಾಲ ಕಾರ್ಯ ನಿರ್ವಹಿಸಿ ಈಗ ಸ್ವಯಂ ನಿವೃತ್ತಿ ಪಡೆದು ತಮ್ಮ ಪತ್ನಿ **ಸವಿತಾ ನಾಗಭೂಷಣ** ಅವರೊಂದಿಗೆ ಶಿವಮೊಗ್ಗದಲ್ಲಿ ನೆಲೆಸಿದ್ದಾರೆ.

ಸಾಹಿತ್ಯ ಮತ್ತು ಸಂಸ್ಕೃತಿ ವಿಮರ್ಶೆ ಹಾಗೂ ಮುಖ್ಯವಾಗಿ ಆಧುನಿಕತೆ, ಅಭಿವೃದ್ಧಿ ಮತ್ತು ಸಾಮಾಜಿಕ ನ್ಯಾಯಗಳನ್ನು ಕುರಿತ ವಿಮರ್ಶೆಗಳನ್ನೊಳಗೊಂಡ ಸಮಾಜವಾದಿ ಚಿಂತನೆ ನಾಗಭೂಷಣ ಅವರ ಆಸಕ್ತಿಯ ಕ್ಷೇತ್ರಗಳಾಗಿವೆ. ಈ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಅವರು ಹಲವು ಗ್ರಂಥಗಳನ್ನು ರಚಿಸಿದ್ದಾರೆ ಮತ್ತು ಪತ್ರಿಕಾ ಅಂಕಣಗಳನ್ನು ಬರೆದಿದ್ದಾರೆ. ಸಾಹಿತ್ಯ-ಸಂಸ್ಕೃತಿ ವಿಮರ್ಶೆಯ ಅವರ ಮುಖ್ಯ ಪುಸ್ತಕಗಳೆಂದರೆ, **ಗಮನ, ಅನೇಕ, ಕುವೆಂಪು ಸಾಹಿತ್ಯ ದರ್ಶನ, ಈ ಭೂಮಿಯಿಂದ ಆ ಆಕಾಶದವರೆಗೆ, ಕನ್ನಡ-ಕರ್ನಾಟಕ ಸಂಕಥನಗಳು** ಮತ್ತು **ಇಲ್ಲಿ ಯಾವುದೂ ಅಮುಖ್ಯವಲ್ಲ. ರೂಪರೂಪಗಳನು ದಾಟಿ** ಇವರ ಈವರೆಗಿನ ಸಾಹಿತ್ಯ ವಿಮರ್ಶೆಗಳ ಸಮಗ್ರ ಸಂಕಲನ. **ಲೋಹಿಯಾ ಸಮಾಜವಾದ ದರ್ಶನ, ಜೆಪಿ : ಒಂದು ಅಪೂರ್ಣ ಕ್ರಾಂತಿಯ ಕಥೆ, ಬೇರು-ಬಿಳಲು, ಮರಳಿ ಬರಲಿದೆ ಸಮಾಜವಾದ!, ಇದು ಭಾರತ! ಇದು ಭಾರತ!!, ವಸಿಷ್ಠರು ಮತ್ತು ವಾಲ್ಮೀಕಿಯರು, ಕಂಡದ್ದು ಕಾಡಿದ್ದು, ರೈತ ಭಾರತ ಅವಸಾನದ ಅಂಚಿನಲ್ಲಿ, ಲೋಹಿಯಾ ಜೊತೆಯಲ್ಲಿ, ಭೂಮಿಯನ್ನು ಹಂಚಿಕೊಳ್ಳುವ ಬಗೆಗಳು** ಮತ್ತು **ಕಾಲಕ್ರಮ** ಇವರ ಮುಖ್ಯ ಸಮಾಜವಾದಿ ಚಿಂತನೆಯ ಕೃತಿಗಳು. **ಸಮತೆಯ ಸಾಕಾರಮೂರ್ತಿ ರಮಣ ಮಹರ್ಷಿ** ಇವರ ಕಿರುಪುಸ್ತಕಗಳಲ್ಲೊಂದು.

ಮಾಸ್ತಿ ಸಾಹಿತ್ಯ: ಸಮಗ್ರ ದರ್ಶನ (ಮಾಸ್ತಿ ಶತಮಾನೋತ್ಸವ ಸಂಪುಟ), **ಕುವೆಂಪು: ಒಂದು ಪುನರನ್ವೇಷಣೆ** (ಕುವೆಂಪು ಶತಮಾನೋತ್ಸವ ಸಂಪುಟ), **ಲೋಹಿಯಾ: ವ್ಯಕ್ತಿ-ವಿಚಾರ ವಿಮರ್ಶೆ** (ಲೋಹಿಯಾ ಶತಮಾನೋತ್ಸವ ಸಂಪುಟ), **ಕಾಡಿನ ಹುಡುಗ ಕೃಷ್ಣ** (ಶ್ರೀಕೃಷ್ಣ ಆಲನಹಳ್ಳಿ ನೆನಪಿನ ಸಂಪುಟ), **ಹಣತೆ** (ಜಿಎಸ್ಸೆಸ್ ಅಭಿನಂದನ ಗ್ರಂಥ), **ಆ ಗಣರಾಜ್ಯ-ಈ ಕರ್ನಾಟಕ** (ಕರ್ನಾಟಕ ರಾಜ್ಯದ ಚಿನ್ನದ ಹಬ್ಬದ ಸಂಪುಟ) **ಉರಿದ ಪಂಜು** (ಕೆ. ರಾಮದಾಸ್ ಸ್ಮರಣ ಸಂಪುಟ), **ನಮ್ಮ ಶಾಮಣ್ಣ** (ಕಡಿದಾಳು ಶಾಮಣ್ಣ ಗೌರವ ಗ್ರಂಥ) ಇವರು ಸಂಪಾದಿಸಿರುವ/ಸಹ ಸಂಪಾದಿಸಿರುವ ಮುಖ್ಯ ಸಂಪುಟಗಳು

ಡಿ.ಎಸ್. ನಾಗಭೂಷಣ ಅವರು **ಲೋಹಿಯಾ ಜನ್ಮ ಶತಾಬ್ದಿ ಪ್ರತಿಷ್ಠಾನದ** ಸ್ಥಾಪಕ ಅಧ್ಯಕ್ಷರೂ ಆಗಿ ಸಂಸ್ಕೃತಿ ಮತ್ತು ಸಮಾಜಗಳನ್ನು ಕುರಿತು ರಾಜ್ಯಾದ್ಯಂತ ಅನೇಕ ಅಧ್ಯಯನ ಶಿಬಿರಗಳನ್ನು ನಡೆಸುತ್ತಿರುವರಲ್ಲದೆ, **'ಹೊಸ ಮನುಷ್ಯ'** ಎಂಬ ಸಮಾಜವಾದಿ ಮಾಸಿಕವನ್ನೂ ಸಂಪಾದಿಸುತ್ತಿದ್ದಾರೆ.

ನೀರೆಲ್ಲವೂ ತೀರ್ಥ

(ಸಮಕಾಲೀನ ಸಾಂಸ್ಕೃತಿಕ ಟಿಪ್ಪಣಿಗಳು)

ಡಿ.ಎಸ್. ನಾಗಭೂಷಣ

ವಸಂತ ಪ್ರಕಾಶನ
ನಂ. 360, 10ನೇ 'ಬಿ' ಮುಖ್ಯರಸ್ತೆ, 3ನೇ ಬ್ಲಾಕ್
ಜಯನಗರ, ಬೆಂಗಳೂರು – 560 011

Neerellavu teertha (Kannada) : a book on contemporary literary and cultural notes written by D.S. Nagabhushana; published by Vasantha Prakashana, No. 360, 10th 'B' Main, Jayanagar 3rd Block, Bangalore - 560 011, India. Ph : 080-22443996, e-mail: vasantha_prakashana@yahoo.com, www.vasanthaprakashana.com

First print : 2017

ಪ್ರಥಮ ಮುದ್ರಣ : 2017
ಉಪಯೋಗಿಸಿದ ಕಾಗದ : 70 ಜಿಎಸ್ಎಂ ಮ್ಯಾಪ್‌ಲಿಥೊ
ಪುಟಗಳು : 200 ಬೆಲೆ : ರೂ. 150

ಮುಖಪುಟ ವಿನ್ಯಾಸ : ಸೌಮ್ಯ ಕಲ್ಯಾಣ್‌ಕರ್
ಪುಟ ವಿನ್ಯಾಸ : ವಸಂತ ಪ್ರಕಾಶನ
ಮುದ್ರಣ : ಶ್ರೀರಂಗ ಪ್ರಿಂಟರ್ಸ್ ಪ್ರೈ.ಲಿ.,

ಅರ್ಪಣೆ

ಕವಿ ಗೆಳೆಯ

ಎಸ್. ಮಂಜುನಾಥ್

ಅವರ

ಆರ್ದ್ರ ನೆನಪಿಗೆ

ಲೇಖಕರ ಮಾತು

ನಾನು ೨೦೧೧ರಿಂದ ಸಂಪಾದಿಸಿ ಪ್ರಕಟಿಸುತ್ತಿದ್ದ 'ಹೊಸ ಮನುಷ್ಯ' ಸಮಾಜವಾದಿ ಮಾಸಿಕಕ್ಕಾಗಿ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಗಳಿಗೆ ಸಂಬಂಧಪಟ್ಟ ಸಮಕಾಲೀನ ವಿದ್ಯಮಾನಗಳ ಬಗ್ಗೆ ನಾನು ಈವರೆಗೆ ಬರೆದ ಟಿಪ್ಪಣಿಗಳನ್ನು ಸಂಗ್ರಹಿಸಿ ಇಲ್ಲಿ ನೀಡುತ್ತಿದ್ದೇನೆ. ಆರಂಭದ ಮೊದಲೆರಡು ವರ್ಷಗಳಲ್ಲಿ ಪತ್ರಿಕೆಯ ಸೀಮಿತ ಪುಟಗಳಿಂದಾಗಿ ರಾಜಕೀಯ ಸಂಪಾದಕೀಯ ಟಿಪ್ಪಣಿಗಳಲ್ಲೇ ಮುಳುಗಿರುತ್ತಿದ್ದ ನಾನು ಈ ಟಿಪ್ಪಣಿಗಳನ್ನು ನಿಯಮಿತವಾಗಿ ಬರೆಯುತ್ತಿರಲಿಲ್ಲ. ಆದರೆ ನಂತರದ ವರ್ಷಗಳಲ್ಲಿ ನಮ್ಮ ನಡುವಿನ ಪ್ರತಿಯೊಂದು ಸಾಂಸ್ಕೃತಿಕ ವಿದ್ಯಮಾನಕ್ಕೂ ನಾನು ಈ ಟಿಪ್ಪಣಿಗಳ ಮೂಲಕ ಪ್ರತಿಸ್ಪಂದಿಸಿ ಪತ್ರಿಕೆಯ ಜೀವಂತಿಕೆಯನ್ನು ವಿಸ್ತರಿಸುವ ಮತ್ತು ನನ್ನ ಜೀವಂತಿಕೆಯನ್ನು ಕಾಪಾಡಿಕೊಳ್ಳುವ ಕಡೆಯೂ ಗಮನ ಹರಿಸಿದೆ. ಈ ಟಿಪ್ಪಣಿಗಳು ಪ್ರಕಟವಾದ ಕ್ರಮದಲ್ಲೇ ಮಾಹೆವಾರು ಇಲ್ಲಿ ಅವು ಸಂಗ್ರಹಿತವಾಗಿ ಪ್ರಕಟವಾಗುತ್ತಿವೆ. ಇವೆಲ್ಲವೂ ವಿಮರ್ಶೆ, ವಿಶ್ಲೇಷಣೆ ಮತ್ತು ಟೀಕೆಗಳ ರೂಪದಲ್ಲಿವೆ ಮತ್ತು ನಾಲ್ಕೈದು ಬರಹಗಳ ಹೊರತಾಗಿ ಎಲ್ಲವೂ ಸಂಕ್ಷಿಪ್ತವಾಗಿದ್ದು ಚರ್ಚೆಗಳನ್ನು ಹುಟ್ಟು ಹಾಕುವ ಉದ್ದೇಶಗಳನ್ನಷ್ಟೇ ಹೊಂದಿವೆ. ಇಲ್ಲಿರುವ ಹಲವು ನಾಟಕಗಳ ಮತ್ತು ಪುಸ್ತಕ ವಿಮರ್ಶೆಗಳಿಗೂ ಈ ಮಾತು ಅನ್ವಯಿಸುತ್ತದೆ. ಹಾಗೇ, ಇಲ್ಲಿ ಹೆಗ್ಗೋಡಿನ 'ನೀನಾಸಂ'ಗೆ ಸಂಬಂಧಿಸಿದಂತೆಯೇ ಐದಾರು ಲೇಖನ/ಟಿಪ್ಪಣಿಗಳಿದ್ದರೆ ಅದಕ್ಕೆ ಕಾರಣ ಅದು ಕರ್ನಾಟಕದ-ಕನ್ನಡದ ಒಂದು ಅನನ್ಯ ಸಾಂಸ್ಕೃತಿಕ ಸಂಸ್ಥೆಯಾಗಿರುವುದು ಮತ್ತು ನಾನೂ ಹೆಗ್ಗೋಡಿಗೆ ಸಮೀಪವಿರುವ ಶಿವಮೊಗ್ಗದಲ್ಲಿ ನೆಲೆಸಿದವನಾಗಿ ಸಹಜವಾಗಿಯೇ ಅದರ ಚಟುವಟಿಕೆಗಳಲ್ಲಿ ಆಸಕ್ತನಾಗಿರುವುದು.

'ಹೊಸ ಮನುಷ್ಯ' ತನ್ನನ್ನು ತಾನು ಸಮಾಜವಾದಿ ಎಂದು ಕರೆದುಕೊಂಡಿರುವ ಪತ್ರಿಕೆ. ಹಾಗಾಗಿ ಇಲ್ಲಿನ ಟಿಪ್ಪಣಿಗಳದ್ದೂ ಸಹಜವಾಗಿ ಅದೇ ನೋಟ. ಅಂದ ಮಾತ್ರಕ್ಕೆ ಈ ನೋಟ ರಾಜಕೀಯ ಬದ್ಧತೆಗಳ ನೋಟ ಎಂದು ಯಾರಾದರೂ ಬಗೆದರೆ ಅವರಿಗೆ ನಿರ್ದಿಷ್ಟವಾಗಿ ಕರ್ನಾಟಕದ ಮತ್ತು ಸಾರ್ವತ್ರಿಕವಾಗಿ ಭಾರತದ ಸಮಾಜವಾದಿ ಆಂದೋಲನದ ಪರಿಚಯವಿಲ್ಲ ಎಂದು ಹೇಳಬೇಕಾಗುತ್ತದೆ. ಏಕೆಂದರೆ,

ಜಗತ್ತಿನ ಸಕಲ ವಿದ್ಯಮಾನಗಳನ್ನೂ ಒಂದು ಆವೃತ ಅಂದರೆ ಪೂರ್ಣ ದೃಷ್ಟಿಯಲ್ಲಿ ನೋಡುವ ಕ್ರಮವನ್ನು ಪ್ರತಿಪಾದಿಸುವ ಸಮಾಜವಾದ, ವಿಶೇಷವಾಗಿ ಲೋಹಿಯಾ ಸಮಾಜವಾದವು ಭಾಷೆ, ಸಾಹಿತ್ಯ ಸಂಸ್ಕೃತಿಗಳ ವಿಷಯದಲ್ಲಿ ಯಾವುದೇ ರಾಜಕೀಯ ಶೃಂಖಲೆಗಳನ್ನು ಒಪ್ಪದ ಒಂದು ಅನಧಿಪತ್ಯವಾದಿ ಚಿಂತನಕ್ರಮವೇ ಆಗಿದೆ. ಮತ್ತೂ ಮುಖ್ಯವಾಗಿ ಇಲ್ಲಿ ಹೇಳಬೇಕಾದ ಮಾತೆಂದರೆ, ಇಲ್ಲಿನ ಸಮಾಜವಾದವು ಮಾರ್ಕ್ಸ್‌ವಾದಿ ಚಿಂತನೆಯ ವ್ಯಾಪ್ತಿಗೆ ಸೇರದ್ದಾಗಿದೆ. ಯಾವುದೇ ಸಾಹಿತ್ಯ-ಸಂಸ್ಕೃತಿಗಳ ಸೃಜನಶೀಲತೆ ಉಕ್ಕುವುದು ಅವುಗಳ ಅನಧಿಪತ್ಯವಾದಿ ನೆಲೆಗಳಿಂದಲೇ ಅಲ್ಲವೇ? ಹಾಗಾಗಿಯೇ ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯ ಬಹುಪಾಲು ಎಲ್ಲ ಪ್ರಮುಖ ಲೇಖಕರೂ- ಕುವೆಂಪು, ಪುತಿನರಿಂದ ಹಿಡಿದು ಜಿಎಸ್ಸೆಸ್, ಲಂಕೇಶ್, ತೇಜಸ್ವಿ, ಅನಂತಮೂರ್ತಿ ಅವರನ್ನೂ ಒಳಗೊಂಡಂತೆ, ದೇವನೂರ ಮಹಾದೇವ ಅವರವರೆಗೆ- ಲೋಹಿಯಾ ಅವರ ಸಮಾಜವಾದಿ ವಿಚಾರಧಾರೆಯಿಂದ ಪ್ರಭಾವಿತರಾಗಿರುವವರೇ ಆಗಿದ್ದಾರೆ. ಇಂತಹ ಪರಂಪರೆಯ ವಾರಸುದಾರಿಕೆಯಲ್ಲಿ ಬರೆಯಲ್ಪಟ್ಟಿರುವ ಇಲ್ಲಿನ ಟಿಪ್ಪಣಿಗಳು ಸಹಜವಾಗಿಯೇ ಸಾಹಿತ್ಯ-ಸಂಸ್ಕೃತಿ ಲೋಕಗಳ ಸ್ವಾಯತ್ತತೆಯಲ್ಲಿ ನಂಬಿಕೆ ಇರಿಸಿ ತಮ್ಮ ನೋಟವನ್ನು ರೂಪಿಸಿಕೊಂಡಿವೆ ಎಂದು ನಾನು ಪ್ರತ್ಯೇಕವಾಗಿ ಹೇಳಬೇಕಿಲ್ಲ. ಈ ಟಿಪ್ಪಣಿಗಳನ್ನು ಓದುವ ಓದುಗರಲ್ಲೂ ಅಂತಹುದೇ ಭಾವನೆ ಮೂಡುವುದಾದರೆ ನನ್ನ ಬರವಣಿಗೆ ಸಾರ್ಥಕ.

ಈ ಟಿಪ್ಪಣಿಗಳನ್ನು ಬರೆದಿರುವ ಈ ಐದಾರು ವರ್ಷಗಳಲ್ಲಿ ಕನ್ನಡ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿ ವಲಯಗಳಲ್ಲಿ ಅನೇಕ ನಿರ್ಣಾಯಕ ಬೆಳವಣಿಗೆಗಳು ಆಗಿ ಹೋಗಿವೆ. ನಮ್ಮ ಕನ್ನಡದ ಅರಿವನ್ನು ರೂಪಿಸಿದ ಹಲವು ಹಿರಿಯರು ನಮ್ಮನ್ನಗಲಿ ಹೋಗಿದ್ದಾರೆ. ಹಾಗೇ ಹೊಸ ತಲೆಮಾರುಗಳ ಹಲವು ಪ್ರತಿಭಾಶಾಲಿಗಳು ಭಾಷೆ-ಸಾಹಿತ್ಯ-ಸಂಸ್ಕೃತಿಗಳನ್ನು ಕುರಿತಂತೆ ತಮ್ಮದೇ ವಿಶಿಷ್ಟ ಒಳನೋಟಗಳುಳ್ಳ ಹಲವು ಹೊಸ ಪ್ರಮೇಯಗಳನ್ನು ಮಂಡಿಸಿದ್ದಾರೆ. ಹಾಗೇ ಹಲವು ಸೃಜನಾತ್ಮಕ ಕೃತಿಗಳನ್ನು ರಚಿಸಿ ಕನ್ನಡ ಸಾಹಿತ್ಯಕ್ಕೆ ಹೊಸ ಹೊಳಪನ್ನೂ ನೀಡಿದ್ದಾರೆ. ಇವೆಲ್ಲವೂ ಹೊಸ ಬಗೆಯ ಚರ್ಚೆಗಳಿಗೂ ಕಾರಣವಾಗಿ ಕನ್ನಡ ಮನಸ್ಸನ್ನು ಸಮೃದ್ಧಗೊಳಿಸಿವೆ. ಆದರೆ ಇದೇ ಅವಧಿಯಲ್ಲಿ ಕನ್ನಡ ಒಂದು ಜನರ ಭಾಷೆಯಾಗಿ ತನ್ನ ಪ್ರಸ್ತುತತೆಯ ಹಲವು ನೆಲೆಗಳನ್ನು ಕಳೆದುಕೊಳ್ಳುತ್ತಾ ಹೋಗುತ್ತಿರುವುದನ್ನು ನಾವೆಲ್ಲ ವಿಷಾದದಿಂದ ಗಮನಿಸುತ್ತಿದ್ದೇವೆ. ಮುಖ್ಯವಾಗಿ, ಪ್ರಾಥಮಿಕ ಶಿಕ್ಷಣದ ಮಾಧ್ಯಮವಾಗಿ ಅದು ಸಂವಿಧಾನಾತ್ಮಕವಾಗಿಯೇ ಹಿನ್ನಡೆಯನ್ನು ಅನುಭವಿಸಿರುವುದು ಗಂಭೀರ ಆಲೋಚನೆ ಮತ್ತು ಚರ್ಚೆಗಳಿಗೆ ಕಾರಣವಾಗಿದೆ. ಇದು ಇತ್ತೀಚಿನ ದಿನಗಳಲ್ಲಿ ನಮ್ಮ ರಾಷ್ಟ್ರಜೀವನವನ್ನು ನಿಯಂತ್ರಿಸುವ ಶಕ್ತಿಗಳ ಸ್ವರೂಪವೇ ಮೂಲಭೂತವಾಗಿ ಬದಲಾಗುತ್ತಿರುವ ಸೂಚನೆಗಳನ್ನು ನೀಡುತ್ತದಲ್ಲದೆ, ಅದೇ ಹೊತ್ತಿನಲ್ಲಿ ನಮ್ಮ ಸಾಂಸ್ಕೃತಿಕ ಲೋಕದ ಆದ್ಯತೆಗಳೂ ಬದಲಾಗುತ್ತಿರುವ ಸೂಚನೆಗಳನ್ನು ನೀಡುತ್ತಿದೆ. ಹಾಗಾಗಿ ಇಂತಹ ಒಂದು ನಿರ್ಣಾಯಕ ಸಾಮಾಜಿಕ ಸ್ಥಿತ್ಯಂತರದ ಕಾಲದಲ್ಲಿ ಇಲ್ಲಿನ ಟಿಪ್ಪಣಿಗಳಲ್ಲಿ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿ ಕುರಿತ ನೋಟಗಳು ಹೊಸ

ಸಂಕೀರ್ಣತೆ ಮತ್ತು ತೀವ್ರತೆಗಳೊಂದಿಗೆ ಒಂದರೊಳಗೊಂದು ಹಾಸುಹೊಕ್ಕಾಗಿ ಮೂಡಿರುವುದನ್ನೂ ಓದುಗರು ಗಮನಿಸಬಹುದು. ಇದರ ಪರಿಣಾಮವೆಂದರೆ ನಮ್ಮ ಬದುಕಿನ ಬದಲಾಗುತ್ತಿರುವ ಮೌಲ್ಯಗಳು, ದೃಷ್ಟಿಕೋನ ಮತ್ತು ಕ್ರಮ ಹಾಗೂ ಮಾದರಿಗಳನ್ನು ಕುರಿತ ಪರೋಕ್ಷ ಪ್ರಸ್ತಾಪಗಳೂ ಇಲ್ಲಿ ಕಾಣಿಸಿಕೊಳ್ಳುವುದು. ಈ ಟಿಪ್ಪಣಿಗಳು ಏನಾದರೂ ಸಮಾಜವಾದಿ ಎಂಬ ದೃಷ್ಟಿಕೋನಕ್ಕೆ ಪಕ್ಕಾಗುವುದಾದದರೆ ಇಲ್ಲೇ, ಈ ನೆಲೆಗಳಲ್ಲೇ ಎಂದು ನಾನು ಭಾವಿಸುವೆ.

ಕನ್ನಡ ಭಾಷೆ ಇತ್ತೀಚಿನ ವರ್ಷಗಳಲ್ಲಿ ಎದುರಿಸುತ್ತಿರುವ ಇನ್ನೊಂದು ಆತಂಕವೆಂದರೆ, ಅದು ಗಣಕ ಯಂತ್ರದ ಭಾಷೆಯಾಗಿ ಬೆಳೆಯದಿರುವುದು. ಅಥವಾ ಇನ್ನೂ ಸರಿಯಾಗಿ ಹೇಳುವುದಾದರೆ, ಅದನ್ನು ಹಾಗೆ ಸಮರ್ಥವಾಗಿ ಬೆಳಸಲಾಗದಿರುವುದು. ಗಣಕ ಭಾಷಾಭಿವೃದ್ಧಿಯ ಕ್ಷೇತ್ರದಲ್ಲಿ ಕನ್ನಡಿಗರೇ ಮುಂಚೂಣೀಯಲ್ಲಿದ್ದರೂ ಇಂತಹ ಪರಿಸ್ಥಿತಿ ಉಂಟಾಗಿರುವುದು ಕನ್ನಡ ಎದುರಿಸುತ್ತಿರುವ ಇಂದಿನ ಸಾಂಸ್ಕೃತಿಕ ಬಿಕ್ಕಟ್ಟಿನ ಮೂಲದ ಬಗ್ಗೆ ಒಂದು ಸೂಚನೆಯನ್ನಾದರೂ ಕೊಡುತ್ತದೆ. ಇದರಿಂದಾಗಿ ಮತ್ತೆ ಕನ್ನಡ ಇಂದಿನ ತಂತ್ರಜ್ಞಾನ ಪ್ರಧಾನ ಬದುಕಿನ ಪರಿಪ್ರೇಕ್ಷ್ಯದಲ್ಲಿ ಜನರ ಭಾಷೆಯಾಗಿ ಉಳಿಯಲು ಏದುಸಿರು ಬಿಡುವಂತಾಗಿದೆ. ಇದಕ್ಕೆ ಈ ಹಿಂದೆ ಪ್ರಸ್ತಾಪಿಸಿದ ಇಂದು ನಮ್ಮ ರಾಷ್ಟ್ರಜೀವನವನ್ನು ನಿಯಂತ್ರಿಸತೊಡಗಿರುವ–ಲಾಭ ಪ್ರಾಧಾನ್ಯತೆಯ ವ್ಯಾಪಾರವೇ ಬದುಕಿನ ಆದರ್ಶ ಮಾದರಿಗಳನ್ನು ರೂಪಿಸುವ–ಹೊಸ ಶಕ್ತಿಗಳ ಸ್ವರೂಪವೇ ಕಾರಣವಾಗಿದೆ. ಮತ್ತೆ ಹೀಗೆ ನಾವು ಸಮಾಜವಾದದ ಚರ್ಚೆಗೇ ತಲುಪುತ್ತೇವೆ. ಅಂದರೆ, ರಾಷ್ಟ್ರದ ಪ್ರತಿ ಪ್ರಜೆಯ ಬದುಕಿನ (ಕ್ರಮದ) ಸ್ವಾಯತ್ತತೆಯ ಹಕ್ಕನ್ನು ಕಾಪಾಡುವ ರಾಜಕಾರಣವೇ ಸಮಾಜವಾದ ಎಂಬ ಅರಿವಿಗೆ ನಾವು ಬರುತ್ತೇವೆ.

ಆದರೆ ಇಂತಹ ಅರಿವಿನಿಂದ ಜನರನ್ನು ದೂರವಿರಿಸಲು ಮತ್ತು ಈ ರಾಜಕಾರಣವನ್ನು ಸೋಲಿಸಲೆಂದೇ, ಆಳುವ ಪ್ರಭುತ್ವಗಳೀಗ ಭಾಷೆ–ಸಾಹಿತ್ಯ–ಸಂಸ್ಕೃತಿಗಳ ಹೆಸರಲ್ಲಿ ಭಾರಿ ಗಾತ್ರಗಳ ಅನೇಕ ಆಮಿಷಗಳನ್ನು ಒಡ್ಡುತ್ತಿವೆ. ಹಣದ ರಾಶಿಯನ್ನೇ ಹರಿಸುತ್ತಿವೆ. ನಮ್ಮ ರಾಜ್ಯದಲ್ಲೇ ಕನ್ನಡ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಗಳ ಪೋಷಣೆಯ ಹೆಸರಿನಲ್ಲಿ ಆರಂಭಿಸಲಾಗಿರುವ ಅಧಿಕಾರ–ಪ್ರಾಧಿಕಾರ–ಅಕಾಡೆಮಿಗಳ ಸಂಖ್ಯೆಯನ್ನು ನೋಡಿ. ಹಾಗೇ ಅವುಗಳಿಗೆ ಮಾಡಲಾಗುತ್ತಿರುವ ನೇಮಕಾತಿಯ ಹಿಂದಿನ ರಾಜಕಾರಣವನ್ನೂ ಮತ್ತು ಅವುಗಳಿಗೆ ನೀಡಲಾಗುತ್ತಿರುವ ಅನುದಾನಗಳ ಪ್ರಮಾಣವನ್ನೂ ನೋಡಿ ಮತ್ತು ಅವು ನಡೆಸುತ್ತಿರುವ ಕಾರ್ಯಕ್ರಮಗಳ ಅದ್ದೂರಿಯನ್ನೇ ನೋಡಿ. ಇವುಗಳ ಜೊತೆಗೆ ಸ್ಥಾಪಿಸಲಾಗುತ್ತಿರುವ ಪ್ರಶಸ್ತಿ ಪುರಸ್ಕಾರಗಳ ವೈವಿಧ್ಯಮಯತೆಯನ್ನೂ ಮತ್ತು ಅವುಗಳ ನಗದು ಮೌಲ್ಯಗಳನ್ನೂ ನೋಡಿ. ಹಾಗೇ ಅವುಗಳಿಗಾಗಿ ನಡೆದಿರುವ ಆಯ್ಕೆಗಳ ಹಿಂದಿನ ರಾಜಕಾರಣವನ್ನೂ ನೋಡಿ. ಒಟ್ಟಾರೆಯಾಗಿ ನೋಡಿದಾಗ ಸಾಹಿತ್ಯ–ಸಂಸ್ಕೃತಿಗಳ ಕೆಲಸಗಳೆಂದರೆ, ಸಮಾಜ ಕಲ್ಯಾಣ ಇಲಾಖೆ ನಡೆಸುವ ಕಾಮಗಾರಿ ಕೆಲಸಗಳಂತೆ ಕಾಣತೊಡಗಿವೆ. ಇಂದು ಸರ್ಕಾರಿ ಮತ್ತು ಖಾಸಗಿ ವಲಯಗಳೆರಡರಿಂದಲೂ ಹೊರಬೀಳುತ್ತಿರುವ

ರಾಶಿ ರಾಶಿ ಪುಸ್ತಕಗಳು, ಧ್ವನಿಮುದ್ರಿಕೆಗಳು, ಚಲಚಿತ್ರಗಳು. ಟಿವಿ ವಾಹಿನಿಗಳು ಮತ್ತು ಇತರೆ ಕನ್ನಡ ಸಾಮಗ್ರಿಗಳು ಈ ಕಾಮಗಾರಿಗಳ ಉತ್ಪನ್ನಗಳೇ ಆಗಿದ್ದು, ಇವು ಸಂಸ್ಕೃತಿಯ ಉತ್ಕರ್ಷಕ್ಕಿಂತ ಅದಕ್ಕೆ ಒಳಗಿಂದ ತಗುಲಿರುವ ರೋಗವನ್ನು ಸೂಚಿಸುವ ಊತದಂತೆಯೇ ನನಗೆ ಕಾಣುತ್ತದೆ.

ಇಂತಹ ಎಲ್ಲ ಕೆಲಸಗಳ ಉದ್ದೇಶ ಹಣ ಮತ್ತು ಅಧಿಕಾರಗಳ ರಾಜಕಾರಣದ ಮೂಲಕ ಸಮಾಜದ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಸೂಕ್ಷ್ಮಗಳನ್ನು ನಾಶ ಮಾಡಿ ಪ್ರಭುತ್ವದ ಆಟ–ಪಾಠಗಳನ್ನು ವಿಮರ್ಶಿಸುವ, ಪ್ರಶ್ನಿಸುವ ಸಮಾಜದ ಶಕ್ತಿಯನ್ನೇ ಘಾತಗೊಳಿಸುವುದೇ ಆಗಿದೆ. ಒಂದು ಸಣ್ಣ ಉದಾಹರಣೆಯನ್ನೇ ನೋಡಿ. ನಮ್ಮ ರಾಜ್ಯದ ವಿಧಾನ ಪರಿಷತ್ತಿನಲ್ಲಿ ಈಗ ಕೆಲವು ವರ್ಷಗಳಿಂದ ಕರ್ನಾಟಕದ ಇತಿಹಾಸದಲ್ಲೇ ಮೊದಲ ಬಾರಿಗೆ ಸಾಹಿತ್ಯ–ಸಂಸ್ಕೃತಿಗಳನ್ನು ಪ್ರತಿನಿಧಿಸುವ ಸದಸ್ಯರೇ ಇಲ್ಲವಾಗಿದ್ದಾರೆ! ಇನ್ನು ಮುವ್ವತ್ತು ಮೂರು ಸದಸ್ಯ ಸಂಖ್ಯೆಯ ಸಂಪುಟದಲ್ಲಿರುವುದು ಓರ್ವ ಮಹಿಳೆ ಮಾತ್ರ! ಇದಕ್ಕಿಂತ ಹೆಚ್ಚು ಆತಂಕದ ಸಂಗತಿ ಎಂದರೆ, ಈ ಬಗ್ಗೆ ಕನ್ನಡದ ಬುದ್ಧಿಜೀವಿ ಲೋಕದ ಸೊಲ್ಲೇ ಇಲ್ಲವಾಗಿರುವುದು!! ಸ್ತ್ರೀವಾದಿ ರಾಜಕಾರಣ ಜಾಣ ಕುರುಡಿಗೆ ಒಳಗಾಗಿರುವುದು!!

ಇಂತಹ ದುರಂತಮಯ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಈ ಟಿಪ್ಪಣಿಗಳನ್ನು ಬರೆಯಲಾಗಿದೆ. ಹೀಗಾಗಿ ಈ ಟಿಪ್ಪಣಿಗಳು ಇಂದಿನ ಕನ್ನಡ ಸಾಹಿತ್ಯಿಕ–ಸಾಂಸ್ಕೃತಿಕ ಪರಿದೃಶ್ಯದೊಳಕ್ಕೊಂದು ವಿಮರ್ಶಾತ್ಮಕ ಪ್ರವೇಶ ಒದಗಿಸಬಹುದೆಂದು ಭಾವಿಸಿದ್ದೇನೆ. ಹಾಗೇ, ಓದುಗರು ಈ ಪ್ರವೇಶವನ್ನು ಒಂದು ಆತ್ಮಾವಲೋಕನಕ್ಕೆ ಬಳಸಿಕೊಂಡು ಪ್ರಸ್ತುತ ಸವಾಲುಗಳೆದುರು ಅವನ್ನು ಮುರಿದು ಕಟ್ಟಲು ಯತ್ನಿಸುತ್ತಾ ನನ್ನ ಇಲ್ಲಿನ ಆಲೋಚನೆಗಳನ್ನು ಇನ್ನಷ್ಟು ವಿಸ್ತರಿಸುವರು ಎಂದು ಆಶಿಸುವೆ.

ಈ ಸಂಗ್ರಹದಲ್ಲಿ, ಆಧುನಿಕ ಕನ್ನಡ ಸಾಹಿತ್ಯ–ಸಾಂಸ್ಕೃತಿಕ ಲೋಕದ ನಮ್ಮದೇ ಕಾಲದ ಅಧ್ವರ್ಯುಗಳೆನಿಸಿದ್ದ ಜಿಎಸ್ಸೆಸ್ ಎಂದೇ ಪ್ರಸಿದ್ಧರಾಗಿದ್ದ ಜಿ.ಎಸ್. ಶಿವರುದ್ರಪ್ಪನವರ ನಿಧನದ ಸಂದರ್ಭದಲ್ಲಿ ನಾನು ಬರೆಯಲೇಬೇಕಿದ್ದ ಟಿಪ್ಪಣಿಯೊಂದನ್ನು ಕೆಲವು ಅನಿವಾರ್ಯ ಕಾರಣಗಳಿಂದ ಬರೆಯಲಾಗಲಿಲ್ಲ ಎಂಬ ವಿಷಾದ ನನಗಿದೆ ಎಂಬುದನ್ನೂ ಇಲ್ಲಿ ತಿಳಿಸಬೇಕು. ಇದಕ್ಕೆ ಒಂದು ಕಾರಣ, ೨೦೧೩ರ ಡಿಸೆಂಬರ್ ೨೩ರಂದು ಅವರು ನಿಧನರಾಗುವ ಹೊತ್ತಿಗೆ ನಮ್ಮ ಆ ತಿಂಗಳ ಸಂಚಿಕೆ ಮುದ್ರಣಕ್ಕೆ ಹೋಗಿದ್ದುದು. ಮತ್ತು ಮುಂದಿನ ಜನವರಿ ಸಂಚಿಕೆಗಾಗಿ ನಾನು ಬೇರೆ ಎರಡು ಮುಖ್ಯ ವಿಷಯಗಳ ಬಗ್ಗೆ ಟಿಪ್ಪಣಿಗಳನ್ನು ಬರೆಯಲೇಬೇಕಾಗಿ ಬಂದು ಆ ಸಂಚಿಕೆಯಲ್ಲಿನ ನನ್ನ ಬರವಣಿಗೆಯ ಮಿತಿಯನ್ನು ದಾಟಲಾಗದ್ದು. ಹಾಗಾಗಿ ಈ ಸಂಚಿಕೆಯಲ್ಲಿ ಜಿಎಸ್ಸೆಸ್‌ಗೆ ಶ್ರದ್ಧಾಂಜಲಿಯಾಗಿ ಪ್ರಕಟವಾದ ನನ್ನ ಗೆಳೆಯರೊಬ್ಬರ ಲೇಖನವನ್ನು ಅವರ ಅನುಮತಿಯೊಂದಿಗೆ ಕೊನೆಯಲ್ಲಿ ಅನುಬಂಧದದಲ್ಲಿ ನೀಡಿದ್ದೇನೆ.

ಇನ್ನು ಈ ಸಂಗ್ರಹಕ್ಕೆ ನಾನು ನೀಡಿರುವ ಶೀರ್ಷಿಕೆಯ ಬಗ್ಗೆ ಎರಡು ಮಾತು.

ಇದು ಕುವೆಂಪು ಅವರು ತಮ್ಮ 'ಮಲೆಗಳಲ್ಲಿ ಮದುಮಗಳು' ಕಾದಂಬರಿಗೆ ನಾಂದಿ ಪದ್ಯದಂತೆ ಬರೆದಿರುವ ಸಾಲುಗಳಿಂದ ಆಯ್ದ 'ಯಾವುದೂ ಅಲ್ಲ ವ್ಯರ್ಥ, ನೀರೆಲ್ಲವೂ ತೀರ್ಥ' ಎಂಬ ಮಾತಿನ ಕೊನೆಯ ಭಾಗ. ಈ ಕೊನೆಯ ಭಾಗದ ಅರ್ಥ ಸಾರ್ಥಕ್ಯ ಇರುವುದು ಅದರ ಮೊದಲ ಭಾಗದಲ್ಲಿ. 'ಯಾವುದೂ ಅಲ್ಲ ವ್ಯರ್ಥ' ಎಂಬ ಈ ಭಾಗದ ಮಾತು ನನ್ನ ಇಲ್ಲಿನ ಬರಹಗಳನ್ನು ಕುರಿತ ನನ್ನ ನಂಬಿಕೆಯನ್ನು ಸೂಚಿಸುತ್ತಾ 'ನೀರೆಲ್ಲವೂ ತೀರ್ಥ' ಎಂಬ ಈ ಸಂಗ್ರಹದ ಶೀರ್ಷಿಕೆಗೆ ಒಂದು ವಿಶೇಷ ಬೆಡಗನ್ನು ನೀಡುತ್ತದೆ ಎಂದು ಭಾವಿಸಿದ್ದೇನೆ.

ಇನ್ನೊಂದು ಮಾತು: ಇಲ್ಲಿರುವ ಶ್ರೀಮತಿ ರಾಜೇಶ್ವರಿ ತೇಜಸ್ವಿ ಮತ್ತು ಯು.ಆರ್. ಅನಂತಮೂರ್ತಿಯವರೊಂದಿಗಿನ ಸಂದರ್ಶನಗಳು ನನ್ನ ಈ ಹಿಂದಿನ 'ಕನ್ನಡ ಮನಸ್ಸು ಮತ್ತು ಇತರ ಲೇಖನಗಳು' ಕೃತಿಯಲ್ಲಿ ತಪ್ಪಿ ಸೇರಿಹೋಗಿದ್ದು, ಅವು ನನ್ನ ಈ ಪ್ರಸ್ತುತ ಸಂಗ್ರಹದಲ್ಲಿ ಇರಲೇಬೇಕಾದ ದಾಖಲೆಗಳಾದ್ದರಿಂದ ಇಲ್ಲಿಯೂ ಅವನ್ನು ಸೇರಿಸಿದ್ದೇನೆ. ಅದಕ್ಕಾಗಿ ಕ್ಷಮೆ ಇರಲಿ.

ಈ ಪುಸ್ತಕವನ್ನು ವಸಂತ ಪ್ರಕಾಶನದ ಗೆಳೆಯರಾದ ಮುರಳಿ ಅವರು ಪ್ರಕಟಿಸುತ್ತಿದ್ದಾರೆ. ಇದಕ್ಕೆ ಕಾರಣರಾದವರು ನನ್ನ ಇನ್ನಿಬ್ಬರು ಗೆಳೆಯರಾದ ಟಿ.ಎನ್. ವಾಸುದೇವಮೂರ್ತಿ ಮತ್ತು ಕೆ. ಸತ್ಯನಾರಾಯಣ ಅವರು. ವಾಸುದೇವ ಮೂರ್ತಿಯವರು ಈ ಪುಸ್ತಕಕ್ಕೊಂದು ಬೆನ್ನುಡಿಯನ್ನೂ ಬರೆದು ಕೊಟ್ಟಿದ್ದಾರೆ. ಪುಸ್ತಕದ ರಕ್ಷಾಪುಟ ರಚಿಸಿಕೊಟ್ಟವರು ಕಲಾವಿದೆ ಸೌಮ್ಯ ಕಲ್ಯಾಣ್‌ಕರ್ ಅವರು. ಪುಸ್ತಕದ ಹಿಂಬದಿಯಲ್ಲಿರುವ ನನ್ನ ಭಾವಚಿತ್ರವನ್ನು ತೆಗೆದುಕೊಟ್ಟವರು ಬಿ.ವಿ. ಗುರುರಾಜ್ ಅವರು. ಇವರೆಲ್ಲರಿಗೂ ನನ್ನ ಕೃತಜ್ಞತೆಗಳು ಸಲ್ಲುತ್ತವೆ.

ಈ ಪುಸ್ತಕವನ್ನು ನಾನು ಅರ್ಪಿಸಿರುವುದು ನನ್ನ ನಿಡುಗಾಲದ ಗೆಳೆಯ ಮತ್ತು ಕನ್ನಡದ ಅನನ್ಯ ಕವಿ ಜೀವಯಾನದ ಮಂಜುನಾಥ್ ಎಂದೇ ತನ್ನನ್ನು ಕರೆದುಕೊಳ್ಳಲು ಇಚ್ಛಿಸುತ್ತಿದ್ದ ಎಸ್. ಮಂಜುನಾಥ್‌ಗೆ. ನನ್ನ ಬರಹಗಳ ಬಗ್ಗೆ ಸಮಯ ಸಿಕ್ಕಾಗಲೆಲ್ಲ ದೂರವಾಣಿಯಲ್ಲೇ ದೀರ್ಘವಾಗಿ ಚರ್ಚೆ ಮಾಡುತ್ತಾ ನನ್ನ ಅರಿವಿನ ದಿಗಂತಗಳನ್ನು ವಿಸ್ತರಿಸುತ್ತಿದ್ದ ಈ ಗೆಳೆಯ ಬಹು ಅನಿರೀಕ್ಷಿತವಾಗಿ ನಮ್ಮನ್ನು ಅಗಲಿ ಹೋಗಿದ್ದಾರೆ. ಆ ದುಃಖದ ಆರ್ದ್ರತೆ ಇನ್ನೂ ಆರಿಲ್ಲ. ಈ ಅರ್ಪಣೆಯನ್ನು ಅವರು ಎಲ್ಲಿದ್ದರೂ ಪ್ರೀತಿಯಿಂದ ಒಪ್ಪಿಕೊಳ್ಳುತ್ತಾರೆ ಎಂದು ಭಾವಿಸಿದ್ದೇನೆ.

ಈವರೆಗಿನ ನನ್ನ ಎಲ್ಲ ಪುಸ್ತಕಗಳನ್ನೂ ಕೊಂಡು ಓದಿ ಪ್ರೋತ್ಸಾಹಿಸಿದಂತೆ ಓದುಗರು ಈ ಪುಸ್ತಕವನ್ನೂ ಕೊಂಡು ಪ್ರೋತ್ಸಾಹಿಸುವರು ಎಂದು ನಂಬಿದ್ದೇನೆ.

ಶಿವಮೊಗ್ಗ

ಡಿ.ಎಸ್. ನಾಗಭೂಷಣ
ಎಚ್‌ಐಜಿ–೫, 'ನುಡಿ', ಕಲ್ಲಹಳ್ಳಿ ಎಕ್ಸ್‌ಟೆನ್ಷನ್,
ವಿನೋಬ ನಗರ, ಶಿವಮೊಗ್ಗ – ೫೭೭೨೦೪
ಮೊ: ೯೪೪೯೨೪೨೨೮೪

ಪರಿವಿಡಿ

ಅಕ್ಟೋಬರ್, ೨೦೧೧

ಕಂಬಾರರಿಗೆ ಜ್ಞಾನಪೀಠ; ಪಾಟೀಲರಿಗೆ ಪಂಪ ಪ್ರಶಸ್ತಿ

ಕನ್ನಡಕ್ಕೆ ಎಂಟನೇ ಜ್ಞಾನಪೀಠ ಪ್ರಶಸ್ತಿ ಬಂದಿರುವುದು ಕನ್ನಡಿಗರೆಲ್ಲರಿಗೆ ಸಹಜವಾಗಿಯೇ ಸಂತೋಷವನ್ನು ತಂದಿದೆ. ಆದರೆ ಮಾಧ್ಯಮಗಳು ಬಿಂಬಿಸುತ್ತಿರುವಂತೆ ಕುಣಿದಾಡುವಷ್ಟು ಖುಷಿಯನ್ನೇನಲ್ಲ. ಏಕೆಂದರೆ ಜ್ಞಾನ ಪೀಠವೂ ಸೇರಿದಂತೆ ಎಲ್ಲ ಪ್ರಶಸ್ತಿಗಳೂ, ಅವುಗಳ ಹಿಂದಿನ ರಾಜಕಾರಣದಿಂದಾಗಿ ಎಷ್ಟು ಅಪಮೌಲ್ಯಗೊಂಡಿವೆಯೆಂದರೆ, ಯಾವ ಪ್ರಶಸ್ತಿಯಿಂದಲೂ ಯಾರೂ ಸಾರ್ವಜನಿಕರ ಕಣ್ಣಲ್ಲಿ ದೊಡ್ಡವರೂ ಆಗಲಾರರು, ಚಿಕ್ಕವರೂ ಆಗಲಾರರು. ಅಲ್ಲದೆ, ಸಮಕಾಲೀನ ಕನ್ನಡ ಪ್ರಜ್ಞೆಯನ್ನು ಆವೃತವಾಗಿ ಮತ್ತು ಕ್ರಿಯಾಶೀಲವಾಗಿ ಕಟ್ಟಿದ ತೇಜಸ್ವಿಯವರಿಗಾಗಲೀ, ಲಂಕೇಶರಿಗಾಗಲೀ ನೀಡದ ಪ್ರಶಸ್ತಿಯನ್ನು ಯಾರಿಗೇ ಕೊಟ್ಟರೂ ಅದರಿಂದ ನಮಗೇನಾಬೇಕಾಗಿದೆ ಎಂದು ಸಾಮಾನ್ಯ ಕನ್ನಡ ಓದುಗ ಸಮೂಹ ಭಾವಿಸಿದರೆ ಆಶ್ಚರ್ಯವೇನಿಲ್ಲ.

ಅದೇನೇ ಇರಲಿ, ಕಂಬಾರರು ಆಧುನಿಕ ಕನ್ನಡದ ಶ್ರೇಷ್ಠ ಕವಿಗಳಲ್ಲೊಬ್ಬರು. ಅವರೊಬ್ಬ ಅಪ್ಪಟ ದೇಸಿ ಪ್ರತಿಭೆಯ ಹುಟ್ಟು ಕವಿಯಾಗಿ ಅಧುನಿಕತೆಯೊಂದಿಗೆ ಸೃಜನಶೀಲವಾಗಿ ಸೆಣಸಾಡಿದವರು. ಹಾಗೇ ಒಳ್ಳೆಯ ನಾಟಕಕಾರರೂ ಕೂಡ. ಆದರೆ ಈ ನಾಟಕಗಳ ಹೊರ ಸೌಷ್ಠವ ಸೌಂದರ್ಯಕ್ಕೆ ತಕ್ಕಂತೆ ಹದಗೊಂಡ ಒಳ ದಾರ್ಶನಿಕ ಸೌಂದರ್ಯ ಅವಕ್ಕೆ ಇಲ್ಲ ಎಂಬುದೂ ಸತ್ಯ. ಹಾಗೇ ಅವರ ಕಾದಂಬರಿಗಳು ಸ್ವಾರಸ್ಯಕರವಾಗಿವೆಯಾದರೂ, ಚಿಂತನೆಗೆ ಹಚ್ಚುವಂತಹ ಹೊಸದೇನನ್ನೂ ಹೇಳುವುದಿಲ್ಲ .ಕಂಬಾರರ ಈ ಶಕ್ತಿ ಮತ್ತು ದೌರ್ಬಲ್ಯಗಳೆರಡನ್ನೂ ಕನ್ನಡ ಸಾರಸ್ವತ ಲೋಕ ಈಗಾಗಲೇ ಗುರುತಿಸಿದೆ. ಆದ್ದರಿಂದ ಈ ಜ್ಞಾನಪೀಠ

ಪ್ರಶಸ್ತಿಯಿಂದ ಕಂಬಾರರ ಸ್ಥಾನಮಾನವೇನೂ ಹೆಚ್ಚಾಗುವುದಿಲ್ಲ. ಹಾಗೇ ಸಮಕಾಲೀನ ಕನ್ನಡ ಸಾಹಿತ್ಯದ ಸ್ಥಾನಮಾನ ಕೂಡ. ಆದರೆ ಇದು ಸ್ವತಃ ಕಂಬಾರರಿಗೆ ಜೀವನದ ಸಾರ್ಥಕತೆಯ ಕ್ಷಣವಿರಬಹುದು. ಅದಕ್ಕಾಗಿ ಅವರನ್ನು ಅಭಿನಂದಿಸೋಣ.

ಇನ್ನು ನಮ್ಮ ಚಂದ್ರಶೇಖರ ಪಾಟೀಲರಿಗೆ ರಾಜ್ಯ ಸರ್ಕಾರ ಎರಡು ವರ್ಷಗಳ ಕಾಲ ಅಳೆದೂ ಸುರಿದೂ ಪಂಪ ಪ್ರಶಸ್ತಿ ಪ್ರಕಟಿಸಿದೆ. ಚಂಪಾ ಅವರ ಸಾಹಿತ್ಯೇತರ 'ತರಲೆ–ತಾಪತ್ರಯ'ಗಳಿಂದಾಗಿ ಅವರ ಸಾಹಿತ್ಯದ ನಿಜವಾದ ಮೌಲಿಕತೆಯ ಕಡೆ ಗಮನ ಕಡಿಮೆಯಾಗಿ, ಇತ್ತೀಚಿನ ವರ್ಷಗಳಲ್ಲಿ ಅವರನ್ನು ಸಾಹಿತಿಯಾಗಿ ಯಾರೂ ಗಂಭೀರವಾಗಿ ಪರಿಗಣಿಸದೇ ಹೋದ ತಪ್ಪನ್ನು ಈಗ ಪ್ರಶಸ್ತಿ ಆಯ್ಕೆ ಸಮಿತಿಯಾದರೂ ಸರಿಪಡಿಸಿದೆ. ಅದನ್ನು ಸರ್ಕಾರ ತಡವಾಗಿಯಾದರೂ ಮಾನ್ಯ ಮಾಡಿದೆ. ಅದಕ್ಕಾಗಿ ಈ ಸಂದರ್ಭದಲ್ಲಿ ಚಂಪಾ ಮತ್ತು ಸರ್ಕಾರ ಇಬ್ಬರನ್ನೂ ಅಭಿನಂದಿಸಬೇಕಿದೆ. ಈಗಲಾದರೂ ಕನ್ನಡ ಸಾಹಿತ್ಯಕ್ಕೆ ಚಂಪಾರ ಕೊಡುಗೆಯ– ವಿಶೇಷವಾಗಿ ಅವರ ಕಾವ್ಯ ಮತ್ತು ನಾಟಕಗಳ–ನಿಜ ಮೌಲ್ಯಮಾಪನ ಆಗಬೇಕಿದೆ.

●

ಜೂನ್, ೨೦೧೨

ನೀನಾಸಂ ನಾಟಕ ಶಾಲೆಯ ಎರಡು ಪ್ರಯೋಗಗಳು

ಹೆಗ್ಗೋಡಿನ ನೀನಾಸಂ ನಾಟಕ ಶಾಲೆಯ ವಿದಾರ್ಥಿಗಳು ತಮ್ಮ ಡಿಪ್ಲೊಮೋ ವ್ಯಾಸಂಗ ಕ್ರಮದ ಭಾಗವಾಗಿ ಕಳೆದ ತಿಂಗಳು ಆರು ನಾಟಕಗಳನ್ನು ಪ್ರದರ್ಶಿಸಿದರು. ಇವುಗಳಲ್ಲಿ ಮೂರನ್ನು ನೋಡಲು ಸಾಧ್ಯವಾದ ನನಗೆ ನನ್ನ ವಿಶೇಷ ಗಮನ ಸೆಳೆದ ಎರಡು ನಾಟಕಗಳ ಬಗ್ಗೆ ಇಲ್ಲಿ ಬರೆಯಲೇ ಬೇಕು. ಏಕೆಂದರೆ, ಇವು ವಿದ್ಯಾರ್ಥಿಗಳಿಂದಾದ ಪ್ರಯೋಗಗಳು ಎಂದು ನಂಬಲಾಗದಷ್ಟು ಪ್ರದರ್ಶನದ ಎತ್ತರಗಳನ್ನು ಮುಟ್ಟಿ ನೋಡುಗರನ್ನು ಬೆರಗುಗೊಳಿಸಿದವೆಂದೇ ಹೇಳಬೇಕು.

ಎಂ ಗಣೇಶ್ ನಿರ್ದೇಸಿದ್ದ, ಗಾಂಧಿ ಮತ್ತು ಅವರ ಹಿರಿಯ ಮಗ ಹರಿಲಾಲ್ ನಡುವಣ ಬಹು ಚರ್ಚಿತ ಸಂಘರ್ಷದ ಸುತ್ತ ಹೆಣೆಯಲ್ಪಟ್ಟ 'ಗಾಂಧಿ ವರ್ಸೆಸ್ ಗಾಂಧಿ' (ಮೂಲ ಮರಾಠಿ ಕಾದಂಬರಿ: ದಿನಕರ ಜೋಷಿ, ನಾಟಕ ರೂಪಾಂತರ: ಅಜಿತ್ ದಳವಿ, ಕನ್ನಡ ಅನುವಾದ: ಡಿ.ಎಸ್. ಚೌಗುಲೆ) ಈಗಾಗಲೇ ಕನ್ನಡ ರಂಗಭೂಮಿಯಲ್ಲಿ ಯಶಸ್ವಿಯಾಗಿ ಪ್ರಯೋಗವಾಗಿರುವ ನಾಟಕ. ಆದರೆ ಕನ್ನಡ ರಂಗಭೂಮಿಗೆ ತಮ್ಮ ಹಲವು ಪ್ರಯೋಗಗಳ ಮೂಲಕ (ಉದಾ: 'ಉಚಲ್ಯಾ', 'ಊರುಕೇರಿ') ಒಂದು ಹೊಸ ಸರಳ ಸೌಂದರ್ಯವನ್ನು ಪ್ರದಾನ ಮಾಡುತ್ತಿರುವ ಅನನ್ಯ ಪ್ರತಿಭೆಯ ಗಣೇಶ್‌ಗೆ ಈ ಪ್ರಯೋಗ ಒಂದು ಸವಾಲೇ ಆಗಿತ್ತು. ಇತ್ತೀಚಿನ ದಿನಗಳಲ್ಲಿ ಹಲವು ಗುಂಪುಗಳು ತಮ್ಮದೇ ರಾಜಕೀಯ ಕಾರಣಗಳಿಗಾಗಿ ಗಾಂಧಿಯನ್ನು ಹಲವು ನೆಲೆಗಳಿಂದ ಬೇರೆ ಬೇರೆ ರೂಪಗಳಲ್ಲಿ ಪರಿಶೀಲನೆ–ಮರು ಪರಿಶೀಲನೆಗೆ ಒಡ್ಡುತ್ತಿವೆ. ಇಂತಹ ಸಂದರ್ಭದಲ್ಲಿ ಸ್ವಲ್ಪ ಎಚ್ಚರದಪ್ಪಿದರೆ ಇದೊಂದು ಅಪ್ಪಟ ರಾಜಕೀಯ

ನಾಟಕವಾಗಿ ಪರಿಣಮಿಸಬಹುದಾದ ಅಪಾಯದ ಸಾಧ್ಯತೆಗಳು ಇದರೊಳಗಿನ ಆ ನಾಟಕದೊಳಗೇ ಇವೆ. ಆದರೆ ಗಣೇಶ್ 'ನಾಟಕ'ವನ್ನು ತಮ್ಮ ಸರಳ ರಂಗ ತಂತ್ರಗಳ ಮೂಲಕ ಎಷ್ಟು ಸೂಕ್ಷ್ಮ ಸಮತೋಲನದಲ್ಲಿ ನಿರ್ವಹಿಸಿದ್ದಾರೆಂದರೆ, ಇದು ಗಾಂಧೀಜಿಗೆ ಅಪ್ಪಟ ಗ್ರಾಮೀಣ ಪ್ರತಿಭೆಯೊಂದು ಅವರ ನುಡಿಗಟ್ಟಿನಲ್ಲೇ ಸಲ್ಲಿಸಿರುವ ಕಲಾತ್ಮಕ ಶ್ರದ್ಧಾಂಜಲಿಯಂತಿದೆ.

ಗಾಂಧೀಜಿಯ ಕೌಟುಂಬಿಕ ಮತ್ತು ಸಾರ್ವಜನಿಕ ಬದುಕಿನ ಆವರಣಗಳೆರಡನ್ನೂ ಆವರಿಸಿಕೊಂಡು ಹಲವು ಸ್ತರಗಳಲ್ಲಿ ತೀವ್ರ ಭಾವನೆಗಳನೆಬ್ಬಿಸುತ್ತಾ ಬಿಚ್ಚಿಕೊಳ್ಳುವ ಈ ನಾಟಕದ ಈ ಪ್ರಯೋಗದ ಸಾರ್ಥಕತೆಯಿರುವುದು, ಗಾಂಧಿ ಒಮ್ಮೆ ಹರಿಲಾಲ್‌ನ ಭಾವನಾತ್ಮಕ ದಾಳಿಯಲ್ಲಿನ ಏಕಮುಖಿ ತರ್ಕದ ಸುಳಿಗೆ ಸಿಕ್ಕಿದ್ದರೆ ಅವರು ಗಾಂಧಿಯಾಗಿ ಉಳಿಯುತ್ತಿರಲಿಲ್ಲ ಎಂಬ ಹೊಳಹನ್ನು ನೋಡುಗರಿಗೆ ಮುಟ್ಟಿಸುವುದರಲ್ಲಿ ಯಶಸ್ವಿಯಾಗಿರುವುದರಲ್ಲಿ. ಇದು ಸಾಧ್ಯವಾಗಿರುವುದು, ಇಂದಿನ ಹೊಸ ರಾಜಕೀಯ ವಾತಾವರಣದಲ್ಲಿ ಇರುವ ಹರಿಲಾಲ್‌ನ ಪರವಾದ ವಾದ-ಸಹಾನುಭೂತಿಗಳ ಅವಕಾಶದ ಮಧ್ಯೆಯೂ ಗಾಂಧಿಯ ಇಡಿತನ ಇಲ್ಲಿ ಪ್ರಸ್ತುತವಾಗಿರುವುದರಿಂದ. ಇದಕ್ಕಾಗಿ ಗಣೇಶ್ ರಂಗ ಸಜ್ಜಿಕೆ, ಸಂಗೀತ, ಬೆಳಕು, ನಟರ ಅಭಿನಯ ನಿರ್ವಹಣೆ – ಈ ಎಲ್ಲದರಲ್ಲೂ ಗಾಂಧಿತನವನ್ನು ಕಾಪಾಡಿಕೊಂಡು ತಮ್ಮ ವೈಶಿಷ್ಟ್ಯ ಮೆರೆದಿದ್ದಾರೆ. ಆದರೆ ಕೊನೆಯಲ್ಲಿ ಇಡೀ ನಾಟಕದ ಸೂಕ್ಷ್ಮ ಸಮತೋಲವನ್ನು ವಿಚಲಿತಗೊಳಿಸುವಂತಹ ಭಾವನಾತ್ಮಕವೂ, ಉಪದೇಶಾತ್ಮಕವೂ ಆದ ಉಪಸಂಹಾರದ ದೃಶ್ಯವೊಂದನ್ನು ಸೇರಿಸಿರುವುದು ಗಣೇಶ್‌ಗೆ ತಮ್ಮ ನೇರ ಮತ್ತು ಸರಳ ಶೈಲಿಯ ಬಗ್ಗೆ ಇನ್ನೂ ಆತ್ಮವಿಶ್ವಾಸ ಮೂಡಿಲ್ಲವೇನೋ ಎಂಬ ಅನುಮಾನ ಹುಟ್ಟಿಸುವಂತಿದೆ.

ಇನ್ನು ರಘುನಂದನ್ ನಿರ್ದೇಶಿಸಿದ 'ಜಂಗಮದ ಹಂಗಿಗೆ/ನೆಂಬ ನುಲಿಯ ಚಂದಯ್ಯಗಳ ಸಂಪಾದನೆ', ಅದರ ಶೀರ್ಷಿಕೆಯೇ ಸೂಚಿಸುವಂತೆ ಸಾಮಾನ್ಯ ಪ್ರೇಕ್ಷಕವರ್ಗಕ್ಕೆ ಸ್ವಲ್ಪ ಜಟಿಲವೆನ್ನಿಸುವ ನಾಟಕ. ಶೂನ್ಯ ಸಂಪಾದನೆಯೊಂದರಲ್ಲಿ ಬರುವ ಗುರು-ಲಿಂಗ-ಜಂಗಮಗಳ ಸಂಬಂಧ ಕುರಿತ ಜಿಜ್ಞಾಸೆಯನ್ನಾಧರಿಸಿ ರಘುನಂದನ್ ಅವರೇ ಈ ನಾಟಕವನ್ನು ರೂಪಿಸಿದ್ದಾರೆ. ಬಸವಣ್ಣನ ಕಾಲದಲ್ಲೇ ಲಿಂಗ ತತ್ವ ಕುರಿತಂತೆ ಶರಣ ಚಳುವಳಿಯೊಳಗಿನ ಕರ್ಮಠ ಮತ್ತು ಅನುಭಾವಿ ಎನ್ನಬಹುದಾದ ಎರಡು ಧಾರೆಗಳ ನಡುವೆ ನಡೆಯುತ್ತಿದ್ದ ಸಂವಾದದ ಪ್ರತೀಕದಂತೆ ಈ ಪ್ರಸಂಗ ಸಂಪಾದಿತವಾಗಿದೆ. ಇದರಲ್ಲಿ ಚಂದಯ್ಯನೆಂಬ ಹಗ್ಗ ಮಾಡುವ ಕಾಯಕದ ಶರಣನು ತನ್ನ 'ಸತ್ಯಶುದ್ಧ ಕಾಯಕ'ದ ಅರಿವಿನಲ್ಲಿ ಗುರು-ಲಿಂಗ-ಜಂಗಮಗಳನ್ನು ಕುರಿತ ಎಲ್ಲ ಪರಿಕಲ್ಪನಾತ್ಮಕ ರಚನೆಗಳನ್ನೂ ಒಡೆದು ಹಾಕುತ್ತಾನೆ. ಇವೆಲ್ಲವೂ ಕಾಯಕನಿಷ್ಠೆಗೆ ಹೊರತಾಗಿದ್ದಾಗ ಹೇಗೆ ಬರಿ 'ದಂದುಗ'ವೆನಿಸಿಕೊಳ್ಳುತ್ತವೆ ಎಂದು ಅವನು ಅಲ್ಲಮನೂ ಸೇರಿದಂತೆ ಅನುಭವ ಮಂಟಪದ ಘಟಾನುಘಟಿಗಳ ಮುಖಾಮುಖಿಯಲ್ಲಿ ಹಲವು ಅದ್ಭುತ ವಚನಗಳ ಮೂಲಕ ಪ್ರತಿಪಾದಿಸುತ್ತಾನೆ.

ತನ್ನ ವಸ್ತುವಿನಿಂದಾಗಿ ಅಪ್ಪಟ ಬೌದ್ಧಿಕವೆನಿಸಬಹುದಾಗಿದ್ದ ಈ ಪ್ರಯೋಗ ತನ್ನ ರಚನಾ ವಿನ್ಯಾಸದಲ್ಲೇ ಮೈಪಡೆದುಕೊಂಡಿರುವ ಹಲವು ನೆಲೆಗಳಲ್ಲಿನ ವಿಶಿಷ್ಟ ನಾಟಕೀಯತೆಯಿಂದಾಗಿ ರಂಗದ ಮೇಲೆ ಜೀವಂತವಾಗುತ್ತದೆ. ಕಥಾ ಪ್ರವೇಶ, ಕಥಾ ಚಲನೆಯ ಲಯ ವಿನ್ಯಾಸ, ಅದಕ್ಕೆ ತಕ್ಕ ರಂಗ ವಿನ್ಯಾಸ ಮತ್ತು ಪಾತ್ರ ವಿನ್ಯಾಸ ಹಾಗೂ ವಚನಗಳ ಆಯ್ಕೆಯ ಹಿಂದಿನ ತಾತ್ವಿಕ ತಿಳುವಳಿಕೆ ಮತ್ತು ಅವನ್ನು ಸಂಯೋಜಿಸಿರುವ ಶೈಲಿ ಎಲ್ಲವೂ ಇಡೀ ನಾಟಕದ ಸಾವಯವ ಸೌಂದರ್ಯವನ್ನು ರೂಪಿಸುತ್ತಾ ಹೋಗುತ್ತವೆ. ಆ ಮೂಲಕ ಅಮೂರ್ತ ತತ್ವವೊಂದನ್ನು ಹೇಳಲು ವೈವಿಧ್ಯಮಯ ರೂಪ ಮತ್ತು ಸ್ತರಗಳ ಮೂರ್ತಗಳನ್ನು ಬಳಸುವಲ್ಲಿ ತೋರಿಬರುವ ಕಲೆಗಾರಿಕೆ ರಘುನಂದನ್ ತಮ್ಮ ಕಸುಬಿನಲ್ಲಿ ಮುಟ್ಟಿರುವ ಹೊಸ ಪ್ರಬುದ್ಧತೆಯನ್ನು ಸೂಚಿಸುವಂತಿದೆ. ಹಾಗೇ ಇದು, ಪೂರ್ತಿಯಾಗಿ ತೀವ್ರ ತಾತ್ವಿಕ ಮತ್ತು ಅನುಭಾವಿಕವೆನ್ನಬಹುದಾದ ಸಂವಾದವನ್ನೇ ಆಧರಿಸಿದ ನಾಟಕವೊಂದರ ರಚನೆ ಮತ್ತು ಪ್ರಯೋಗಕ್ಕೆ ಹೀಗೆ (ಹಿಂದೆ ಅಸಂಗತ ನಾಟಕಗಳ ಕಾಲದಲ್ಲೂ ಅಮೂರ್ತ ತಾತ್ವಿಕತೆಯ ಪ್ರಯೋಗ ಇತ್ತಾದರೂ) ಮುಂದಡಿಯಿಡಲು ರಂಗಕರ್ಮಿಯೊಬ್ಬನನ್ನು ಪ್ರೇರೇಪಿಬಲ್ಲ ಹೊಸ ಪ್ರಬುದ್ಧತೆಯನ್ನು ಕನ್ನಡ ರಂಗಭೂಮಿ ಕಂಡುಕೊಂಡಿರುವುದರ ಸಂಕೇತವಾಗಿಯೂ ನನಗೆ ಕಾಣುತ್ತದೆ. ಈ ಪ್ರಯೋಗದ ಮಹತ್ವಾಕಾಂಕ್ಷೆಯ ಎದುರಿನಲ್ಲಿ ಇದರ ಸಣ್ಣಪುಟ್ಟ ಪ್ರದರ್ಶನ ದೋಷಗಳು ಮತ್ತು ಕೆಲವು ರಂಗತಂತ್ರಗಳ ಸವಕಳಿಯ ಬಗ್ಗೆ ಹೇಳುವುದು ಅನುಚಿತವಾದೀತು. ಆದರೆ ಇದರಲ್ಲಿ ಭಾಗವಹಿಸಿರುವ ಎಲ್ಲ ನಟರ ಸಾಮರ್ಥ್ಯವೂ ಒರೆಗೆ ಹಚ್ಚಲ್ಪಟ್ಟಿದ್ದು, ಚಂದಯ್ಯನ ಪಾತ್ರ ನಿರ್ವಹಿಸಿದ ಪ್ರವೀಣ್‌ರ ಪ್ರತಿಭೆ ವಿಶೇಷ ಉಲ್ಲೇಖಕ್ಕೆ ಅರ್ಹ ಎಂಬುದನ್ನು ಇಲ್ಲಿ ದಾಖಲಿಸಲೇಬೇಕು.

ಅದೇನೇ ಇರಲಿ, ಇಂದಿನ ಜಾಗತೀಕರಣದ ವಿಚಿತ್ರ ಸಂದರ್ಭದಲ್ಲಿ ನಮ್ಮನ್ನು ಆಳವಾಗಿ ಕಲಕಬಲ್ಲ ಈ ಎರಡೂ ಪ್ರಯೋಗಗಳು ಹೆಗ್ಗೋಡಿಗೆ ಸೀಮಿತವಾಗಿ ಉಳಿಯಬಾರದು. ನೀನಾಸಂ ತಿರುಗಾಟದ ಭಾಗವಾದರೆ ನಾಡಿನಾದ್ಯಂತ ಕನ ನೋಡಿ ಸಂತೋಷಪಟ್ಟಾರು.

●

ಸೆಪ್ಟಂಬರ್, ೨೦೧೨

ಇಂದಿನ ಸಾಹಿತ್ಯ ಪರಿದೃಶ್ಯ: ಒಂದು ವಿವೇಚನೆ

ಶಿವಮೊಗ್ಗದ ಕರ್ನಾಟಕ ಸಂಘವು ಅಲ್ಪಾವಧಿಯ ಸೂಚನೆಯೊಂದಿಗೆ ನನ್ನನ್ನು 'ತಿಂಗಳ ಅತಿಥಿ'ಯಾಗಿ ಮಾತನಾಡಲು ಆಹ್ವಾನಿಸಿದಾಗ, ಮೊದಲು ನಿರಾಕರಿಸುವ ಮನಸ್ಸಾಯಿತಾದರೂ, ಅಧ್ಯಕ್ಷ ತೀ.ನಂ. ಶಂಕರನಾರಾಯಣ ಹಾಗೂ ಹಿರಿಯರಾದ ಕೆ.ಜಿ. ಸುಬ್ರಹ್ಮಣ್ಯ ಅವರ ಸ್ನೇಹಕ್ಕೆ ತಲೆಬಾಗಬೇಕಾಯಿತು. ಈ ಅಲ್ಪಾವಧಿಯಲ್ಲಿ ಯಾವ ವಿಷಯವಾಗಿ ನಾನು ಮಾತನಾಡಬಹುದು ಎಂದು ಯೋಚಿಸಿದಾಗ ಇಂದು ಸಾಹಿತ್ಯ-ಸಂಸ್ಕೃತಿಗಳ ಸಂಬಂಧವಾಗಿ ಮಾತಾಡಬಹುದಾದ ಎಲ್ಲ ಸಂಗತಿಗಳೂ ಸ್ಥೂಲವಾಗಿ ಒಳಗೊಂಡಿರುವ 'ಇಂದಿನ ಸಾಹಿತ್ಯ ಪರಿದೃಶ್ಯ' ಕುರಿತು ಹೆಚ್ಚು ಸಿದ್ಧತೆಯಿಲ್ಲದೆ ಮಾತಾಡಬಹುದೆನ್ನಿಸಿತು. ಈಗ ಮಾತನಾಡಲು ವೇದಿಕೆಯ ಮೇಲೆ ನಿಂತಿರುವಾಗ ಎದುರಿನ ದೃಶ್ಯ ನೋಡಿದಾಗ-ಬೆರಳೆಣಿಕೆಯ ಸಭಿಕರು-ನಾನು ಆರಿಸಿಕೊಂಡಿರುವ ವಿಷಯವೇ ಮಾರ್ಮಿಕವಾಗಿ ನನ್ನ ಮುಂದೆ ಸಾಕಾರಗೊಂಡಿದೆ ಎನಿಸತೊಡಗಿದೆ! ಇಂತಹ ಸಂದರ್ಭಗಳಲ್ಲಿ, ಕೆಲವು ವರ್ಷಗಳ ಹಿಂದಷ್ಟೇ ಇಂತಹ ಸಭೆಗಳಲ್ಲಿ ತುಂಬಿ ತುಳುಕುತ್ತಿದ್ದ ಸಾಹಿತ್ಯ ರಸಿಕರ ಸಮೂಹ ಎಲ್ಲಿ, ಏಕೆ ಕಾಣೆಯಾಗಿದೆ? ಎಂಬ ಪ್ರಶ್ನೆಗಳು ನಮ್ಮನ್ನು ಕಾಡತೊಡಗುತ್ತವೆ. ಇದು ಇಲ್ಲಿನ ಪರಿಸ್ಥಿತಿ ಮಾತ್ರವಲ್ಲ, ಹೆಚ್ಚೂಕಡಿಮೆ ಎಲ್ಲ ಕಡೆಯ ಪರಿಸ್ಥಿತಿಯೂ ಹೌದು ಎಂಬುದೊಂದೇ ಸಮಾಧಾನ!

ಮುವ್ವತ್ತು ನಲವತ್ತು ವರ್ಷಗಳ ಕಾಲ ಕನ್ನಡ ಸಾಹಿತ್ಯ-ಸಂಸ್ಕೃತಿಯ ಲೋಕವನ್ನು ಅವಲೋಕಿಸುತ್ತಾ ಬಂದಿರುವ ನನ್ನಂಥವರಿಗೆ ಇಂದಿನ ಸಾಹಿತ್ಯ ಪರಿದೃಶ್ಯದ ಬಗ್ಗೆ ಯೋಚಿಸತೊಡಗಿದಾಗಲೆಲ್ಲ

ಸಹಜವಾಗಿಯೇ ಅಂದಿನ ಆ ಪರಿದೃಶ್ಯ ನೆನಪಿಗೆ ಬರುತ್ತದೆ. ಉದಾಹರಣೆಗೆ, ನಾನು ನಲವತ್ತು ವರ್ಷಗಳ ಹಿಂದೆ ಸೆಂಟ್ರಲ್ ಕಾಲೇಜಿನಲ್ಲಿ ಗಣಿತಶಾಸ್ತ್ರದ ಆನರ್ಸ್ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಯಾಗಿದ್ದಾಗ ನಮ್ಮದೇ ವಿಭಾಗದ ಕಟ್ಟಡದಲ್ಲಿದ್ದ ಸೆನೆಟ್ ಹಾಲ್‌ನಲ್ಲಿ ಆಗ ಬೆಂಗಳೂರು ವಿಶ್ವವಿದ್ಯಾಲಯದ ಮುಖ್ಯಸ್ಥರಾಗಿದ್ದ ಡಾ॥ ಜಿ.ಎಸ್. ಶಿವರುದ್ರಪ್ಪನವರು ಆಯೋಜಿಸುತ್ತಿದ್ದ ವಾರ್ಷಿಕ ವಿಚಾರ ಸಂಕಿರಣಗಳು. ಸುಮಾರು ಐದು ನೂರಕ್ಕೂ ಹೆಚ್ಚು ಆಸನ ವ್ಯವಸ್ಥೆಯಿದ್ದ ಆ ಸಭಾಂಗಣ ಸಂಕಿರಣದ ಎರಡು–ಮೂರು ದಿನಗಳೂ ತುಂಬಿ ತುಳುಕುತ್ತಿತ್ತು. ಅಷ್ಟೇ ಅಲ್ಲ, ಸಾಹಿತ್ಯ ಅಲ್ಲಿ ಸಾವು–ಬದುಕಿನ ಪ್ರಶ್ನೆಯೆಂಬಂತೆ, ಕೆಲವೊಮ್ಮೆ ಮಾತಿನ ಮಾರಾಮಾರಿಗೂ ಎಡೆಕೊಟ್ಟು ಚರ್ಚಿತವಾಗುತ್ತಿತ್ತು. ನಾನು ನಾಡಿನ ಬಹುಪಾಲು ಎಲ್ಲ ಗಣ್ಯ ಸಾಹಿತಿಗಳನ್ನೂ– ಶಿವರಾಮ ಕಾರಂತ, ಬೇಂದ್ರೆ, ಮಾಸ್ತಿ, ಪುತಿನ, ಗೊರೂರು, ಮೊಕಾಶಿ, ಸುಬ್ಬಣ್ಣ, ಪ್ರಭುಶಂಕರ, ಸುಜನಾ, ಭೈರಪ್ಪ, ಅನಂತಮೂರ್ತಿ, ತೇಜಸ್ವಿ, ಚಂಪಾ, ಗಿರಡ್ಡಿ, ವೀಣಾ, ಸಿದ್ಧಲಿಂಗ ಪಟ್ಟಣಶೆಟ್ಟಿ ಇತ್ಯಾದಿ–ಮೊದಲ ಬಾರಿಗೆ ನೋಡಿದ್ದು ಬಹುಶಃ ಅಲ್ಲಿಯೇ. ಅಲ್ಲಿ ಸಾಹಿತ್ಯ ಚರ್ಚೆಯೆಂಬುದು ಒಂದು ಯಜ್ಞದ ಶ್ರದ್ಧೆ ಮತ್ತು ಸಂಭ್ರಮಗಳೊಂದಿಗೆ ನಡೆಯುತ್ತಿತ್ತು. ಅಲ್ಲಿ ಸಾಹಿತ್ಯದ ವಿದ್ಯಾರ್ಥಿಗಳು ಮಾತ್ರವಲ್ಲದೆ, ಅನ್ಯ ಶಿಸ್ತುಗಳ ವಿದ್ಯಾರ್ಥಿಗಳೂ, ಸಾರ್ವಜನಿಕರೂ ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸುತ್ತಿದ್ದರು.

ಬರೀ ಸೆಂಟ್ರಲ್ ಕಾಲೇಜಿನ ಸಭಾಂಗಣದಲ್ಲಷ್ಟೇ ಅಲ್ಲ, ಎಂಭತ್ತರ ದಶಕದವರೆಗೆ ಯಾವ ಊರಿಗೆ ಹೋದರೂ ಸಾಹಿತ್ಯ ಕಾರ್ಯಕ್ರಮವೆಂದರೆ ಸಣ್ಣ ಪುಟ್ಟ ಜನ ಜಾತ್ರೆಯೇ ನೆರೆಯುತ್ತಿತ್ತು. ಈ ಹಿಂದೆ ಸಾಹಿತಿಗಳನ್ನು ಹೆಚ್ಚೂ ಕಡಿಮೆ ಎಲ್ಲ ಸಾರ್ವಜನಿಕ ಸಂಘ–ಸಂಸ್ಥೆಗಳೂ ತಮ್ಮ ವಿಶೇಷ ಸಂದರ್ಭಗಳ ಸಮಾರಂಭಗಳಿಗಾಗಿ 'ಹಿತೋಪದೇಶ'ದ ಆಚಾರ್ಯರುಗಳಂತೆ ಕರೆಸುತ್ತಿದ್ದರು. ಶಾಲಾ–ಕಾಲೇಜುಗಳ ಸಮಾರಂಭಗಳಿಗೆ ಹೆಚ್ಚಾಗಿ ಸಾಹಿತಿಗಳೇ ಮುಖ್ಯ ಅತಿಥಿಗಳು. ಇವರ ಮಾತು ಕೇಳಲು ಜನ ಯಾಕೆ ಆ ಪಾಟಿ ಸೇರುತ್ತಿದ್ದರು? ಏಕೆಂದರೆ ಬಹುಶಃ ಅಂದು ಸಾಹಿತಿ ಸಾರ್ವಜನಿಕರ ಮಧ್ಯೆ ಸಾರ್ವಜನಿಕ ಭಾಷೆಯಲ್ಲಿ ಮಾತಾಡಬಲ್ಲ ಮತ್ತು ಸಾರ್ವಜನಿಕರಿಗೆ ಸುಲಭವಾಗಿ ದಕ್ಕಬಲ್ಲ 'ಜ್ಞಾನಿ' ಎನಿಸಿದ್ದ. ಸಾಹಿತ್ಯ ಸಾರ್ವಜನಿಕ 'ಜ್ಞಾನರೂಪ'ವೆನಿಸಿತ್ತು. ಹಾಗಾಗಿಯೇ ಸರ್ಕಾರಗಳೂ ಸಾಹಿತಿಗಳ ಮಾತೆಂದರೆ ಕಿವಿಗೊಟ್ಟು ಕೇಳುತ್ತಿದ್ದವು. ಆದರೆ ಮೊನ್ನೆ ನನ್ನ ಅಧ್ಯಾಪಕ ಸ್ನೇಹಿತರೊಬ್ಬರು, ತಮ್ಮ ಕಾಲೇಜಿನ ವಿದ್ಯಾರ್ಥಿ ಸಂಘದ ಉದ್ಘಾಟನೆಗೆ 'ಲೂಸ್ ಮಾದ' ಎಂಬ ಸಿನಿಮಾ ನಟನನ್ನು ಕರೆಸಲಾಗಿತ್ತೆಂದು ಹೇಳಿದಾಗ ನಾನು ಕುಸಿದು ಬೀಳುವುದೊಂದೇ ಬಾಕಿಯಿತ್ತು. ಸಾಹಿತ್ಯ ಕುರಿತ ನನ್ನ ಹುಚ್ಚು ಒಂದು ಸುತ್ತು ಬಿಟ್ಟುಹೋಯಿತೆಂದೇ ಹೇಳಬೇಕು. ಈ 'ಲೂಸ್ ಮಾದ' ನಿಜವಾಗಿ ಯಾರು? ನಾನೋ ಅಥವಾ ಆ ಸಿನಿಮಾ ನಟನೋ ಎಂದು ಗಾಢವಾಗಿ ಯೋಚಿಸುವಂತಾಯಿತು! ಇಷ್ಟು ಸಣ್ಣ ಅವಧಿಯಲ್ಲಿ ಇಂತಹ ನಿರ್ಣಾಯಕ ಬದಲಾವಣೆ ಆದದ್ದು ಏಕೆ, ಹೇಗೆ?

ಈ ಪ್ರಶ್ನೆಗೆ ಸುಲಭ ಉತ್ತರವೆಂದರೆ, ತೊಂಬತ್ತರ ದಶಕದಲ್ಲಿ ಆರಂಭವಾದ

ಜಾಗತೀಕರಣವೆಂಬ ವಿದ್ಯಮಾನ ಸಮಾಜವನ್ನು ಹೆಚ್ಚು ಆರ್ಥಿಕೀಕರಣಕ್ಕೆ ಒಳಪಡಿಸಿ, ಅದರ ಇತರ ಆಯಾಮಗಳನ್ನು ಮಂಕುಗೊಳಿಸಿತು ಎಂಬುದು. ಸಾಹಿತ್ಯದ ಸಾರ್ವಜನಿಕ ನೆಲೆಯ 'ರಸಿಕ'ರಾಗಿದ್ದ ಮಧ್ಯಮ ವರ್ಗ ಮತ್ತು ಕೆಳ ಮಧ್ಯಮ ವರ್ಗಗಳು ಈಗ ತಮ್ಮ ಈ 'ರಸಿಕತೆ'ಯ ತೃಪ್ತಿಗಾಗಿ ಬೇರೆ ಬೇರೆ ಮಾರ್ಗಗಳನ್ನು ಕಂಡುಕೊಂಡಿದೆ. ಆದರೆ ಇದಿಷ್ಟೇ ಉತ್ತರವೇ? ಸಾಹಿತ್ಯ ಎಂಬುದು ಮನುಷ್ಯ 'ಇತರೆ' ಮಾರ್ಗಗಳನ್ನು ಕಂಡುಕೊಂಡೊಡನೆ ತನ್ನ ರಸಿಕ ವರ್ಗದ ಬಹುಪಾಲನ್ನು ಕಳೆದುಕೊಳ್ಳುವಷ್ಟು ದುರ್ಬಲವಾದ ಮಾನವ ಚಟುವಟಿಕೆಯೇ? ನಾಗರೀಕತೆಯ ಇತಿಹಾಸದಲ್ಲಿ ಏನೆಲ್ಲ ಕಂಡುಹಿಡಿದರೂ, ಸಾಹಿತ್ಯ ತನ್ನ ಸಾರ್ವಜನಿಕ 'ಮೌಲಿಕತೆ'ಯನ್ನು ಉಳಿಸಿಕೊಂಡೇ ಬಂದಿದೆಯಲ್ಲವೇ? ಅಥವಾ ಎಲ್ಲ ವಿದ್ಯಮಾನಗಳಿಗೂ ಒಂದು ಬರಗಾಲದ ಘಟ್ಟವಿರುವಂತೆ ಸಾಹಿತ್ಯ ಇಂದು ಸಾರ್ವಜನಿಕ ಮಾನ್ಯತೆಯ ಬರಗಾಲ ಎದುರಿಸುತ್ತಿದೆಯೇ? ಆದರೆ ವಾಸ್ತವ ಎಂದರೆ, ಈ ಹಿಂದಿನ ಕಾಲಘಟ್ಟಗಳಿಗೆ ಹೋಲಿಸಿದರೆ ಅತ್ಯಂತ ಹೆಚ್ಚು ಸಾಹಿತ್ಯ ಸೃಷ್ಟಿಯಾಗುತ್ತಿರುವ ಕಾಲ ಇದಾಗಿದೆ! ಆದರೂ ಏಕೆ ಹೀಗೆ?

ಇದು ಸಂಕೀರ್ಣ ಪ್ರಶ್ನೆ. ಸಾಹಿತ್ಯವನ್ನು, ವಿಶೇಷವಾಗಿ ಅದರ ಗುಣಮಟ್ಟವನ್ನು ತತ್ಕಾಲೀನ ಮತ್ತು ಕಣ್ಣಿಗೆ ಕಾಣಬಲ್ಲ ಜನ ಬೆಂಬಲದ ಪ್ರಮಾಣದ ಮೇಲೆ ಅಳೆಯಲಾಗದು, ನಿಜ. ಆದರೆ ಅದರ ಸಾರ್ವಜನಿಕ ಮೌಲಿಕತೆಗೆ, ಅಂದರೆ ಸಾರ್ವಜನಿಕತೆಗೆ ಕುಂದು ಬಂದಿದೆ ಎಂಬುದಂತೂ ಸತ್ಯ. ಏಕೆಂದರೆ, ಓದಿಗೆ ಒದಗಬಲ್ಲುದೆಲ್ಲವೂ ಸಾಹಿತ್ಯವೆನಿಸುತ್ತಿರುವ ಇಂದು ಸಾಹಿತ್ಯದ ಹರಹು ದೊಡ್ಡದಾಗಿದೆ. ಹಾಗೇ ಆ ಅರ್ಥದಲ್ಲಿ ಸಾಹಿತ್ಯದ ಓದುಗ ವರ್ಗವೂ ದೊಡ್ಡದಾಗಿದೆ. ಆದರೆ ಈ ಓದು (ಮತ್ತು ಇದರ ವ್ಯಾಪ್ತಿಗೇ ಬರುವ ಚರ್ಚೆ) ಹೆಚ್ಚು ಖಾಸಗಿಯಾಗಿದೆ. ಇದನ್ನು ನಿಜವೆಂದು ಒಪ್ಪಿಕೊಂಡರೆ ಪ್ರಶ್ನೆ, ಸಾಹಿತ್ಯ ಇಂದು ತನ್ನ ಸಾರ್ವಜನಿಕತ್ವವನ್ನು, ಇನ್ನಷ್ಟು ಪಾರಿಭಾಷಿಕವಾಗಿ ಹೇಳುವುದಾದರೆ ಸಾಮಾಜಿಕತೆಯನ್ನು ಕಳೆದುಕೊಂಡಿದೆಯೇ? ಎಂಬುದಾಗುತ್ತದೆ. ಇದು ಸಮಾಜ ಮತ್ತು ಸಾಹಿತ್ಯ ಈ ಎರಡಕ್ಕೂ ಸಂಬಂಧಿಸಿದ ಮುಖ್ಯ ಪ್ರಶ್ನೆಯೂ ಆಗುತ್ತದೆ.

ವಾಸ್ತವ ಎಂದರೆ, ಜಾಗತೀಕರಣವೆಂಬುದು ಕೆಲವು ಆಯ್ದ ವರ್ಗಗಳಲ್ಲಿ ಸೃಷ್ಟಿಸಿದ ಹೊಸ ರೀತಿಯ 'ಸಮೃದ್ಧಿ'ಯಿಂದಾಗಿ ಆ ವರ್ಗಗಳು ಕ್ರಮೇಣ ತಮ್ಮ ಸಾರ್ವಜನಿಕತ್ವವನ್ನು ಕಳೆದುಕೊಂಡು (ಅಥವಾ ಅನಗತ್ಯ ಕಿಕಿರಿಯೆಂದು ಸ್ವತಃ ತಾವೇ ಬಿಟ್ಟು) ಹೆಚ್ಚು ಖಾಸಗಿಯಾಗಲು, ಪ್ರತ್ಯೇಕಿತಗೊಳ್ಳಲು ಅವಕಾಶವೊದಗಿದೆ. ಇವು ಬೇಕಾದಾಗ ಸಾಹಿತಿಗಳನ್ನೂ, ಸಾಹಿತ್ಯ ಚರ್ಚೆಗಳನ್ನೂ ತಮ್ಮದೇ ಸೀಮಿತ ವಲಯಗಳಲ್ಲಿ ಖಾಸಗಿಯಾಗಿ ನಡೆಸಬಲ್ಲ ಸೌಲಭ್ಯವನ್ನೂ, ಮಾನಸಿಕತೆಯನ್ನೂ ಪಡೆದುಕೊಂಡಿವೆ. ಈ ಪ್ರವೃತ್ತಿಯ ವಿಸ್ತರಣೆಯಾಗಿ, ಹೊರರೂಪಗಳಾಗಿ, ಜಾಗತೀಕರಣದ ಅತಿ ಹೆಚ್ಚು ಲಾಭ ಪಡೆದ ಬೆಂಗಳೂರಿನಲ್ಲಿ ಇಂದು ನಡೆಯುವ ಪುಸ್ತಕ ಬಿಡುಗಡೆ ಮತ್ತು ಸಾಹಿತ್ಯ ಚರ್ಚೆಗಳ ಸಮಾರಂಭಗಳು ಹೆಚ್ಚಾಗಿ ಜಾತಿ ಮತ್ತು ವರ್ಗ (ಅಂದರೆ

ನಿರ್ದಿಷ್ಟ ಹಿತಾಸಕ್ತಿಗಳ ಗುಂಪು) ಸಮಾರಂಭಗಳಾಗಿ ಮಾರ್ಪಾಡಾಗಿರುವುದನ್ನು ನಾವು ಕಾಣಬಹುದಾಗಿದೆ. ಹಾಗಾಗಿ, ಇಲ್ಲಿ ಆಡಲಾಗುವ ಸಾಹಿತ್ಯದ ಮಾತುಗಳ ಸ್ವರೂಪವನ್ನು – ಅರ್ಥೋದ್ದೇಶಗಳನ್ನು – ಸುಲಭವಾಗಿ ಊಹಿಸಬಹುದೆಂದು ಕಾಣುತ್ತದೆ. ಹಾಗೇ, ಸಾಹಿತ್ಯ ಸಾರ್ವಜನಿಕತ್ವವನ್ನು ಕಳೆದುಕೊಳ್ಳುವುದರ ಪರಿಣಾಮ ಏನೆಂಬುದರ ಸೂಚನೆಯನ್ನು ಇದು ಕೊಡಬಲ್ಲುದು ಎಂದು ಭಾವಿಸಿದ್ದೇನೆ.

ಅದೇನೇ ಇರಲಿ, ಇದು ಹೊರನೋಟ ಮಾತ್ರ ಎಂಬುದೂ ನಮಗೆ ಗೊತ್ತಿರಬೇಕು. ಹೊರಚಿತ್ರ ಮೂಡುವುದು ಒಳಗಿನ ಹೋರಳಾಟಗಳಿಂದ. ಅಂದರೆ ಈ ಬೆಳವಣಿಗೆಗೆ ಈ ಕಾಲಘಟ್ಟದಲ್ಲಿನ ನಮ್ಮ ಸಾಹಿತ್ಯದ ಹೊರಳಾಟವೂ ಎಷ್ಟು ಕಾರಣ ಎಂಬುದನ್ನೂ ನಾವು ನೋಡಬೇಕಾಗುತ್ತದೆ. ಆರಂಭದಲ್ಲಿ ನಾನು ೭೦–೮೦ರ ದಶಕದ ಸಾಹಿತ್ಯದ ಪರಿದೃಶ್ಯದ ಪ್ರಸ್ತಾಪ ಮಾಡಿದೆ. ಅದು ದೊಡ್ಡ ಹೊರಳಾಟದ ಕಾಲ. ನವೋದಯ ಮತ್ತು ಅದನ್ನು ಧಿಕ್ಕರಿಸಿದ ನವ್ಯ ಹಾಗೂ ನವ್ಯ ಮತ್ತು ಅದನ್ನು ಧಿಕ್ಕರಿಸಿದ 'ಒಕ್ಕೂಟ'ಗಳ ಮುಖಾಮುಖಿಗಳ ಪರ್ವಕಾಲವದು. ಹಾಗಾಗಿಯೇ ಚರ್ಚೆಗಳ ಆ ತೀವ್ರತೆ. ನಿಜ, ಎಪ್ಪತ್ತರ ದಶಕದ 'ನವ್ಯ' ಸಾಹಿತ್ಯವು ಕನ್ನಡ ಸಾಹಿತ್ಯವನ್ನು ತನ್ನ ಆವರೆಗಿನ ಕನ್ನಡ ಸಾಹಿತ್ಯ ಪರಂಪರೆಗೆ ಅಪರಿಚಿತವೆನಿಸಿದ್ದ ಸಂಕೀರ್ಣ ಸಾಹಿತ್ಯ ತತ್ವದ ಮೂಲಕ ಸಾಕಷ್ಟು ಖಾಸಗೀಕರಣಗೊಳಿಸಿತ್ತು. ಇದನ್ನು ಅಖಿಲ ಭಾರತ ವೈದಿಕ ರಾಜಕಾರಣದ ಸಾಂಸ್ಕೃತಿಕ ಪರಿಣಾಮವೆಂದು 'ಅಖಿಲ ಕರ್ನಾಟಕ ಬರಹಗಾರರ ಮತ್ತು ಕಲಾವಿದರ ಒಕ್ಕೂಟ' ವಿಶ್ಲೇಷಿಸಿತು. ಜೊತೆಗೆ ತನ್ನದೇ ಸಾಮಾಜಿಕ ತತ್ವದ ಮೂಲಕ, ಇದು ನಮ್ಮ ಸಾಹಿತ್ಯವನ್ನು ಹೇಗೆ ಸಂಕುಚಿತಗೊಳಿಸಿದೆ ಎಂದು ವಿವರಿಸಿ ಸಾಹಿತ್ಯವನ್ನು ಕುರಿತ ಒಂದು ಹೊಸ ನೋಟವನ್ನು ಮುಂದಿರಿಸಿತು. ಇದರಿಂದ ಆಘಾತಗೊಂಡ ನವ್ಯ ಸಾಹಿತ್ಯ ಸ್ತಬ್ಧವಾಯಿತಾದರೂ, ಒಕ್ಕೂಟ ತನ್ನ ಸಾಹಿತ್ಯ ತತ್ವದೊಳಗೆ ಅಡಕವಾಗಿದ್ದ ಸಾಮಾಜಿಕ ಕಹಿಯನ್ನೂ ತಾತ್ವೀಕರಿಸಲು ಯತ್ನಿಸಿದ್ದರಿಂದಾಗಿಯೋ ಏನೋ, ಸಂಘಟನಾತ್ಮಕವಾಗಿ ಸುಸ್ಥಿರವಾಗಿ ಉಳಿಯಲಿಲ್ಲ. ಇದರಿಂದಾಗಿ ಮತ್ತೆ ಸಾಹಿತ್ಯ ಲೋಕದಲ್ಲಿ 'ಅ–ರಾಜ'ಕತೆ ಕಾಣಿಸಿಕೊಂಡು, ಅದು ಶುದ್ಧ ರಾಜಕೀಯ ಪಿತೂರಿಯೊಂದಕ್ಕೆ ಬಲಿಯಾಯಿತು. ಆದರೆ ಆ ಹೊತ್ತಿಗೆ 'ಒಕ್ಕೂಟ'ದ ಮೂಲಕ ಕನ್ನಡ ಸಾಹಿತ್ಯಕ್ಕೆ ಒಂದು ತನ್ನದೇ ಎನ್ನಿಸುವ ಸುಸಂಬದ್ಧ ಸಾಮಾಜಿಕ ತತ್ವದ ಆಧಾರ ಒದಗಿತ್ತಾದರೂ, ಅದಿನ್ನೂ ಒಂದು ಸಾಹಿತ್ಯ ಪರಂಪರೆಯಾಗಿ ಬೆಳೆಯುವಷ್ಟು ಸುಭದ್ರವಾಗಿರಲಿಲ್ಲ. ಇದೇ ಮುಂದಿನ ಸಾಹಿತ್ಯ ದುರಂತಕ್ಕೆ ಕಾರಣವಾಯಿತೆಂದೂ ಹೇಳಬಹುದು.

ಏಕೆಂದರೆ, ಆ ಹೊತ್ತಿಗೆ ನವ್ಯದ ಪದಚ್ಯುತ ದೊರೆಗಳಾಗಿದ್ದ ಅಡಿಗರು ಈ ಎಲ್ಲ ಬೆಳವಣಿಗೆಗಳನ್ನು ಅಗತ್ಯ ಸಹಾನುಭೂತಿಯೊಂದಿಗೆ ಅರ್ಥಮಾಡಿಕೊಳ್ಳುವಲ್ಲಿ ವಿಫಲರಾದ ಹತಾಶೆಯಲ್ಲಿ, ತಾವು ಈ ಹಿಂದೆ ಕಟುವಾಗಿ ಮತ್ತು ಸಕಾರಣವಾಗಿ ಜಡವೆಂದು ನಿಂದಿಸಿದ್ದ ಸಾಹಿತ್ಯ ಪರಿಷತ್ತಿನ ಸಮ್ಮೇಳನದ ಅಧ್ಯಕ್ಷರಾಗಲು ಒಪ್ಪಿಕೊಂಡರು. ಇದೇ ನೆಪವಾಗಿ, (ಮತ್ತು ಬೂಸಾ ಸಾಹಿತ್ಯ ಚಳುವಳಿಯನ್ನು ತಮ್ಮ

ಸೋಲೋ ಗೆಲುವೋ ಎಂದು ತೀರ್ಮಾನಿಸಲಾಗದೆ) ದಿಕ್ಕೆಟ್ಟ ಸ್ಥಿತಿಯಲ್ಲಿದ್ದ 'ಹಸಿಬಿಸಿ' ಸಾಹಿತಿಗಳ ಸಮೂಹವೊಂದು ಹೊಸ ನಾಯಕತ್ವದ ಅವಸರದ ಹುಡುಕಾಟದಲ್ಲಿದ್ದರು. ಇದನ್ನು 'ದುಡಿಯುವ ವರ್ಗ'ಗಳ ಕ್ರಾಂತಿಯ ಕನಸು ಕಾಣುತ್ತಿದ್ದ ಪಕ್ಷವೊಂದರ ಜಾಣ ಕಾರ್ಯದರ್ಶಿ ರಾಜಕೀಯ ಲಾಭಕ್ಕಾಗಿ ಬಳಸಿಕೊಳ್ಳಲು ಮುಂದಾದರು. ಇದರ ಫಲವೇ ಬಂಡಾಯ ಸಾಹಿತ್ಯ ಸಮ್ಮೇಳನ ಮತ್ತು ಬಂಡಾಯ ಸಾಹಿತ್ಯ. ಮೂಲತಃ ತಲೆಹೋಕರಾದ ಸಾಹಿತಿಗಳನ್ನು ನೆಚ್ಚಿಕೊಂಡ ಯಾವ ರಾಜಕೀಯ ಕಾರ್ಯಕ್ರಮವೂ ಯಶಸ್ವಿಯಾಗುವುದಿಲ್ಲ ಎಂಬ ಐತಿಹಾಸಿಕ ಸತ್ಯಕ್ಕನುಗುಣವಾಗಿ ಆ ಪಕ್ಷದ ರಾಜಕೀಯ ಪಿತೂರಿ ಬಹುಬೇಗನೆ ವಿಫಲವಾಯಿತಾದರೂ, ಬಂಡಾಯ ಸಾಹಿತ್ಯವೆಂಬುದೇ ತನ್ನ ಹುಟ್ಟಿನ ಹಿನ್ನೆಲೆಗೆ ತಕ್ಕಂತೆ ಒಂದು ರಾಜಕೀಯ ವಿದ್ಯಮಾನವಾಗಿ ಪರಿವರ್ತಿತವಾಯಿತು. ಅದೊಂದು ಸುವ್ಯಸ್ಥಿತ ಸಂಘಟನೆಯಾಗಿ ಕೆಲ ಕಾಲ ಕ್ರಿಯಾಶೀಲವಾಗಿ ತನ್ನ ಕೆಲವು ಆಯ್ದ ನಾಯಕರಿಗೆ ಅಧಿಕಾರ ರಾಜಕಾರಣದ ಬಾಗಿಲುಗಳನ್ನು ತೆರಯಿತು. ಇದೇ ಕಾರಣವಾಗಿ, ಕ್ರಮೇಣ ಆ ಸಂಘಟನೆ ಒಳಜಗಳಿಗೆ ತುತ್ತಾಗಿ ಇಂದು ಹೆಸರಿಗಷ್ಟೇ ಉಳಿದುಕೊಂಡಿರುವ ಸ್ಥಿತಿ ತಲುಪಿದೆ. ಆದರೆ ತನ್ನ ಸಂಘಟನೆ ಶಕ್ತಿಯುತವಾಗಿದ್ದಾಗ ತನ್ನ ಸಂಘಟನಾ ಬಲದಿಂದಲೇ ಅಂದಿನ ನಮ್ಮ ಸಾಹಿತ್ಯ ಪರಿದೃಶ್ಯದ ಮೇಲೆ ಮಾಡಿದ ಪ್ರಭಾವ ಇಂದಿನ ಸಾಹಿತ್ಯದ ಪರಿದೃಶ್ಯದ ರೂಪದ ಹಲವು ಅಯಾಮಗಳಲ್ಲಿ ಕಾಣಿಸಿಕೊಳ್ಳುತ್ತಿದೆ ಎಂದರೆ ತಪ್ಪಾಗಲಾರದು.

ಕಾವ್ಯವನ್ನು ಖಡ್ಗ ಮಾಡುವ ಹುಂಬತನ ಪ್ರದರ್ಶಿಸಿದ್ದ ಈ ಸಂಘಟನೆ ಸಾಹಿತ್ಯವನ್ನು ಸಾರ್ವತ್ರಿಕ ಸಾಧ್ಯದಿಂದ ನಿರ್ದಿಷ್ಟ ಸಾಧನದ ಮಟ್ಟಕ್ಕೆ ಇಳಿಸಿ, ಸಾಹಿತ್ಯವನ್ನು ಸುಲಭ(ಸರಳ ಅಲ್ಲ)ಗೊಳಿಸಿತು. ಸಾಹಿತ್ಯವನ್ನು ಜನರ ನೋವಿಗೆ ಮಿಡಿವ ಪ್ರಾಣಮಿತ್ರನ್ನಾಗಿಸುವ ಘೋಷಣೆಯ ಆವೇಶದ ದೌರ್ಬಲ್ಯದಲ್ಲಿ ಅದು ನೋವನ್ನೂ, ಸಾಹಿತ್ಯದ ಮಿಡಿತದ ಗುಣವನ್ನೂ ನಿರ್ದೀಷ್ಟೀಕರಿಸಿ, ಸಾಹಿತ್ಯದ ಸರ್ವಾವೃತವಾದ ಸ್ಪಂದನಶೀಲತೆಯ ಗುಣಕ್ಕೇ ಕುಂದುಂಟು ಮಾಡಿತು. ಇದರಿಂದಾಗಿ ನವ್ಯದ ಕಟ್ಟುನಿಟ್ಟಾದ ಸಾಹಿತ್ಯಿಕ ಮಾನದಂಡಗಳಿಂದಾಗಿಯೋ ಅಥವಾ ಇದರ ವಿರುದ್ಧ ಕ್ರಾಂತಿ ಕಹಳೆ ಮೊಳಗಿಸಿದ 'ಒಕ್ಕೂಟ'ದ ಸಾಮಾಜಿಕ ತತ್ವದಲ್ಲಿ ಅಡಕವಾಗಿದ್ದ ಹೊಸ ಸಾಹಿತ್ಯ ಮೀಮಾಂಸೆಯ ತತ್ವಗಳನ್ನು ಪಾಲಿಸಲಾಗದ ಹತಾಶೆಯಲ್ಲೋ, ಆವರೆಗೆ ಸಾಹಿತ್ಯ ಕ್ಷೇತ್ರಕ್ಕೆ ಸುಲಭವಾಗಿ ಪ್ರವೇಶ ಪಡೆಯಲಾಗದಿದ್ದ ಸಾಹಿತ್ಯಾರ್ಥಿಗಳ ದೊಡ್ಡ ಹಿಂಡೇ ಇಲ್ಲಿ ನೆರೆಯಿತು. ಈ ಹಿಂಡನ್ನು ನೋಡಿ ನಾಯಕತ್ವದ ಆಸೆಬುರುಕತನದಲ್ಲಿ ಕೆಲವು ಹಿರಿಯ ಸಾಹಿತಿಗಳೂ ವೇದಿಕೆಗೆ ನೆಗೆದು ಸ್ವಲ್ಪ ಕಾಲ ಮೆರೆಯಲೆತ್ನಿಸಿದರು. ಆ ಮೂಲಕ ತಮ್ಮ ಸಾಹಿತ್ಯಿಕ ಘನತೆಯನ್ನು ಕಳೆದುಕೊಂಡರು.

ಆದರೆ ತನ್ನ ಹುಟ್ಟು ಮಹತ್ವಾಕಾಂಕ್ಷೆಯ ಅವಸರದಲ್ಲಿ ಈ ಸಂಘಟನೆಯ ಮುಂಚೂಣಿಗೆ ಬಂದು ಅದಕ್ಕೆ ಖಡ್ಗ ದೀಕ್ಷೆ ನೀಡಿದ್ದ ಡಿ.ಆರ್. ನಾಗರಾಜ್ ಇದೆಲ್ಲ ನೋಡಿ ತನ್ನ 'ಗುರಿ'ಯನ್ನು ನೆನಪಿಸಿಕೊಂಡು ಗಾಬರಿಯಾಗಿ ಅಲ್ಲಿಂದ ಹೊರಬಿದ್ದರು. ಅಷ್ಟೇ ಅಲ್ಲ, ಈ ಬಂಡಾಯದ ಆಶಯಗಳಿಗೆ ತದ್ವಿರುದ್ಧವಾದ 'ಶ್ರೇಷ್ಠ

ಸಾಹಿತ್ಯ' ಪರಿಕಲ್ಪನೆಯನ್ನು ಎತ್ತಿ ಹಿಡಿಯುವ 'ಜಾಗೃತ ಸಾಹಿತ್ಯ ಸಮ್ಮೇಳನ'ವನ್ನು ಆಯೋಜಿಸಿದರು! ಇದಕ್ಕೆ ಮುಖ್ಯ ಭಾಷಣಕಾರರಾಗಿ ಆಹ್ವಾನಿತರಾದವರು ಯಾರು ಗೊತ್ತೆ? ಒಕ್ಕೂಟದ ಕ್ರಾಂತಿಯಲ್ಲಿ ಪದಚ್ಯುತರಾಗಿ, ಬಂಡಾಯದ ಹುಟ್ಟಿಗೆ ನೆಪವಾಗಿದ್ದ ಅಡಿಗರು!

ಇಲ್ಲಿಗೆ ಆಧುನಿಕ ಕನ್ನಡ ಸಾಹಿತ್ಯ ಪಯಣದ ಒಂದು ಸುತ್ತು ಮುಗಿದಿತ್ತು. ಈ ಇಡೀ ಸುತ್ತಿನ ಪಯಣದಲ್ಲಿ ಮತ್ತೆ ಮತ್ತೆ ಮಾರ್ದನಿಸುವ ಎರಡು ಮಾರ್ಮಿಕ ಮಾತುಗಳನ್ನು ಇಲ್ಲಿ ಉಲ್ಲೇಖಿಸುವುದು ಉಚಿತ. ಒಂದು ಸಾಹಿತ್ಯದ ವಸ್ತುವಿಗೆ ಸಂಬಂಧಿಸಿದ್ದು, ಇನ್ನೊಂದು ರೂಪಕ್ಕೆ ಸಂಬಂಧಿಸಿದ್ದು. ಯಶವಂತ ಚಿತ್ತಾಲರು ಹೇಳಿದ್ದು: 'ಗುಲಾಬಿಯ ಸೌಂದರ್ಯಕ್ಕೆ ಸ್ಪಂದಿಸಬಲ್ಲ ಮನಸ್ಸು ಮಾತ್ರ ರಸ್ತೆ ಮೇಲಿನ ರಕ್ತಕ್ಕೂ ಸ್ಪಂದಿಸಬಲ್ಲುದು'. ಇನ್ನೊಂದು, ಲಂಕೇಶ್ ಹೇಳಿದ್ದು: 'ಕಿಟಾರನೆ ಕಿರುಚಿದಾಕ್ಷಣ ಅದು ಕಾವ್ಯವಾಗುವುದಿಲ್ಲ!' ಇದನ್ನು ಕಿವಿಗೊಟ್ಟು ಕೇಳಲಾರದಿದ್ದರಿಂದಾಗಿಯೇ, ಬಂಡಾಯ ಸಾಹಿತ್ಯ ರಾಶಿಯಲ್ಲಿ ಹುಡುಕಿದರೂ, ನಮ್ಮ ಸ್ಮೃತಿಕೋಶದಲ್ಲಿ ಉಳಿಯಬಲ್ಲ ಒಂದು ಸಾಲು ಕಾವ್ಯವಾಗಲೀ, ವಿಮರ್ಶೆಯ ಒಂದು ಸಣ್ಣ ಹೊಸ ಹೊಳಹಾಗಲಿ ಕಾಣಸಿಗುವುದಿಲ್ಲ. ಆದರೆ ಈಗ ಬಂಡಾಯದ ಲಂಗರುಗಳಿಂದ ಕಳಚಿಕೊಂಡು ಬರೆಯುತ್ತಿರುವವರ ಮಾತು ಬೇರೆ.

ಅಂದ ಮಾತ್ರಕ್ಕೆ ಕನ್ನಡ ಸಾಹಿತ್ಯದ ಮೇಲೆ 'ಬಂಡಾಯ' ಸಾಹಿತ್ಯದಿಂದ ಏನೂ ರಚನಾತ್ಮಕ ಪ್ರಭಾವ ಆಗಲಿಲ್ಲವೇ ಎಂದು ಕೇಳಿದರೆ ಸಾರಾಸಗಟಾಗಿ ಇಲ್ಲ ಎಂದು ಹೇಳಲಾಗುವುದಿಲ್ಲ. ಈವರೆಗೆ ತಮ್ಮ ಅನುಭವದ ಅಭಿವ್ಯಕ್ತಿಗೆ ಅಕ್ಷರ ಮಾಧ್ಯಮದಲ್ಲಿ ಅವಕಾಶವನ್ನೇ ಪಡೆಯದಿದ್ದ ಸಮಾಜದ ಅನೇಕ ಸ್ತರಗಳ ಜನ ಆ ಅವಕಾಶವನ್ನು ವಿಫುಲ ಹಾಗೂ ಮುಕ್ತವಾಗಿ ಪಡೆದುಕೊಂಡರು. ಆದರೆ ಈ ವಿಫುಲತೆ ಮತ್ತು ಮುಕ್ತತೆಗಳೇ ಕಾರಣವಾಗಿ, ಸಾಹಿತ್ಯವೆನ್ನುವುದು ಅಗ್ಗವಾಯಿತಷ್ಟೇ ಅಲ್ಲ; ಆ ಅಗ್ಗತನವನ್ನೇ ಒಂದು ಮೀಮಾಂಸೆಯಾಗಿಯೂ ಬೆಳೆಸಿ ಸಾಹಿತ್ಯದ ಗುಣಮಟ್ಟಕ್ಕೆ–ಅದರ ವಿರಾಟ್ ಶಕ್ತಿಗೆ–ದೊಡ್ಡ ಆಘಾತವನ್ನುಂಟು ಮಾಡಲಾಯಿತು. ಈ ಮೀಮಾಂಸೆ ತನ್ನ ಬಾಯ್ಬಲದ ಮೂಲಕ ಸಾಮಾಜಿಕ ಮತ್ತು ಆರ್ಥಿಕ ಶ್ರೇಣೀಕರಣದ ಚರಿತ್ರೆಯನ್ನು ಸರಳೀಕರಿಸಿ ಅದನ್ನೇ ತನ್ನ ಸಾಹಿತ್ಯ ಶಕ್ತಿಯ ಮೂಲಸ್ಫೂರ್ತಿಯನ್ನಾಗಿ ಮಾಡಿಕೊಳ್ಳಲು ಹವಣಿಸಿತು.

ಇಂತಹ ಬಂಡಾಯದ ಆವೇಶದಲ್ಲಿ ಪಂಪನೂ ಆಸ್ಥಾನ ಕವಿಯಾಗಿ ಜೀವ ವಿರೋಧಿಯಾಗಿದ್ದ ಎಂದ ಮೇಲೆ ನಮ್ಮ ಪ್ರಾಚೀನ ಸಾಹಿತ್ಯವನ್ನು ಕುರಿತ ಅದರ ನಿಲುವಿನ ಬಗ್ಗೆ ಇನ್ನೇನು ಹೇಳಬೇಕಾಗಿದೆ? ವಚನ ಸಾಹಿತ್ಯವನ್ನು ಜಾತಿ–ವರ್ಗಗಳ ಆಧಾರದ ಮೇಲೆ ವಿಂಗಡಿಸಿ ವಿಶ್ಲೇಷಿಸಿ ತೀರ್ಮಾನಗಳಿಗೆ ಬರುವ ಪರಿಪಾಠ ಆರಂಭವಯಿತು. ಇನ್ನು ಆಧುನಿಕ ಸಾಹಿತ್ಯಕ್ಕೆ ಬಂದರೆ, ಬೇಂದ್ರೆ ತಮ್ಮ ವೈದಿಕ ಹುಟ್ಟಿನ ಹಿನ್ನೆಲೆಯಿಂದಾಗಿ ಜೀವ ವಿರೋಧಿ ಕವಿಯಾಗಿಬಿಟ್ಟರು. ಮಾಸ್ತಿಯವರಂತೂ ಹಣೆಯ ಮೇಲಿನ ತಮ್ಮ ನಾಮದಿಂದಾಗಿಯೇ ಗಣನೆಗೇ ಬಾರದವರಾದರು.

ಕುವೆಂಪು ತಮ್ಮ ಸಾಹಿತ್ಯದ ಅಧ್ಯಾತ್ಮಿಕ ಭಿತ್ತಿ, ದಟ್ಟ ಸಂಸ್ಕೃತ ಪ್ರಭಾವದ ಕಾವ್ಯ ಭಾಷೆ ಮತ್ತು ಊಳಿಗಮಾನ್ಯ ಜಾತಿ ಹಿನ್ನೆಲೆಗಳಿಂದಾಗಿ ಗಂಭೀರ ಪರಿಗಣನೆಗೆ ಅರ್ಹತೆಯನ್ನೇ ಕಳೆದುಕೊಂಡಿದ್ದರು!

ಸಾಹಿತ್ಯದಲ್ಲಿ ಹಳೆಯ ಕಥೆಯೆಂಬುದಿಲ್ಲ. ಪ್ರತಿ ಹೊಸ ಕಥೆಯೂ ಒಂದಲ್ಲ ಒಂದು ನೆಲೆಯಲ್ಲಿ ಹಳೆಯ ಕಥೆಯ ಮುಂದುವರಿಕಯೇ. ಹಾಗಾಗಿ ಈ ಹಳೆಯ ಕಥೆ ಹೇಳಬೇಕಾಯಿತು. ಆದರೆ ಸಾಹಿತ್ಯಕ್ಕೊಂದು ಚರಿತ್ರೆಯಿದೆ. ಆ ಚರಿತ್ರೆಯ ಶಕ್ತಿಗೆ ತತ್ಕಾಲೀನ ರಾಜಕಾರಣವನ್ನು ಮೆಟ್ಟಿ ನಿಲ್ಲಲು ಕಾಲ ಬೇಕಾಗುತ್ತದೆ. ಅಂತಹ ಕಾಲದ ಮೊದಲ ಸದ್ದುಗಳನ್ನು ಈಗ ನಾವು ಕೇಳಬಹುದಾಗಿದೆ. ಬಂಡಾಯ ಸಾಹಿತ್ಯ ಸಾಧಿಸಿದ್ದ ಸಾಹಿತ್ಯದ ಒಂದು ಬಗೆಯ (ವರ್ಗೀಯ) ಖಾಸಗೀಕರಣಕ್ಕೆ (ಒಂದು ಅತಿ) ಪ್ರತಿಕ್ರಿಯೆಯಾಗಿ ನಾನು ಈ ಹಿಂದೆ ಪ್ರಸ್ತಾಪಿಸಿದ ಇನ್ನೊಂದು ಬಗೆಯ ಖಾಸಗೀಕರಣವನ್ನು (ಇನ್ನೊಂದು ಅತಿ) ನಾವೀಗ ನೋಡುತ್ತಿದ್ದೇವೆ. ಜಾಗತೀಕರಣ ಇದಕ್ಕೆ ಕುಮ್ಮಕ್ಕು ನೀಡುತ್ತಿದೆಯಷ್ಟೆ. ಹಾಗೆ ನೋಡಿದರೆ, ಒಂದು ನೆಲೆಯಲ್ಲಿ ಜಾಗತೀಕರಣದ ಈ ಸಾಂಸ್ಕೃತಿಕ ಪರಿಣಾಮವನ್ನು ಒಟ್ಟು ನಮ್ಮ ಸಾಂಸ್ಕೃತಿಕ ಚರಿತ್ರೆಯ ಹಿನ್ನೆಲೆಯಲ್ಲೇ ನೋಡಬೇಕೇನೋ. ಹಾಗೆ ನೋಡಿದಾಗ ಮಾತ್ರ ನಮ್ಮ ತಪ್ಪುಗಳು ಸ್ಪಷ್ಟವಾಗಿ ಕಾಣತೊಡಗುವವೇನೋ ಮತ್ತು ಜಾಗತೀಕರಣ ಒಂದು ಆಕಸ್ಮಿಕವಲ್ಲ; ನಾವಾಗಿ ನಾವು ಆಹ್ವಾನಿಸಿಕೊಂಡದ್ದು ಎಂಬುದು ಗೊತ್ತಾಗಬಲ್ಲುದೇನೋ!

ಆದರೆ ಚರಿತ್ರೆಯ ಶಿಲುಬೆಯನ್ನು ಕರ್ತವ್ಯ ಪರಾಯಣತೆಯಿಂದೆಂಬಂತೆ ಹೊತ್ತು ನಡೆದಿರುವ ನಾವು ನಂನಮ್ಮ ಹಮ್ಮಿನಲ್ಲಿ ಹಾಗೆ ನೋಡಲು ನಿರಾಕರಿಸಿ ಇಂದು ಎರಡು ಅತಿಗಳ ಸಾಂಸ್ಕೃತಿಕ ರಾಜಕಾರಣದಲ್ಲಿ ತೊಡಗಿಕೊಂಡಿದ್ದೇವೆ. ಇದರಿಂದಾಗಿ ಒಂದು ವಲಯದಲ್ಲಿ ಪ್ರತಿ ಸಂಸ್ಕೃತಿ, ಪ್ರತಿ ಕಾವ್ಯ ಮೀಮಾಂಸೆ ಹಾಗೂ ಭಾಷಾ ಮೀಮಾಂಸೆಗಳ ಸಾರ್ವಜನಿಕ ಘೋಷಣೆಗಳು ಕೇಳಿಬರುತ್ತಿದ್ದರೆ, ಇನ್ನೊಂದೆಡೆ ಇದೆಲ್ಲದಕ್ಕೆ ಮೌನ ಧಿಕ್ಕಾರ ಹೇಳುತ್ತಿರುವ ಛಲದಲ್ಲಿ ನಮ್ಮ ಸಾಹಿತ್ಯ ಪರಂಪರೆಯ ಮುಖ್ಯ ಲಹರಿಗೆ ಒಪ್ಪಿಸಿಕೊಂಡ ಗುಂಪೊಂದು ತತ್ಕಾಲೀನ ಚರಿತ್ರೆಯಲ್ಲಿ ಜಯ ಸಾಧಿಸಿದ ಸಂಭ್ರಮದೊಂದಿಗೆ ಖಾಸಗಿ ವಲಯಗಳನ್ನು ಸೃಷ್ಟಿಸಿಕೊಂಡು ಸಾಹಿತ್ಯ-ಸಂಸ್ಕೃತಿ ವಲಯಗಳಲ್ಲೂ ಖಾಸಗಿ ಬಂಡವಾಳವನ್ನು ತೊಡಗಿಸಿ ನೋಡುವ ಪ್ರಯೋಗಗಳಲ್ಲಿ ನಿರತವಾಗಿದೆ.

ಹೀಗಾಗಿ, ಇಂತಹ ಗುಂಪುಗಾರಿಕೆಯ ರಾಜಕಾರಣ ಪ್ರದರ್ಶಿತವಾಗದ ಜಾಗಗಳಲ್ಲಿ ಪಟಾಕಿ ಹಾರುವುದಿಲ್ಲವೆಂಬುದು ಜನಕ್ಕೆ ಗೊತ್ತು. ಹಾಗಾಗಿ ಅವರು ಬೇರೆ ಬೇರೆ ರೀತಿಯ ಪಟಾಕಿ ಹಾರುವ ಜಾಗಗಳನ್ನು, ಚಟುವಟಿಕೆಗಳನ್ನು, ಖುಷಿಗಳನ್ನು ಹುಡುಕಿಕೊಂಡು ಹೋಗತೊಡಗಿದ್ದಾರೆ. ಇದೆಲ್ಲದರ ಪರಿಣಾಮವಾಗಿಯೇ, ಸಾರ್ವಜನಿಕ ಸಾಹಿತ್ಯ ಸಭಾಂಗಣಗಳು ಬರಿದಾಗತೊಡಗಿವೆ. ಇನ್ನು ಸಾಹಿತ್ಯ ಸಮ್ಮೇಳನಗಳಲ್ಲಿ ಜನ ಜಾತ್ರೆಯೇ ನೆರೆಯುತ್ತದಲ್ಲ ಎಂದು ಕೇಳುವರಿಗೆ ಅದು ಸಾಹಿತ್ಯದ ಹೆಸರಲ್ಲಿ ನಡೆಯುವ ಜಾತ್ರೆ; ಅದರ ಉದ್ದೇಶಗಳೇ ಬೇರೆ ಎಂದು

ಹೇಳಬೇಕಾಗುತ್ತದೆ.

ಆದರೆ ಈ ಎರಡೂ ಗುಂಪುಗಳಿಗೆ ಹೊರತಾಗಿ ಮತ್ತೊಂದು ಗುಂಪು ಸದ್ದಿಲ್ಲದೆ ನಮ್ಮ ಸಾಹಿತ್ಯ ಚರಿತ್ರೆಯನ್ನು ಮತ್ತು ಆ ಮೂಲಕ ಸಾಂಸ್ಕೃತಿಕ ಚರಿತ್ರೆಯನ್ನು ಜಾಗತೀಕರಣದ ಹಿನ್ನೆಲೆಯಲ್ಲಿ ಪುನರ್ವ್ಯಾಖ್ಯಾನಿಸುವ ಮೂಲಕ ಮುರಿದುಕಟ್ಟುವ ಸೃಜನಶೀಲ ಸಾಹಸದಲ್ಲಿ ತೊಡಗಿದೆ ಎಂಬುದನ್ನೂ ನಾವು ಗಮನಿಸಬೇಕು. ಪರಸ್ಪರ ಸಂಬಂಧವಿಲ್ಲದ ಹಲವು ಗುಂಪುಗಳು ಹಲವು ನೆಲೆಗಳಲ್ಲಿ–ಹಲವು ಶಿಸ್ತುಗಳಲ್ಲಿ–ಅವುಗಳಲ್ಲಿ ಕೆಲವಕ್ಕೆ ತಮ್ಮ ಅಂತಿಮ ಗಮ್ಯವಾದರೂ ಏನು ಎಂಬುದರ ಬಗ್ಗೆ ಗಮನವೇ ಇಲ್ಲದೆ–ಈ ಸಾಹಸದಲ್ಲಿ ಕ್ರಿಯಾಶೀಲವಾಗಿವೆ. ಇದೊಂದು ರೀತಿಯಲ್ಲಿ –ಸ್ಥೂಲಾರ್ಥದಲ್ಲಿ–ನಮ್ಮ ಪರಂಪರೆಯ ಅವಿಭಾಜ್ಯ ಭಾಗವಾಗಿರುವ ಅವಧೂತ ಧಾರೆ ಎನ್ನಬಹುದು. ಬಹುಶಃ ಇದು ಒಂದು ಪ್ರಕಟ ರೂಪ ಪಡೆದಾಗ ನಿಜವಾಗಿ ಕನ್ನಡದ ಸಾಹಿತ್ಯ ಪರಂಪರೆಯ ಅವಿಚ್ಛಿನ್ನ ಹರಿವಿಗೆ ದಾರಿಮಾಡಿಕೊಟ್ಟೀತು. ಆದರೆ ಈ ಗುಂಪಿನ ಹಲವು ಧಾರೆಗಳ ಗಮ್ಯ ಒಂದೇ ಎಂಬ ಅರಿವಿನಲ್ಲಿ ಅವುಗಳನ್ನು ಜೋಡಿಸುವ ಮತ್ತು ಅದರ ಚಾರಿತ್ರಿಕ ಮಹತ್ವವನ್ನು ಇನ್ನಿತರ ಎರಡು ಗುಂಪುಗಳ ರಾಜಕಾರಣದ ಅಬ್ಬರದ ನಡುವೆ ಗುರುತಿಸಬಲ್ಲ ಪರಂಪರೆಯ ಮತ್ತು ಸಾಹಿತ್ಯದ ಸೂಕ್ಷ್ಮತೆಗಳನ್ನು ಸಮಗ್ರವಾಗಿ ಉಳಿಸಿಕೊಂಡ ನಿಜ ರಸಿಕರು ಎಲ್ಲಿದ್ದಾರೆ? ಇವೊತ್ತಿನ ಸಾಹಿತ್ಯ ಪರಿದೃಶ್ಯದಲ್ಲಿ ಇವರನ್ನು ಹುಡುಕುವುದೇ ಒಂದು ದೊಡ್ಡ ಸವಾಲು.

(ಸೂಚನೆ: ನಾನು ಇಡೀ ಲೇಖನದಲ್ಲಿ ರಸಿಕ ಎನ್ನುವೆಡೆಯಲ್ಲೆಲ್ಲ ಸಹೃದಯ ಎಂಬ ಶಬ್ದವನ್ನು, ವಿಷಯ ಸಂದರ್ಭವನ್ನು ಒತ್ತಿ ಹೇಳಲು ಬೇಕೆಂದೇ ಬಳಸಿಲ್ಲ)

(ಇದು ಶಿವಮೊಗ್ಗದ ಕರ್ನಾಟಕ ಸಂಘದಲ್ಲಿ ೨೦೧೨ರ ಮಾರ್ಚ್‌ನಲ್ಲಿ 'ತಿಂಗಳ ಅತಿಥಿ'ಯಾಗಿ ಆಡಿದ ಮಾತುಗಳ ಬರಹ ರೂಪ) 'ನವ ಮಾನವ;ದ ಮೇ, ೨೦೧೨ ಸಂಚಿಕೆಯಲ್ಲಿ ಪ್ರಕಟ)

ಏಪ್ರಿಲ್ ೨೦೧೩

ವಚನ ಸಂಶೋಧನೆಯೆಂಬ ದೊಂಬರಾಟ

ಇತ್ತೀಚೆಗೆ ಎಚ್.ಎಸ್ ಶಿವಪ್ರಕಾಶ್ ಅವರು, ಬಾಲ ಗಂಗಾಧರ ಮತ್ತು ಡಂಕಿನ್ ಝಳಕಿ ಎಂಬುವವರು ವಚನ ಚಳುವಳಿ ಕುರಿತು ಬರೆದದ್ದೆಂದು ಹೇಳಲಾದ ಪುಸ್ತಕವೊಂದರ ಬಗ್ಗೆ 'ಪ್ರಜಾವಾಣಿ'ಯಲ್ಲಿ ಬರೆದು ಬಿರುಸಿನ ಚರ್ಚೆಯೊಂದಕ್ಕೆ ಕಾರಣರಾಗಿದ್ದಾರೆ.

ಎಸ್.ಎನ್. ಬಾಲಗಂಗಾಧರ ರಾವ್ ಎಂಬ ವಿದ್ವಾಂಸರು ಮೂಲತಃ ಕನ್ನಡಿಗರಾಗಿದ್ದು, ಈಗ ಬೆಲ್ಜಿಯಂನಲ್ಲಿ ನೆಲೆಸಿದ್ದು ಅಲ್ಲಿನ ಘೆಂಟ್ ವಿಶ್ವವಿದ್ಯಾಲಯದಲ್ಲಿ ಸಮಾಜಶಾಸ್ತ್ರ ಪ್ರಾಧ್ಯಾಪಕರಾಗಿ, ಸಮಾಜಶಾಸ್ತ್ರದ ನಿರ್ವಸಾಹತೀಕರಣ ಎಂಬ ಜಾಗತಿಕ ಅಧ್ಯಯನ ಯೋಜನೆಯೊಂದನ್ನು ಕೈಗೆತ್ತಿಕೊಂಡಿದ್ದಾರೆ ಎಂದು ಕೇಳಿರುವೆ. ಅದರ ಭಾಗವಾಗಿ ಅವರು ಆ ದೇಶದಿಂದ ಹಣ ತಂದು ಈ ದೇಶದಲ್ಲಿನ ಹಲವು ವಿಶ್ವವಿದ್ಯಾಲಯಗಳಲ್ಲಿ–ನಮ್ಮ ಕುವೆಂಪು ವಿಶ್ವವಿದ್ಯಾಲಯವೂ ಸೇರಿದಂತೆ–ಸ್ಥಳೀಯ ಸಂಸ್ಕೃತಿ ಅಧ್ಯಯನದ ಹೆಸರಿನಲ್ಲಿ ಅನೇಕ ಸ್ಥಳೀಯ ಸಂಶೋಧಕರು, ಪ್ರಾಧ್ಯಾಪಕರು ಮತ್ತು ವಿದ್ವಾಂಸರು ಹಾಗೂ ನವ ಉದಾರಿಕರಣದ ಫಲವಾಗಿ ಮತ್ತೆ ತಲೆ ಎತ್ತಿರುವ (ನವ) ಪುರೋಹಿತರುಗಳನ್ನು ತಮ್ಮ ಯೋಜನೆಯ ತೆಕ್ಕೆಗೆ, ಪ್ರಭಾವ ವಲಯದೊಳಕ್ಕೆ ಸೆಳೆದಿರುವರು. ಮತ ಪ್ರಚಾಕರ ರೀತಿಯಲ್ಲಿ ಎಲ್ಲೆಲ್ಲೂ–ವಿಶೇಷವಾಗಿ ಸಾಮಾಜಿಕ ಮಾಧ್ಯಮಗಳಲ್ಲಿ–ಹರಡಿಕೊಂಡಿರುವ ಇವರು ತಮ್ಮ ಈ 'ಬಾಸ್'ನ ಸಂದೇಶವನ್ನು ಪ್ರಚುರಪಡಿಸುವ ವಿವಿಧ ಮಾರ್ಗಗಳನ್ನು ಅನ್ವೇಷಿಸಿಕೊಂಡು ಬಳಸುವುದರಲ್ಲಿ ನಿರತರಾಗಿದ್ದಾರೆ.

ಈ ಸೆಳೆತದ ಕಾರ್ಯಕ್ರಮದ (ಇದರ ಎಲ್ಲ ಅರ್ಥಗಳಲ್ಲೂ)

ಭಾಗವಾಗಿಯೇ ಝುಳಕಿ ಮತ್ತು ಬಾಲಗಂಗಾಧರರ ವಚನ ಚಳುವಳಿ ಕುರಿತ ಈ ಸಂಶೋಧನೆ ನಡೆದಿರುವುದು. ವಸಾಹಾತುಶಾಹಿಯು ನಮ್ಮನ್ನು ನಾವು ಸರಿಯಾಗಿ (ಹಾಗೆಂದರೇನು?) ಅರ್ಥಮಾಡಿಕೊಳ್ಳುವಲ್ಲಿ ಅನೇಕ ಗ್ರಹಿಕೆ ಮತ್ತು ತಾತ್ವಿಕ ಅಡ್ಡಿಗಳನ್ನು ಉಂಟು ಮಾಡಿದೆ ಎಂದು ಇವರು ಹೇಳುವರು. ನಮಗಾರಿಗೂ ಹೊಸದೇನಲ್ಲದ ಈ ಪ್ರತಿಪಾದನೆಯ ಭಾಗವಾಗಿ ಜಾತಿ ವ್ಯವಸ್ಥೆ ಕುರಿತ ನಮ್ಮ-ಅದು ಅಸಮಾನತೆಯ ಸಾಧನ ಎಂಬ-ಗ್ರಹಿಕೆ, ಈ ಕಾರಣದಿಂದಾಗಿ ತಪ್ಪಾಗಿದೆಯೆಂದೂ ಇವರು ವಾದಿಸುವರು. ಆದರೆ ಈ ಗ್ರಹಿಕೆ ಹೇಗೆ ತಪ್ಪೆಂಬುದನ್ನು ವಿವರಿಸಲು ಮಾತ್ರ ಇವರು ಎದುರುಗಿರುವವರು ಯಾರು ಎಂಬುದರ ಆಧಾರದ ಮೇಲೆ ವೈವಿಧ್ಯಮಯ ನಿರೂಪಣೆಗಳನ್ನು ಬಳಸುತ್ತಾರೆ! ಈ ಬಗ್ಗೆ ನಾನು ಒಮ್ಮೆ ಸ್ವತಃ ಬಾಲಗಂಗಾಧರರ ಬಳಿಯೇ ಚರ್ಚಿಸುವ ಸಾಹಸ ಮಾಡಲು ಹೋಗಿ ಬೀದಿ ಜಗಳಕ್ಕಿಳಿಯಬೇಕಾದ ಪ್ರಸಂಗವೊಂದು ಎದುರಾದದ್ದರ ಬಗ್ಗೆ ಈ ಹಿಂದೆ ಬೇರೆಡೆ ಬರೆದಿರುವೆ.

ಅದಿರಲಿ, ವಚನ ಚಳುವಳಿ ಕುರಿತ ಅವರ 'ಸಂಶೋಧನೆ'ಯನ್ನೇ ನೋಡಿ. ಇದರ ಪ್ರಕಾರ ವಚನ ಚಳುವಳಿ ಜಾತಿ ವಿರೋಧದ ಆಶಯವನ್ನೇ ಹೊಂದಿಲ್ಲವಂತೆ. ಇದನ್ನು ಪರಿಶೀಲಿಸುವ ಮುನ್ನ ಬಾಲ ಗಂಗಾಧರರ ಮೂಲ ಪ್ರತಿಪಾದನೆಯೊಂದನ್ನು ನಾವು ಗಮನಿಸಬೇಕಾಗುತ್ತದೆ. ಅದೆಂದರೆ, ಜಾತಿ ವ್ಯವಸ್ಥೆ ಎಂಬುದು ಒಂದು 'ವ್ಯವಸ್ಥೆ'ಯಲ್ಲ, ಒಂದು ಸಂಪ್ರದಾಯ ಮಾತ್ರ ಎಂಬುದು. ವ್ಯವಸ್ಥೆ ಎಂದರೆ ಇವರ ಪ್ರಕಾರ ಅದು ಅಖಿಲ ಭಾರತ ಮಟ್ಟದಲ್ಲಿ ಸಾಮಾನ್ಯವಾಗಿ ಅನ್ವಯವಾಗುವ ನಿಯಮಗಳ ವ್ಯವಸ್ಥೆಯಾಗಿರಬೇಕು. ಇದು ವೈದಿಕ ರಾಜಕಾರಣ (ತತ್ವ ಚಿಂತನೆ ಅಲ್ಲ) ಆರಂಭದಿಂದಲೂ ಅನುಸರಿಸಿಕೊಂಡು ಬಂದಿರುವ ತಂತ್ರವೇ ಆಗಿದೆ. ಅದೆಂದರೆ, ಒಂದು 'ವ್ಯವಸ್ಥೆ'ಯಾಗಿ ಹಿಂದೆಂದೂ ಇಲ್ಲದ ಭಾರತವೆಂಬುದೊಂದನ್ನು ವಿವಿಧ ಕಾಲಘಟ್ಟಗಳಲ್ಲಿ ವಿವಿಧ ರೂಪಾಂತರಗಳಲ್ಲಿ ಎಲ್ಲರ ಮೇಲೆ ಹೊರಿಸುತ್ತಾ ಅದರ ಚೌಕಟ್ಟಿನಲ್ಲೇ ಎಲ್ಲ ಜಿಜ್ಞಾಸೆ, ತತ್ವ ರಚನೆ, ವಾದ ಚರ್ಚೆ, ಸಂಶೋಧನೆ ನಡೆಸುವುದು. ಭಾರತವೆಂಬುದು ಇಂದು ಒಂದು ಸಾಂವಿಧಾನಿಕ ಅಸ್ತಿತ್ವ ಮಾತ್ರ. ಅದರ ಹೊರತಾಗಿ ಅದೊಂದು ಅರ್ಧ ಚಾರಿತ್ರಿಕ-ಅರ್ಧ ಪೌರಾಣಿಕ ಕಲ್ಪನೆ, ಅಷ್ಟೆ. ನಮ್ಮ ಸ್ಥಳೀಯ ಸಂಸ್ಕೃತಿ ಚಿಂತಕರೆಲ್ಲರೂ(ಕನ್ನಡದಲ್ಲಿ ತೇಜಸ್ವಿಯಿಂದ ಹಿಡಿದು ಡಿ.ಆರ್. ನಾಗರಾಜರವರೆಗೆ) ಇದನ್ನು ಕಂಡುಕೊಳ್ಳುತ್ತಾ, ವಿಷದೀಕರಿಸುತ್ತಾ ಹೋಗಿದ್ದಾರೆ. ಆದರೆ ಈ ಸಂಶೋಧಕ ಮಹಾಶಯರು ಅದೇ ಸ್ಥಳೀಯ ಸಂಸ್ಕೃತಿ ಅಧ್ಯಯನದ ಹೆಸರಿನಲ್ಲಿ ಇದನ್ನೆಲ್ಲ ಬುಡಮೇಲುಗೊಳಿಸಹೊರಟಿದ್ದಾರೆ,

ವಚನಗಳನ್ನು ಕುರಿತ ಇವರ ಈ ಹಾಸ್ಯಾಸ್ಪದ ಸಂಶೋಧನೆ ಈ ಪೆದ್ದುತನದ ಭಾಗವೇ ಆಗಿದೆ. ಏಕೆಂದರೆ. ವಚನಗಳ ಸಂಖ್ಯೆಯ ಶೇಕಡಾವಾರು ಎಷ್ಟು ಭಾಗದಲ್ಲಿ ಜಾತಿ ಚಹರೆಗಳ ಸೂಚನೆ ಇದೆ ಎಂದು ಹುಡುಕಲು ಇವರು ಹೊರಟಿದ್ದಾರೆ! ಜಾತಿಯನ್ನು ಸೇರು, ಪಾವು, ಚಟಾಕುಗಳಲ್ಲಿ ಅಳೆಯಲು ಸಾಧ್ಯವೆಂದು-ಅದೂ ಅಖಿಲ ಭಾರತ ಅಳತೆಯ ಮಾನದಲ್ಲಿ-ನಮ್ಮನ್ನು ನಂಬಿಸಲು ಇವರು ಹೊರಟಿದ್ದಾರೆ.

ಇವರ ಪ್ರತಿಪಾದನೆಯ ಆರಂಭಿಕ ಊಹೆ ನೋಡಿ: ಹೆಚ್ಚಿನ ವಚನಗಳಲ್ಲಿ ಜಾತಿ ಪ್ರಸ್ತಾಪ ಕಂಡುಬರದಿದ್ದರೆ ವಚನ ಚಳುವಳಿ ಜಾತಿ ವಿರೋಧಿ ಚಳುವಳಿಯಲ್ಲ ಎಂದು ತೀರ್ಮಾನಿಸಬೇಕಾಗುತ್ತದೆ! ಸಮಾಜಶಾಸ್ತ್ರದ ನಿರ್ವಸಾಹತೀಕರಣ ಎಂದರೆ ಸಂಶೋಧನೆಯನ್ನು ಅಂಕಗಣಿತ ಆಟವನ್ನಾಗಿ ಮಾರ್ಪಡಿಸುವುದು ಎಂದು ಇವರು ತಿಳಿದಿದ್ದಾರೆಂದು ಕಾಣುತ್ತದೆ! ಈ ಮೂರ್ಖರಿಗೆ ವಚನ ಚಳುವಳಿ ಸಾಮಾಜಿಕ-ಆರ್ಥಿಕ-ಸಾಂಸ್ಕೃತಿಕ ಆಯಾಮಗಳಿದ್ದ ಒಂದು ರಾಜಕೀಯ ಚಳುವಳಿಯೂ ಆಗಿದ್ದು, ಅದರ ಸೃಜನಶೀಲ ಅಭಿವ್ಯಕ್ತಿ ರೂಪವಷ್ಟೇ ವಚನ ಸಾಹಿತ್ಯವೆನಿಸಿಕೊಂಡಿದ್ದು, ಸಾಹಿತ್ಯವೆನ್ನುವುದು ಇವರ ಸಂಶೋಧನೆ ನಂಬಿರುವ ಇಂತಹ ಹಸಿ ಹಸಿ ಲೆಕ್ಕಾಚಾರಗಳನ್ನು, ಅಳತೆಗಳನ್ನು ಮೀರಿದ ಒಂದು ಅನುಭಾವಿಕ ಸ್ತರದ ವಿದ್ಯಮಾನ ಎಂದು ಯಾರಾದರೂ ಹೇಳಬೇಕಿದೆ.

ವಚನ ಸಾಹಿತ್ಯ ಎಂಬುದು ಜೇಡರ ದಾಸಿಮಯ್ಯನಿಂದ ಹಿಡಿದು ಬಸವ-ಅಲ್ಲಮ-ಅಕ್ಕಗಳ ನಂತರವೂ ಹಲವು ಸಾಮಾಜಿಕ-ಸಾಂಸ್ಕೃತಿಕ ಸಂಕೀರ್ಣತೆಗಳೊಂದಿಗೆ ವಿಸ್ತರಿಸಿಕೊಂಡ ಅನುಭಾವದ ಆಕಾಶದಲ್ಲಿ ಬೆಳಗಿದ ಗುಡುಗು-ಸಿಡಿಲು ಮಿಂಚುಗಳು; ಹೊಸ ದರ್ಶನವೊಂದರ, ಹೊಸ ತಿಳುವಳಿಕೆಯ ಮೇಘ ಸ್ಫೋಟಗಳು. ಅದರ ಪ್ರತಿಧ್ವನಿಗಳನ್ನು ನಂತರದ ಹಲವು ವರ್ಷಗಳ ಕಾಲ ಮಾದೇಶ್ವರ, ಮಂಟೆಸ್ವಾಮಿ, ಕೊಡೆಕಲ್ ಬಸವ, ಸಿದ್ಧಾರೂಢ ಇತ್ಯಾದಿ ಸ್ಥಳೀಯ ಕಿರು ಸಂಪ್ರದಾಯಗಳಲ್ಲಿ ಕೇಳಬಹುದಾಗಿದ್ದು, ಇವನ್ನೂ ನೀವೊಮ್ಮೆ ಅಳೆದುನೋಡಲು ಯತ್ನಿಸಿರಿ ಎಂದೂ ಬಾಲಗಂಗಾಧರ ನಾಟಕ ಕಂಪನಿಗೆ ಯಾರಾದರೂ ಹೇಳಬೇಕಿದೆ. ಹಾಗೇ ಇವರ ಮೇಲೆ ಕನಿಕರವಿಟ್ಟಾದರೂ ಎ.ಕೆ. ರಾಮಾನುಜನ್‌ರ 'ಅಂಗುಲ ಹುಳುವಿನ ಪರಕಾಯ ಪ್ರವೇಶ' ಕವನವನ್ನೊಮ್ಮೆ ಓದಲು ಈ ಸಂಶೋಧನಾ ಸರಕಿನ ಅಂತಾರಾಷ್ಟ್ರೀಯ ವ್ಯಾಪಾರಿಗಳಿಗೆ ಸೂಚಿಸಬೇಕಿದೆ. ಇವರ ಇಂತಹ ವ್ಯಾಪಾರ ನಮ್ಮ ಒಳ್ಳೊಳ್ಳೆಯ ಸಂಶೋಧಕರನ್ನು ಅಗ್ಗದ ಅನುವಾದಕರನ್ನಾಗಿ ಅವನತಿಗೊಳಿಸಿರುವ ದುರಂತವನ್ನು ಗಮನಿಸಿ ನಾನು ಈ ಖಾರವಾದ ಮಾತುಗಳನ್ನಾಡುತ್ತಿರುವೆ.

ಹಾಗೆ ನೋಡಿದರೆ ಮೊದಲು ಇಂತಹ ಮಾತುಗಳನ್ನು ಹೇಳಬೇಕಿರುವುದು ಸ್ವತಃ ಕವಿಯಾದ ಶಿವಪ್ರಕಾಶರಿಗೆ. ಅವರೀಗ ಕವಿಯಲ್ಲ ಎಂದು ಕಾಣುತ್ತದೆ. ಹಾಗಾಗಿಯೇ ಏನೋ, ಈವರೆಗೆ ಯಾರೂ ಮೂಸಿನೋಡದಿದ್ದ ಈ ಕಗ್ಗವನ್ನು ಗಮನಾರ್ಹ ಸಂಗತಿಯೆಂಬಂತೆ ಅವರೀಗ ಎಲ್ಲರ ಮೂಗಿನ ಬಳಿ ತಂದಿದ್ದಾರೆ. ಇದೆಲ್ಲ ಯಾಕೆ? ನಿಜವಾಗಿ ತಿಳಿಯದಾಗಿದೆ!

ನಿಜ, ಸಾಮಾಜಿಕ ನ್ಯಾಯ ರಾಜಕಾರಣವೆಂಬುದು ಇಂದು ತಲುಪಿರುವ ಸ್ಥಿತಿಯನ್ನು ಗಮನಿಸಿದರೆ ಜಾತಿ ವ್ಯವಸ್ಥೆ ಕುರಿತ ನಮ್ಮ ಗ್ರಹಿಕೆ ಮತ್ತು ನಿರೂಪಣೆಗಳಲ್ಲಿ ಏನೋ ಮುಖ್ಯ ಐಬಿರುವಂತಿದೆ. ಆದರೆ ಅದು ಖಂಡಿತ ಇವರು ಈಗ ಕಂಡುಹಿಡಿದಿರುವಂತಹುದಲ್ಲ.

●

ಮೇ, ೨೦೧೩

ರಂಗದ ಮೇಲೆ ಮೆರೆದ ಕಡಿದಾಳು ಶಾಮಣ್ಣ

ಬಿ. ಚಂದ್ರೇಗೌಡ ನಮ್ಮ ನಡುವಿನ ಒಂದು ವಿಶಿಷ್ಟ ಪ್ರತಿಭೆ. ಹಲವಾರು ವರ್ಷಗಳಿಂದ ಸರ್ಕಾರಿ ಸೇವೆಯ ಮೇಲೆ ಅಜ್ಜಂಪುರ, ಚಿಕ್ಕಮಗಳೂರು ಶಿವಮೊಗ್ಗ ಇತ್ಯಾದಿ ಪಟ್ಟಣಗಳಲ್ಲಿ ವಾಸವಿದ್ದರೂ, ನಾಗಮಂಗಲದ ಕಡೆಯ ತಮ್ಮ ಮೂಲ ಹಳ್ಳಿಯೊಂದಿಗೆ ನಿರಂತರ ಮತ್ತು ಜೀವಂತ ಸಂಪರ್ಕವಿಟ್ಟುಕೊಂಡು ಬಂದವರು. ಬಯಲು ಸೀಮೆಯ ಬದುಕಿನ ಎಲ್ಲ ಬಣ್ಣ ಬೆಡಗುಗಳನ್ನೂ ಅಲ್ಲಿನ ಭಾಷೆಯ ಎಲ್ಲ ಇನಿ–ಬನಿಗಳನ್ನೂ ಕಾಪಾಡಿಕೊಂಡು ಬರುತ್ತಾ, 'ಲಂಕೇಶ್ ಪತ್ರಿಕೆ'ಯಲ್ಲಿ ಸತತವಾಗಿ ಇಪ್ಪತ್ತು ವರ್ಷಗಳ ಕಾಲ 'ಬಯಲುಸೀಮೆ ಕಟ್ಟೆ ಪುರಾಣ' ಬರೆದು ರಾಜ್ಯಾದ್ಯಂತ ಮನೆ ಮಾತಾದವರು.

ಚಂದ್ರೇಗೌಡರೀಗ ನಾಟಕಕಾರರೂ ಹೌದು. ಅವರ ಈವರೆಗಿನ ಐದು ನಾಟಕಗಳ ಪೈಕಿ ಮೂರನ್ನು ಕಳೆದ ಏಪ್ರಿಲ್ ೫, ೬ ಹಾಗೂ ೭ರಂದು ಶಿವಮೊಗ್ಗದ ಕುವೆಂಪು ರಂಗ ಮಂದಿರದಲ್ಲಿ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ 'ಚಂದ್ರೇಗೌಡ ನಾಟಕೋತ್ಸವ' ಎಂಬ ಹೆಸರಿನಲ್ಲಿ ಪ್ರದರ್ಶಿಸಲಾಯಿತು. ಶಿವಮೊಗ್ಗಾದ ಉತ್ಸಾಹಿ ರಂಗಕರ್ಮಿ ಸಾಸ್ವೆಹಳ್ಳಿ ಸತೀಶರ 'ಹೊಂಗಿರಣ' ನಾಟಕ ತಂಡ 'ಹೊಂಗಿರಣೋತ್ಸವ' ಎಂದು ಇದನ್ನು ಆಯೋಜಿಸಿತ್ತು.

ಮೊದಲ ನಾಟಕ ಪಿ. ಲಂಕೇಶರ 'ಕಲ್ಲು ಕರಗುವ ಸಮಯ' ಕಥೆಯನ್ನು ಆಧರಿಸಿ ಚಂದ್ರೇಗೌಡರು ರೂಪಿಸಿದ್ದು, ಪ್ರಸ್ತುತಿ: ಸಾಗರದ ಸ್ಪಂದನ ರಂಗತಂಡದ್ದು. ನಿರ್ದೇಶನ ಅದೇ ತಂಡದ ಪ್ರತಿಭಾ

ರಾಘವೇಂದ್ರ ಅವರದ್ದು. ಲಂಕೇಶರ ಈ ಕಥೆ ಮನುಷ್ಯನ ಪ್ರೀತಿ ಮತ್ತು ಕ್ರೌರ್ಯಗಳ ಹಿಂದಿನ ಸಂಕೀರ್ಣತೆಗಳನ್ನು ಸೂಕ್ಷ್ಮವಾಗಿ ಹಿಡಿದಿಡುತ್ತದೆ. ಅದನ್ನು ನಾಟಕ ಮಾಡಲು ಲಂಕೇಶರ ಪ್ರತಿಭೆಗೆ ಮಾತ್ರ ಸಾಧ್ಯವೇನೋ! 'ಕುರುಡು ಕಾಂಚಾಣ' ಕಥೆ ಅವರಿಂದ 'ಗಿಳಿಯು ಪಂಜರದೊಳಿಲ್ಲ' ನಾಟಕವಾದ ಹಾಗೆ. ಆದರೆ ಇಲ್ಲಿ ನಾಟಕ, ರೂಪಾಂತರ ಮತ್ತು ಅದರ ರಂಗಾವತರಣ ಈ ಎರಡೂ ನೆಲೆಗಳ ಕಸುಬುದಾರಿಕೆಯು ಜನಪ್ರಿಯ ಮಾರ್ಗಗಳನ್ನು ಹಿಡಿದು ಸೋತಿದೆ ಎಂದೇ ಹೇಳಬೇಕು. ಲಂಕೇಶರ ಕಥೆಯು ವ್ಯಕ್ತಿ ಮತ್ತು ಸಮಾಜ ಈ ಎರಡರ ಅಂತರಂಗಗಳನ್ನೂ ಒಟ್ಟಿಗೇ ಶೋಧಿಸುವ ಪ್ರಯತ್ನ ಮಾಡಿದರೆ, ನಾಟಕ ರೂಪ ಅದರ ಪರಿಣಾಮಗಳನ್ನಷ್ಟೇ ಸಮಾಜದ ಹೊರ ಚಹರೆಗಳ ನೆಲೆಯಲ್ಲಿ, ಅದೂ ಲಘು ರಂಜನೆಯ ಶೈಲಿಯಲ್ಲಿ ಹಿಡಿದಿಡಲು ಯತ್ನಿಸಿ ಕಥೆಯ ಒಟ್ಟು ಘನತೆಯನ್ನೇ ಕಳೆದಿದೆ. ಪ್ರತಿಭಾ ಅವರು ಭಾವಗೀತಾತ್ಮಕ ರಾಗಾಲಾಪನೆಗಳ ಮೂಲಕ ಈ ದೌರ್ಬಲ್ಯ ನೀಗಲು ಹೋಗಿ ಕಥೆಯ ಸೂಕ್ಷ್ಮಗಳನ್ನು ಇನ್ನಷ್ಟು ಸ್ಥೂಲಗೊಳಿಸಿಬಿಟ್ಟಿದ್ದಾರೆ.

ಆದರೆ ಎರಡನೇ ದಿನದ ನಾಟಕ 'ಕಡಿದಾಳು ಶಾಮಣ್ಣ' ಈ ಎಲ್ಲ ವೈಫಲ್ಯ ಮತ್ತು ನಿರಾಶೆಗಳನ್ನು ನೀಗುವಂತಹ ಸಫಲ ಪ್ರಯತ್ನವಾಗಿತ್ತು. ನಾಟಕ ರಚನೆ ಮತ್ತು ನಿರ್ದೇಶನ ಈ ಎರಡೂ ನೆಲೆಗಳಲ್ಲಿ. ಸಮಾಜವಾದಿ ರೈತ ನಾಯಕ ಕಡಿದಾಳು ಶಾಮಣ್ಣ ಅವರ ಸಾರ್ವಜನಿಕ ಬದುಕನ್ನು ಕುರಿತು ಚಂದ್ರೇಗೌಡರು ಶಾಮಣ್ಣ ಮತ್ತು ಅವರ ಒಡನಾಡಿಗಳ ಬರಹಗಳನ್ನು ಆಧರಿಸಿ ಈ ನಾಟಕವನ್ನು ರೂಪಿಸಿದ್ದಾರೆ. ಇದು ಅವರ ವ್ಯಕ್ತಿತ್ವವನ್ನು, ಅವರು ಕೇಂದ್ರದಲ್ಲಿದ್ದ ಸಮಾಜವಾದಿ ಮತ್ತು ರೈತ ಚಳುವಳಿಯ ಸಂದರ್ಭಗಳ ಎಲ್ಲ ಸೂಕ್ಷ್ಮ ಮತ್ತು ಸ್ವಾರಸ್ಯಗಳೊಂದಿಗೆ ನಾಟಕೀಯವಾಗಿ ಕಟ್ಟಿಕೊಡುತ್ತದೆ. ನಮ್ಮ ಕಣ್ಣ ಮುಂದೆ ಇರುವ ವ್ಯಕ್ತಿ ಮತ್ತು ನಮ್ಮ ಕಣ್ಣ ಮುಂದೆ ನಡೆದ ಚಳುವಳಿಗಳನ್ನು ರಂಗದ ಮೇಲೆ ಜೀವಂತಗೊಳಿಸುವುದು ಸಾಹಸದ ಕೆಲಸವೇ ಸರಿ. ಅದಿಲ್ಲಿ ಸಾಕಷ್ಟು ಯಶಸ್ವಿಯಾಗಿದ್ದರೆ ಅದಕ್ಕೆ ಚಂದ್ರೇಗೌಡರಷ್ಟೇ ಅದನ್ನು ರಂಗದ ಮೇಲೆ ಬಹು ಪರಿಣಾಮಕಾರಿಯಾಗಿ ತಂದ ನಿರ್ದೇಶಕ ಹೊನ್ನಾಳಿ ಚಂದ್ರಶೇಖರ್ ಕೂಡ ಕಾರಣರಾಗಿದ್ದಾರೆ. ಮೂಲ ನಾಟಕವನ್ನು ನಾನು ಕೆಲ ವರ್ಷಗಳ ಹಿಂದೆ ಬಿಡುಗಡೆ ಮಾಡಿದವನಾಗಿ ಹೇಳುವುದಾದರೆ, ಮೂಲದಲ್ಲಿದ್ದ ಚಂದ್ರೇಗೌಡರ ಎಂದಿನ ಜನಪ್ರಿಯ ಪಟ್ಟುಗಳನ್ನು ಚಂದ್ರಶೇಖರ್ ಹಿನ್ನೆಲೆಗೆ ಸರಿಸಿ ವಸ್ತುವನ್ನು ಕುರಿತ ತಮ್ಮದೇ ಒಂದು ಸಮಗ್ರ ನೋಟ ಮತ್ತು ರಂಗ ಕೌಶಲ್ಯಗಳ ಮೂಲಕ ಒಟ್ಟಾರೆ ಈ ಪ್ರಯೋಗವನ್ನು ಒಂದು ಹೊಸ ಎತ್ತರಕ್ಕೆ ಕೊಂಡೊಯ್ದಿದ್ದಾರೆ. ಆದರೂ ಇಲ್ಲಿ ಶಾಮಣ್ಣನವರ ವ್ಯಕ್ತಿತ್ವ (ಬಹುಶಃ ಶಾಮಣ್ಣನವರಿಗೇ ಮುಜುಗರ ತರುವಷ್ಟು) ವೈಭವೀಕೃತವಾಗಿದೆ ಮತ್ತು ಎಂಡಿಎನ್ ಅವರ ವ್ಯಕ್ತಿತ್ವ, ಅವರ ಪಾತ್ರ ನಿರೂಪಣೆಯ ಸಮಗ್ರತೆಯ ಕೊರತೆಯಿಂದಾಗಿ ಒಂದು ವಾರೆ ನೋಟಕ್ಕೆ ಸಿಕ್ಕಿ ವ್ಯಂಗ್ಯಚಿತ್ರದಂತಾಗಿದೆಯೇನೋ ಎಂಬ ಅಭಿಪ್ರಾಯ ಮೂಡದಿರದು.

ಇನ್ನು ಮೂರನೇ ದಿನದ 'ಬಯಲು ಸೀಮೆ ಕಟ್ಟೆ ಪುರಾಣ'ವನ್ನು ಯಾವುದೇ

ರೀತಿಯಲ್ಲಿ ನಾಟಕವೆಂದು ಕರೆಯುವುದು ಕಷ್ಟ. ಚಂದ್ರೇಗೌಡರು ತಮ್ಮ ಜನಪ್ರಿಯ ಅಂಕಣಗಳಲ್ಲಿನ ತಮ್ಮ ಸಾಮಾಜಿಕ ಮತ್ತು ರಾಜಕೀಯ ವಿಡಂಬನೆಗಳನ್ನು ಸಮಕಾಲೀನ ರಾಜಕೀಯ ಸಂದರ್ಭಗಳ ಜನಪ್ರಿಯ 'ಜೋಕು'ಗಳೊಂದಿಗೆ ಬೆರಕೆ ಮಾಡಿ ಒಂದು ದೃಶ್ಯಾವಳಿಯನ್ನು ಕಟ್ಟಿಕೊಟ್ಟಿದ್ದಾರೆ. ಆ ಮೂಲಕ ಮಹಾ ಜನತೆಯು ಇಲ್ಲಿ ವಿಡಂಬನೆಗೆ ಒಳಗಾಗಿರುವ ದುಷ್ಟ ಮತ್ತು ಭ್ರಷ್ಟ ಸಾಮಾಜಿಕ ಮತ್ತು ರಾಜಕೀಯ ಸಂದರ್ಭಗಳಲ್ಲಿನ ತಮ್ಮ ಸಕ್ರಿಯ ಪಾತ್ರವನ್ನು ತಾವೇ ಉದಾರವಾಗಿ ಕ್ಷಮಿಸಿಕೊಂಡು ನಕ್ಕು ನಲಿದು ಹೋಗಲು ಅವರು ಇಲ್ಲಿ ಅವಕಾಶ ಮಾಡಿಕೊಟ್ಟಿದ್ದಾರೆ. ಇದರ ಪ್ರಸ್ತುತಿ: 'ನಮ್ ಟೀಮ್', ಶಿವಮೊಗ್ಗ. ನಿರ್ದೇಶನ ಅದೇ ತಂಡದ ಎಸ್.ಆರ್. ಗಿರೀಶ್ ಎಂದಷ್ಟೇ ಹೇಳಿದರೆ ಸಾಕೆಂದು ಕಾಣುತ್ತದೆ. ಚಂದ್ರೇಗೌಡರ ಹಾಸ್ಯ ಬರವಣಿಗೆಯ ಹಿಂದೆ ಇರುವುದೆಂದು ಹೇಳಲಾಗುವ 'ಆತ್ಮಶೋಧನೆ'ಯ ಆಯಾಮ ಸಂಪೂರ್ಣ ಮರೆಯಾಗಿರುವುದು ಈ ಪ್ರಯತ್ನದ ಒಂದು ವಿಷಾದನೀಯ ಸಂಗತಿ ಎಂಬುದನ್ನೂ ಇಲ್ಲಿ ಕಾಣಿಸಬೇಕು.

ನಮ್ಮ ಪಿಬಿಎಸ್ ಚಿರಾಯುವಾಗಲಿ!

ನಮ್ಮ ನೆಚ್ಚಿನ ಪಿಬಿಎಸ್ ಇನ್ನಿಲ್ಲ. ನಾವೆಲ್ಲ ಹಳ್ಳಿಗಾಡುಗಳಲ್ಲಿ ಬೆಳೆದದ್ದೇ ಅವರ ಗೊಂಬೆಯಾಟವಯ್ಯಾ, ಒಲವಿನ ಪ್ರಿಯಲತೆ, ಬಿಂಕದ ಸಿಂಗಾರಿ, ತುಟಿಯ ಮೇಲೆ ತುಂಟ ಕಿರುನಗೆ, ಕುಲಕುಲವೆಂದು ಹೊಡೆದಾಡದಿರಿ, ಈತನೀಗ ವಾಸುದೇವನು, ಬಾ ತಾಯಿ ಭಾರತಿಯೇ, ಹಾಡೊಂದ ಹಾಡುವೆ, ಮೌನವೇ ಆಭರಣ, ಅಪಾರ ಕೀರ್ತಿ ಗಳಿಸಿ ಮೆರೆವ... ಮುಂತಾದ ಮೃದು ಮಧುರ ಹಾಡುಗಳನ್ನು ಕೇಳುತ್ತಾ, ಹಾಡುತ್ತಾ. ಈ ಅರ್ಥದಲ್ಲಿ ಪಿ.ಬಿ. ಶ್ರೀನಿವಾಸ್ ನಮ್ಮ ಸ್ಮೃತಿ, ನಮ್ಮ ವ್ಯಕ್ತಿತ್ವದ ಒಂದು ಭಾಗವಾಗಿಬಿಟ್ಟಿದ್ದಾರೆ. ಹಾಗಾಗಿಯೇ ಅವರು ಅಪೂರ್ವ ಗಾಯಕರೆಂದೇನೂ ಅನಿಸಿಕೊಳ್ಳದಿದ್ದರೂ, ಅವರ ಸಾವು ನಮ್ಮ ವ್ಯಕ್ತಿತ್ವದ ಒಂದು ಬಹು ಮುಖ್ಯಭಾಗವನ್ನು ಕಿತ್ತುಕೊಂಡು ಹೋಗಿದೆ ಎನಿಸತೊಡಗಿದೆ. ಎತ್ತರಕ್ಕೆ ಏರಿದಾಗ ನಲುಗಿಹೋಗುತ್ತಿದ್ದ ಪಿಬಿಎಸ್ ಕಂಠ ಅಂದಿನ ಕನ್ನಡ ಚಿತ್ರಗಳ ಮೃದು ಲಲಿತ ಗತಿಗೆ ಮತ್ತು ಅದಕ್ಕಿಂತ ಹೆಚ್ಚಾಗಿ ರಾಜ್‌ಕುಮಾರ್‌ರ ಮೃದು ಸುಂದರ ಪಾತ್ರಗಳಿಗೆ ಹೇಳಿ ಮಾಡಿಸಿದ ವಾಣಿಯಾಗಿತ್ತು. ಹಾಗಾಗಿಯೇ ನನಗೆ ಎಷ್ಟೋ ಬಾರಿ ಅನಿಸಿದೆ, ರಾಜ್‌ಕುಮಾರ್ ಕುರಿತ ನಮ್ಮ ಆಳದ ಪ್ರೀತಿಗೆ ಪಿಬಿಎಸ್ ಕೂಡಾ ಬಹು ಮುಖ್ಯ ಕಾರಣ ಎಂದು. ಪಿಬಿಎಸ್‌ರ ಸಾವಿನ ಈ ಸಂದರ್ಭದಲ್ಲಿ ನಮ್ಮ ರಾಜ್‌ಕುಮಾರ್ ತಮ್ಮ ಚಿತ್ರಗಳಲ್ಲಿನ ತಮ್ಮ ಪಾತ್ರದ ಎಲ್ಲ ಹಾಡುಗಳನ್ನೂ ತಾವೇ ಹಾಡತೊಡಗಿ ನಮ್ಮ ಪಿಬಿಎಸ್‌ಗೆ ಅನ್ಯಾಯ ಮಾಡಿದರೇನೋ ಎಂಬ ನೋವು ಕಾಡದಿರದು. ಪಿಬಿಎಸ್ ಚಿರಾಯುವಾಗಲಿ!

ಇವರೇಕೆ ಹೀಗೆ ಕುಣಿದು ಕುಪ್ಪಳಿಸುವರು?

ನಾನು ಆಕಸ್ಮಿಕವಾಗಿ ಐಪಿಎಲ್ ಪಂದ್ಯಗಳನ್ನು ನೋಡಿದಾಗಲೆಲ್ಲ ಒಂದು

ಪ್ರಶ್ನೆ ನನ್ನ ಮನಸ್ಸಿನಲ್ಲಿ ಏಳುತ್ತದೆ. ಈ ಪಂದ್ಯಗಳನ್ನು ನೋಡಿ. ನೆಗೆದು ಕುಣಿದು ಕುಪ್ಪಳಿಸುತ್ತಿರುವ ಪ್ರೇಕ್ಷಕರ ಹಿಂದಿನ ಸ್ಫೂರ್ತಿಯಾದರೂ ಏನು? ಇವರು ತಮ್ಮ ನೆಚ್ಚಿನ ತಂಡವನ್ನು ಹೇಗೆ ಆಯ್ಕೆ ಮಾಡಿಕೊಂಡು ಹೀಗೆ ಕುಣಿದು ಕುಪ್ಪಳಿಸುತ್ತಾರೇ? ಏಕೆಂದರೆ, ತಂಡಗಳಿಗೆ ಯಾವುದೇ ಸಮಾನ ಆಸಕ್ತಿಗಳ ಆಧಾರವಿಲ್ಲ. ಅವು ಒಂದು ಊರನ್ನಾಗಲೀ ರಾಜ್ಯವನ್ನಾಗಲೀ, ರಾಷ್ಟ್ರವನ್ನಾಗಲೀ ಖಂಡವನ್ನಾಗಲೀ ಪ್ರತಿಧಿಸುವುದಿಲ್ಲ. ಅವುಗಳ ರಚನೆ ನಡೆದಿರುವುದು ಏನಿದ್ದರೂ ಯಾರೋ ಸಾಹುಕಾರ ಕೂಗಿದ ಹರಾಜಿನ ಆಧಾರದ ಮೇಲೆ. ಹೀಗಿರುವಾಗ ತಂಡಕ್ಕೂ ಈ ಪ್ರೇಕ್ಷಕರಿಗೂ ಯಾವ ನೆಲೆಯ ಭಾವ ಸಂಬಂಧ ಏರ್ಪಟ್ಟಿರಬಹುದು? ಕುಣಿಯುವ ಹುಡುಗಿಯರಾದರೋ ಹಣಕ್ಕಾಗಿ ಕುಣಿಯುತ್ತಾರೆ. (ಬಿಸಿಸಿಐನಿಂದ ಲಲಿತ್ ಮೋದಿಯ ನಿರ್ಗಮನದ ನಂತರ ಇದು ಸದ್ಯ ನಿಂತಿದೆ!) ಇವರೇಕೆ ಕುಣಿಯುತ್ತಾರೋ ಗೊತ್ತಾಗುತ್ತಿಲ್ಲ! ಹಡಬೆ ಹಣದ ಐಲುಪೈಲು? ಗೊತ್ತಿದ್ದರೆ ತಿಳಿಸಿ.

●

ಜೂನ್, ೨೦೧೩

'ಭಾರತ ಯಾತ್ರೆ' ಎಂಬ ಕೃತಕ ನಾಟಕ

'ಭಾರತ ಯಾತ್ರೆ' ನೀನಾಸಂನ ಕೆ.ವಿ. ಅಕ್ಷರ ಅವರ ಇತ್ತೀಚಿನ ರಂಗಪ್ರಯೋಗ. ಅಕ್ಷರ ಅವರೇ ರಚಿಸಿ ನಿರ್ದೇಶಿಸಿರುವ ಈ ಪ್ರಯೋಗ ಮೇ ಮೊದಲ ವಾರದಲ್ಲಿ ಹೆಗ್ಗೋಡಿನ ಶಿವರಾಮ ಕಾರಂತ ರಂಗ ಮಂದಿರದಲ್ಲಿ ಪ್ರದರ್ಶಿತವಾಯಿತು. ಬದುಕೇ ಒಂದು ಯಾತ್ರೆಯಾಗಿದ್ದು, ಈ ಯಾತ್ರೆಗೆ ಏನಾದರೂ ಉದ್ದೇಶ ಅಥವಾ ಅರ್ಥ ಇದೆಯೇ ಎಂಬ ಪ್ರಶ್ನೆಯ ವಿಶಾಲ ತಾತ್ವಿಕ ಭಿತ್ತಿಯೊಂದಿಗೆ ಕಟ್ಟಲ್ಪಟ್ಟಿರುವಂತೆ ತೋರುತ್ತಾ ಆರಂಭವಾಗುವ ಈ ನಾಟಕ ಬದುಕೆಂಬುದರ ಅರ್ಥವ್ಯಾಪ್ತಿಯನ್ನು ತನಗೆ ಬೇಕಾದ ಒಂದು ಮಾದರಿಯಲ್ಲಿ ರೂಪಿಸಿಕೊಂಡ ಭಾರತ ಯಾತ್ರೆಗೆ ಮಾತ್ರ ಸೀಮಿತಗೊಳಿಸಿಕೊಂಡು ಬೆಳೆಯುತ್ತದೆ. ಹಾಗೆ ಬೆಳೆದು ಈಗ ನೀನಾಸಮ್ಮೂ ಸೇರಿದಂತೆ ಹಲವು ಮೂಲಗಳಿಂದ ಚಾಲ್ತಿಗೆ ಬರಲು ಯತ್ನಿಸುತ್ತಿರುವ ಭಾರತೀಯರಿಗೆ ತಮ್ಮದೇ ನಿಜ ಅನುಭವವೆಂಬುದು ಸಾಧ್ಯವಾಗುತ್ತಿಲ್ಲ ಎಂಬ ವಿದ್ವಾನ್ ಬಾಲಗಂಗಾಧರರ ಅನುಮಾನಾಸ್ಪದ ಪ್ರಮೇಯವನ್ನು ಹಲವು ನೆಲೆಗಳಿಂದ ವಿಷದೀಕರಿಸುವ ಪ್ರಯತ್ನ ಮಾಡುವಲ್ಲಿ ತನ್ನ ಸಾರ್ಥಕತೆಯನ್ನು ಕಂಡುಕೊಳ್ಳುತ್ತದೆ. ಹೀಗಾಗಿ ಈ ನಾಟಕ ತಾತ್ವಿಕ ನೆಲೆಯಲ್ಲಿಯೇ ಸಮಸ್ಯಾತ್ಮಕವಾಗಿದ್ದು, ಈ ಸಮಸ್ಯಾತ್ಮಕತೆ ಸಹಜವಾಗಿಯೇ ಅದರ ಭೌತಿಕ ರಚನೆಯಲ್ಲೂ ಎದ್ದು ಕಾಣುತ್ತದೆ. ಹೀಗಾಗಿ, ಇಡೀ ಪ್ರಯೋಗ ಅಕ್ಷರ ಅವರು ಸಾಧಿಸಿಕೊಂಡಿರುವ ರಂಗ ಕೌಶಲ್ಯಗಳು, ಈ ನಾಟಕವನ್ನು ಅಭಿನಯಿಸಿರುವ ನೀನಾಸಂ ರಂಗ ಶಿಕ್ಷಣ ಕೇಂದ್ರದ ಪ್ರಸಕ್ತ ಸಾಲಿನ ನಟ-ನಟಿಯರ ಪ್ರತಿಭೆ ಮತ್ತು ಶಿಶಿರ ಅವರ ಪ್ರಯೋಗಾತ್ಮಕ ಸಮ್ಮಿಶ್ರ ಸಂಗೀತ ರಚನೆಯ ಹೊರತಾಗಿಯೂ

ಹಲವು ನೆಲೆಗಳಲ್ಲಿನ ಆಂತರಿಕ ಶಿಥಿಲತೆಗಳಿಂದಾಗಿ ಸೋತು ಬೀಳುತ್ತದೆ. ನಾಟಕದ ಚೌಕಟ್ಟನ್ನು ಹಿಗ್ಗಿಸಲು ಬಳಸಿರುವ ಎಕ್ಕುಂಡಿಯವರ ಪದ್ಯವೂ ಇಲ್ಲಿ ನೆರವಿಗೆ ಬಂದಿಲ್ಲ.

ಹಾಗೆ ನೋಡಿದರೆ ಇದು ನಾಟಕವೇ ಅಲ್ಲ. ಅಕ್ಷರ ನಂಬಿರುವ ಪ್ರಮೇಯವನ್ನು ಮಹಾ ಜನತೆಗೆ 'ಪರಿಣಾಮಕಾರಿ'ಯಾಗಿ ತಲುಪಿಸಲು ಅದಕ್ಕೆ ಬೇಕಾದ ತರ್ಕದೊಂದಿಗೆ ಸೃಷ್ಟಿಸಿಕೊಂಡಿರುವ ದೃಶ್ಯಾವಳಿಯಿದು. ಇಂದು ಚರ್ವಿತ ಚರ್ವಣವಾಗಿ ಚರ್ಚಿತವಾಗುತ್ತಿರುವ ಅಭಿವೃದ್ಧಿ, ಧರ್ಮ ನಿರಪೇಕ್ಷತೆ, ಕೋಮುವಾದ ರಾಜಕೀಯ ಭ್ರಷ್ಟತೆ, ಉಗ್ರ ಎಡಪಂಥೀಯತೆ, ಮುಕ್ತ ಮಾರುಕಟ್ಟೆ, ಜಾತಿ ಪದ್ಧತಿ, ನಂಬಿಕೆ v/s ವೈಚಾರಿಕತೆ ಇತ್ಯಾದಿಗಳ ಬಗ್ಗೆ ರಂಗದ ಮೇಲೆ ಉದ್ದೇಶಪೂರ್ವಕ (ಪೂರ್ಣನಿಯೋಜಿತ)ವಾಗೆಂಬಂತೆ ಬಂದು, ಬದರಿ ಯಾತ್ರೆಯ ನೆಪದಲ್ಲಿ ಭಾರತ ಯಾತ್ರೆಗೆ ಹೊರಟ ಹಿರಿಯ ಉದಾರವಾದಿ ಬ್ರಾಹ್ಮಣ ಯಾತ್ರಿಕನೊಬ್ಬನೊಡನೆ ತಮ್ಮ ಪಾಲಿನ 'ಚರ್ಚೆ' ನಡೆಸಿ ಹೋಗುವ ಬೇರೆ ಬೇರೆ ಪಾತ್ರಗಳ (ಶೂದ್ರ ಮನೆಗೆಲಸದಾಕೆ, ರೆಡ್ಡಿ ರಾಜಕಾರಣಿ, ಮಹಿಳಾ ನಕ್ಸಲೈಟ್, ಪಾರ್ಸಿ ಬ್ಯುಸಿನೆಸ್ ಎಕ್ಸಿಕ್ಯೂಟಿವ್, ಮುಸ್ಲಿಂ ಆಟೋ ಚಾಲಕ, ಗುಂಡು ಪಾರ್ಟಿಯ ಬುದ್ಧಿಜೀವಿಗಳು, ಆಧುನಿಕ ಜೀವನ ಪದ್ಧತಿಯಿಂದ ಬೇಸತ್ತ ಮೊಮ್ಮಗ ಇತ್ಯಾದಿ) ಮೂಲಕ ಕಟ್ಟಲ್ಪಡುವ ಈ 'ನಾಟಕ', ಶಂಕರಾಚಾರ್ಯರ ಅದ್ವೈತ ದರ್ಶನ ಕುರಿತಂತೆ ಬದರಿಯಲ್ಲಿ ನೆಲೆಸಿರುವ ಅದ್ವೈತ 'ಸಾಧಕ'ರೊಬ್ಬರ ಪ್ರವಚನದೊಂದಿಗೆ ಮುಗಿಯುತ್ತದೆ. ಶಂಕರರ ಈ ಅದ್ವೈತ ದರ್ಶನದ ಬಗ್ಗೆ ಏಳುವಂತೆಯೇ, ಪ್ರತಿ ದೃಶ್ಯವೂ ಅಂತ್ಯದಲ್ಲಿ ದೇವೀ ಸ್ತೋತ್ರದ ಒಂದೊಂದು ಸಾಲಿನ ಘೋಷಕ್ಕೆ ಎಡೆ ಮಾಡಿಕೊಡುವ ಹಾಗೆ ವಿನ್ಯಾಸಗೊಂಡು ಈ ದರ್ಶನದತ್ತ ಧಾವಿಸುವ ದೃಶ್ಯಾವಳಿಯಲ್ಲಿ ಬರುವ ಅನೇಕ ಮಾತುಗಳ ಬಗ್ಗೆಯೂ ಅನೇಕ ಪ್ರಶ್ನೆಗಳು ಏಳುತ್ತವೆ. ಆದರೆ ನಮ್ಮ ಈ ಪ್ರಶ್ನೆಗಳು ಹುಟ್ಟುವ ಸಂದರ್ಭಗಳ ನಿರ್ಮಾಣ ಮತ್ತು ಅಲ್ಲಿನ ಬರಡು ಮಾತುಗಳ ಅಸಂಬದ್ಧತೆ ಈ ಪ್ರಶ್ನೆಗಳನ್ನು ಎತ್ತುವುದೇ ಇಲ್ಲಿ ಅಸಂಬದ್ಧ ಎನ್ನಿಸುವಂತೆ ಮಾಡಿಬಿಡುತ್ತದೆ– ಪ್ರತಿ ದೃಶ್ಯದಲ್ಲೂ ಯಾತ್ರಿಕನು ಪಾಪಿ–ಪರದೇಶಿಯೊಬ್ಬನನ್ನು ಹಿಡಿದುಕೊಂಡು 'ನಿನ್ನನ್ನು ಎಲ್ಲಿಯೋ ನೋಡಿದಂತಿದೆಯಲ್ಲಾ!' ಎಂದು ಕೇಳುತ್ತಾ ಕಾಡುವಲ್ಲಿ ವ್ಯಕ್ತವಾಗುವ ನಾಟಕಕಾರರ 'ತಾತ್ವಿಕ ಸ್ಟಂಟ್'ನಂತೆಯೇ...

ಇಲ್ಲಿ ಅಕ್ಷರ ಮೊದಲ ಬಾರಿಗೆ ಅಧ್ಯಾತ್ಮಿಕ ಅಥವಾ ಇನ್ನೂ ನಿರ್ದಿಷ್ಟವಾಗಿ ಹೇಳುವುದಾದರೆ ಅದ್ವೈತ ತತ್ವ ಮೀಮಾಂಸೆಯ ಸ್ಪರ್ಶ–ಸಂಪರ್ಕಕ್ಕೆ ಬಂದಂತೆ; ಮತ್ತು ಅದು ತಾವೀಗ ನಂಬಿರುವ 'ಭಾರತೀಯ ನಿಜ ಅನುಭವ' ಕುರಿತ ಪ್ರಮೇಯವನ್ನು ಪೋಷಿಸುವಂತೆ ಕಂಡು ಅದರಿಂದ ರೋಮಾಂಚಿತರಾದಂತೆ ದೃಶ್ಯಾವಳಿಯನ್ನು ಕಟ್ಟುತ್ತಾ ಹೋಗಿದ್ದಾರೆ. ಅವರಿಗೆ ಇಲ್ಲಿ ಪ್ರಶ್ನೆಯೆಂಬುದೇ ಇಲ್ಲ. ಹಾಗಾಗಿ, ಶೋಧನೆಯೆಂಬುದು ದೂರವೇ ಉಳಿಯಿತು.

ಈ ದೃಷ್ಟಿಯಿಂದ ಅಕ್ಷರ ಇಲ್ಲಿ ಆತ್ಯಂತಿಕವಾಗಿ ಕೇಳಿಕೊಳ್ಳಬೇಕಾದ ಎರಡು ತಾತ್ವಿಕ ಪ್ರಶ್ನೆಗಳಿವೆ ಎನಿಸುತ್ತದೆ. ಒಂದು, ಈ ನಾಟಕದಲ್ಲಿ ಸೂಚಿತವಾಗಿರುವ

ಹಾಗೆ ಎಲ್ಲರಲ್ಲಿರುವುದು ಒಂದೇ ಆತ್ಮ; ಅದು ಶಿವಸ್ವರೂಪಿಯಾದದ್ದು ಎನ್ನುವುದು ಶಂಕರರು ಹೇಳುವ ಸತ್ಯವಾದರೆ, ಕಾಶಿಯಲ್ಲಿ ಎದುರಾದ ಚಾಂಡಾಲನಲ್ಲಿ, ಅವರಿಗೆ ಆತ ಎದುರು ಬೀಳುವವರೆಗೂ ಏಕಾತ್ಮರೂಪಿಯಾದ ಶಿವನೇಕೆ ಕಾಣಲಿಲ್ಲ? ಎರಡು: ಎಲ್ಲರಲ್ಲಿ ಶಿವನಿರುವುದು ಆತ್ಮದ ನೆಲೆಯಲ್ಲಿನ ಸತ್ಯವೇ ಹೊರತು ದೇಹದ ನೆಲೆಯದ್ದು ಅಲ್ಲ ಎಂದೂ ಶಂಕರರ ಅದ್ವೈತ ಮೀಮಾಂಸೆ ಹೇಳುತ್ತದಲ್ಲದೆ; ಅದಕ್ಕೊಂದು ದೈಹಿಕ ನೆಲೆಯ ವಿಧಿ-ನಿಷೇಧಗಳು ಸಂಹಿತೆಯನ್ನೂ ಸೂಚಿಸುತ್ತದೆಯಲ್ಲವೇ? ಈ ಹಿನ್ನೆಲೆಯಲ್ಲಿ ಈ ನಾಟಕದ ಯಾತ್ರಿಕ ಮಹಾಶಯ ತಾನೇ ಹೇಳಿಕೊಂಡಂತೆ ಒಬ್ಬ 'ಬ್ರಾಹ್ಮಣ' ದೇಹಿಯಾಗದೆ (ಅಕ್ಷರ ಅವರೇನೋ ಬಾಲಗಂಗಾಧರ ಪ್ರಣೀತ 'ಭಾರತೀಯ ನಿಜ ಅನುಭವ'ವನ್ನು ಶೋಧಿಸಿ ಆತನನ್ನು ನಿರ್ದಿಷ್ಟವಾಗಿ 'ಹವ್ಯಕ' ದೇಹಿಯೆಂದೇ ಗುರುತಿಸಿರುವರಾದರೂ) ಅನ್ಯ ದೇಹಿಯಾಗಿದ್ದರೆ ಈ ನಾಟಕ ಹೇಗಿರುತ್ತಿತ್ತು ಮತ್ತು ಅದು ಹೇಳುವ 'ಸತ್ಯ'ದ ಪಾಡೇನಾಗಿರುತ್ತಿತ್ತು?

ನಾನು ಈ ನಾಟಕವನ್ನು ನೋಡಿ ಸುಸ್ತಾಗಿ, ಆ ಸುಸ್ತನ್ನು ನಿವಾರಿಸಿಕೊಳ್ಳಲು ನನ್ನ ಸ್ನೇಹಿತರೊಂದಿಗೆ ಲಘು ಲಹರಿಯಲ್ಲಿ ಈ ನಾಟಕಕ್ಕೆ 'ಶಂಕರ ವಿಜಯ' ಎಂದು ಹೆಸರಿಟ್ಟಿದ್ದರೆ ಸೂಕ್ತವಾಗಿರುತ್ತಿತ್ತು ಎಂದು ಚಟಾಕಿ ಹಾರಿಸಿದ್ದೆ. ಆದರೆ ನಂತರ ಈ ನಾಟಕದ ಪ್ರಕಟಿತ ಪಠ್ಯ ತೆಗೆದು ನೋಡಿದರೆ ಸ್ವತಃ ಅಕ್ಷರ ಅವರೇ ತಮ್ಮ ಈ 'ನಾಟಕ'ದ ಕೊನೆಯ ದೃಶ್ಯಕ್ಕೆ 'ಶಂಕರ ವಿಜಯ' ಎಂಬ ಶೀರ್ಷಿಕೆಯನ್ನೇ ಕೊಟ್ಟುಬಿಟ್ಟಿದ್ದಾರೆ! ಅವರ ಈ ಧೈರ್ಯ ಮೆಚ್ಚತಕ್ಕದ್ದೇ ಆಗಿದೆ! ಆದರೆ ಇಂತಹುದೇ ಧೈರ್ಯ ವಹಿಸಿ ಅಕ್ಷರರಷ್ಟೇ 'ಬುದ್ಧಿವಂತ'ರಾದ ಉಡುಪಿ ಕಡೆಯ ಮಾಧ್ವರೊಬ್ಬರು ಇದೇ ನೆಲೆಯಲ್ಲಿ 'ಮಧ್ವ ವಿಜಯ' ಎಂಬ ತಮ್ಮ 'ದರ್ಶನ'ಕ್ಕನುಸಾರವಾದ ದೃಶ್ಯಾವಳಿಯನ್ನು ರಚಿಸಿ ಅಕ್ಷರ ಅವರಿಗೆ ಸವಾಲು ಹಾಕಲು ಸಾಧ್ಯವಿದೆ ಎಂದಷ್ಟೇ ಇಲ್ಲಿ ಹೇಳಿದರೆ ಸಾಕೆಂದು ಕಾಣುತ್ತದೆ.

●

ಜೂನ್, ೨೦೧೩

ಇಲ್ಲಿ ಪ್ರತಿ ಗಿಡಕ್ಕೂ ತೇಜಸ್ವಿ ಸ್ಪರ್ಶವಿದೆ :

ರಾಜೇಶ್ವರಿ ತೇಜಸ್ವಿಯವರೊಂದಿಗೆ ಒಂದು ಮಾತುಕತೆ

(ಇದು 'ಹೊಸ ಮನುಷ್ಯ' ಪತ್ರಿಕೆಯ ೨೦೧೩ರ ವಾರ್ಷಿಕ ವಿಶೇಷ (ಆಗಸ್ಟ್) ಸಂಚಿಕೆಗಾಗಿ ನಡೆಸಿದ ಮಾತುಕತೆ. ಪ್ರಶ್ನೆಗಳನ್ನು ಮೊದಲೇ ರಾಜೇಶ್ವರಿಯವರಿಗೆಗೆ ಕಳಿಸಿ ತರಿಸಿಕೊಂಡ ಉತ್ತರಗಳನ್ನು ಇಲ್ಲಿ ಪ್ರಕಟಿಸಲಾಗುತ್ತಿದೆ. ಈ ಮಾತುಕತೆಯಲ್ಲಿ ತೇಜಸ್ವಿಯವರ ವ್ಯಕ್ತಿತ್ವದ ಜೊತೆಗೇ ರಾಜೇಶ್ವರಿಯವರ ವ್ಯಕ್ತಿತ್ವವೂ ಹೊರಹೊಮ್ಮಿರುವುದನ್ನು ಓದುಗರು ಗಮನಿಸಬಹುದು. – ಡಿಎಸ್ಸೆನ್)

ನೀವು ತೇಜಸ್ವಿಯವರ ವ್ಯಕ್ತಿತ್ವದಲ್ಲಿ ಯಾವ ವಿಶೇಷಗಳನ್ನು ಕಂಡು ಆಕರ್ಷಿತರಾದಿರಿ?

ಶ್ರೀ ಪೂರ್ಣಚಂದ್ರ ತೇಜಸ್ವಿಯವರಲ್ಲಿ ನಾನು ತುಂಬ ಮೆಚ್ಚಿಕೊಳ್ಳುವುದು ಅವರ ಸರಳತೆಯನ್ನು. ನೋಡಿ, ನಮ್ಮ ಮದುವೆಗೆ ಐದಾರು ವರ್ಷದ ಮುಂಚೆ ನಮ್ಮ ಮನೆಗೆ ತೇಜಸ್ವಿ ಮೊಟ್ಟ ಮೊದಲಿಗೆ ಬಂದಾಗ, ಆಗ ನಮ್ಮದು ಮೂರು ಕೋಣೆ ಮನೆಯಲ್ಲಿ ಒಂದು ಕೋಣೆಗೆ ಮಾತ್ರ ಸಿಮೆಂಟಿನ ನೆಲ. (ಅದೂ ನನ್ನ ಅಣ್ಣ ವಾಸುನೇ ಮಾಡಿದ್ದು) ಉಳಿದೆರಡು ಕೋಣೆಗೆ ಸಗಣಿಯಲ್ಲಿ ಸಾರಿಸಿದ ಮಣ್ಣಿನ ನೆಲ.... ಹೀಗೆ ಕಷ್ಟದ ಬದುಕಾಗಿತ್ತು ಅಂತ ಹೇಳಬಹುದು. ಆದರೆ ತೇಜಸ್ವಿಗೆ ಇದ್ಯಾವುದರ ಕಡೆಗೆ ಲಕ್ಷ್ಯವೇ ಇಲ್ಲ. ಅವರ ಗಮನವೆಲ್ಲ ಮನೆ ಸುತ್ತ ಇದ್ದ ದಟ್ಟ ಕಾಡಿನ ಮೌನದೆಡೆಗೆ. ಅದೇ ಅವರನ್ನು ಕಾಡಿದ್ದು.

ತೇಜಸ್ವಿ ಬಹುಮುಖ ಚಟುವಟಿಕೆ ಮತ್ತು ಆಸಕ್ತಿಗಳ ವ್ಯಕ್ತಿ. ಹಾಗಾಗಿ, ಕುಟುಂಬದಲ್ಲಿ ಓರ್ವ ಜವಾಬ್ದಾರಿಯುತ ಗಂಡನಾಗಿ ಮತ್ತು ತಂದೆಯಾಗಿ

ತಮ್ಮ ಕರ್ತವ್ಯಗಳನ್ನು (ಸಾಂಸಾರಿಕ ವ್ಯವಹಾರಗಳನ್ನು) ನಿರ್ವಹಿಸುತ್ತಿದ್ದರಾ?

ಓಹೋ, ನೂರಕ್ಕೆ ನೂರು ಭಾಗ ನಿರ್ವಹಿಸಿದ್ದಾರೆ, ಖಂಡಿತವಾಗಿ. ಮನೆಯ ಎಲ್ಲ ಕೆಲಸ ಮಾಡುತ್ತಿದ್ದರು. ಬಚ್ಚಲ ಒಲೆ ಹಚ್ಚುತ್ತಿದ್ದರು, ಅದೂ ಶೆಡ್ಡಿಂದ ಸೌದೆ ತಂದುಕೊಂಡು. ಅಡುಗೆ ಮಾಡುತ್ತಿದ್ದರು. ಒಟ್ಟಾಗಿ ಕೂತು ಸವಿಯುತ್ತಿದ್ದೆವು (ದಯವಿಟ್ಟು ದಿನಾಲೂ ಎಂದು ತಪ್ಪು ತಿಳಿಯಬೇಡಿ!) ಮಳೆ ಭರ್ರೆಂದು ಬಿದ್ದಾಗ ಮಧ್ಯರಾತ್ರಿ ಎದ್ದು ಹಾರೆ ತಗೊಂಡು ಹೋಗಿ ನಮ್ಮ ಮನೆಯಂಗಳದ ಕೆರೆ ತೂಬು ಸ್ವಚ್ಛ ಮಾಡಿ ಬಂದು ಮಲಗುತ್ತಿದ್ದರು. "ಹಾಸಿಗೆ ಇದ್ದಷ್ಟು ಕಾಲು ಚಾಚು" ಎಂಬ ನನ್ನ ಪಾಲಸಿಯನ್ನು ಅವರೂ ಪಾಲಿಸುತ್ತಿದ್ದರು. ಹಾಗೇ ಮಾಡಿ ಹೀಗೇ ಮಾಡಿರೆಂದು ಮಕ್ಕಳಿಗೆ ಒತ್ತಾಯ ಹೇರದೇ ಮಾರ್ಗದರ್ಶನ ಮಾಡುತ್ತಿದ್ದರು. ನಿಜ ಹೇಳ್ಬೇಕೆಂದರೆ, ನಮ್ಮ ಮಕ್ಕಳಿಗೆ "ಅಣ್ಣ" (ತಂದೆ) ಬಗ್ಗೆನೇ ಹೆಚ್ಚು attachment. ಮಕ್ಕಳ ವಿದ್ಯಾಭ್ಯಾಸದ ಸಂಪೂರ್ಣ ಜವಾಬ್ದಾರಿ ನನಗೇ ಬಿಟ್ಟಿದ್ದರು. ಪಠ್ಯ ಪುಸ್ತಕ ಓದುವರಾ, ತರಗತಿಯಲ್ಲಿ ಅವರ performance ಹೇಗೆ ಎತ್ತ ಎಂದು ಏನೇನೂ ತಲೆ ಕೆಡಿಸಿಕೊಳ್ಳುತ್ತಿರಲಿಲ್ಲ. General knowledge ಮಾತುಕತೆ ಆಡುತ್ತಿದ್ದರು. ಇಂಥವೆಲ್ಲ ಅವರವರ ಬದುಕನ್ನು ಹೇಗೆ ಉದ್ದೀಪನಗೊಳಿಸುತ್ತೆಂದರೆ ಕಳೆದ ವಾರ ಸುಸ್ಮಿತಾ ಕೀನ್ಯಾದಲ್ಲಿನ ಪ್ರಾಣಿ ಜಗತ್ತು ನೋಡಲು ಹೊರಟರೆ, ಈಶಾನ್ಯೆ ಲೇಹ್-ಲಡಾಕ್‌ಗೆ ತೆರಳಿ ಜಗತ್ತಿನ ಅತಿ ಎತ್ತರದ ಪ್ರದೇಶದಲ್ಲಿ ನಿಂತು ಜಗತ್ತನ್ನು ನೋಡಿ ಬಂದಳು. ಇಲ್ಲಿ ಇನ್ನೊಂದು ವಿಷಯ ಹೇಳಬೇಕು. ಮೊಮ್ಮಗಳು ವಿಹಾ ಹುಟ್ಟಿದಾಗ ಅವಳಮ್ಮ ಈಶಾನ್ಯೆ ಅವಳಿಗೆ ಅತ್ಯಾಧುನಿಕ ಅಂಗಿಯೊಂದನ್ನು ಹಾಕಿದ್ದಳು. ಅದನ್ನು ನೋಡಿದ ತೇಜಸ್ವಿ ಅದೆಲ್ಲ ಸರಿಯಲ್ಲವೆಂದು, ಈಶಾನ್ಯೆ ಮಗುವಾಗಿದ್ದಾಗ ನಾನೇ ಹೊಲೆದು ಅವಳಿಗೆ ಹಾಕಿದ್ದ ಅಂಗಿಯನ್ನು ನೆನೆದು, ಹಳೆಯ ಫೋಟೋವೊಂದರಲ್ಲಿದ್ದ ಅದನ್ನು ಗುರುತಿಸಿ ಸ್ಕ್ಯಾನ್ ಮಾಡಿಕೊಂಡು ಹೋಗಿ ಸ್ವತಃ ತಾವೇ ದರ್ಜಿ ಬಳಿ ಕೂತು ಹೊಲೆಸಿಕೊಂಡು ಬಂದು ಮೊಮ್ಮಗಳಿಗೆ ಹಾಕಿ ಸಂತೋಷಪಟ್ಟರು!

ಸಮಾಜವಾದವನ್ನು ಪ್ರತಿಪಾದಿಸುತ್ತಿದ್ದ ತೇಜಸ್ವಿಯವರಲ್ಲಿ ನೀವು ಯಾವ ಸಮಾಜವಾದಿ ಗುಣಗಳನ್ನು ಗುರುತಿಸುವಿರಿ?

ಅಲ್ರೀ, ನಮ್ಮ ಬದುಕಿನ ನೆಲೆಗಟ್ಟೇ ಹಾಗಿರುವಾಗ ಇವರಲ್ಲಿನ ಸಮಾಜವಾದಿ ಗುಣಗಳನ್ನು ಗುರುತಿಸಿ ಪಟ್ಟಿಮಾಡಬೇಕಾ ನಾನು? ಗ್ರಾಮೀಣ ಪ್ರದೇಶಕ್ಕೇ ಬಂದು ಬದುಕಿ ಬಿಟ್ಟೆವಲ್ಲ! ತೇಜಸ್ವಿ ಎಂ.ಎ. ಆದಮೇಲೆ ಇಲ್ಲಿ ಬದುಕುವೆನೆಂದು ನಿರ್ಧರಿಸಿದ್ದುದು, ಹೊಟ್ಟೆಪಾಡಿಗಾಗಿ ಕಾಫಿ ತೋಟ ಮಾಡಿದ್ದುದು ಸಾಮಾನ್ಯ ವಿಚಾರವಲ್ಲ. ಸುಲಭದ ತುತ್ತಲ್ಲ. ಅದೂ ಅವರ ಅನ್ವೇಷಕ ಪ್ರತಿಭೆ ಮತ್ತು ಮನೆಯ ಹಿನ್ನೆಲೆಯಲ್ಲಿ ನೋಡಬೇಕು. ನಿಜಕ್ಕೂ Great. ಇದನ್ನು ನೆನೆದಾಗೆಲ್ಲ ಅಚ್ಚರಿಯ ಮೆಚ್ಚುಗೆ ಹೆಚ್ಚುತ್ತಲೇ ಹೋಗುತ್ತಿದೆ ನನಗೆ.

ತೇಜಸ್ವಿಯವರಿಗೆ ಹೆಂಗಸರೆಂದರೆ ಅಲರ್ಜಿ, ಸಂಕೋಚ, ಹಾಗಾಗಿಯೇ ಅವರ ಸಾಹಿತ್ಯದಲ್ಲಿ "ಕಿರಗೂರಿನ ಗಯ್ಯಾಳಿಗಳು" ಹೊರತಾಗಿ ಮಹತ್ವದ ಮಹಿಳಾ ಪಾತ್ರಗಳೇ ಇಲ್ಲ ಅಥವಾ ತುಂಬಾ ಕಡಿಮೆ ಎಂಬೆಲ್ಲ ಅಭಿಪ್ರಾಯಗಳಿವೆ. ನೀವೇನೆನ್ನುತ್ತೀರಿ?

ತೇಜಸ್ವಿ ಮಹಿಳೆಯರೆಂದರೆ ತುಂಬಾ ಸಂಕೋಚಪಟ್ಟುಕೊಳ್ಳುತ್ತಿದ್ದರು ಹೌದು. Shy. ನನಗೆ ಪರಿಚಯ ಆದಾಗ್ಲಿಂದ ಗಮನಿಸಿದ್ದೆ. ಯಾರೋ ಲೇಡೀಸ್ ಬಂದಿದಾರೆ ನೋಡು ಅನ್ನೋವ್ರು, ಆಗೆಲ್ಲ ನಗುತ್ತಿದ್ದೆ ನಾನು. ಅಲರ್ಜಿಯಂತ ಯಾರು ಹೇಳ್ತಾರೋ ಅವರ ನೋಡುವ ದೃಷ್ಟಿಯಲ್ಲೇ ಏನೋ ಒಂದು ಕೊಂಕೋ ಕೊರತೆಯೋ ಯಾಕಾಗಬಾರದು? ಅದು ಅವರ ಲಿಮಿಟೇಶನ್ಸ್ ಅಷ್ಟೆ.

ತೇಜಸ್ವಿಗೆ ಮಹಿಳೆಯರ ಬಗ್ಗೆ ಅತ್ಯಂತ ಗೌರವ. ಮಹಿಳೆಯರೇ ಆಗಲಿ, ಮಹನೀಯರೇ ಆಗಲಿ, ಮನೆಗೆ ಬಂದವರಲ್ಲಿ ಲೋಕಾಭಿರಾಮವಾಗಿ ಔಪಚಾರಿಕವಾಗಿ ಮಾತನಾಡುವುದು ಅವರಿಗೆ ತಿಳಿದಿರಲಿಲ್ಲ. ತಿಂಡಿ ಆಯ್ತಾ, ಯಾವ ಬಸ್ಸಿನಲ್ಲಿ ಬಂದಿರಿ ಇಂಥ ಮಾತುಗಳನ್ನು ಮಾತನಾಡಬೇಕಾಗಿ ಬಂದ ಸಂದರ್ಭದಲ್ಲಿ, ನೀನು ಹೋಗಿ ಮಾತಾಡಿಸಿ ಕಳಿಸಿ ಬಾ ಎಂದು ನನಗೆ ಹೇಳುತ್ತಿದ್ದರು. ಇದು Handicapಆ? ನಿಮಗೆ ಹಾಗನ್ನಿಸುತ್ತಾ?

ನಮ್ಮ ಬದುಕಿನ ಕ್ರಮದ ಶಿಸ್ತಿನಲ್ಲಿ, ತೇಜಸ್ವಿ ಕ್ಲಬ್ಬು, ಪಾರ್ಟಿ ಇಂಥವುಗಳ ಕಡೆಗೆ ಮುಖ ಹಾಕುತ್ತಿರಲಿಲ್ಲ. ಕೆಲವೊಂದು ಸಂದರ್ಭಗಳಲ್ಲಿ ಬಫೆಗೆ ಊಟಕ್ಕೆ ಕರೆದರೂ ಮನೆಗೇ ಬಂದು ಊಟ ಮಾಡುತ್ತಿದ್ದರು. ಡ್ರಿಂಕ್ಸ್ ಇಲ್ಲೇ ಇಲ್ಲ. ನಮ್ಮ ಅನುಭವದ ಮೂಸೆಯಿಂದ ಮಾತ್ರ ಕಲ್ಪನೆಯ ಪಾತ್ರ ಸೃಷ್ಟಿಯಾಗುವುದು ತಾನೆ? ನಾವು ಗ್ರಾಮೀಣ ಪ್ರದೇಶದಲ್ಲಿ ಬದುಕು ಕಟ್ಟಿಕೊಂಡಿದ್ದರಿಂದ, ಇವರು ನೋಡುತ್ತಿದ್ದ ಪಾತ್ರಗಳೇ ಕಿರಗೂರಿನ ಗಯ್ಯಾಳಿಗಳಲ್ಲಿ ಸೃಷ್ಟಿಯಾಗಿರುವುದು.

ತೇಜಸ್ವಿ ತಮ್ಮ ಬರವಣಿಗೆಯನ್ನು ನಿಮ್ಮೊಂದಿಗೆ ಯಾವಾಗಲಾದರೂ ಚರ್ಚಿಸುತ್ತಿದ್ದರಾ? ಒಂದು ಕೃತಿ ಪೂರ್ಣವಾದ ನಂತರವಾದರೂ? ಅಥವಾ ಬೇರೆಯವರ ಸಾಹಿತ್ಯದ ಬಗ್ಗೆ ನಿಮ್ಮೊಂದಿಗೆ ಮಾತನಾಡುತ್ತಿದ್ದರಾ?

ತೇಜಸ್ವಿ ತಮ್ಮ ಬರವಣಿಗೆ ಬಗ್ಗೆ ಚರ್ಚಿಸುತ್ತಿದ್ದರು ಅಂತ ಹೇಳಿದರೆ ತಪ್ಪಾಗಬಹುದು. ಆದರೆ ಅವರು ಕಂಡುಂಡ ಅನುಭವ ಹಂಚಿಕೊಳ್ಳುತ್ತಿದ್ದರು. ಅಷ್ಟೇ ಅಲ್ಲ, ಆವತ್ತು ಮೊಟ್ಟೆ ಹಗರಣ ಬಂತು, ಅಯೋಧ್ಯೆಯ ರಾಮ ಬಂದ, ವಾಜಪೇಯಿಯ ದನದ ಮಾಂಸದ ಉಪಾಹಾರ ಸೇವನೆ ಸೇರಿತು, ಹೀಗೇ ಧರ್ಮ, ಜಾತಿ ಬಗ್ಗೆ ಚರ್ಚಿಸುತ್ತಿದ್ದರು. ಹಾಗಾಗಿ ಹೊರಗಿನವರೊಟ್ಟಿಗೆ ಮಾತನಾಡುವಾಗ ಮುಂದೆ ಇದೇ ಪಾಯಿಂಟ್ ಹೇಳ್ತಾರೆನ್ನುವುದು ನನಗೆ ಸ್ಪಷ್ಟ ತಿಳೀತಿತ್ತು. 'ಚಿದಂಬರ ರಹಸ್ಯ' ಕಾದಂಬರಿ ರಚಿಸುವಾಗ ಮೊದಲ ಅಧ್ಯಾಯ ಬರೆದಿಟ್ಟಿದ್ದರು. ನಾನು ಓದಿ ನನ್ನ ಅಭಿಪ್ರಾಯ ವ್ಯಕ್ತಪಡಿಸಲು ಹೊರಟಾಗ, ಮೊದಲು ನಿಲ್ಲಿಸು, ನನ್ನನ್ನು ಪ್ರಭಾವಿಸಬೇಡ, ಅದು ಪೂರ್ತಿ ಆದನಂತರ ಓದು ಎಂದರು.

ಅದು ಹಾಗಾದರೆ, ತೇಜಸ್ವಿ Stein Beckನ 'My Travels with Charley' ಓದುತ್ತಾ ಮುಂದುವರಿದಂತೆಲ್ಲ ರೋಮಾಂಚನಗೊಂಡು ನನ್ನೊಟ್ಟಿಗೆ ಅದರ ರೋಚಕತೆಯನ್ನು ಹಂಚಿಕೊಳ್ಳುತ್ತಿದ್ದರು. 'ಪ್ಯಾಪಿಲಾನ್' ಪುಸ್ತಕ ನೀವೂ ಓದಿರಬಹುದು. ಇಂಗ್ಲಿಷ್‌ನಲ್ಲಿ ತೇಜಸ್ವಿ ಓದುವಾಗ ಚೂರು ಚೂರು ಹೇಳಿದ್ರು, ಕನ್ನಡದಲ್ಲಿ ಬಂದನಂತರ ಮಂದುವರಿದ ಭಾಗ ಪೂರ್ತಿ ಹೇಳಿದ್ರು. ಇತ್ತಿತ್ತಲಾಗಿ ಒಬ್ಬ ಗುಲ್ಬರ್ಗಾದ ಮೆಡಿಕಲ್ ವಿದ್ಯಾರ್ಥಿ 'ಪ್ಯಾಪಿಲಾನ್' ಓದಿ ರೋಮಾಂಚನಗೊಂಡು ತೇಜಸ್ವಿ ಸರ್ ಅವರಲ್ಲಿ ಮಾತಾಡಬೇಕು ಮೇಡಂ, ಕರೆಯಿರಿ ಎಂದನು. 'ಪ್ಯಾಪಿಲಾನ್' ಪುಸ್ತಕದ ಬಗ್ಗೆ ಮುಂದೇನು ಅಂತ ಕೇಳಬೇಕೆಂದ. ನಾನೇ ಎಲ್ಲ ಹೇಳಿದೆ. ಸರಿ, ಸರ್ ಅವರಲ್ಲೇ ಮಾತಾಡ್ಬೇಕು ಕರೆಯಿರಿ ಎಂದ. ಯಾಕೋ ಮಾರಾಯ, ನಿನಗೆ ಗುಲ್ಬರ್ಗ ತುಂಬಾ ದೂರ ಆಯ್ತೇನು, ಏನೂ ಗೊತ್ತಿಲ್ವ? ಎನ್ನುತ್ತಿದ್ದಂತೆ ತೇಜಸ್ವಿ ಈಗ ಇಲ್ಲದ್ದು ನೆನಪಾಗಿ ದೊಡ್ಡ ಶಾಕ್ ಹೊಡೆದಂತಾಗಿ ಥಟ್‌ಂತ 'ಸಾರಿ ಮೇಡಂ' ಅಂತ ಹೇಳಿ ಫೋನು ಇಟ್ಟನು.

ನಾನು ಮೂರನೇ ಆನರ್ಸ್‌ನಲ್ಲಿದ್ದಾಗ 'ಕಾನೂರು ಹೆಗ್ಗಡತಿ' ಕಾದಂಬರಿ ಓದಿದ್ದೆ. ಆಗಿನ್ನೂ ತೇಜಸ್ವಿ ಪರಿಚಯವಾಗಿರಲಿಲ್ಲ. ಮತ್ತು ಯಾವ ಸಾಹಿತಿಗಳ ಅಭಿಪ್ರಾಯಕ್ಕೂ ಒಳಗಾಗಿರಲಿಲ್ಲ. ಅಲ್ಲಿ, ಕೊಟ್ಟಿಗೆಯಿಂದ ಬರುವಾಗ ಅವಳ ಬಿಳಿಕಾಲು ಬೆರಳುಗಳ ಸಂದಿಯಿಂದ ಸಗಣಿ ಹೊರಬರುತ್ತಿತ್ತು ಎಂಬ ವಿವರಣೆ ಬರುತ್ತೆ. (ಈಗ ನೆನಪಿನಿಂದಲೇ ಬರೆಯುತ್ತಿರುವುದು) ಇದು ಅನಾವಶ್ಯಕವಾದ ವಿವರಣೆ ಎಂಬಂಥ ಟೀಕೆಗಳು ಬಂದಿದ್ದವು. ನಾವು ಚಿತ್ರಕೂಟದಲ್ಲಿದ್ದಾಗ ಇದರ ಬಗ್ಗೆ ತೇಜಸ್ವಿ ವಿವರಿಸಿದ್ದು ನೆನಪಿದೆ. ಅದು ಪೂರಕವಾಗಿ ಒಂದು ಕೃತಿಯಲ್ಲಿ ಹೇಗೆ ಹೊಮ್ಮುತ್ತೆ ಎಂಬುದನ್ನು ಹೇಳಿದಾಗ ನಾನು ತಪ್ಪು ತಿಳಿದುಕೊಂಡಿದ್ದು ಅರಿವಾಯ್ತು.

ಇನ್ನು 'ಭಾರತೀಪುರ' ಓದಿದ ನಂತರನೂ, ಅದರ ಬಗ್ಗೆ ಮಾತಾಡಿದ್ದರು. ಕೆಲವೊಂದು ಒಪ್ಪಿಗೆಯಾಗಿರಲಿಲ್ಲ. ಭಿನ್ನಾಭಿಪ್ರಾಯಗಳಿತ್ತು. ವಿಮರ್ಶಾತ್ಮಕವಾಗಿ ಪಲವು ಮಾತುಗಳನ್ನು ಹೇಳಿದ್ದರಾದರೂ, ಆ ಪುಸ್ತಕವನ್ನು ನಾನು ಓದಿದ್ದಿಲ್ಲದೇ ಇದ್ದುದರಿಂದ, ಅವರ ಮಾತುಗಳು ನನ್ನ ತಲೆಯಲ್ಲಿ record ಆಗಿಲ್ಲ. ನನಗೆ ಗೊತ್ತಿಲ್ಲ.

ಭೈರಪ್ಪನವರಿಂದ ಕನ್ನಡಿಗರಿಗೆ ಓದುವ ಹವ್ಯಾಸ ಹೆಚ್ಚಾಗಿದ್ದನ್ನೂ ಹೇಳಿರುವರು. ಆವರಣದ ಬಗ್ಗೆ ಎಲ್ಲೆಡೆ ಮಾತು ಕೇಳಿ ಬರುತ್ತಿದೆಯೆಂದು ಓದಲೇಬೇಕೆಂದು ಗೆಳೆಯ ಬಿ.ಎನ್. ಶ್ರೀರಾಂರಿಂದ ಪುಸ್ತಕ ತರಿಸಿಕೊಂಡು ಒಂದೂವರೆ ದಿನದಲ್ಲಿ ಓದಿ ಪೂರೈಸಿದ್ದು ನೆನಪುಂಟು...

ತೇಜಸ್ವಿ ಮತ್ತು ನಿಮ್ಮ ಬದುಕಿನಲ್ಲಿ ಕೊರತೆಗಳೆಂಬುವು ಮತ್ತು ವಿಷಾದಪಡುವಂತಹ ಸಂಗತಿಗಳೇನಾದರೂ ಇದ್ದುವೇ?

ಕೊರತೆನೂ ಇಲ್ಲ. ವಿಷಾದ ಮೊದಲೇ ಇಲ್ಲ. ಮದುವೆಗೆ ಬದುಕಿನಲ್ಲಿ ಏನೇನೋ ನಿರೀಕ್ಷಿಸಿಕೊಂಡು ಕೂತಾಗ ಕೊರತೆ ಎಂಬುದು ಇರುತ್ತೆ. ನಮಗೇನೂ ಇರಲಿಲ್ಲ.

ಒಂದಿವ್ಸ ನಾನು ಹೇಳಿದೆ, ಯಾರ್‍ಯಾರೋ ಹೇಳ್ತಾರೆ "ನಿಮ್ಮದು ಬಹಳ ಒಳ್ಳೆ ಅದೃಷ್ಟ ಅಂತೆ" ಅಂದೆ. ಹ್ಞಾಂ, "ಒಬ್ಬರಿಗೆ ಅದೃಷ್ಟ ಮತ್ತೊಬ್ಬರಿಗೆ ದುರಾದೃಷ್ಟ ಯಾಕಾಗಬಾರ್ದು?" ಎಂದರು ನನ್ನನ್ನು ಛೇಡಿಸಲಿಕ್ಕಾಗಿ. ಹೌದು ತಾನೆ. ಇಬ್ಬರೂ ನಕ್ಕೆವು.

ತೇಜಸ್ವಿಯವರ ಅಗಲಿಕೆ/ನೆನಪನ್ನು ಹೇಗೆ ತುಂಬಿಕೊಳ್ಳುತ್ತಿರುವಿರಿ?

ತೇಜಸ್ವಿ ಇರಬೇಕಿತ್ತು ಅಂತ ಪ್ರತಿ ಗಳಿಗೆ ಅನ್ನಿಸುತ್ತಲೇ ಇರುತ್ತೆ. ಈಗ ಇಲ್ಲಿ ಓಡಾಡ್ತಿರ್ತಿದ್ರು ಅಂದುಕೊಳ್ಳುವೆ.... ಕೆಲವು ಸಲ ಅವರನ್ನು ಬೈದುಕೊಳ್ತೀನಿ.... ನಾನೊಬ್ಬಳೇ ಈಗ.... ಕಷ್ಟ.... ಏನು ಮಾಡುವುದು.

ಆದರೆ ಎಲ್ಲರಿಗೂ ತಿಳಿದಿರುವಂತೆ 'ನನ್ನ ತೇಜಸ್ವಿ' ಪುಸ್ತಕ ಬರೆದೆ. ಸವಿತಾ ನಾಗಭೂಷಣರಿಗೆ ಅನಂತಾನಂತ ಕೃತಜ್ಞತೆಗಳು. ಬರೆಯಿರೆಂದು ಒತ್ತಾಸೆ ಕೊಟ್ಟರೆಲ್ಲಪ್ಪ. ಅದೆಷ್ಟು ಧನ್ಯತೆಯ ಭಾವ ಬರುತ್ತೆ. ತುಂಬಾ ತುಂಬಾ ಒಳ್ಳೆಯದಾಯ್ತು. ಇದು ತೇಜಸ್ವಿ ನೆನಪನ್ನು ಮಾತ್ರ ತುಂಬಿಕೊಟ್ಟಿದ್ದಲ್ಲ. ಶ್ರೀ ಜಿ.ಹೆಚ್. ನಾಯಕರ ಮಾತನ್ನೇ ಹೇಳ ಹೊರಟರೆ –ಕನ್ನಡಕ್ಕೆ ಮಹತ್ವದ ಕೃತಿ ಕೊಟ್ಟಿರಿ ಎಂದಾಗ ನನ್ನೊಳಗೇ ಧನ್ಯೋಸ್ಮಿ ಎಂದುಕೊಂಡೆ. ನಮ್ಮ ಪ್ರಕಾಶನದಿಂದಲೇ ಅಂದವಾಗಿ ಪ್ರಕಟಗೊಂಡಿತು. ಮರು ಮುದ್ರಣವೂ ಆಯ್ತು. ಅವರಿಗೂ ಕೃತಜ್ಞತೆಗಳು. ಅನಂತ ಧನ್ಯವಾದಗಳು.

ಇದೀಗ ನನ್ನ "ಅಮ್ಮ ನೇಯ್ದ ಬದುಕು" ಬಗ್ಗೆ ಬರೆಯುತ್ತಿರುವೆನು. *ಕೆಂಡಸಂಪಿಗೆ.ಕಾಂ* ನಲ್ಲಿ ಬರುತ್ತಿದೆ. ಇದು ಹೃದಯ ತುಂಬಿ ಬರುವ ಕೆಲಸವೇ. ಉಳಿದಂತೆ ಕಾಫಿ ತೋಟ ನೋಡಿಕೊಳ್ಳುವ ಕೆಲಸವಿದೆ. ತೇಜಸ್ವಿಯ ಸ್ಪರ್ಶ ಪ್ರತಿಯೊಂದು ಗಿಡಕ್ಕೂ ಇದೆ. ಹೂ ತೋಟ ಉತ್ಸಾಹ ತುಂಬುತ್ತೆ. ಇಷ್ಟಲ್ಲದೆ ತೇಜಸ್ವಿ ಅಭಿಮಾನಿಗಳು ತೇಜಸ್ವಿ ಓಡಾಡಿದ ಜಾಗ ನೋಡಲೆಂದೇ ಇಲ್ಲಿಗೆ ಬರುತ್ತಲೇ ಇರುವರು. ಎಲ್ಲರಿಗೂ ಮತ್ತೊಮ್ಮೆ ಧನ್ಯವಾದಗಳು.

●

ಸೆಪ್ಟಂಬರ್, ೨೦೧೩

ಸಾಂಸ್ಕೃತಿಕ ನೀತಿಯೋ ಅಧೋಗತಿಯೋ?

ಸರ್ಕಾರಕ್ಕೊಂದು ಸಾಂಸ್ಕೃತಿಕ ನೀತಿಯ ಅಗತ್ಯವಿದೆಯೇ? ಒಂದು ಸುಸಂಸ್ಕೃತ ಸಮಾಜವನ್ನು ರೂಪಿಸಬಯಸುವ ಆಶಯವುಳ್ಳ ಸರ್ಕಾರಕ್ಕೆ ಈ ಪ್ರಶ್ನೆಯೇ ಅಸಂಬದ್ಧವೆನಿಸೀತು. ಆದರೆ ಒಂದಾದರ ಮೇಲೊಂದರಂತೆ ನಮ್ಮ ಸರ್ಕಾರಗಳು ನಡೆದುಕೊಳ್ಳುತ್ತಿರುವ ರೀತಿಯನ್ನೇ ಗಮನಿಸಿ. ಸದ್ಯಕ್ಕೆ ಸದರಿ ಸರ್ಕಾರ ನಮ್ಮ ಸಾಂಸ್ಕೃತಿಕ ಲೋಕದ ಬಗ್ಗೆ ತಳೆದಿರುವ ಔದಾಸೀನ್ಯವನ್ನೇ ನೋಡಿ. ನಮ್ಮ ಅಕಾಡೆಮಿಗಳು, ಪ್ರಾಧಿಕಾರಗಳು ಮತ್ತು ರಂಗಾಯಣಗಳು ವೃತ್ತಿ ಪರಿಣಿತಿಯ ಮುಖ್ಯಸ್ಥರಿಲ್ಲದೇ, ಸದಸ್ಯರಿಲ್ಲದೇ-ಕೆಲವು ವರ್ಷಗಟ್ಟಲೇ, ಕೆಲವು ತಿಂಗಳುಗಟ್ಟಲೇ-ಕೇವಲ ಸರ್ಕಾರಿ ಅಧಿಕಾರಿಗಳ ಅಡಿಯಲ್ಲಿ ಉಸಿರು ಹಿಡಿದು ಮಲಗಿವೆ. ಹಿಂದಿನ ಬಿಜೆಪಿ ಸರ್ಕಾರ ಇವನ್ನು ತನ್ನ ರಾಜಕೀಯ ಶಕ್ತಿವರ್ಧನೆಗಾಗಿ ಬಳಸುವ ಅಸಾಂಸ್ಕೃತಿಕ ಕೆಲಸಕ್ಕೆ ಕೈಹಾಕಿ ಅವುಗಳ ಘನತೆ-ಗೌರವ-ವಿಶ್ವಾಸಾರ್ಹತೆಗಳನ್ನೇ ಹಾಳುಗೆಡಹಿ ಕೂರಿಸಿತ್ತು. ನಂತರ ಆ ಪಕ್ಷದ ಒಳಜಗಳಗಳಿಂದಾಗಿ ಅವುಗಳಲ್ಲಿ ಹಲವು ನಿಷ್ಕ್ರಿಯಗೊಂಡಿದ್ದವು. ಈಗ ಈ ಹೊಸ ಸರ್ಕಾರ ರಚನೆಯಾಗಿ ನಾಲ್ಕು ತಿಂಗಳು ಕಳೆದರೂ ಈ ಕುರಿತು ಕ್ರಮ ಕೈಗೊಳ್ಳಲು ಸಾಧ್ಯವಾಗಿಲ್ಲ.

ಇದಕ್ಕೆ ಹಲವು ಕಾರಣಗಳಿವೆ. ಮೊದಲಾಗಿ ಇಂದು ನಮ್ಮ ರಾಜಕಾರಣಕ್ಕೆ ಸಾಂಸ್ಕೃತಿಕ ಆಯಾಮವೆಂಬುದೇ ಇಲ್ಲವಾಗಿದೆ. ಅದು ಸಂಪೂರ್ಣವಾಗಿ ಚುನಾವಣಾ ರಾಜಕಾರಣ ಮಾತ್ರವಾಗಿ ಅವನತಿಗೊಂಡಿದೆ. ಇದಕ್ಕೆ ನಮ್ಮ ರಾಜಕಾರಣಿಗಳ ವ್ಯಕ್ತಿತ್ವದ ಸಾಂಸ್ಕೃತಿಕ ನೆಲೆಯ ಅವನತಿ ಎಷ್ಟು ಕಾರಣವೋ ನಮ್ಮ ಸಾಂಸ್ಕೃತಿಕ ಲೋಕದ

ವಕ್ತಾರರ ಅಗ್ಗದ ರಾಜಕೀಯ ಪುಢಾರಿಗಿರಿಯೂ ಅಷ್ಟೇ ಕಾರಣವಾಗಿದೆ. ಶ್ರೀಮಾನ್ ರಾಮಕೃಷ್ಣ ಹೆಗ್ಗಡೆ ಮುಖ್ಯಮಂತ್ರಿಯಾಗಿದ್ದಾಗ ಅವರ ಸಾಂಸ್ಕೃತಿಕ ಬೆಡಗು-ಬಿನ್ನಾಣಗಳಿಗೆ ಮರುಳಾಗಿ ವಿಧಾನಸೌಧದ ಸುತ್ತ ಭಕ್ತಿಪೂರ್ವಕವಾಗಿ ಸುತ್ತತೊಡಗಿದ ನಮ್ಮ ಪಲವಾರು ಲೇಖಕ-ಕಲಾವಿದರು, ಈ ಸುತ್ತಾಣಿಕೆಯಿಂದ ತಮ್ಮ ಕೆಲವು ಗೆಳೆಯರು ಕಂಡ ಲೌಕಿಕ ಯಶಸ್ಸಿನಿಂದ ಸ್ಫೂರ್ತಿಗೊಂಡು ತಮ್ಮ ಸುತ್ತಾಣಿಕೆಗಳನ್ನು ಈಗಲೂ ಮುಂದುವರೆಸಿದ್ದಾರೆ. ಕೆಲವರು ಜಾತಿ ಗುಂಪುಗಳನ್ನು ಕಟ್ಟಿಕೊಂಡು. ಇನ್ನು ಕೆಲವರು ಮುಖ್ಯಮಂತ್ರಿಗಳಿಗೆ ಆಪ್ತರಾದವರಿಂದ ಶಿಫಾರ್ಸು ಮಾಡಿಸುವ ಮೂಲಕ. ಮತ್ತೆ ಕೆಲವರು ಮುಖ್ಯಮಂತ್ರಿಗಳಿಗೆ ಹೇಗೋ ಮತ್ತೆ ಮತ್ತೆ ಮುಖ ತೋರಿಸುವ ಪ್ರಯತ್ನಗಳನ್ನು ಮಾಡುತ್ತಾ.

ಸರ್ಕಾರಿ ಏಜೆಂಟುಗಳಾಗುತ್ತಿರುವ ನಮ್ಮ ಸಾಹಿತಿಗಳು

ಆದರೆ ಈ ಸಂಬಂಧದ ಅತ್ಯಂತ ಗಾಬರಿ ಹುಟ್ಟಿಸುವ ಸಂಗತಿಯೆಂದರೆ, ಕೆಲವು ಹಿರಿಯ ಸಾಹಿತಿಗಳೆನಿಸಿಕೊಂಡವರು ಪಕ್ಷದ ಸದಸ್ಯರಿಗಿಂತಲೂ ಹೆಚ್ಚು ನಿಷ್ಠಾವಂತಿಕೆಯಿಂದ ಈಗ ತಾನೇ ಮುಗಿದ ಲೋಕಸಭಾ ಉಪಚುನಾವಣೆಗಳಲ್ಲೂ ಕಾಂಗ್ರೆಸ್ ಕಾರ್ಯಕರ್ತರಂತೆ ನಡೆದುಕೊಂಡದ್ದು. ಸಾರ್ವತ್ರಿಕ ವಿಧಾನಸಭಾ ಚುನಾವಣೆಗಳಲ್ಲಿ ಅನಾಹುತಕಾರಿ ಬಿಜೆಪಿ ಮತ್ತೆ ಅಧಿಕಾರಕ್ಕೆ ಬಂದು ಬಿಟ್ಟೀತೆಂಬ ಆತಂಕದಲ್ಲಿ ಇವರು ಕಾಂಗ್ರೆಸ್ ಪರ 'ಕೆಲಸ' ಮಾಡಿದ್ದನ್ನು ಅರ್ಥ ಮಾಡಿಕೊಳ್ಳಬಹುದು. ಆದರೆ ಈಗ? ಅದು ವಿರೋಧ ಪಕ್ಷಗಳ ಮೇಲೆ ಮುಗಿಬೀಳುವ ಮಟ್ಟಿಗೆ ಬೆಳೆದಿರುವುದನ್ನು ನೋಡಿದರೆ ಈ ಕೆಲವರಿಗೆ ತಮ್ಮ ಸಾಹಿತ್ಯ-ಕಲೆಗಳು ಲಾಭಕರ ಉಪಜೀವನ ಮಾರ್ಗಗಳಾಗಿ ಹೋದಂತೆ ಕಾಣುತ್ತದೆ. ಒಂದು ಕನಿಷ್ಠ ರಾಜಕೀಯ ಅಂತರ, ಸಂಯಮ ಕಾಯ್ದುಕೊಳ್ಳಲಾಗದ ಈ ನನ್ನ ಹಿರಿ-ಕಿರಿಯ ಗೆಳೆಯರಿಗೆ ಅಧಿಕಾರ ದೊರೆತರೆ ಇವರು ಸರ್ಕಾರದ ಏಜೆಂಟರಾಗಬಹುದೇ ಹೊರತು, ತಂತಮ್ಮ ಕ್ಷೇತ್ರಗಳ ಘನತೆ-ಸ್ವಾಯತ್ತತೆಗಳನ್ನು ಕಾಪಾಡಲಾರರೇನೋ ಎಂಬ ಆತಂಕ ನನ್ನದು.

ಇಂತಹ ಗುಂಪುಗಳಿಂದ ಸುತ್ತುವರೆಯಲ್ಪಟ್ಟಿರುವ ಸಿದ್ಧರಾಮಯ್ಯ, ಗಬ್ಬೆದ್ದು ಹೋಗಿರುವ ನಮ್ಮ ಸಾಂಸ್ಕೃತಿಕ ಲೋಕಕ್ಕೆ ಅಕಾಡೆಮಿ, ಪ್ರಾಧಿಕಾರ ಇತ್ಯಾದಿ ತಮ್ಮ ಸರ್ಕಾರಿ ಮತ್ತು ಅರೆ ಸರ್ಕಾರಿ ಸಂಸ್ಥೆಗಳ ಮೂಲಕ ಒಂದು ಗೌರವವನ್ನು ಮರಳಿ ತರುವವರೆಂಬ ಭರವಸೆ ಹುಟ್ಟಿಸಿಲ್ಲ. ಅವರು ಹಳೆಯ ನೇಮಕಾತಿಗಳನ್ನು ರದ್ದುಗೊಳಿಸಿದ ರಭಸದ ಮಧ್ಯೆಯೂ ಮುಖ್ಯಮಂತ್ರಿ ಚಂದ್ರು ಎಂಬ ಬುರುಡೆ ದಾಸನನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರನ್ನಾಗಿ ಉಳಿಸಿಕೊಂಡಿರುವ ಅವರ ದೌರ್ಬಲ್ಯದಲ್ಲಿಯೇ ಇದು ಗೊತ್ತಾಗುವಂತಿದೆ. ಕಳೆದೈದು ವರ್ಷಗಳಲ್ಲಿ ಕನ್ನಡಕ್ಕಾಗಿ ಏನು ಕಡಿದು ಕಟ್ಟೆ ಹಾಕಿದ್ದಾರೆಂದು ಈ ಬಿಜೆಪಿ ಅಭ್ಯರ್ಥಿಯನ್ನು ಉಳಿಸಿಕೊಳ್ಳಲಾಗಿದೆ? ಬರೀ ಕನ್ನಡದ ಬೆಡಗು-ಬಿನ್ನಾಣ ಎಂಬ ಭಾರಿ ಟಿ.ಎ-ಡಿ.ಎ.ಗಳ ಹುಸಿ ವಿಚಾರ ಸಂಕಿರಣಗಳು, ಸರ್ಕಾರಿ ಕಛೇರಿಗಳ ಮೇಲಿನ ಸಾಂಕೇತಿಕ

‘ದಾಳಿ’ಗಳು, ಗಡಿನಾಡಲ್ಲಿ ಉಚಿತ ಕನ್ನಡ ಪುಸ್ತಕ ವಿತರಣೆ. ಬೆಂಗಳೂರಲ್ಲಿ ಕನ್ನಡ ತೇರುತ್ಸವ ಇತ್ಯಾದಿ ಬರೀ ದುಬಾರಿ ಖರ್ಚು-ವೆಚ್ಚಗಳ ಹುಸಿ ಕೆಲಸಗಳಲ್ಲೇ ತೊಡಗಿರುವ ಖಾಲಿ ತಲೆಯ ಈ ವಿದೂಷಕ ಮಹನೀಯನನ್ನು ಆದಷ್ಟು ಬೇಗ ಅಧಿಕಾರ ತ್ಯಜಿಸಲು ಹೇಳಬೇಕು. ಅವರ ಸ್ಥಾನದಲ್ಲಿ ಕನ್ನಡ ಇಂದು ಹಲವು ನೆಲೆಗಳಲ್ಲಿ ಎದುರಿಸುತ್ತಿರುವ ಸಮಸ್ಯೆಗಳ ಮೂಲವನ್ನು ಗುರುತಿಸಿ ಅವುಗಳನ್ನು ಪರಿಹರಿಸಬಲ್ಲ ಮೂರ್ತ ರೂಪದ ಕಾರ್ಯಕ್ರಮಗಳನ್ನು ರೂಪಿಸಿ ಜಾರಿಗೆ ತರಬಲ್ಲ ಕಲ್ಪನಾಶಕ್ತಿಯುಳ್ಳ ಕ್ರಿಯಾಶೀಲ ಚಿಂತರೊಬ್ಬರನ್ನು ನೇಮಿಸಬೇಕು. ಅದು ಸಾಧ್ಯವಾಗದಿದ್ದಲ್ಲಿ. ಕೇವಲ ರಾಜಕೀಯ ಚೌಕಾಶಿಗಳಿಗಾಗಿ ಬಳಕೆಯಾಗುತ್ತಾ ಕೇವಲ ಅಲಂಕಾರಿಕವಾಗುತ್ತಿರುವ ಈ ಪ್ರಾಧಿಕಾರವನ್ನು ಮುಚ್ಚುವುದೊಳಿತು.

ಅಣಬೆಗಳಂತೆ ಹುಟ್ಟಿಕೊಂಡಿರುವ ಅಕಾಡೆಮಿಗಳು

ಇನ್ನು ಅಕಾಡೆಮಿಗಳ ಬಗ್ಗೆ ಹೇಳುವುದಾದರೆ, ಸಾಂದರ್ಭಿಕ ರಾಜಕೀಯ ಉದ್ದೇಶಗಳಿಗಾಗಿ ಕಾಂಗ್ರೆಸ್ ಮತ್ತು ಬಿಜೆಪಿ ಸರ್ಕಾರಗಳೆರಡೂ ಅಕಾಡೆಮಿಗಳನ್ನು ಅಣಬೆಗಳಂತೆ ಬೆಳೆಸಿ ಅಕಾಡೆಮಿ ಎಂಬ ಶಬ್ದದ ಅರ್ಥೋದ್ದೇಶಗಳನ್ನೇ ನಾಶ ಮಾಡಿವೆ. ಈ ಹಿಂದೆ ವೀರಪ್ಪ ಮೊಯ್ಲಿಯವರ ಲೋಕಸಭಾ ಕ್ಷೇತ್ರದ ಗೆಲುವಿಗಾಗಿ ತುಳು. ಕೊಂಕಣಿ ಮತ್ತು ಕೊಡವ ಅಕಾಡೆಮಿಗಳನ್ನು ಸ್ಥಾಪಿಸುವ ಪ್ರಸ್ತಾವವನ್ನಿಟ್ಟಾಗ ಆಗ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದ ಜಿ.ಎಸ್. ಶಿವರುದ್ರಪ್ಪನವರು ಅದನ್ನು ಅನುಚಿತ ಎಂದು ವಿರೋಧಿಸಿದ್ದರು. ಈಗಿರುವುದು ಕನ್ನಡ ಸಾಹಿತ್ಯ ಅಕಾಡೆಮಿಯಾಗಿರದೆ, ಕರ್ನಾಟಕ ಸಾಹಿತ್ಯ ಅಕಾಡೆಮಿಯಾಗಿದ್ದು, ಅದು ಕನ್ನಡ ಸಂಸ್ಕೃತಿಯ ಭಾಗವಾಗಿ ಬೆಳೆದು ಬಂದಿರುವ ಎಲ್ಲ ಭಾಷೆಗಳ ಸಾಹಿತ್ಯವನ್ನು ಬೆಳೆಸಿ ಪ್ರೋತ್ಸಾಹಿಸುವ ಉದ್ದೇಶ ಹೊಂದಿರುವಂತಹುದು ಎಂದು ಸೂಚಿಸಿದ್ದರು. ಅದಕ್ಕೆ ತಕ್ಕಂತೆ ಉತ್ತಮ ತುಳು ಸಾಹಿತ್ಯ ಕೃತಿಗಳನ್ನು ಗುರುತಿಸಿ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವ-ಬಹುಮಾನಗಳನ್ನೂ ನೀಡುವ ಪರಿಪಾಠ ಇತ್ತು. ಆದರೆ ಇಂದು ಹೆಚ್ಚು ಸದ್ದಿಲ್ಲದೆ ತುಳು, ಕೊಂಕಣಿ, ಕೊಡವ ಅಕಾಡೆಮಿಗಳೊಂದಿಗೆ ಬಿಜೆಪಿ ಸರ್ಕಾರದ ಅಗ್ಗದ ಸಾಂಸ್ಕೃತಿಕ ರಾಜಕಾರಣದ ಪ್ರತೀಕವಾಗಿ ಬ್ಯಾರಿ ಮತ್ತು ಅರೆ ಭಾಷೆಗಳಿಗೂ ಅಕಾಡೆಮಿಗಳು ಸ್ಥಾಪಿತವಾಗಿವೆ! ಇದೇ ಪ್ರವೃತ್ತಿ ಮುಂದುವರೆದರೆ ಲಂಬಾಣಿ, ಸೋಲಿಗ, ಸಿದ್ಧಿ, ಹಾಲಕ್ಕಿ ಒಕ್ಕಲಿಗ, ಹವ್ಯಕ, ಕೋಟ ಕನ್ನಡ ಇತ್ಯಾದಿ ‘ಭಾಷೆ’ಗಳಿಗೂ ನಮ್ಮ ಸಾಂಸ್ಕೃತಿಕ ಬಹುತ್ವವಾದಿಗಳ ಶಿಫಾರ್ಸು-ಗಲಾಟೆಗಳ ಮಧ್ಯೆ ಅಕಾಡೆಮಿಗಳು ಸ್ಥಾಪಿತವಾದರೆ ಆಶ್ಚರ್ಯವಿಲ್ಲ.

ನಾನು ಈ ಯಾವ ಭಾಷೆಯನ್ನೂ ಅವಗಣಿಸಿ ಈ ಮಾತುಗಳನ್ನಾಡುತ್ತಿಲ್ಲ. ಪ್ರತಿ ಭಾಷೆಯೂ ಆಯಾ ಭಾಷಿಕರಿಗೆ ಅಭಿಮಾನದ ಆಸ್ತಿಯೇ ಹೌದು. ಈ ಎಲ್ಲ ಭಾಷೆಗಳನ್ನೂ, ಭಾಷಿಕರನ್ನೂ ಹತ್ತಿರದಿಂದ ಕಂಡಿರುವವನು ನಾನು. ಹಾಗೂ ಸುಮಾರಾಗಿ ಈ ಭಾಷೆಗಳ ಸಾಹಿತ್ಯಿಕ ಸಾಮರ್ಥ್ಯ-ಸಾಧ್ಯತೆಗಳನ್ನು ಆಕಾಶವಾಣಿಯ

ಕಾರ್ಯಕ್ರಮ ಅಧಿಕಾರಿಯಾಗಿ ವಿವಿಧ ಪ್ರದೇಶಗಳಲ್ಲಿ ಆಯಾ ಭಾಷಿಕರ ಒಡನಾಟದಲ್ಲಿ ಅಂದಾಜು ಮಾಡಿರುವವನು. ಈ ಹಿಂದೊಮ್ಮೆ ಮಂಗಳೂರು ಆಕಾಶವಾಣಿಯ ದಶಮಾನೋತ್ಸವ ಸಮಾರಂಭದಲ್ಲಿ, ಕೆಲವು ತುಳು ಅಭಿಮಾನಿಗಳು ಮಂಗಳೂರು ಆಕಾಶವಾಣಿಯನ್ನು ತುಳು ಆಕಾಶವಾಣಿಯನ್ನಾಗಿ ಪರಿವರ್ತಿಸಬೇಕೆಂದು ಘೋಷಣೆಗಳನ್ನು ಕೂಗಿದಾಗ ಆ ಸಮಾರಂಭದ ಮುಖ್ಯ ಅತಿಥಿಯಾಗಿದ್ದ ಮತ್ತು ತುಳುವರ ನಡುವೆಯೇ ಬದುಕು ನಡೆಸಿದ್ದ ಶಿವರಾಮ ಕಾರಂತರು, ಆ ಘೋಷಣಾಕಾರರನ್ನು ಉದ್ದೇಶಿಸಿ, 'ನಿಮ್ಮಲ್ಲಿ ಇಷ್ಟೆಲ್ಲ ಹಣ ಸಂಪತ್ತಿದ್ದರೂ ಒಂದು ಒಳ್ಳೆಯ ತುಳು ಪತ್ರಿಕೆಯನ್ನು ಸ್ಥಿರವಾಗಿ ನಡೆಸಲಾಗುತ್ತಿಲ್ಲ. ಅಂದರೆ ಏನರ್ಥ? ಅದು ಆಡು ಭಾಷೆಯ ಸಾಧ್ಯತೆಯ ಹೊರತಾಗಿ ಇನ್ನಾವ ಸಾಧ್ಯತೆಯನ್ನೂ ತನ್ನ ಪರಿಸರದಲ್ಲಿ ಈವರೆಗೆ ಪ್ರದರ್ಶಿಸಲಾಗದಿರುವ ಭಾಷೆಯಾಗಿಯೇ ಉಳಿದಿದೆ. ನಿಮ್ಮ ಅಭಿಮಾನದ ಹೊರತಾಗಿಯೂ ತುಳುವಿನಲ್ಲಿ ಎಷ್ಟು ಪುಸ್ತಕಗಳು ಬಂದು ಎಷ್ಟು ಓದುಗರನ್ನು ಪಡೆದಿವೆ? ತುಳು ಭಾಷಿಕರ ಅತ್ಯುತ್ತಮ ಭಾಷಾಭಿವ್ಯಕ್ತಿ ಕನ್ನಡದಲ್ಲೇ ಏಕೆ ಕಾಣಿಸಿಕೊಂಡಿದೆ? ಭಾಷೆಯನ್ನು ಕಾಲಾನುಕಾಲದ ಸವಾಲುಗಳಿಗೆ ಸಜ್ಜುಗೊಳಿಸಬೇಕಾದವರು ಆ ಭಾಷೆಯನ್ನಾಡುವ ಜನ. ಆನಂತರ ಬೇಕಾದರೆ ಸರ್ಕಾರದ ಆಶ್ರಯ ಬೇಕಾಗಬಹುದು. ಅದಕ್ಕೆ ಮೊದಲು ಸರ್ಕಾರದ ಸಹಾಯ ಬೇಡುವುದು ರಾಜಕಾರಣ ಮಾತ್ರವಾಗುತ್ತದೆ. ಸಂಸ್ಕೃತಿ ಆಗುವುದಿಲ್ಲ' ಎಂದು ಆ ಘೋಷಣಾಕಾರರ ಬಾಯಿ ಮುಚ್ಚಿಸಿದ್ದರು. ಇಂದು ಕೂಡ ತುಳುವಿನ ಸಾಹಿತ್ಯ ಅಭಿವ್ಯಕ್ತಿ ಸಾಮರ್ಥ್ಯದ ಸ್ಥಿತಿ ಅಷ್ಟೇನೂ ಬದಲಾದಂತಿಲ್ಲ. ಅದಕ್ಕೆ ಅಕಾಡೆಮಿಯೊಂದು ಸ್ಥಾಪಿತವಾದ ಮೇಲೆ ಕೂಡ. ಕನ್ನಡದಲ್ಲಿ ಬರೆದು ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ ಎಂದೂ ಪುರಸ್ಕೃತರಾಗಲಾರದ ಕೆಲವು ಸಾಹಿತಿಗಳಿಗೆ ಈ ಅಕಾಡೆಮಿಯಿಂದ ಪುರಸ್ಕಾರಗಳು ದೊರೆತಿರಬಹುದು. ಹಾಗೇ ರಾಜಕೀಯ ಸಂಪರ್ಕವಿರುವ ಕೆಲವರು ಈ ಅಕಾಡೆಮಿಗಳ ಅಧ್ಯಕ್ಷ ಅಥವಾ ಸದಸ್ಯರಾಗಿ ಒಣ ಜಂಭದಲ್ಲಿ ಬೀಗಬಹುದು. ಆದರೆ ಅದರಿಂದ ಭಾಷೆಗೇನು ಪ್ರಯೋಜನ?

ಕರ್ನಾಟಕ ಸಾಹಿತ್ಯ ಅಕಾಡೆಮಿಯೇ ವಿಶಾಲ ವೇದಿಕೆಯಾಗಲಿ

ಇದೇ ಮಾತುಗಳನ್ನು ಈಗಾಗಲೇ ಶುದ್ಧ ರಾಜಕೀಯ ಕಾರಣಗಳಿಗಾಗಿ ಅಕಾಡೆಮೀಕೃತವಾಗಿರುವ ಭಾಷೆಗಳಿಗೂ ಅನ್ವಯಿಸಿ ಹೇಳಬಹುದು. ಈ ಭಾಷೆಗಳು ಕನ್ನಡದ ಸಾಹಚರ್ಯದಲ್ಲಿ, ಅದರ ಹೋಲಿಕೆಯಲ್ಲಿ, ಅದರ ಚರ್ಚೆಗಳ ಬೆಳಕಲ್ಲಿ ತನ್ನ ಜಾಯಮಾನಕ್ಕೆ ಅಗತ್ಯವಾದುದನ್ನು ಹೀರಿಕೊಂಡು ತನ್ನ ಸಾಹಿತ್ಯ ಸಂವೇದನೆಯನ್ನು ಮತ್ತು ಆ ಮೂಲಕ ಅಭಿವ್ಯಕ್ತಿ ಸಾಮರ್ಥ್ಯವನ್ನು ಬೆಳೆಸಿಕೊಳ್ಳಬೇಕು ಹಾಗೂ ಅದರ ಪರಿಣಾಮವಾಗಿ ತನ್ನವೇ ಓದುಗರನ್ನು ಸಂಪಾದಿಸಿಕೊಳ್ಳಬೇಕು. ಅಲ್ಲಿಯವರೆಗೆ ಈ ಭಾಷೆಗಳು ಕರ್ನಾಟಕ ಸಾಹಿತ್ಯ ಅಕಾಡೆಮಿಯೆಂಬ ವಿಶಾಲ ವೇದಿಕೆಯಡಿಯೇ ತಮ್ಮನ್ನು ಗುರುತಿಸಿಕೊಳ್ಳುವುದು ಒಳ್ಳೆಯದು. ಅವುಗಳದೇ ಅಕಾಡೆಮಿ ಸ್ಥಾಪಿತವಾಗುವ

ಕಾಲ ಬರುವವರೆಗೆ ಈ ಭಾಷೆಗಳ ತಲಾ ಒಬ್ಬರೋ ಇಬ್ಬರೂ ಪ್ರತಿನಿಧಿಗಳನ್ನು (ಆಯಾ ಭಾಷಿಕರ ಜನಸಂಖ್ಯೆ ಮತ್ತು ಸಾಹಿತ್ಯದ ಸ್ಥಿತಿಗತಿಗಳನ್ನನುಸರಿಸಿ) ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ನೇಮಿಸಬಹುದು. ತುಳು ತನ್ನದೇ ಎನ್ನುವ ಸಮೃದ್ಧ ಜಾನಪದವನ್ನು ಹೊಂದಿರುವುದರಿಂದ ಯಕ್ಷಗಾನ ಅಕಾಡೆಮಿಯನ್ನು ತುಳು ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯನ್ನಾಗಿ ಮಾರ್ಪಡಿಸಬಹುದು. ಇದೆಲ್ಲವನ್ನೂ ಸರ್ಕಾರ ಪರಿಣಿತರ ಒಂದು ಅಧ್ಯಯನ ಸಮಿತಿ ನೇಮಿಸಿ, ಅದರ ವರದಿಯ ಆಧಾರದ ಮೇಲೆ ಶೀಘ್ರ ನಿರ್ಣಯ ಕೈಗೊಂಡರೆ ಒಳ್ಳೆಯದು. ಇದರಿಂದ ಒಂದು ಸಾಹಿತ್ಯ ಭಾಷೆಯಾಗಿ ವಿಶಾಲ ನೆಲೆಯಲ್ಲಿ ಸಮೃದ್ಧವಾಗಿ ಬೆಳೆದಿರುವ ಉರ್ದು ಭಾಷೆಗಾಗಿರುವ ಅಕಾಡೆಮಿಯನ್ನು ಹೊರತುಪಡಿಸಬಹುದು.

ಭಾಷೆ-ಸಾಹಿತ್ಯ-ಸಂಸ್ಕೃತಿಗಳ ವಿಷಯದಲ್ಲಿ ಈ ಎಲ್ಲ ಹುಚ್ಚಾಟ, ಗೊಂದಲ, ಅನಿಶ್ಚಿತತೆಗಳಿಗೆ ಕಾರಣ, ಸರ್ಕಾರಕ್ಕೆ ಒಂದು ಪುಷ್ಟಿದಾಯಕವಾದ ಸಾಂಸ್ಕೃತಿಕ ನೀತಿ ಎಂಬುದಿಲ್ಲದಿರುವುದು. ಸರ್ಕಾರಕ್ಕೆ ಒಂದು ಸಾಂಸ್ಕೃತಿಕ ನೀತಿ ಎಷ್ಟು ಅಗತ್ಯ ಎಂಬುದನ್ನು ಈ ಮುಖ್ಯಮಂತ್ರಿಗಳಾದರೂ ಆದಷ್ಟು ಬೇಗ ಅರಿತರೆ ಒಳ್ಳೆಯದು. ತಮ್ಮನ್ನು ಲೋಹಿಯಾವಾದಿ ಎಂದು ತಮ್ಮ ಆಪ್ತರ ಬಳಿಯಾದರೂ ಗುರುತಿಸಿಕೊಳ್ಳುವ ಸಿದ್ಧರಾಮಯ್ಯನವರು ಲೋಹಿಯಾ ಸಮಾಜವಾವನ್ನು ಸಾಂಸ್ಕೃತಿಕ ಸಮಾಜವಾದ ಎಂದೂ ಗುರುತಿಸಲಾಗುತ್ತದೆ ಎಂಬುದನ್ನು ಗಮನಿಸಬೇಕು. ಒಂದು ಆಡಳಿತದ ನಿಜವಾದ ಸಾರ್ಥಕತೆ ಗುರುತಿಸಲ್ಪಡುವುದು ಅದು ಒಟ್ಟಾರೆಯಾಗಿ ಸೃಷ್ಟಿಸುವ ಸಮಾಜದ ಸಾಂಸ್ಕೃತಿಕ ಸಂಪನ್ನತೆಯಿಂದ ಎಂದು ಲೋಹಿಯಾ ನಂಬಿದ್ದರೆಂಬುದನ್ನು ಅವರು ಅರಿಯಬೇಕು.

ಸಾಂಸ್ಕೃತಿಕ ನೀತಿ ನಿರೂಪಣೆಯ ಅಪಮೌಲ್ಯೀಕರಣ

ದುರಂತವೆಂದರೆ ಈ ಸರ್ಕಾರ ಸಾಂಸ್ಕೃತಿಕ ನೀತಿಯನ್ನು ರೂಪಿಸಲು ನೇಮಕ ಮಾಡಿರುವುದು ಕಳೆದ ಇಪ್ಪತ್ತೈದು ವರ್ಷಗಳಲ್ಲಿ, ನಮ್ಮ ಸಾಹಿತ್ಯ-ಸಂಸ್ಕೃತಿಗಳ ಶಕ್ತಿ-ಸೌಂದರ್ಯಗಳ ತಳಹದಿಯಂತಿರುವ ಅವುಗಳ ವಿಶಿಷ್ಟ ಸ್ವಾಯತ್ತತೆಗಳನ್ನು ತನ್ನ ವಿಕ್ಷಿಪ್ತ ಸಾಮಾಜಿಕ ನ್ಯಾಯ ಪರಿಕಲ್ಪನೆಯ ಪುಢಾರಿ ರಾಜಕಾರಣದ ಮೂಲಕ ನಾಶ ಮಾಡಲೆತ್ನಿಸುತ್ತಿರುವ ಮತ್ತು ನೆನಪಿಡಬಲ್ಲ ಒಂದು ಸಾಲನ್ನೂ ಈವರೆಗೆ ಬರೆಯದಿರುವ 'ಲೇಖಕ' ಮಹಾಶಯರೊಬ್ಬರನ್ನು. ಅಲ್ಲಿಗೆ ಸಾಂಸ್ಕೃತಿಕ ನೀತಿ ಎಂಬುದರ ಕತೆ ಮುಗಿಯಿತಲ್ಲ!

ಇದಕ್ಕೆ ಮುಖ್ಯ ಕಾರಣ ಈ ಮಂತ್ರಿ ಮಂಡಲದಲ್ಲಿ ಕನ್ನಡ-ಸಂಸ್ಕೃತಿಗೆಂದೇ ಓರ್ವ ಮಂತ್ರಿಯಿಲ್ಲದಿರುವುದು. ಅದಕ್ಕಿಂತ ಮುಖ್ಯವಾಗಿ ಅದೊಂದು ಸ್ವತಂತ್ರ ನಿರ್ವಹಣೆ ಬೇಡುವ ವಿಷಯ ಎಂಬ ತಿಳುವಳಿಕೆಯೇ ಕ್ರಮೇಣ ನಮ್ಮ ರಾಜಕಾರಣ ಮತ್ತು ಆಡಳಿತ ವ್ಯವಸ್ಥೆಯಲ್ಲಿ ಕಾಣೆಯಾಗುತ್ತಿರುವುದು. ಈಗ ಮಹಿಳಾ ಮತ್ತು ಶಿಶು ಕಲ್ಯಾಣ ಖಾತೆಯ ಮಂತ್ರಿ ಉಮಾಶ್ರೀ ಅವರಿಗೆ ಇದನ್ನು ಹೆಚ್ಚುವರಿ

ಖಾತೆಯನ್ನಾಗಿ ನೀಡಲಾಗಿದೆ. ಆದರೆ ಇವರ ರಂಗಭೂಮಿ ಮತ್ತು ಚಲನಚಿತ್ರ ರಂಗಗಳಲ್ಲಿನ ಅನುಭವದ ಬಗ್ಗೆ ಎಷ್ಟೇ ಒಳ್ಳೆಯ ಮಾತುಗಳನ್ನಾಡಲು ಸಾಧ್ಯವಿದ್ದರೂ (ಇವರ ಚಲನಚಿತ್ರ ರಂಗಕ್ಕೆ ಸಂಬಂಧಿಸಿದಂತೆ ಇಂತಹುದೇ ಮಾತುಗಳನ್ನಾಡಲು ಅಸಾಧ್ಯ ಎಂಬುದು ಬೇರೆ ಮಾತು) ಅವರು ಸಂಸ್ಕೃತಿ ಖಾತೆಯನ್ನು ಯಶಸ್ವಿಯಾಗಿ ನಿರ್ವಹಿಸುವ ಸಾಮರ್ಥ್ಯ ಅವರಿಗಿದೆ ಎಂದು ನಂಬುವುದು ಕಷ್ಟ.

ಈ ಸಾಮರ್ಥ್ಯ ಅವರಿಗಿದ್ದಿದ್ದಲ್ಲಿ ನಮ್ಮ ಅಕಾಡೆಮಿಗಳು, ಪ್ರಾಧಿಕಾರಗಳು, ರಂಗಾಯಣಗಳು ಸರ್ಕಾರದ ಸಾಂಸ್ಕೃತಿಕ ಬೆನ್ನೆಲುಬುಗಳಾಗಿ ಈಗಾಗಲೇ ಕಾರ್ಯ ನಿರ್ವಹಿಸಲಾರಂಭಿಸಬೇಕಿತ್ತು. ಇದು ಸಾಧ್ಯವಾಗಿಲ್ಲವೇಕೆಂದರೆ, ಈ ಸರ್ಕಾರವನ್ನು ಸುತ್ತುವರೆದಿರುವ ಸಾಂಸ್ಕೃತಿಕ ಪುಢಾರಿಗಳ ನೂಕುನುಗ್ಗಲಿನಲ್ಲಿ ಸಮರ್ಥರನ್ನು ಗುರುತಿಸುವುದು ಕಷ್ಟವಾಗುತ್ತಿರುವುದು. ಹಾಗಾಗಿ, ಎಲ್ಲಕ್ಕಿಂತ ಮೊದಲು ಸಿದ್ಧರಾಮಯ್ಯನವರು ಸಮರ್ಥ ಸಂಸ್ಕೃತಿ ಮಂತ್ರಿಯೊಬ್ಬರನ್ನು ತಮ್ಮ ಮಂತ್ರಿ ಮಂಡಲಕ್ಕೆ ನೇಮಕ ಮಾಡಿಕೊಳ್ಳಬೇಕಿದೆ. ಆತ ತನ್ನ ಸಾಂಸ್ಕೃತಿಕ ತಿಳುವಳಿಕೆ ಮತ್ತು ಪ್ರಬುದ್ಧತೆಗಳ ಮೂಲಕ ಸರ್ಕಾರದ ಬಿಂಬವನ್ನು ನಿರ್ಣಾಯಕವಾಗಿ ಬದಲಿಸಬಲ್ಲವನಾಗಿರುತ್ತಾನೆ.

●

ಅಕ್ಟೋಬರ್, ೨೦೧೩

'ಅಣ್ಣ ತಂಗಿ' ಎಂಬ ಚಿತ್ರವೂ 'ಘುಂಥಿ' ಎಂಬ ರೂಕ್ಷ ಕಾದಂಬರಿಯೂ

ಭಾರತೀಯ ಚಿತ್ರರಂಗಕ್ಕೆ ಈಗ ನೂರು ವರ್ಷಗಳಂತೆ. ಹಾಗೇ ಕನ್ನಡ ಚಿತ್ರರಂಗಕ್ಕೆ ಎಂಭತ್ತು ವರ್ಷಗಳಂತೆ. ಇದರ ಅಂಗವಾಗಿ ಮೊನ್ನೆ ಚೆನ್ನೈನಲ್ಲಿ ದಕ್ಷಿಣ ಭಾರತೀಯ ಚಿತ್ರರಂಗದ ಧುರೀಣರು ಏರ್ಪಡಿಸಿದ್ದ ಸಮಾರಂಭಕ್ಕೆ ಕನ್ನಡದ ಕೆಲವು ಕಲಾವಿದರು-ತಂತ್ರಜ್ಞರೂ ಹೋಗಿ ಕುಣಿದು ಕುಪ್ಪಳಿಸಿ, ಸನ್ಮಾನ ಮಾಡಿಸಿಕೊಂಡು ಬಂದಿದ್ದಾರೆ. ಬಹಳ ಜನ ಹೋಗಲಿಲ್ಲವಂತೆ. ಏಕೆ? ಈ ಸಂದರ್ಭದಲ್ಲಿ ವಿಷ್ಣುವರ್ಧನ್ ಅವರ ನೆನಪಿನ ಚೀಟಿ ಬಿಡುಗಡೆಯಾಗುತ್ತಿರುವುದರ ಹಿಂದಿನ ರಾಜಕಾರಣವೇ ಈ ಎಲ್ಲವನ್ನೂ ಹೇಳುವಂತಿದೆ. ವಿಷ್ಣುವರ್ಧನ್ ಸೀಮಿತ ಪ್ರತಿಭೆಯ ಓರ್ವ ಸಾಧಾರಣ ನಟ. ಆತ ಯಾವುದೇ ಕಾರಣಕ್ಕೂ ಇಡೀ ಕನ್ನಡ ಚಿತ್ರರಂಗವನ್ನು ಪ್ರತಿನಿಧಿಸಲಾರ.

ಅದೇನೇ ಇರಲಿ, ಕನ್ನಡ ಚಿತ್ರರಂಗದ ಈ ಐತಿಹಾಸಿಕ ಸಂದರ್ಭದಲ್ಲಿ ನೆನಪಿಸಿಕೊಳ್ಳಬೇಕಾದ ಹಲವು ಹಿರಿಯರಿದ್ದಾರೆ. ಬರೀ ರಾಜ್‌ಕುಮಾರ್-ಅವರದು ದೊಡ್ಡ ಕೊಡುಗೆ ಇದೆಯಾದರೂ-ಈ ಚಿತ್ರರಂಗವನ್ನು ಕಟ್ಟಿಬೆಳೆಸಿಲ್ಲ. ಇಂದಿನ ಹಲವರ ಜೊತೆ ಹಿಂದಿನ ಎಚ್.ಎಲ್.ಎನ್ ಸಿಂಹ, ಡಿ. ಶಂಕರ್‌ಸಿಂಗ್, ಗುಬ್ಬಿ ವೀರಣ್ಣ, ಪಂತಲು, ಬಿ.ಎಸ್. ರಂಗಾ, ಕು.ರಾ. ಸೀತಾರಾಮಶಾಸ್ತ್ರಿ, ಆರ್. ನಾಗೇಂದ್ರರಾವ್, ಹುಣಸೂರು ಕೃಷ್ಣಮೂರ್ತಿ, ಎಂ.ಆರ್. ವಿಠ್ಠಲ್, ಸಿಂಗ್ ಠಾಕೂರ್ ಎನ್. ಲಕ್ಷ್ಮೀನಾರಾಯಣ್, ವಾದಿರಾಜ್-ಜವಾಹರ್, ಪುಟ್ಟಣ್ಣ, ಸಿದ್ಧಲಿಂಗಯ್ಯ, ಎಂ.ವಿ. ರಾಜಮ್ಮ, ಪಂಡರೀಬಾಯಿ ಮುಂತಾದವರ ವಿಶಿಷ್ಟ ಕೊಡುಗೆಗಳೂ ಇವೆ. ಅಷ್ಟೇ ಅಲ್ಲ, ನಮ್ಮ ಚಿತ್ರರಂಗ ಮತ್ತು ಅದರ

ಅಭಿಮಾನಿಗಳು ದೊಡ್ಡ ಹೆಸರುಗಳ ಮರೆಯಲ್ಲಿ ಕಾಣೆಯಾಗಿ ಹೋಗಿರುವ ಅನೇಕ ಸಣ್ಣಪುಟ್ಟ ಹೆಸರುಗಳನ್ನೂ ಈ ಸಂದರ್ಭದಲ್ಲಿ ಕೃತಜ್ಞತೆಯಿಂದ ನೆನೆಯಬೇಕಿದೆ. ಏಕೆಂದರೆ ದೊಡ್ಡ ಹೆಸರುಗಳ ಜೊತೆಯಲ್ಲಿ ಇವರೂ ಸೇರಿದ್ದರಿಂದಲೇ, ಅವರ ಪ್ರತಿಭೆ ಮತ್ತು ವಿಶಿಷ್ಟತೆಗಳೊಂದಿಗೆ ಕನ್ನಡ ಚಿತ್ರರಂಗ ತನ್ನ ಶೈಶವಾವಸ್ಥೆಯನ್ನು ದಾಟಿ ಒಂದು ಯಶಸ್ವಿ ಉದ್ಯಮವಾಗಿ ಬೆಳೆದದ್ದು. ಉದಾ: ರಮಾದೇವಿ, ಜಯಶ್ರೀ, ಎಂ.ಎಸ್. ಲಕ್ಷ್ಮೀದೇವಿ, ಕುಪ್ಪುರಾಜ್, ರಾಮಚಂದ್ರ ಶಾಸ್ತ್ರಿ, ಹನುಮಂತಾಚಾರ್, ರಾಘವೇಂದ್ರರಾವ್, ಗಣಪತಿಭಟ್. ಕಮಡಿಯನ್ ಗುಗ್ಗು ಮುಂತಾದವರನ್ನು ಇಂದು ನೆನೆಯುವವರೇ ಇಲ್ಲವಾಗಿದ್ದಾರೆ. ಕನ್ನಡ ಚಿತ್ರರಂಗದ ಹಳೆಯ ಮೂರು ತಲೆಮಾರುಗಳ ಬಹುಶಃ ಏಕೈಕ ಕೊಂಡಿಯಾಗಿ ಉಳಿದಿರುವ ಎಂ.ಎಸ್. ಲಕ್ಷ್ಮೀದೇವಿಯವರನ್ನು ಈ ಸಂದರ್ಭದಲ್ಲಿ ಗುರುತಿಸಿ ಗೌರವಿಸುವ ವ್ಯವಧಾನ ಯಾರಿಗೂ ಇಲ್ಲವಾಗಿದೆ.

ಈ ಮಧ್ಯೆ ಮೊನ್ನೆ ಆಕಸ್ಮಿಕವಾಗಿ ನೋಡಿದ ಹಳೆಯ ಕನ್ನಡ ಚಿತ್ರವೊಂದರ ಬಗ್ಗೆ ಇಲ್ಲಿ ಬರೆಯುವುದು ಉಚಿತವಾದೀತು. ನಾನು ನೋಡಿದ ಆ ಚಿತ್ರ 'ಅಣ್ಣ ತಂಗಿ'. ಸುಮಾರು ಐವತ್ತು ವರ್ಷಗಳ ಹಿಂದೆ ನನ್ನ ಬಾಲ್ಯದಲ್ಲಿ ಹಳ್ಳಿಯ ಗುಡಾರವೊಂದರಲ್ಲಿ ನೋಡಿದ್ದ ಈ ಚಿತ್ರ ಇಂದೂ ನನ್ನನ್ನು ಎಷ್ಟು ಭಾವಾವಿಷ್ಟನ್ನಾಗಿ ಮಾಡಿತೆಂದರೆ, ಅದನ್ನು ಮತ್ತೆ ಮತ್ತೆ ನೋಡುವ ಆಸೆ ನನ್ನಲ್ಲಿ ಉಂಟಾಗುತ್ತಿದೆ! ಈಗಲೂ ಉಳಿದಿರುವ ಅದರ ಜೀವಂತಿಕೆಯಿಂದಾಗಿ. ಈ ಚಿತ್ರ ಸ್ವಾತಂತ್ರ್ಯ ಬಂದ ದಿನಗಳಲ್ಲಿ ರಾಷ್ಟ್ರ ಮತ್ತು ಸಮಾಜವನ್ನು ಹೊಸ ಅರಿವು ಮತ್ತು ಬದ್ಧತೆಗಳಿಂದ ಕಟ್ಟಬೇಕೆಂಬ ಉತ್ಸಾಹ ಯಾವ ಯಾವ ನೆಲೆಗಳಲ್ಲಿ ಮತ್ತು ರೂಪಗಳಲ್ಲಿ ಕ್ರಿಯಾಶೀಲವಾಗಿತ್ತು ಎಂಬುದನ್ನು ಎಷ್ಟು ಸರಳವಾಗಿ, ಸುಂದರವಾಗಿ ಹಾಗೂ ಲವಲವಿಕೆಯೊಂದಿಗೆ ಹೇಳುತ್ತದೆಂದರೆ, ಆ ಹೇಳುವಿಕೆಯ ಸಹಜ ಮುಗ್ಧತೆಯಲ್ಲಿಯೇ ಚಿತ್ರ ತನ್ನ ಕಲಾತ್ಮಕತೆಯ ಯಶಸ್ಸನ್ನೂ ಕಂಡುಕೊಳ್ಳುತ್ತದೆ.

ಹೊಸ ಅಲೆಯ ಕಲಾತ್ಮಕ ಚಿತ್ರಗಳ ಬೌದ್ಧಿಕತೆಯ ಭಾರಗಳು ಇಲ್ಲಿಲ್ಲ. ಕುರಾಸೀ ಅವರ ಅಪ್ಪಟ ಗ್ರಾಮೀಣ ಸೊಗಡಿನ ಚಿತ್ರಕಥೆ–ಸಂಭಾಷಣೆ–ಹಾಡುಗಳು ಮತ್ತು ನಿರ್ದೇಶನ, ರಾಜ್‌ಕುಮಾರ್–ಬಿ.ಸರೋಜಾದೇವಿ–ಈಶ್ವರಪ್ಪ–ಬಾಲಕೃಷ್ಣ–ನರಸಿಂಹರಾಜು–ಬಿ. ಜಯಮ್ಮ–ಎಂ.ಎನ್ ಲಕ್ಷ್ಮೀದೇವಿಯವರ ಸಹಜ ಅಭಿನಯ, ಜಿ.ಕೆ. ವೆಂಕಟೇಶ್ ಅವರು ಜನಪದ ಲಯಗಳಲ್ಲಿ ಸಂಯೋಜಿಸಿರುವ ಮಧುರವಾದ ಹಾಡುಗಳು (ಭೂಮಿಗ್ಯಾಕೆ ಬಂದೇ ಅಂತ..., ಎಚ್ಚರಿಕೆ ಎಚ್ಚರಿಕೆ ಎಚ್ಚರಿಕೆ..., ಅಂವ ಬಂದಾನೇ..., ಬೆಟ್ಟದ ಮ್ಯಾಗಿನ ಬೆನಕನ ಕರುಣೇ... ಮುಂತಾದವು) ನಮ್ಮನ್ನು ಎರಡೂವರೆ ತಾಸು ಹಿಡಿದಿಟ್ಟುಬಿಡುತ್ತವೆ. ಕೊನೆಯಲ್ಲಿ, ಪ್ರಧಾನ ವಾಹಿನಿಯ ನಮ್ಮ ಕನ್ನಡ ಚಿತ್ರರಂಗ ತನ್ನ ಹಣ ಮತ್ತು ತಾಂತ್ರಿಕತೆಯೊಂದಿಗೆ ಅಭಿರುಚಿಯಲ್ಲಿ ಇಲ್ಲಿಂದ ಎಲ್ಲಿಗೆ ಜಾರಿಬಿಟ್ಟಿದೆ ಎಂಬ ಬೇಸರವೂ ಆಗುತ್ತದೆ. ನಮ್ಮ ಚಲನಚಿತ್ರ ಅಕಾಡೆಮಿಯೆಂಬುದೊಂದಿದ್ದರೆ ಮರೆತೇ ಹೋಗುತ್ತಿರುವ ಈ ಮತ್ತು

ಇಂತಹ ಮಹತ್ವದ ಕನ್ನಡ ಚಿತ್ರಗಳ ಹೊಸ ಪ್ರತಿಗಳನ್ನು ತಯಾರಿಸುವ ಹೊಣೆ ನಿಭಾಯಿಸಬೇಕಾಗಿದೆ.

ಇನ್ನು ಚಲನಚಿತ್ರದಿಂದ ನಮ್ಮ ಸಾಹಿತ್ಯದ ಕಡೆ ಬಂದರೆ, 'ಢುಂಢಿ' ಎಂಬ ಕಾದಂಬರಿಯ ನಿಷೇಧದ ಬಗ್ಗೆ ಎರಡು ಮಾತುಗಳನ್ನು ಆಡಲೇಬೇಕಾಗುತ್ತದೆ. ಯಾವುದೇ ಸಾಹಿತ್ಯ ಕೃತಿಯನ್ನು, ಅದರ ಸಾಹಿತ್ಯಿಕ ನೆಲೆಯ ಪರಿಶೀಲನೆ ಇಲ್ಲದೆ ನಿಷೇಧಿಸುವುದು ಅನಾಗರೀಕ ಕ್ರಮವೇ ಆಗುತ್ತದೆ. ನ್ಯಾಯಾಂಗ ಕೂಡ ಈ ಘಟ್ಟದ ನಂತರ ಪ್ರವೇಶಿಸಬೇಕು. ಆದರೆ 'ಢುಂಢಿ'ಯ ವಿಷಯದಲ್ಲಿ ಇದಾಗಿಲ್ಲ ಮತ್ತು ಇದು ತಪ್ಪು ಎಂದು ಹೇಳುತ್ತಲೇ ಈ ಕೃತಿ ಒಂದು ಸಾಹಿತ್ಯ ಕೃತಿಯಾಗಿ ನಿರಾಶೆಯನ್ನಷ್ಟೇ ಅಲ್ಲ, ಜಿಗುಪ್ಸೆಯನ್ನೂ ಉಂಟು ಮಾಡುತ್ತದೆ ಎಂದೂ ಹೇಳದೆ ವಿಧಿಯಿಲ್ಲ.

ಇಂದು ನಾವು ವೈಚಾರಿಕರೆನಿಸಿಕೊಂಡವರು ವೈಚಾರಿಕತೆ ಎಂದರೆ ಎಲ್ಲವನ್ನೂ, ಯಾವುದನ್ನು ಇಂದು ನಾವು 'ವಾಸ್ತವಿಕತೆ' ಎಂದು ನಂಬಿದ್ದೇವೋ, ಆ ಚೌಕಟ್ಟಿಗೆ ಅಳವಡಿಸುವುದು ಎಂದು ಭಾವಿಸಿದಂತಿದೆ. ಸರಿದ ಕಾಲ ಮತ್ತು ಆ ಚರಿತ್ರೆಯ ಸಂಕೀರ್ಣ ನಡೆಗಳು ಇಂತಹ ಅಳವಡಿಕೆಗೆ ಸುಲಭವಾಗಿ ಸಿಗದಂತಹವು ಎಂಬುದು ಇಲ್ಲಿ ನಮ್ಮ ಗಮನಕ್ಕೇ ಬರುವುದಿಲ್ಲ. ಒಂದು ಪುರಾಣ ಪ್ರತೀಕಕ್ಕೆ ಇಂದು ನಡೆಸುವ ಇಂತಹ ಅಳವಡಿಕೆಗೆ ಸಿಗುವಂತಹ ಒಂದು ಮೂಲ ವಸ್ತುವಿರಬಲ್ಲುದು ಎಂದು ನಂಬುವುದೇ ಮತ್ತು ಅದನ್ನು ಕಾದಂಬರಿಯೆಂಬ ಆಧುನಿಕ ಸಾಹಿತ್ಯ ರೂಪದಲ್ಲಿ ಮೂಡಿಸಲು ಯತ್ನಿಸುವುದೇ ಅವೈಚಾರಿಕ, ಅಸಾಹಿತ್ಯಕ (ಸಾಹಿತ್ಯ ಎಂದರೆ ಒಂದು ಸೃಜನಶೀಲ ಕ್ರಿಯೆ ಎಂದು ನಂಬುವುದಾದರೆ) ಕ್ರಿಯೆ ಆಗುತ್ತದೆ. ಇಂತಹ ಪ್ರಯತ್ನಗಳ ಎಲ್ಲ ರೂಕ್ಷ ಪರಿಣಾಮಗಳೂ, ಎಲ್ಲ ತಾಂತ್ರಿಕ ಅಧ್ವಾನಗಳೂ ಈ ಕೃತಿಯಲ್ಲಿ ಕಾಣುತ್ತವೆ. ಈ ಕೃತಿ ಪುನರ್‌ನಿರ್ಮಾಣ ಮಾಡಲು ಹೊರಟಿರುವ ಗಣಪತಿಯ ಪ್ರತಿಮೆಯ ಹಿಂದೆ ನೆಲ–ಮುಗಿಲುಗಳ, ದೇವ–ಮರ್ತ್ಯಗಳ, ಮನುಷ್ಯ ಚೇತನದ ಊರ್ಧ್ವ–ಅಧೋ ಚಲನೆಗಳ ಅನುಸಂಧಾನವನ್ನು ಹೇಳುವ ಹಲವು ನೆಲೆಗಳ ಸಂಕಥನಗಳೂ ಇವೆ. ಈ ಪರಿವೆಯೇ ಇಲ್ಲದಂತೆ ಲೇಖಕ ಯೋಗೀಶ ಮಾಸ್ತರ್ ತಮ್ಮ ಅಪಾರ ಓದು ಮತ್ತು ಶ್ರಮವನ್ನು ಇಲ್ಲಿ ವಿವಾದ ಸೃಷ್ಟಿಗೆಂದೇ ಏಕಮುಖ ವಾದ ಕಟ್ಟಲು ವ್ಯರ್ಥ ಮಾಡಿದ್ದಾರೆ ಎಂದೆನ್ನಿಸದಿರದು.

ಕೊನೆಯಲ್ಲಿ ಒಂದು ಮಾತು: ಈ ಬಾರಿ ಹಲವೆಡೆ ಗಣಪತಿ ಮೆರವಣಿಗೆಗಳು ಮೋದಿ ಪರ ಆರ್ಭಟಗಳ ಮೆರವಣಿಗೆಗಳಾಗಿ ಪರಿವರ್ತಿತವಾಗಿರುವುದನ್ನು ನೋಡಿದರೆ, ಗಣಪತಿಯನ್ನು ಕುರಿತ ಈ ಕೃತಿಯಲ್ಲಿನ ನಿರೂಪಣೆ ಸರಿಯಿದ್ದರೂ ಇರಬಹುದೆಂಬ ಅನುಮಾನ ಯಾರಿಗಾದರೂ ಹುಟ್ಟಬಹುದು!

●

ನವೆಂಬರ್, ೨೦೧೩

ರಿಸ್ಕ್ ಒಲ್ಲದ ನೀನಾಸಂ ಚರ್ಚೆಗಳು...

ಹೆಗ್ಗೋಡಿನ 'ನೀನಾಸಂ' ಪ್ರತಿ ವರ್ಷ ಅಕ್ಟೋಬರ್‌ನಲ್ಲಿ ನಡೆಸುವ 'ಸಂಸ್ಕೃತಿ ಶಿಬಿರ'ದ ಸಮಯದಲ್ಲಿ ಅಲ್ಲಿಗೆ ಭೇಟಿ ನೀಡುವುದೇ ಒಂದು ವಿಶೇಷ ಸಂಭ್ರಮದ ಅನುಭವ. ಕಾಡಿನ ಮಧ್ಯವಿರುವ ಆ ಸಣ್ಣ ಊರಿನ ಒಂದು ಗ್ರಾಮೀಣ ವಾಸ್ತು-ಪರಿಸರದಲ್ಲಿ ರಾಜ್ಯ ಮತ್ತು ರಾಷ್ಟ್ರದ ವಿವಿಧ ಭಾಗಗಳಿಂದ ಬಂದ ವಿವಿಧ ವೇಷ ಭೂಷಣಗಳ ಶಿಬಿರಾರ್ಥಿ ಹೆಣ್ಣು-ಗಂಡುಗಳ ಮತ್ತು ಸಂಪನ್ಮೂಲ ವ್ಯಕ್ತಿಗಳ ಗುಂಪುಗಳ ಸದ್ದು-ಸಡಗರ, ಅವರು ಅಲ್ಲಿ ನಡೆಸುವ ಚರ್ಚೆಗಳ ಬೌದ್ಧಿಕ ಸೊಗಡು ಮತ್ತು ಅಲ್ಲಿ ನಡೆಯುವ ಸಂಗೀತ, ನಾಟಕ-ಸಿನಿಮಾ-ಪ್ರಾತ್ಯಕ್ಷಿಕೆಗಳ ಬೆಡಗು, ಎಲ್ಲ ಸೇರಿ ಒಟ್ಟಾರೆ ಅಲ್ಲಿ ಏಳು ದಿನಗಳ ಕಾಲ ಸೃಷ್ಟಿಯಾಗುವ ದಟ್ಟ ಸಾಂಸ್ಕೃತಿಕ ವಾತಾವರಣವು ಸಾಂಸ್ಕೃತಿಕ ಆಸಕಿಯುಳ್ಳ ಯಾರನ್ನಾದರೂ ಪರವಶಗೊಳಿಸುವಂತಹುದು. ಬಹುಶಃ ಇದು ಕರ್ನಾಟಕದಲ್ಲೇನು, ಭಾರತದಲ್ಲೇ ಇರುವ ಇಂತಹ ಏಕೈಕ ಸಾಂಸ್ಕೃತಿಕ ಸಂಸ್ಥೆಯೆಂದು ಕಾಣುತ್ತದೆ. ಕಳೆದ ಆರೇಳು ವರ್ಷಗಳಿಂದ ಸುಮಾರಾಗಿ ಪ್ರತಿ ವರ್ಷ ನಾನು ನನ್ನ ಪತ್ನಿಯೊಂದಿಗೆ ಈ ಶಿಬಿರಕ್ಕೆ ಹೋಗಿ ಒಂದೆರಡು ದಿನ ಇದ್ದು ಬರುವ ರೂಢಿಯಿದೆ.

ನೀನಾಸಂ ಬಗ್ಗೆ ಕನ್ನಡ ಬೌದ್ಧಿಕ ಲೋಕದಲ್ಲಿ ಅನೇಕ ತೆರನ ಅಭಿಪ್ರಾಯ; ತಕರಾರುಗಳಿವೆ. ಆದರೆ, ಅದು ಕನ್ನಡದ ಪ್ರಮುಖ ಬೌದ್ಧಿಕ ಕೇಂದ್ರಗಳಲ್ಲೊಂದು ಎಂಬುದು ಮಾತ್ರ ನಿರ್ವಿವಾದದ ಸಂಗತಿ. ಅದರ ಕೇಂದ್ರ ನಾಟಕ ಶಾಲೆಯಾದರೂ, ವರ್ಷದುದ್ದಕ್ಕೂ ಅದರ ಸುತ್ತ ನಡೆಯುವ ಚರ್ಚೆ, ಶಿಬಿರ, ನಾಟಕ, ಸಿನಿಮಾ ಪ್ರದರ್ಶನ,

('ಮಾತುಕತೆ') ಪತ್ರಿಕೆ ಮತ್ತು ('ಅಕ್ಷರ') ಪುಸ್ತಕ ಪ್ರಕಾಶನ ಮುಂತಾದ ಚಟುವಟಿಕೆಗಳು ಕನ್ನಡದ ಒಟ್ಟಾರೆ ಬೌದ್ಧಿಕತೆಯನ್ನು ಗಾಢವಾಗಿ ಪ್ರಭಾವಿಸುತ್ತಿವೆ. ಬಹುಶಃ ಇದೇ ಕಾರಣದಿಂದಾಗಿಯೇ ಅದು ತನ್ನ ವ್ಯಾಪಕ ಅಭಿಮಾನಿ ಬಳಗದ ಜೊತೆಗೇ ಹಲವು ನೆಲೆಗಳ ಅಸಮಧಾನ, ಬಿನ್ನಾಭಿಪ್ರಾಯ ಮತ್ತು ವಿರೋಧಗಳನ್ನೂ ಆಹ್ವಾನಿಸುತ್ತಿದೆಯೆಂದು ಕಾಣುತ್ತದೆ. ಅದು ಕಟ್ಟಲೆಳಸುತ್ತಿರುವ–ವಿಶೇಷವಾಗಿ ಕೆ.ವಿ.ಸುಬ್ಬಣ್ಣನವರ ನಂತರ ಅವರ ಮಗ ಕೆ.ವಿ. ಅಕ್ಷರ ಅವರ ಸುಪರ್ದಿಯಲ್ಲಿ–ಬೌದ್ಧಿಕತೆ ಕನ್ನಡದ ಇಂದಿನ ಜನಪ್ರಿಯ ಬೌದ್ಧಿಕ ತರಂಗಾಂತರಗಳಿಗಿಂತ ವಿಭಿನ್ನ ನೆಲೆಗಳದ್ದಾಗಿರುವುದೂ ಇದಕ್ಕೆ ಕಾರಣವಾಗಿರಬಹುದು. ಮುಖ್ಯವಾಗಿ ಮೇಲೆ ಪ್ರಸ್ತಾಪಿಸಿದ ವಾರ್ಷಿಕ 'ಸಂಸ್ಕೃತಿ ಶಿಬಿರ'ದ ಮೂಲಕ ಅದು ಆಯೋಜಿಸುವ ವಾಗ್ವಾದಗಳ ರೀತಿ–ನೀತಿಗಳೆರಡರ ಬಗ್ಗೆಯೂ ಹಲವು ತಕರಾರುಗಳಿವೆ. ಹೋದ ವರ್ಷ ನಾನೇ ಅಕ್ಷರ ಅವರ ಆಹ್ವಾನದ ಮೇರೆಗೆ ಅದರ ನಿರ್ದೇಶಕರ ಮಂಡಳಿಯ ಸಭೆಗೆ ಹೋಗಿ ಈ ಬಗ್ಗೆ ಮಾತನಾಡಿದ್ದೆ. (ಇದರ ಬರಹ ರೂಪವನ್ನು ನನ್ನ 'ಕನ್ನಡದ ಮನಸ್ಸು ಮತ್ತು ಇತರ ಲೇಖನಗಳು' ಪುಸ್ತಕದಲ್ಲಿ ನೋಡಬಹುದು.) ನೀನಾಸಂ ಹುಟ್ಟು ಹಾಕುವ ಚರ್ಚೆ ಆಕಾಶದಲ್ಲೇ ತೇಲಾಡುವಂತಿರುತ್ತಿದ್ದು, ಅದು ಸ್ವಲ್ಪ ಭೂಮಿಗೂ ಇಳಿದು ಬರಬೇಕು ಎಂಬುದು ನನ್ನ ಮುಖ್ಯ ತಕರಾರಾಗಿತ್ತು.

ಈ ಬಾರಿಯ ಶಿಬಿರಕ್ಕೆ (ಅಕ್ಟೋ.೧೩–೧೯) ಒಂದು ದಿನದ ಮಟ್ಟಿಗೆ ನಾನು ಹೋಗಿದ್ದಾಗ ಸುಮಾರು ಇದೇ ಮಾತನ್ನು ಅಕ್ಷರ ಅವರೊಂದಿಗೆ ಆಡಿದೆ. ಕಾರಣ, ಈ ಬಾರಿಯ ಶಿಬಿರದ 'ಸಂಪ್ರದಾಯಗಳೊಂದಿಗೆ ಸಹಬಾಳ್ವೆ' ವಿಷಯದ ಬಗ್ಗೆ ಅಂದು ನಾನು ಕೇಳಿದ ಚರ್ಚೆಗಳು ಕೂಡ ಆಕಾಶಮಯವೇ ಆಗಿದ್ದವು. ಉಳಿದ ದಿನಗಳ ಚರ್ಚೆಗಳನ್ನು ಕುರಿತ ಪತ್ರಿಕಾ ವರದಿಗಳನ್ನು (ಮತ್ತು ಅಲ್ಲಿಗೇ ವಿವಿಧ ದಿನಗಳಂದು ಹೋಗಿದ್ದ ನನ್ನ ಗೆಳೆಯರ ಮಾತುಗಳನ್ನು) ಆಧರಿಸಿ ಹೇಳುವುದಾದರೆ, ಶಿಬಿರದ ಉದ್ಘಾಟನೆ ಮಾಡಿದ ಯು.ಆರ್. ಅನಂತಮೂರ್ತಿ ಮತ್ತು ಆನಂತದ ದಿನಗಳಲ್ಲಿ ಮಾತನಾಡಿದ ಗೋಪಾಲ್ ಗುರು ಹಾಗೂ ಲಕ್ಷೀಶ ತೋಳ್ಪಾಡಿಯವರು ವಿಷಯದ ಪರಿಧಿಯಲ್ಲಿ ಓಡಾಡಿದ್ದರ ಹೊರತಾಗಿ ಮತ್ತಾರೂ ವಿಷಯದ ಒಡಲಿಗೆ ಇಳಿಯುವುದಿರಲಿ, ಅದರ ನಾಡಿಯನ್ನೂ ಮುಟ್ಟಿ ನೋಡುವ ಪ್ರಯತ್ನ ಮಾಡಿದಂತೆ ಕಾಣಲಿಲ್ಲ. ಯಾವ ನಿರ್ದಿಷ್ಟ ಸಂಪ್ರದಾಯ ಮತ್ತು ಸಂಬಂಧಪಟ್ಟ ಆಚರಣೆಗಳ ತಂಟೆಗೂ ಹೋಗದೆ, ಅದನ್ನು 'ಪರಂಪರೆ' ಎಂಬ ಅರ್ಥದ ಚೌಕಟ್ಟಿನಲ್ಲಷ್ಟೇ ಮಡಿ ಮಡಿಯಾಗಿ ಉಳಿಸಿಕೊಂಡು, ಚರ್ಚೆಯು ಭಾಷೆ–ಸಾಹಿತ್ಯ–ಸಂಸ್ಕೃತಿಗಳ ಸ್ಥೂಲ ನೆಲೆಗಳಲ್ಲಷ್ಟೇ ಗಿರಕಿ ಹೊಡೆಯುತ್ತಾ ನಿರಾಶೆ ಹುಟ್ಟಿಸಿತೆಂದೇ ಹೇಳಬೇಕು. ನಮ್ಮ ಸಂಪ್ರದಾಯ ಮತ್ತು ಆಚರಣೆಗಳೊಂದಿಗೆ ಸಜೀವವಾಗಿ ಬೆಸೆದುಕೊಂಡ ಧರ್ಮ–ಧರ್ಮಶಾಸ್ತ್ರಗಳ ನೆಲೆಗೆ ಚರ್ಚೆ ತಲುಪಲೇ ಇಲ್ಲ. 'ರಿಸ್ಕ್' ತೆಗೆದುಕೊಳ್ಳಬೇಕಾದ ಭಯವೇ?

ಅಕ್ಷರ ಅವರೇನೋ ನನ್ನ ಬಳಿ ಈ ಬಗ್ಗೆ ಮಾತನಾಡುತ್ತಾ, ತಮ್ಮದು

ಯಾವುದೇ ಸಾಮಾಜಿಕ ಪಾಠ ಹೇಳುವ ಅಥವಾ ಸರಿ–ತಪ್ಪುಗಳ ತೀರ್ಪು ನೀಡುವ ಪ್ರಯತ್ನವಾಗಿರದೆ (ಹಾಗೆ ನೋಡಿದರೆ 'ಸಂಪ್ರದಾಯಗಳೊಂದಿಗೆ ಸಹಬಾಳ್ವೆ' ಎಂಬ ಶೀರ್ಷಿಕೆಯೇ ಒಂದು ಪಾಠ ಅಥವಾ ತೀರ್ಪಿನಂತಿದೆಯಲ್ಲವೇ?), ಮೂಲತಃ ಗಂಭೀರ ಅರ್ಥದಲ್ಲಿ ಶಿಬಿರಾರ್ಥಿಗಳ ವ್ಯಕ್ತಿತ್ವ ವಿಕಸನದ ಪ್ರಯತ್ನವಾಗಿದೆ ಎಂದರು. ಆದರೆ ನಿರ್ದಿಷ್ಟತೆಯನ್ನು, ಮೂರ್ತಗಳನ್ನು ಮುಟ್ಟದ ಸಾರ್ವತ್ರಿಕತೆ ಅಥವಾ ಅಮೂರ್ತತೆಯು ವ್ಯಕ್ತಿತ್ವ–'ವಿಕಸನ'ವೆಂಬ ಪ್ರಕ್ರಿಯೆಯನ್ನೇ ಸ್ಥೂಲಗೊಳಿಸಿ ಅದರ ಮೂಲೋದ್ದೇಶವನ್ನೇ ಭಂಗಗೊಳಿಸುವುದಲ್ಲವೇ ಎಂಬದರ ಬಗ್ಗೆ ಅವರು ಯೋಚಿಸಿಲ್ಲವೇಕೆ ಎಂದು ಆಶ್ಚರ್ಯವಾಯಿತು. ದೇಹಕ್ಕಾಗಲೀ, ಆತ್ಮಕ್ಕಾಗಲೀ ತಾಗದೆ ಬರೀ ಬುದ್ಧಿಗೆ ಆಹಾರವಾಗುವಂತಹ ಚರ್ಚೆಗಳು ಯಾವ ಪುರುಷಾರ್ಥಕ್ಕೆ? ಅವು ನೀನಾಸಂ ಗಡಿ ದಾಟುತ್ತಿದ್ದಂತೆಯೇ ಮರೆತುಹೋಗುವುವು. ವೈಯುಕ್ತಿಕ ನೆಲೆಯ 'ರಿಸ್ಕ್' ತೆಗೆದುಕೊಳ್ಳಲಾಗದ ಯಾವ ಸಮೂಹ ಕ್ರಿಯೆಯೂ (ನಮ್ಮ ಎಲ್ಲ ಸಾಂಪ್ರದಾಯಿಕ ಆಚರಣೆಗಳಂತೆಯೇ) ಸಾರ್ಥಕ(ಸ+ಅರ್ಥ)ವೆನಿಸಲಾರವೇನೋ ಎಂಬುದು ನನ್ನ ಅನುಮಾನ. ಇತ್ತೀಚೆಗೆ ಎನ್. ಆರ್. ನಾರಾಯಣ ಮೂರ್ತಿ ಮತ್ತು ಮೋಹನದಾಸ ಪೈ ಅವರಂತಹ ಹಣದ ಮೂಟೆಗಳು ಬೌದ್ಧಿಕ ಮೂಟೆಗಳ ರೂಪದಲ್ಲಿ ಈ ಶಿಬಿರದಲ್ಲಿ ಹಾಜರಾಗುತ್ತಿರುವುದು ಈ ಅನುಮಾನವನ್ನು ಇನ್ನಷ್ಟು ಜಟಿಲಗೊಳಿಸುತ್ತಿದೆಯಷ್ಟೆ.

ಅನಂತಮೂರ್ತಿಯವರ ಭೀಷ್ಮರೂಪ!

ಅದಿರಲಿ, ಈ ಬಾರಿ ನೀನಾಸಂ ಶಿಬಿರಕ್ಕೆ ನಾನು ಇನ್ನೊಂದು ಮುಖ್ಯ ಉದ್ದೇಶದಿಂದಲೂ ಹೋಗಿದ್ದೆ. ಕೆಲವು ದಿನಗಳ ಹಿಂದೆ ಅನಂತಮೂರ್ತಿಯವರೊಂದಿಗೆ ದೂರವಾಣಿಯಲ್ಲಿ ಮಾತನಾಡಿದ್ದಾಗ, ಅವರ ಧ್ವನಿಯಲ್ಲಿನ ಆತಂಕಮಯವಾದ ದುರ್ಬಲತೆಯನ್ನು ಗುರುತಿಸಿದ್ದ ನಾನು ಅವರನ್ನು ಕಾಣಬೇಕೆಂದೇ ಹೆಗ್ಗೋಡಿಗೆ ಹೋಗಿದ್ದೆ. ಕಂಡು ನನ್ನ ಅತಂಕ ಕಡಿಮೆಯಾಯಿತು. ಅವರು ಎಂದಿನಂತೆ ಗೆಲುವಾಗಿಯೇ ಇದ್ದರು. ಹಿಂದಿನ ದಿನದ ಅವರ ಉದ್ಘಾಟನಾ ಭಾಷಣ ತುಂಬ ಉಜ್ವಲ ಮತ್ತು ಪ್ರಭಾವಶಾಲಿಯಾಗಿತ್ತೆಂಬ ನನ್ನ ಗೆಳೆಯರೊಬ್ಬರ ಮಾತಿಗೆ ಸಾಕ್ಷಿಯೆಂಬಂತೆ ಅವರು ನಾನು ಮತ್ತು ನನ್ನ ಪತ್ನಿಯೊಂದಿಗೆ ಅದೇ ಪ್ರೀತಿ–ವಿಶ್ವಾಸ–ಉತ್ಸಾಹಗಳೊಂದಿಗೆ ಮಾತನಾಡಿದರು. ಒಂದೇ ವ್ಯತ್ಯಾಸವೆಂದರೆ ಈ ಬಾರಿ ನನ್ನ ಎದುರಿಗಿದ್ದ ಅನಂತಮೂರ್ತಿಯವರು ಎಷ್ಟು ಹಿರಿಯರಾಗಿ ಭೀಷ್ಮರೂಪದಲ್ಲಿ ಕಂಡರೆಂದರೆ, ನಾನು ಯೋಚಿಸುವ ಮುನ್ನವೇ ನಾನು ಮತ್ತು ನನ್ನ ಪತ್ನಿ ಅವರ ಕಾಲಿಗೆರಗಿ ಆಶೀರ್ವಾದ ಪಡೆದಿದ್ದೆವು! ಅವರ ವ್ಯಕ್ತಿತ್ವದ ಹಲವು ಸಡಿಲ ತುದಿಗಳೇನೇ ಇರಲಿ, ಅನಂತಮೂರ್ತಿಯವರು ನಮ್ಮ ಕಾಲದ ಕನ್ನಡದ ಬಹು ದೊಡ್ಡ ಶಕ್ತಿಯೇ ಹೌದು.

●

ಡಿಸೆಂಬರ್, ೨೦೧೩

ಒಂದು ಕಾದಂಬರಿಯೂ, ಒಂದು ನಾಟಕವೂ

೧. ತೇಜಸ್ವಿಯವರ 'ಕಾಡು ಮತ್ತು ಕ್ರೌರ್ಯ'

ಅಪ್ರಕಟಿತ ಕಾದಂಬರಿಯೆಂದು ಹೇಳಲಾದ 'ಕಾಡು ಮತ್ತು ಕ್ರೌರ್ಯ'ವನ್ನು ಪ್ರಕಾಶಕರಾದ ಬಿ.ಎಸ್. ಶ್ರೀರಾಮ್ ಅವರು ನನಗೆ ಕಳಿಸಿ ಒಂದು ತಿಂಗಳು ಮೇಲಾಗುತ್ತಾ ಬಂದಿದ್ದರೂ, ಅದನ್ನು ಈವರೆಗೆ ಓದಿ ಮುಗಿಸಲಾಗಿರಲಿಲ್ಲ. ನಾಲ್ಕಾರು ಬಾರಿ ಪ್ರಯತ್ನಿಸಿ ನಾಲ್ಕಾರು ಪುಟಗಳಷ್ಟಕ್ಕೇ ಓದು ನಿಂತು ಹೋಗುತ್ತಿತ್ತು. ಆದರೆ ಮೊನ್ನೆ ತೇಜಸ್ವಿ ಕೃತಿಯೆಂದು ಹಠ ಮಾಡಿ ಕೂತು ಓದಿ ಮುಗಿಸಿದೆ. ಅದರ ಆಯಾಸ ಪರಿಹಾರ ರೂಪದಲ್ಲಿ ಈ ಟಿಪ್ಪಣಿ ಬರೆಯುತ್ತಿರುವೆ.

ಪ್ರಕಾಶಕರ ಮಾತುಗಳಲ್ಲಿ ಹೇಳಿರುವಂತೆ ಈ ಕಾದಂಬರಿಯನ್ನು ನವ್ಯ ಚಳುವಳಿಯ ಉಚ್ಛ್ರಾಯ ಕಾಲದಲ್ಲಿ -೧೯೬೨ರಲ್ಲಿ- ಬರೆಯಲಾಗಿತ್ತಂತೆ. ಅದು ತೇಜಸ್ವಿಯವರ ಬರವಣಿಗೆಯ ಬದುಕಿನ ಆರಂಭಿಕ ವರ್ಷಗಳು ಕೂಡ. ಈ ಎರಡೂ ಸಂಗತಿಗಳ ದಟ್ಟ ಸಾಕ್ಷ್ಯಗಳು ಈ ಕೃತಿಯನ್ನು ಓದುತ್ತಿರುವಾಗ ಹಲವು ರೂಪಗಳಲ್ಲಿ ನಮಗೆ ಎದುರಾಗುತ್ತವೆ. ನನ್ನ ಪ್ರಕಾರ ಕನ್ನಡದಲ್ಲಿ ನವ್ಯ ಎಂದರೆ- ಅದರ ಹಲವು ಆವೃತ್ತಿಗಳಿವೆಯೆಂಬುದು ನಿಜವಾದರೂ- ಶೇ. ೮೦ ಪಾಶ್ಚಿಮಾತ್ಯ ಸಾಹಿತ್ಯ ಮತ್ತು ಚಿಂತನೆಯ ಓದು ಮತ್ತು ಅದು ಹುಟ್ಟಿಸುವ ಆಲೋಚನಾ ಲಹರಿಯ ಚಕ್ರವ್ಯೂಹ ಹಾಗೂ ಶೇ. ೨೦ ನಿಜ ಬದುಕಿನ ಅನುಭವ. ನವ್ಯ ಕೃತಿಗಳೆಂದರೆ, ಈ ಓದು ಮತ್ತು ಆಲೋಚನಾ ವ್ಯೂಹಕ್ಕೆ ಬದುಕಿನ ಅನುಭವಗಳ ಸ್ಫೂರ್ತಿಯಲ್ಲಿ ವಿನ್ಯಾಸ ಕೊಡುವ

ಕಸರತ್ತು. ತೇಜಸ್ವಿಯವರ ಈ ಕೃತಿ ಕೂಡ ಅಂತಹ ಒಂದು ಕಸರತ್ತು. ಅದೂ ಹಸಿ ಹಸಿಯಾದ ಬರವಣಿಗೆಯ ಕಸರತ್ತು. ಇಲ್ಲಿ ಪ್ರೇಮ ಕೂಡ ಬೌದ್ಧಿಕ ಕ್ರಿಯೆಯಾಗಲು ಹವಣಿಸುತ್ತಾ ಸುಸ್ತಾಗುವುದನ್ನು ನಾವು ನೋಡುತ್ತೇವೆ. ಒಂದೇ ವ್ಯತ್ಯಾಸವೆಂದರೆ, ಬಹಳಷ್ಟು ನವ್ಯ ಕೃತಿಗಳಿಗೆ ನಗರ ಜೀವನ ಹಿನ್ನೆಲೆಯಾಗಿ ಬಂದಿದ್ದರೆ, ಇದರಲ್ಲಿ ಕಾಡು, ಕಾಡು ಜನ ಮತ್ತು ಬೇಟೆ ಹಿನ್ನೆಲೆಯಾಗಿ ಬಂದಿವೆ. ಅವೆಲ್ಲ ಇಲ್ಲಿ ಸಂಕೇತ-ಧ್ವನಿ-ರೂಪಕಗಳಾಗಲು ಹೆಣಗಿ ಸುಸ್ತಾಗುತ್ತವೆ. ನಮ್ಮನ್ನೂ ಸುಸ್ತು ಮಾಡುತ್ತವೆ.

ನನಗನ್ನಿಸುತ್ತದೆ, ನವ್ಯ ಎನ್ನುವುದು ಇಂಗ್ಲಿಷ್ ಮೇಷ್ಟ್ರುಗಳಿಗೆ ಮಾತ್ರ-ಅದೂ ಒಂದಿಷ್ಟು ಪಾಶ್ಚಿಮಾತ್ಯ ಸಾಹಿತ್ಯ ಮತ್ತು ಚಿಂತನೆಗಳನ್ನು ಓದಿಕೊಂಡವರಿಗೆ (ಜೀರ್ಣಿಸಿಕೊಳ್ಳುವುದು ಬೇರೆ ವಿಷಯ) -ಒದಗಬಲ್ಲುದಾಗಿದ್ದ ಸಾಹಿತ್ಯ ಮಾರ್ಗವಾಗಿತ್ತು. ಕೆಲವು ಕನ್ನಡ ಮೇಷ್ಟ್ರುಗಳು ಈ ಶೈಲಿಯಲ್ಲಿ ಬರೆದ ಕಥೆ, ಕಾದಂಬರಿ, ಕವನ, ವಿಮರ್ಶೆಗಳ ಪಡಿಪಾಟಲುಗಳನ್ನು ನೋಡಿದರೆ ಇದು ಹೆಚ್ಚು ಸ್ಪಷ್ಟವಾದೀತು. ಒಂದಷ್ಟು ಜನ (ನಾನೂ ಸೇರಿದಂತೆ) ನವ್ಯ ಕೃತಿಗಳನ್ನು ಮೆಚ್ಚಿಕೊಂಡಿದ್ದರೆ ಅದಕ್ಕೆ ಅವರೂ ಆ ಲೇಖಕರಂತೆಯೇ ಒಂದಿಷ್ಟು ಪಾಶ್ಚಿಮಾತ್ಯ ಸಾಹಿತ್ಯ ಮತ್ತು ಚಿಂತನೆಗಳನ್ನು ಓದಿಕೊಂಡು, ಒಂದಿಷ್ಟು ಮನಸ್ಸು 'ಬಿಸಿ' ಮಾಡಿಕೊಂಡಿದ್ದೇ ಕಾರಣವಿರಬಹುದು. ಇದು ನವ್ಯ ಸಾಹಿತ್ಯವನ್ನು ಕುರಿತ ನನ್ನ ಇಡಿಯಾದ ವಿಮರ್ಶೆಯ ಮಾತುಗಳಲ್ಲ ಎಂಬುದನ್ನೂ ಇಲ್ಲಿ ಹೇಳಬೇಕು.

ಅದೇನೇ ಇರಲಿ, ಮೂಲತಃ ಅಸಲಿ ಬರಹಗಾರರಾದ ತೇಜಸ್ವಿ ಇದನ್ನು ಆದಷ್ಟು ಬೇಗ ಅರಿತುಕೊಂಡು (ಅದೇ ಒಂದು ಆಧುನಿಕ ಕನ್ನಡ ಸಾಹಿತ್ಯ ಮೀಮಾಂಸೆಯ ಪ್ರಸ್ಥಾನವಾದದ್ದು ಬೇರೆ ವಿಷಯ) ಜಾಡು ಬದಲಿಸಿದರು. ಜೊತೆಯಲ್ಲೇ ಕನ್ನಡ ಸಾಹಿತ್ಯದ ಜಾಡನ್ನೂ ಬದಲಿಸಿದರು. ನವ್ಯ ತನ್ನ ಅಥೆಂಟಿಸಿಟಿಯನ್ನು ಗಳಿಸಿಕೊಂಡದ್ದು ಈ ಸ್ಥಿತ್ಯಂತರ ಘಟ್ಟ ಮತ್ತು ರೂಪಗಳಲ್ಲೇ. ಆದರೆ ಇದೆಲ್ಲ ಆದ ಎಷ್ಟೋ ವರ್ಷಗಳ ನಂತರ ಈ ಕೃತಿಯನ್ನು-ತಮ್ಮ ಜೀವಂತ ಕಾಲದಲ್ಲಿ ತೇಜಸ್ವಿ ಇದನ್ನು ಪ್ರಕಟಿಸಲು ಸ್ಪಷ್ಟವಾಗಿ ನಿರಾಕರಿಸಿದ್ದರೂ-ಪ್ರಕಟಿಸಿರುವುದು ಏಕೋ ತಿಳಿಯದಾಗಿದೆ. ಚರಿತ್ರೆಯ ದಾಖಲೆಯಾಗಿ? ಬಹುಶಃ ಈ ಪುಸ್ತಕಕ್ಕಾಗಿ ಕೆ.ಟಿ. ಶಿವಪ್ರಸಾದ್ ರೇಖಿಸಿರುವ ಅನನ್ಯ ಚಿತ್ರಗಳು ಮಾತ್ರ ಇದನ್ನು ದಾಖಲೆಯಾಗಿ ಕಾಪಾಡಬಲ್ಲುದು..

೨. ಗಿರಿಬಾಲೆ: ಒಂದು ಏಕವ್ಯಕ್ತಿ ಪ್ರದರ್ಶನ

ಇದು 'ಗಿರಿಬಾಲೆ' ಎಂಬ ಕಾವ್ಯನಾಮದೊಂದಿಗೆ ಬರೆದ ಸರಸ್ವತಿಬಾಯಿ ರಾಜವಾಡೆಯವರ ಜನ್ಮಶತಮಾನೋತ್ಸವ ವರ್ಷ. ಇದರ ಅಂಗವಾಗಿ ಕೆ.ಜಿ. ಕೃಷ್ಣಮೂರ್ತಿಯವರ ನೇತೃತ್ವದ ತುಮರಿಯ 'ಕಿನ್ನರ ಮೇಳ' ತಂಡವು 'ಗಿರಿಬಾಲೆ'ಯವರ ಜೀವನದ ನೆನಪುಗಳ ದಾಖಲೆಯಾಗಿರುವ ವೈದೇಹಿಯವರ 'ಮುಂತಾದ ಪುಟಗಳು' ಕೃತಿಯನ್ನು ಆಧರಿಸಿ ಒಂದು ಏಕವ್ಯಕ್ತಿ ಪ್ರದರ್ಶನವನ್ನು ರೂಪಿಸಿ ಪ್ರಯೋಗಿಸುತ್ತಿದ್ದಾರೆ. ಅಂತಹ ಒಂದು ಪ್ರದರ್ಶನ ಮೊನ್ನೆ ಶಿವಮೊಗ್ಗದ

ಕರ್ನಾಟಕ ಸಂಘದ ೮೩ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಏರ್ಪಾಟಾಗಿತ್ತು. ನಿರ್ದೇಶನ, ಬಿ.ಆರ್. ವೆಂಕಟರಮಣ ಐತಾಳರದ್ದು.

ಉಡುಪಿಯ ಕಡುಬಡತನದ ಕುಟುಂಬವೊಂದರಲ್ಲಿ ಹುಟ್ಟಿದ ಸರಸ್ವತಿಬಾಯಿ ರಾಜವಾಡೆಯವರು ಬಾಲ್ಯದಲ್ಲಿ ಪಡಬಾರದ ಪಾಡುಪಟ್ಟು, ಯಾರ ಕಣ್ಣಿಗೋ ಬಿದ್ದು ನಾಟಕ, ಸಿನಿಮಾಗಳಲ್ಲಿ ಬಾಲನಟಿಯಾಗಿ, ಆರ್ಕೆಸ್ಟ್ರಾವೊಂದರಲ್ಲಿ ಯುವ ಗಾಯಕಿಯಾಗಿ ಅಲೆಮಾರಿ ಬದುಕು ನಡೆಸಿದರು. ಅದರ ಮಧ್ಯೆಯೇ ಕಲೆಕ್ಟರನನ್ನು ಮದುವೆಯಾಗುವ ವಿಚಿತ್ರ ಆಸೆ ತಳೆದು, ಆಕಸ್ಮಿಕವೆಂಬಂತೆ ಅದು ಫಲಿಸಿಯೂ ಬಿಟ್ಟಿತು. ಆದರೆ ಅದರಲ್ಲಿ–ಗಂಡ ತುಂಬ ವಯಸ್ಸಾದವನಾಗಿ–ಬಹುಶಃ ಸಂಸಾರ ಸುಖವೊಂದನ್ನು ಬಿಟ್ಟು ಇನ್ನೆಲ್ಲ ವೈಭೋಗ ಅನುಭವಿಸಿದರು. ಇಂತಹ ಬದುಕಿನ ಒತ್ತಡಗಳಿಂದ ಬಿಡುಗಡೆಯ ಮಾರ್ಗವಾಗಿ ಅವರು ಸಾಹಿತ್ಯ ರಚನೆಯಲ್ಲಿ ತೊಡಗಿ, ಪತ್ರಿಕೆಯೊಂದನ್ನು ನಡೆಸಿ, ಕೊನೆಗೆ ಗಂಡನನ್ನು ಕಳೆದುಕೊಂಡ ನಂತರ ತನ್ನ ಹುಟ್ಟೂರು ಉಡುಪಿಗೆ ಹಿಂದಿರುಗಿದರು. ಅಲ್ಲಿ ಗಂಡನ ಆಸೆ ನೆರವೇರಿಸಲು ಶಾರದಾ ದೇವಸ್ಥಾನವನ್ನು ಸ್ಥಾಪಿಸಿ ತೀವ್ರ ದೈವ ಶ್ರದ್ಧೆಯಲ್ಲಿ ಮುಳುಗಿ ಎಂಭತ್ತರ ದಶಕದಲ್ಲಿ ಅಸು ನೀಗಿದರು. ಬದುಕು ಇದಕ್ಕಿಂತ ಹೆಚ್ಚು ನಾಟಕೀಯವಾಗಿರಲಾರದು.

ಈ ಏಕವ್ಯಕ್ತಿ ಪ್ರದರ್ಶನ, ಈ ಎಲ್ಲ ನಾಟಕೀಯತೆಯ ಹಿಂದೆ ಅಡಗಿರುವ ಹೆಣ್ಣೊಬ್ಬಳು ತಾನೇ ನಿರ್ದೇಶಿಸಿಕೊಂಡು ನಡೆಸಿದ ಬದುಕಿನ ಆಳದ ಪಿಸು ಮಾತುಗಳನ್ನು ನಮ್ಮ ಅಂತಃಕರಣಕ್ಕೆ ಮುಟ್ಟಿಸುತ್ತದೆ. ಒಂದೆರಡು ಕುರ್ಚಿಗಳು, ಒಂದು ದೀಪ, ಒಂದೆರಡು ಹೂ ಕಟ್ಟುವ ತಟ್ಟೆಗಳು –ಇಷ್ಟು ಸರಳ ರಂಗಸಜ್ಜಿಕೆಯೊಂದಿಗೆ ಈ ಪ್ರಯೋಗ ಒಂದು ತಾಸು ನಮ್ಮನ್ನು ಹಿಡಿದಿಡುತ್ತದೆಂದರೆ, ಅದಕ್ಕೆ ರಾಜವಾಡೆಯವರು ಏನೂ ಆಗಿಲ್ಲವೇನೋ ಎಂಬಂತೆ ತಮ್ಮ ಬದುಕಿನ ಏನೆಲ್ಲವನ್ನೂ ಹೇಳಿರುವ ಹದ, ವೈದೇಹಿಯವರು ಆ ಹದ ತಪ್ಪದಂತೆ ಅದನ್ನು ದಾಖಲು ಮಾಡಿರುವ ರೀತಿಗಳಷ್ಟೇ ಅಲ್ಲದೆ, ಅದು ರಂಗದ ಮೇಲೆ ಬಂದಾಗಲೂ ಆ ರಂಗ ಸಂಭ್ರಮದಲ್ಲಿ ಹದಗೆಡದಂತೆ ಅದನ್ನು ಸಾಕ್ಷಾತ್ಕರಿಸಿರುವ ಸುಶೀಲಾ ಕೆಳಮನೆಯವರ ವಾಚಿಕಾಭಿನಯ ಪ್ರತಿಭೆಯೂ ಕಾರಣವಾಗಿದೆ. ಸುಶೀಲಾ ಅವರು ಇಲ್ಲಿ ಏಕವ್ಯಕ್ತಿಯಾಗಿ ಉಳಿಯದೆ ನೋಡುಗರಾದ ನಮ್ಮನ್ನೂ ರಂಗದ ಮೇಲೆ ಕರೆದು ಕೂರಿಸಿಕೊಂಡು ಬಿಡುತ್ತಾರೆ. ಈ ಪ್ರದರ್ಶನದ ಒಂದೇ ದೌರ್ಬಲ್ಯವೆಂದರೆ ಅನಗತ್ಯವಾಗಿ ಕಿವಿ ಮೇಲೆ ಬಿದ್ದು ನಾಟಕದ ಹದ ತಪ್ಪಿಸಲು ಪ್ರಯತ್ನಿಸುವ ಸಂಗೀತ. ಇದನ್ನು ಬಿಟ್ಟರೆ ಇದು ಐತಾಳರ ಇನ್ನೊಂದು ಸಾರ್ಥಕ ಪ್ರಯೋಗ.

●

ಜನವರಿ, ೨೦೧೪

ರಂಗಾಯಣದ ಎರಡು ವಿಶಿಷ್ಟ ಪ್ರಯೋಗಗಳು: ಸದಾರಮೆ ಮತ್ತು ಚಿರೇಬಂದಿ ವಾಡೆ

ಬೆಳ್ಳಿ ಹಬ್ಬವನ್ನು ಆಚರಿಸಿಕೊಳ್ಳುತ್ತಿರುವ ಮೈಸೂರಿನ ರಂಗಾಯಣ, ಅದರ ಅಂಗವಾಗಿ ಇತ್ತೀಚೆಗೆ ಶಿವಮೊಗ್ಗದಲ್ಲಿ ತನ್ನ ನಾಲ್ಕು ಪ್ರಯೋಗಗಳನ್ನು ಪ್ರದರ್ಶಿಸಿತು. ಅವುಗಳಲ್ಲಿ ಎರಡು ತಮ್ಮದೇ ವಿಶಿಷ್ಟ ಮತ್ತು ಅನನ್ಯ ಕಾರಣಗಳಿಂದಾಗಿ ಪ್ರೇಕ್ಷಕರ ವಿಶೇಷ ಗಮನ ಸೆಳೆದವು.

ಮೊದಲನೆಯದು, ಬೆಳ್ಳಾವೆ ನರಹರಿ ಶಾಸ್ತ್ರಿ ವಿರಚಿತ 'ಸದಾರಮೆ' ಎಂಬ ಕಂಪನಿ ನಾಟಕ. ಆ ಕಾಲದಲ್ಲೇ ನಮ್ಮ ರಾಮಾಯಣ-ಮಹಾಭಾರತಗಳನ್ನು ವಿರಚಿಸಿ ಅವನ್ನು ತಮ್ಮದೇ ರೀತಿಯಲ್ಲಿ ಸಮಕಾಲೀನಗೊಳಿಸುವ ಸಾಹಸ ಮಾಡಿ ನಮ್ಮ ಇವೊತ್ತಿನ ಪೋಸ್ಟ್ ಮಾಡ್ರನಿಸ್ಟರುಗಳಿಗಿಂತ ಹೆಚ್ಚು ಪೋಸ್ಟ್ ಮಾಡ್ರನಿಸ್ಟರಾಗಿದ್ದ ವೀರಣ್ಣನವರು ಬೆಳ್ಳಾವೆಯವರಿಂದ ಈ ಜಾನಪದ-ಸಾಮಾಜಿಕ ನಾಟಕವನ್ನು ಬರೆಸಿ ಕನ್ನಡ ರಂಗಭೂಮಿಯಲ್ಲಿ ಮಿತಿಯಿಲ್ಲದ ಮನರಂಜನೆಯ ಒಂದು ದೊಡ್ಡ ಕ್ರಾಂತಿಯನ್ನೇ ಮಾಡಿದ್ದರೆಂದು ಹೇಳಬಹುದು: ಶೀಟಿ ಹೊಡೆದೊಡನೆ ತೆರೆ ಮೇಲೆದ್ದು ಝುಗಮಗಿಸುವ ಬೆಳಕಿನಲ್ಲಿ ಬದಲಾಗುತ್ತಾ ಹೋಗುವ ವರ್ಣಮಯ ಸೀನರಿಗಳ ನಡುವೆ ಅರಮನೆ-ಶೆಟ್ಟರ ಮನೆ, ಕಾಡು-ಕಳ್ಳ ಎನ್ನದೆ ಕಾಲಿಲ್ಲದೆ ಓಡುವ ಈ ಕಥೆ ಸಮೃದ್ಧ ಸಂಗೀತ, ನೃತ್ಯ, ಹಾಸ್ಯ, ಶೃಂಗಾರಗಳೊಂದಿಗೆ ಒಂದು ನೆಲೆಯಲ್ಲಿ ಸ್ತ್ರೀ ಸಬಲೀಕರಣದ ಹೊಸ ಕಥೆಯನ್ನೂ ಹೇಳುವ ಸಾಹಸ ಮಾಡುತ್ತದೆ! ಇಲ್ಲಿ ಸೃಷ್ಟಿಸಲಾಗಿರುವ ಪ್ರಳಯಾಂತಕ ಕಳ್ಳನ ಪಾತ್ರ ಬಹುಶಃ ಭಾರತೀಯ ರಂಗಭೂಮಿಯಲ್ಲೇ ಸಾಟಿಯಿಲ್ಲದ್ದು!

ಕನ್ನಡ ರಂಗಭೂಮಿಯ ಪರಂಪರೆಯ ನೆನಪಿನಲ್ಲಿ ತಯಾರಾಗಿರುವ ಈ ತುಂಬು ಮನರಂಜನೆಯ ಪ್ರಯೋಗಕ್ಕಾಗಿ ರಂಗಾಯಣಕ್ಕೆ ಕೃತಜ್ಞತೆ ಸಲ್ಲಿಸಬೇಕಿದೆ. ಹಾಗೇ ಅದ್ಭುತ ಅಭಿನಯ ಪ್ರತಿಭೆಗೆ ಹೆಸರಾದ ಅದರ ನಟ–ನಟಿ ವರ್ಗದ ಗಾಯನ ಸಾಮರ್ಥ್ಯಕ್ಕೆ ಕೂಡ. ವಿಶೇಷವಾಗಿ ರಸಿಕ ಕಲಹಂಸನ ಪಾತ್ರದಲ್ಲಿನ ಪ್ರಶಾಂತ್ ಹಿರೇಮಠರಿಗೆ. ಆದರೆ ಮೂಲಕ್ಕೆ ಭಂಗ ತರುವ ರೀತಿಯಲ್ಲಿ ಅಗ್ಗದ ನೃತ್ಯದ ಸೇರ್ಪಡೆ, ಒಂದು ಸಮತೋಲನದಲ್ಲಿರುವ ಹಾಸ್ಯವನ್ನು ವಿಪರೀತಕ್ಕೊಯ್ಯುವ ಹೊಸ ಹಾಸ್ಯ (ಹಾಸ್ಯಾಸ್ಪದ?) ಪಾತ್ರವೊಂದರ ಸೃಷ್ಟಿ ಹಾಗೂ ನಾಟಕಕ್ಕೆ ಸಮಾಕಾಲೀನ ರಾಜಕಾರಣದ 'ಟಚ್' ಕೊಡುವ ಖಯಾಲಿಯಲ್ಲಿ ಸೇರಿಸಲಾಗಿರುವ 'ಜೋಕು'ಗಳು ರಂಗಾಯಣದ ಘನತೆಗೆ ಸಲ್ಲದವು.

ಇಷ್ಟಾದರೂ ಈ ನಾಟಕವನ್ನು ನಿರ್ದೇಶಿಸಿ ಸಂಗೀತವನ್ನೂ ಒದಗಿಸಿರುವ ಗುಬ್ಬಿ ಕಂಪನಿಯವರೇ ಆದ ವೈ.ಎಂ. ಪುಟ್ಟಣ್ಣಯ್ಯನವರ ಪ್ರಯತ್ನ ಬಹುವಾಗಿ ಸಾರ್ಥಕವಾಗಿದೆ ಎಂದೇ ಹೇಳಬಹುದು. ಆದರೆ ಒಂದು ಸಲಹೆ: ಈ ಪ್ರಯೋಗ ಹೊಸ ತಲೆಮಾರಿನ ಪ್ರೇಕ್ಷಕರ ನಡುವೆಯೂ ಯಶಸ್ವಿಯಾಗಬೇಕಾದರೆ ಇಂದಿಗೆ ವಿಪರೀತವೆನ್ನಿಸುವ ಹಾಡುಗಳ ಸಂಖ್ಯೆಗೆ ಕತ್ತರಿ ಹಾಕಬೇಕು.

ಇನ್ನು 'ಚಿರೇಬಂದಿ ವಾಡೆ' ಎಂಬ ಎರಡನೆಯ ಪ್ರಯೋಗ ಇದಕ್ಕೆ ಸಂಪೂರ್ಣ ಸಂವಾದಿಯಾದದ್ದು: ಒಳಗಿನ ಸತ್ವ ಮತ್ತು ಹೊರಗಿನ ಅಭಿವ್ಯಕ್ತಿ ರೂಪ ಎರಡರಲ್ಲೂ. ಇದು ಮಹೇಶ ಎಲ್‌ಕುಂಚವಾರ್ ಎಂಬುವವರು ಮರಾಠಿಯಲ್ಲಿ ಬರೆದಿರುವ ನಾಟಕವಂತೆ; ಮಾರುತಿ ಶಾನುಭಾಗ್ ಎಂಬುವವರು ಇದನ್ನು ಕನ್ನಡಕ್ಕೆ ತಂದಿದ್ದಾರಂತೆ. ಆದರೆ ಈ ನಾಟಕ ನಮ್ಮದೇ ನಾಟಕವಾಗಿ ಈ ಎಲ್ಲ ತಾಂತ್ರಿಕ ವಿವರಗಳನ್ನೂ ಹೊಡೆದು ಹಾಕಿಕೊಂಡು ನಮ್ಮ ಹೃದಯಕ್ಕೆ ನೇರ ಲಗ್ಗೆ ಹಾಕುತ್ತದೆ. ಅದು ಅಂತಿಂಥ ಲಗ್ಗೆಯಲ್ಲ. ನಾಟಕ ಮುಗಿಯುವುದರೊಳಗೆ ನಿಮ್ಮ ಕಣ್ಣೀರು ನಿಮ್ಮೊಳಗೇ ಬತ್ತಿ ಹೋಗಿರುತ್ತದೆ; ಇಂದಿನ ಹೊಸ ಸುಖಗಳ ಬದುಕು ಬೇಡುತ್ತಿರುವ ಬಲಿಗಳ ಅಸಹಾಯಕತೆಯನ್ನು ಒಳಹೊಕ್ಕು ನೋಡಿದ ಅನುಭವದಲ್ಲಿ ನಿಮ್ಮನ್ನು ತೀವ್ರ ವಿಷಣ್ಣತೆ ಆವರಿಸಿರುತ್ತದೆ. ಅದೂ ಯಾವ ವಿಚಾರ–ಉಪದೇಶಗಳ ಅಥವಾ ಯಾವುದೇ ವಿಶೇಷ ರಂಗ ತಂತ್ರಗಳ ಭಾರವಿಲ್ಲದೆ.

ಗೇಣಿ ರೈತರ ದುಡಿಮೆಯ ಮೇಲೆ ಸುಖವಾಗಿ ಬದುಕುತ್ತಿದ್ದ ಬ್ರಾಹ್ಮಣ ಜಮೀನ್ದಾರಿ ಕುಟುಂಬವೊಂದು ಹೊರಗಿನಿಂದ ಮತ್ತು ತನಗೇ ಗೊತ್ತಿಲ್ಲದಂತೆ ಒಳಗನಿಂದಲೂ ನುಗ್ಗಿದ ಆಧುನಿಕ ಬದುಕಿನ ಒತ್ತಡ ಮತ್ತು ಸೆಳೆತಗಳಿಗೆ ಸಿಕ್ಕಿ ಬಂಧನ ಮತ್ತು ಬಿಡುಗಡೆಗಳ ದ್ವಂದ್ವದಲ್ಲಿ ತೊಳಲಾಡುವ ಬದುಕಿನ ಚಿತ್ರ ಇಲ್ಲಿದೆ. ಇದು ಎಷ್ಟು ಸಾಮಾಜಿಕ ವಾಸ್ತವತೆಯಿಂದ ಕೂಡಿದೆಯೆಂದರೆ, ನಾಟಕ ಎಲ್ಲಿಯೋ ನಮಗೇ ಗೊತ್ತಿಲ್ಲದಂತೆ ಬ್ರಾಹ್ಮಣ ಕುಟುಂಬದ ಚೌಕಟ್ಟನ್ನು ಮೀರಿ ಅಲ್ಲಿ ನಾವು ನೋಡುತ್ತಿರುವುದು ನಮೆಲ್ಲರ ಇಂದಿನ ಬದುಕನ್ನೇ ಎನ್ನಿಸಿಬಿಡುತ್ತದೆ. ನಾಲ್ಕು ತಲೆಮಾರುಗಳನ್ನೂ ಅವುಗಳು ನಂಬಿದ ಮೌಲ್ಯಗಳನ್ನೂ, ಕಟ್ಟಿಕೊಂಡ ಭವಿಷ್ಯದ

ಆಶಯಗಳನ್ನೂ ಆ ತಲೆಮಾರುಗಳ ಜೀವಂತ ಪ್ರತಿನಿಧಿ ಪಾತ್ರಗಳ ಮೂಲಕ ಮುಖಾಮುಖಿಗೊಳಿಸುವ ಈ ನಾಟಕ ನಾವು ಇಂದು ಆಧುನಿಕವೆಂದು ಹೇಳಲಾಗುವ 'ಮೌಲ್ಯ'ಗಳ ಮರೆಯಲ್ಲಿ ರೂಪಿಸಿಕೊಳ್ಳುತ್ತಿರುವ ಬದುಕಿನ ಹೊಸ ಲಂಗರುಗಳ ತಾಳಿಕೆ-ಬಾಳಿಕೆಗಳ ಬಗ್ಗೆ ಪುನರಾಲೋಚಿಸುವಂತೆ ನಮಗೇ ಗೊತ್ತಾಗದಂತೆ ನಮ್ಮನ್ನು ಒತ್ತಾಯಿಸುತ್ತದೆ. ನಾಟಕವೊಂದು ಸಾರ್ಥಕವೆನ್ನಿಸಿಕೊಳ್ಳುಲು ಇನ್ನೇನು ಬೇಕು?

ಆದರೆ ಇದೆಲ್ಲ ಸಾಧ್ಯವಾಗಿರುವುದು ಅಪವಾದವಿಲ್ಲದಂತೆ ಮತ್ತು ಹಿರಿ ಕಿರಿಯ ಪಾತ್ರ ಎನ್ನದೆ ಎಲ್ಲ ನಟರ ಅಪ್ರತಿಮ ಅಭಿನಯದಿಂದಾಗಿ. ವಿಶೇಷವಾಗಿ ಉಲ್ಲೇಖಿಸಬೇಕಾದದ್ದು ಕುಟುಂಬದ ಹಿರಿಯ ಸೊಸೆ ಪಾತ್ರ ವಹಿಸಿದ್ದ ಸರೋಜಾ ಹೆಗಡೆಯವರ ತುಂಬಿಯೂ ತುಳಕದಂತಿರುವ ಸೂಕ್ಷ್ಮ ಸಮತೋಲನದ ಭಾವಾಭಿನಯವನ್ನು. ಇನ್ನು ಇಂತಹ ನಾಟಕವನ್ನು ನಿರ್ದೇಶಿಸಲು ಎಂಟೆದೆಯೇ ಬೇಕು. ಪ್ರಮೀಳಾ ಬೇಂಗ್ರೆಯವರ ಆಳದ ಪ್ರತಿಭೆಯೇ ಅವರಿಗೆ ಆ ಎಂಟೆದೆಯನ್ನು ಒದಗಿಸಿದಂತಿದೆ. ಒಂದೇ ಅಂಕದಲ್ಲಿ ನಡೆಯುವ ಈ ನಾಟಕಕ್ಕೆ ಎಚ್.ಕೆ. ದ್ವಾರಕಾನಾಥ್ ವಿನ್ಯಾಸ ಮಾಡಿರುವ ಮುರುಕು ವಾಡೆಯ ರಂಗ ಸಜ್ಜಿಕೆ ನಾಟಕದ ಜೀವಂತ ಭಾಗವೇ ಆಗುವಷ್ಟು ಸಾವಯವಾಗಿದೆ. ಬರೀ ಒಂದೆರಡು ಲಾಟೀನು ದೀಪಗಳನ್ನು ಬಳಸಿ ಹಗಲು-ರಾತ್ರಿಗಳ ಅನುಭವ ನಿರ್ಮಿಸಿರುವ ಬೆಳಕು ಸಂಯೋಜಕರ ಕುಶಲತೆಯಂತೂ ಅದ್ಭುತ.

ರಂಗಾಯಣಕ್ಕೆ ಅಭಿನಂದನೆಗಳು! ಅದರ ನಿರ್ದೇಶಕರಾಗಿರುವ ಜೆನ್ನಿಗೆ ಶುಭಾಶಯಗಳು!!

●

ಫೆಬ್ರುವರಿ, ೨೦೧೪

ಹೀಗೇ ಕೆಲವು ಬಿಡಿ ಟಿಪ್ಪಣಿಗಳು...

ಸಾಹಿತ್ಯದ ದುರ್ವಾಸನೆ!

ಇನ್ನೊಂದು ಸಾಹಿತ್ಯ ಸಮ್ಮೇಳನ ಮುಗಿದಿದೆ. ಐದಾರು ವರ್ಷಗಳ ಹಿಂದಿನ ಶಿವಮೊಗ್ಗ ಸಾಹಿತ್ಯ ಸಮ್ಮೇಳನದ ಕಾಲದಿಂದಲೂ ಸಮ್ಮೇಳನಾಧ್ಯಕ್ಷತೆಗೆ ಆಶೆಪಡುತ್ತಿದ್ದಂತೆ ಕಂಡ ಹಿರಿಯ ಗೆಳೆಯರಾದ ನಾ. ಡಿ'ಸೋಜಾ ಅವರು ಅದನ್ನೀಗ ಮನದುಂಬಿ ಅನುಭವಿಸಿ ಎಷ್ಟು ಸಂತೃಪ್ತರಾಗಿದ್ದಾರೋ ತಿಳಿಯೆ. ಏಕೆಂದರೆ, ಇವರ ಆಯ್ಕೆಯನ್ನು ಸಾಮಾಜಿಕ ನ್ಯಾಯಕ್ಕೆ ಸಂದ ಜಯ ಎಂದು ಪುಂಡಲೀಕ ಹಾಲಂಬಿ ಎಂಬ ಪರಿಷತ್ತಿನ ಹುಂಬ ಅಧ್ಯಕ್ಷ ವರ್ಣಿಸಿದ್ದರು. ಅದಕ್ಕೆ ತಕ್ಕಂತೆಯೇ ಅವರು ಸಮ್ಮೇಳನದಲ್ಲಿ ಅಧ್ಯಕ್ಷರ ಭಾಷಣ ಔಪಚಾರಿಕ ಮಾತ್ರವೆಂಬಂತೆ ಅದನ್ನು ಮೊಟಕುಗೊಳಿಸಲು ವೇದಿಕೆಯ ಮೇಲೇ ಸೂಚಿಸಿದರು. ಇಲ್ಲಿಂದ ಹಿಡಿದು ಕೊನೆಗೆ ಅಧ್ಯಕ್ಷರ ಭಾಷಣದ ತಿರುಳಾಗಿ ಯಾವುದನ್ನು ಅದರಲ್ಲಿ ಎತ್ತಿ ಹಿಡಿಯಲಾಗಿತ್ತೋ ಆ ಪಶ್ಚಿಮ ಘಟ್ಟಗಳ ಸಂರಕ್ಷಣೆ ಕುರಿತ ಕಸ್ತೂರಿ ರಂಗನ್ ವರದಿಯನ್ನು ತಿರಸ್ಕರಿಸುವಂತೆ ಕರೆ ನೀಡುವ ನಿರ್ಣಯವನ್ನು ಸಮ್ಮೇಳನ ಅಂಗೀಕರಿಸಿದ್ದರವರೆಗೆ ಎಲ್ಲವೂ ಡಿ'ಸೋಜಾ ಅವರಿಗೆ ಮುಜುಗರವನ್ನೇ ಉಂಟುಮಾಡುತ್ತಿರುವಂತಿದ್ದುದು ವಿಷಾದನೀಯ.

ಇದಕ್ಕೆಲ್ಲ ಕಾರಣ, ಕನ್ನಡ ಸಾಹಿತ್ಯ ಪರಿಷತ್ತೆಂಬುದೇ ಕನ್ನಡಿಗರ ಪಾಲಿಗೆ ಒಂದು ವಿಷಾದನೀಯ ಸಂಗತಿಯಾಗಿರುವುದು. ಪರಿಷತ್ತಿಗೆ ಇತಿಹಾಸವಿದೆ. ಆದರೆ ವರ್ತಮಾನವಿಲ್ಲ; ಭವಿಷ್ಯವಂತೂ ಇಲ್ಲವೇ ಇಲ್ಲ. ಕಾರಣ, ಪರಿಷತ್ತು ತನ್ನ ಕರ್ತವ್ಯವನ್ನು ಮುಗಿಸಿ ಎಂದೋ

ಅಪ್ರಸ್ತುತವಾಗಿ ಹೋಗಿದೆ. ಹಾಗಾಗಿಯೇ ಇಂದು ಅದು ಎಲ್ಲ ಮಟ್ಟಗಳಲ್ಲೂ ಸಾಹಿತ್ಯದ ದುರ್ವಾಸನೆಯನ್ನು ಮಾತ್ರ ಪಬ್ಬಿಸುವ ಅಪ್ಪಟ ಪುಢಾರಿಗಳ ಕೈವಶವಾಗಿಹೋಗಿದೆ. ಅದೀಗ ಕನ್ನಡಿಗರ ಸಾಹಿತ್ಯಿಕ-ಸಾಂಸ್ಕೃತಿಕ ಆಶೋತ್ತರಗಳ ವೇದಿಕೆಯಾಗಿಲ್ಲ. ಒಂದು ಸರ್ಕಾರಿ ಬಿಳಿಯಾನೆಯಾಗಿ ವರ್ಷಕ್ಕೊಮ್ಮೆ ಸಮ್ಮೇಳನದ ಹೆಸರಿನಲ್ಲಿ ಸುಮ್ಮನೆ ಘೀಳಿಡುತ್ತದೆ. ಮೊನ್ನೆ ಪುಂಡಲೀಕ ಹಾಲಂಬಿ ಘೀಳಿಟ್ಟರಲ್ಲಾ, 'ಸರ್ಕಾರ ಕೂಡಲೇ ಸಮ್ಮೇಳನಕ್ಕಾಗಿ ಇನ್ನೂ ಎರಡು ಕೋಟಿ ರೂಪಾಯಿ ಬಿಡುಗಡೆ ಮಾಡದಿದ್ದರೆ ಪರಿಷತ್ತಿನ ಕಛೇರಿಗೆ ಬೀಗ ಹಾಕಬೇಕಾಗುತ್ತದೆ!' ಎಂದು!! ಸಿದ್ಧರಾಮಯ್ಯನವರು ಈ ಹುಸಿ ಘೀಳಿಗೆ ಕಿವಿಗೊಡದೆ ಹಾಲಂಬಿಯವರು ತಮ್ಮ ಬೆದರಿಕೆಯನ್ನು ಜಾರಿ ಮಾಡಲು ಬಿಟ್ಟಿದ್ದರೇ ಚೆನ್ನಿತ್ತು. ಕನ್ನಡ ಜನತೆ ಅವರಿಗೆ ಕೃತಜ್ಞವಾಗಿರುತ್ತಿತ್ತು. ಮಡಿಕೇರಿಯ ಈ ಸಮ್ಮೇಳನದ ಮೂರು ದಿನಗಳಲ್ಲೂ ಎದ್ದು ಕಂಡ ಖಾಲಿ ಕುರ್ಚಿಗಳ ರಾಶಿಯ ಮೇಲೆ ಸರ್ಕಾರದ ಕೋಟ್ಯಾಂತರ ರೂಪಾಯಿಗಳು ಚೆಲ್ಲಾಡಿತ್ತು. ಇದು ಜನತೆಯ ಹಣದ ದುರ್ವ್ಯಯವೇ ಹೌದು.

ನಿಜವಾಗಿ ಇದು ಯಾರ ಸಂಭ್ರಮ?

ಇನ್ನು ಇದಕ್ಕೆ ಪ್ರತಿಯಾಗಿಯೋ ಎಂಬಂತೆ ನಮ್ಮ ನವ್ಯ ಸಾಹಿತ್ಯದ ಕೆಲವೇ ಪಳೆಯುಳಿಕೆಗಳಲ್ಲಿ ಒಬ್ಬರಾದ ಗಿರಡ್ಡಿ ಗೋವಿಂದರಾಜರ ಸಂಚಾಲಕತ್ವದಲ್ಲಿ ನಡೆದ ಧಾರವಾಡ 'ಸಾಹಿತ್ಯ ಸಂಭ್ರಮ' ಆಯ್ದ ಕೆಲವೇ ಕುರ್ಚಿಗಳಿಗೆ ಸೀಮಿತವಾಗಿದ್ದುದರಿಂದ ಅವು ತುಂಬಿ ತುಳುಕಿದ ವರದಿಗಳು 'ಪ್ರಜಾವಾಣಿ' ಪತ್ರಿಕೆಯ ಪುಟಗಳಲ್ಲಿ ತುಂಬಿ ತುಳುಕಿದವು. ಈ ಪತ್ರಿಕೆಯನ್ನು ಹೊರತುಪಡಿಸಿ ಇನ್ನಾವ ಮಾಧ್ಯಮವೂ ಗಂಭೀರವಾಗಿ ಪರಿಗಣಿಸದಷ್ಟು 'ಖಾಸಗಿ'ಯಾಗಿ ನಡೆದ ಆಯ್ದ ಸಾಹಿತಿಗಳ ಈ ರೋಟರಿ ಕ್ಲಬ್ ಮೀಟಿಂಗ್‌ನ ಸಾಹಿತ್ಯ ಸಾಧನೆಗಳೇನು ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ಈ ಒಂದು ಸಂಗತಿಯ ಹೊರತಾಗಿ: ಖಾಸಗಿ ಪ್ರಯತ್ನವಾಗಿಯಾದರೂ ಈಗ ಅನಂತಮೂರ್ತಿ, ಕಾರ್ನಾಡರ ಜೊತೆ ಭೈರಪ್ಪ ಮತ್ತು ಶತಾವಧಾನಿ ಗಣೇಶರೂ ಆಸೀನರಾಗಿ ಸಂವಾದ ನಡೆಸುವ ಹೊಸ ಸಾಹಿತ್ಯಿಕ ಅನುಸಂಧಾನವೊಂದು ಕನ್ನಡ ಸಾಹಿತ್ಯಲೋಕದಲ್ಲಿ ಆರಂಭವಾಗಿದೆ! ಇದು ನವ್ಯ ಸಾಹಿತ್ಯ ರಾಜಕಾರಣದ ಹೊಸ ಆವೃತ್ತಿಯೋ ಏನೋ ತಿಳಿಯದು!

ಅದೇನೇ ಇದ್ದರೂ, ಇದಕ್ಕೆ ಸರ್ಕಾರ ಹದಿನೈದು ಲಕ್ಷ ರೂಪಾಯಿಗಳ ಅನುದಾನ ನೀಡಿದೆ ಎಂಬ ಸುದ್ದಿಯಿದೆ. ಇದು ನಿಜವಿದ್ದಲ್ಲಿ, ಇದು ಅತ್ಯಂತ ಬೇಜವಾಬ್ದಾರಿಯ ಮತ್ತು ಪ್ರಶ್ನಾರ್ಹವಾದ ಅನುದಾನ. ಧಾರವಾಡದಲ್ಲಿ ನಡೆದದ್ದು, ಸಾಹಿತ್ಯ-ಸಂಸ್ಕೃತಿ ಚಟುವಟಿಕೆ ಎಂದಿಟ್ಟುಕೊಂಡರೂ, ಅದು ಯಾವುದೇ ಸಾರ್ವಜನಿಕ ಸಂಹಿತೆಗೆ ಒಳಪಡದ ಒಂದು ಖಾಸಗಿ ಚಟುವಟಿಕೆ. ಇದರ ಮುಂಚೂಣಿಯಲ್ಲಿದ್ದ ಕೆಲವು ದೊಡ್ಡ ಹೆಸರುಗಳ ಮೇಲೇ ಸರ್ಕಾರದ ಹಣ ಬಿಡುಗಡೆಯಾಗುವುದಾದರೆ ಅದು ಪ್ರಜಾಪ್ರಭುತ್ವದ ಮೂಲ ಭಾವನೆಗೇ ವ್ಯತಿರಿಕ್ತವಾದದ್ದು. ಸರ್ಕಾರಕ್ಕೇನಾದರೂ ಸಾಂಸ್ಕೃತಿಕ

ನೆಲೆಯ ಮರ್ಯಾದೆಯಿದ್ದರೆ ಮೊದಲು ಅದು ತನ್ನ ಅಕಾಡೆಮಿಗಳನ್ನು ತನ್ನ ಈ ಮರ್ಯಾದೆಯನ್ನು ಕಾಪಾಡುವ ರೀತಿಯಲ್ಲಿ ರಚಿಸಿ ಅವುಗಳ ಮೂಲಕ ಸಾಹಿತ್ಯ-ಸಂಸ್ಕೃತಿಗಳ ಕೆಲಸ ಮಾಡಲಿ. ಇಂತಹ ಆಯ್ದ ಪ್ರತಿಷ್ಠಿತರ ಚಟುವಟಿಕೆಗಳನ್ನು ಜನತೆಯ ಹಣದಲ್ಲಿ ಪ್ರೋತ್ಸಾಹಿಸುವುದನ್ನು ನಿಲ್ಲಿಸಲಿ.

ಇನ್ನು ಕನ್ನಡದ ಹೆಮ್ಮೆಯ ಪತ್ರಿಕೆ 'ಪ್ರಜಾವಾಣಿ' ಇದಕ್ಕೆ ಸಹ-ಪ್ರಾಯೋಜಕತ್ವ ಒದಗಿಸಿದ್ದನ್ನು ಯಾರೂ ಪ್ರಶ್ನಿಸಲಾರರಾದರೂ, ತನ್ನ ಪ್ರಾಯೋಜಕತ್ವದ ನೆಪದಲ್ಲಿ ಅದು ಕೆಲವರ ಸಂಭ್ರಮವನ್ನು ಎಲ್ಲರ ಸಂಭ್ರಮವೆಂಬಂತೆ, ತನ್ನ ಓದುಗರೆಲ್ಲರ ಮೇಲೆ ಪುಟಗಟ್ಟಲೆ ಹೊರಿಸಿದ್ದು ಮಾತ್ರ ಪ್ರಶ್ನಾರ್ಹ. ಇದು ಪತ್ರಿಕೆಯ ಮಾಲೀಕರ ಮನೆಯ ಮದುವೆ ಸುದ್ದಿಯನ್ನು ಪತ್ರಿಕೆಯ ತುಂಬಾ ಪ್ರಕಟಿಸಿಕೊಳ್ಳುವುದಕ್ಕಿಂತ ಸ್ವಲ್ಪ ಮಾತ್ರ ಕಡಿಮೆಯಾದ ಸಾರ್ವಜನಿಕ ದುರಭಿರುಚಿಯ ಪ್ರಯತ್ನ. 'ಪ್ರಜಾವಾಣಿ' ಟಿಎಸ್ಸಾರ್-ವೈಯೆನ್ಕೆ ಕಾಲದಿಂದಲೂ ಕನ್ನಡ ಸಾಹಿತ್ಯದ ರಾಜಕಾರಣ ಮಾಡುತ್ತಲೇ ಬಂದಿದೆ. ಅದು ಆಗ ಸಂಪಾದಕೀಯ ಬಳಗದ ಮೇಲರಿಮೆಯ ಮೆರೆದಾಟದ ರಾಜಕಾರಣವಾಗಿದ್ದರೆ, ಇದು ಈಗ ಮಾಲೀಕರ ಕೀಳರಿಮೆನ್ನು ತುಂಬಿಕೊಳ್ಳಲು ನಡೆದಿರುವ ರಾಜಕಾರಣದಂತೆ ತೋರುತ್ತಿದೆ. ಈ ಮೊದಲು ಪ್ರಸ್ತಾಪಿಸಿದ ಸಾಹಿತ್ಯ ಲೋಕದ ಹೊಸ ಅನುಸಂಧಾನದ ಹಿನ್ನೆಲೆಯಲ್ಲಿ ಇದು ಅಪಾಯಕಾರಿಯಾಗಿ ಕಾಣುತ್ತದೆ.

ಅನಂತಮೂರ್ತಿಯವರ ಪುಂಡಾಟಿಕೆ...

ಇಷ್ಟೆಲ್ಲ ಹೇಳಿದ ಮೇಲೂ ಒಂದು ಮಾತು ಹೇಳಲೇಬೇಕು: ಈ ಸಂಭ್ರಮದಲ್ಲಿ ನಿಜವಾಗಿಯೂ ಪ್ರಾಮಾಣಿಕವಾಗಿ ಮಾತನಾಡಿದ್ದು ಭೈರಪ್ಪನವರೇ! ಅಥವಾ ಅವರೊಬ್ಬರೇ! ಅನಂತಮೂರ್ತಿಯವರನ್ನು ನೋಡಿ. ಈ ವಯಸ್ಸಿನಲ್ಲೂ ಸುದ್ದಿ ಶೂರತ್ವದ ರೋಗ ಬಡಿದುಕೊಂಡಂತಿರುವ ಅವರು ಅಲ್ಲಿ ಬಂದು ಉದ್ಘಾಟನೆಯ ಸಂದರ್ಭದಲ್ಲೇ ಮೋದಿಯ ಪ್ರಸ್ತಾಪದೊಂದಿಗೆ ಮಾತು ಆರಂಭಿಸುತ್ತಾರೆ! ಸ್ವಾಮಿ, ನಿಮಗೆ ಇಷ್ಟೊಂದು ರಾಜಕೀಯ ತೆವಲಿದ್ದರೆ, ಬೀದಿಗೆ ಬಂದು ಮೋದಿ ವಿರುದ್ಧ ಸಾರ್ವಜನಿಕ ಭಾಷಣಗಳನ್ನು ಶುರು ಮಾಡಿ. ಹೀಗೆ ಸಾಹಿತ್ಯದ ವೇದಿಕೆಗಳ ಮೇಲೆ ಪುಂಡಾಟಿಕೆ ನಡೆಸಿ ಸಾಹಿತ್ಯದ ಜೀವ ಕೋಶದ ಮೇಲಿನ ತೆಳು ಆದರೆ ಅನನ್ಯ ಸೂಕ್ಷ್ಮವಾದ ಪೊರೆಯನ್ನು ಜಖಂಗೊಳಿಸಬೇಡಿ. ಅದು ಉಸಿರಾಡುವುದನ್ನು ನಿಲ್ಲಿಸೀತು.

ಅನಂತಮೂರ್ತಿಯವರ ಇಂತಹ ಹುಚ್ಚಾಟದ ಪರಿಣಾಮಗಳನ್ನು ನಾವು ಎಲ್ಲೆಲ್ಲೂ – ಬೇರೆ ಕಡೆಗಳಲ್ಲೂ – ಕಾಣತೊಡಗಿದ್ದೇವೆ. ಮೊನ್ನೆ ಶಿವಮೊಗ್ಗದಲ್ಲಿ ಗೆಳೆಯರೊಬ್ಬರ ಕಥಾ ಸಂಕಲನದ ಬಿಡುಗಡೆಗೆ ಹೋದರೆ, ಅದು ಅಪ್ಪಟ ಮೋದಿ ವಿರೋಧಿ ಭಾಷಣಗಳ ವೇದಿಕೆಯಾಗಿ ಮಾರ್ಪಟ್ಟು ಸಾಹಿತ್ಯ ಹಿನ್ನೆಲೆಗೆ ಸರಿದುಹೋಯಿತು. ಆ ಕಥೆಗಾರ ಮುಸ್ಲಿಮರಾಗಿದ್ದುದಂತೂ ಇವರಿಗೆ ತಮ್ಮ

ಭಾಷಣಗಳ ಕಾವು ಏರಿಸಿಕೊಳ್ಳಲು ವಿಶೇಷ ಸ್ಫೂರ್ತಿ ಸಿಕ್ಕಂತಾಯಿತು. ಸಾಹಿತ್ಯದ ಗೊಬರು ಹಾಕಿಕೊಂಡ ಈ ಪುಢಾರಿ ಭಾಷಣಗಳನ್ನು ಕೇಳುತ್ತಾ ಹೋದಂತೆ ಮೋದಿಯ ಕೈಗಳಿಂದ ತಪ್ಪಿಸಿಕೊಂಡ ಜನ ಇವರ ಕೈಗೆ ಸಿಗುವಂತಾದರೆ ಗತಿಯೇನು ಎಂದು ಭಯವಾಯಿತು. ಸಾಹಿತ್ಯ-ಸಂಸ್ಕೃತಿಗಳ ಸ್ವಾಯತ್ತತೆಯನ್ನು ಗೌರವಿಸದ ಜನ ತಮಗೆ ಗೊತ್ತಿಲ್ಲದಂತೆಯೇ ಫ್ಯಾಸಿಸ್ಟರನ್ನೂ ಮೀರಿಸುವ ಕ್ರೂರಿಗಳಾಗಬಲ್ಲರು.

ಎಚ್.ಎಸ್. ಶಿವಪ್ರಕಾಶರ ಹೊಸ ಲೋಕಾನುಸಂಧಾನ

ಕೊನೆಯದಾಗಿ ಗೆಳೆಯ ಶಿವಪ್ರಕಾಶ್ 'ಪ್ರಜಾವಾಣಿ'ಯಲ್ಲಿ ಇತ್ತೀಚೆಗೆ ಬರೆದ ಎರಡು ಅಂಕಣಗಳ ಬಗ್ಗೆ ಎರಡು ಮಾತು. ಶಿವಪ್ರಕಾಶರೀಗ ತಾವು ಹಿಂದೆ ಸಾಹಿತ್ಯ ಕ್ಷೇತ್ರದ ಹೊರಗೋ, ಪರಿಧಿಯಲ್ಲೋ ಇಟ್ಟಿದ್ದವರನ್ನೆಲ್ಲ ತಮ್ಮ ಹೊಸ ಲೋಕಾನುಸಂಧಾನದಲ್ಲಿ ಒಳಕ್ಕೆ ಆಹ್ವಾನಿಸಿಕೊಂಡು ತಮ್ಮ ಹೊಸ ಹೃದಯ ವೈಶಾಲ್ಯವನ್ನು ಮರೆಯುತ್ತಿದ್ದಾರೆ. ಇದು ನಿಜವಾಗಿಯೂ ಸಂತೋಷದ ಸಂಗತಿಯೇ. ಆದರೆ ಈ ಭಾಗ್ಯ ಈಗ ಲೋಕ ತ್ಯಜಿಸಿದವರಿಗಿಲ್ಲ ಎಂದು ಕಾಣುತ್ತದೆ. ಹಾಗಾಗಿಯೇ ಮೊನ್ನೆ ಜಿಎಸ್ಸೆಸ್ ಬಗ್ಗೆ ಬರೆಯುತ್ತಾ ಅವರ ಕಾವ್ಯ ಮಧ್ಯಮ ವರ್ಗದ ಹುಸಿ ಕಾವ್ಯವೆಂಬರ್ಥದ ಮಾತುಗಳನ್ನಾಡಿದ್ದಾರೆ. ಇದು ಬೇಜವಾಬ್ದಾರಿತನದ ಪರಮಾವಧಿಯೆಂದೇ ಹೇಳಬೇಕು. ಜಿಎಸ್ಸೆಸ್ ಶಿವಪ್ರಕಾಶರಷ್ಟು ದಟ್ಟ ಸಂಕೀರ್ಣತೆಯ ಪದ್ಯಗಳನ್ನು ಬರೆದಿರುವ ಅಸಾಧಾರಣ ಕವಿಯಲ್ಲದಿರಬಹುದು. ಆದರೆ ಕನ್ನಡ ಜನಮಾನಸದಲ್ಲಿ, ಶಿವಪ್ರಕಾಶರ ಕಾವ್ಯಕ್ಕಿಂತ ಹೆಚ್ಚು ಕಾಲ ಉಳಿಯಬಲ್ಲ ಸಾಕಷ್ಟು ಸಂಖ್ಯೆಯ ಒಳ್ಳೆಯ ಕವಿತೆಗಳನ್ನು ಬರೆದಿದ್ದಾರೆ. ಇರಲಿ ಬಿಡಿ, ಶಿವಪ್ರಕಾಶ್ ಈ ಹಿಂದೆ ಬೇಂದ್ರೆ ಅಂತಹ ಒಳ್ಳೆಯ ಕವಿಯೇನೂ ಅಲ್ಲ ಎಂಬ ಪ್ರಮೇಯವೊಂದನ್ನು ಪ್ರಚುರಪಡಿಸಲು ಯತ್ನಿಸಿ ವಿಫಲರಾದವರಲ್ಲವೇ?

ಶಿವಪ್ರಕಾಶರ ಇಂತಹುದೇ ಬೇಜವಾಬ್ದಾರಿತನದ ಇನ್ನೊಂದು ಪ್ರಯತ್ನವೆಂದರೆ, ವೀರಶೈವರು ಹಿಂದೂ ಸಮುದಾಯಕ್ಕೆ ಸೇರದ ಭಿನ್ನ ಧರ್ಮವೆಂಬ ವೀರಶೈವ ಮಹಾಸಭಾದ ವಾದಕ್ಕೆ ಪುಷ್ಟಿಯನ್ನೀಯುವ ವಾದವೊಂದನ್ನು ಮಂಡಿಸಿರುವುದು. ಇವರ ಪ್ರಕಾರ 'ಹಿಂದೂ' ಎಂಬ ಶಬ್ದ ಪರಕೀಯರಿಂದ ಬಂದೆದ್ದೆಂಬುದನ್ನು ಬಾಲಗಂಗಾಧರರು ಈಗ ಸಾಬೀತುಪಡಿಸಿದ್ದಾರಂತೆ! (ಇವರ ಹೊಸ ಲೋಕಾನುಸಂಧಾನದ ಎರಡನೇ ಮಜಲಿದು?) ಶಿವಪ್ರಕಾಶರ ವಾದ ಎಷ್ಟು ಸರಳೀಕೃತವಾಗಿದೆಯೆಂದರೆ, ಇವರ ವಾದದ ಪ್ರಕಾರ ಈಗ ಹಿಂದೂ ಧರ್ಮವೆಂದು ಹೇಳಲಾಗುವ ಜನಸಮುದಾಯದ ವ್ಯಾಪ್ತಿಗೆ ಬರುವ ಪ್ರತಿಯೊಂದು ಜಾತಿ ಸಮುದಾಯವೂ ಒಂದು ಧರ್ಮವೆನಿಸಿಕೊಳ್ಳಲು ಒಂದಲ್ಲ ಒಂದು ನೆಲೆಯಲ್ಲಿ ಅರ್ಹವಾಗುತ್ತವೆ. ಹಾಗೇ ಈ ಎಲ್ಲವೂ ಅಲ್ಪಸಂಖ್ಯಾತ ಧರ್ಮಗಳಾಗಿ ಬಹುಸಂಖ್ಯಾತ ಧರ್ಮವೆಂಬುದಿಲ್ಲವಾಗುವ ವಿಪರ್ಯಾಸದ ಸಂದರ್ಭ ಉಂಟಾಗಬಲ್ಲುದಾಗಿದೆ! ವೀರಶೈವ ಮಹಾಸಭೆಯವರು ಭಿನ್ನ ಧರ್ಮದ ಮಾತನ್ನಾಡುತ್ತಿರುವುದರಲ್ಲಿ ತಾತ್ವಿಕ

ಪ್ರಶ್ನೆ ಎಷ್ಟಿದೆ, ವ್ಯಾವಹಾರಿಕ ಪ್ರಶ್ನೆ ಎಷ್ಟಿದೆ ಎಂಬುದು ಶಿವಪ್ರಕಾಶರಿಗೆ ಗೊತ್ತಿಲ್ಲದಿಲ್ಲ. ಆದರೂ ಅವರು ಹೀಗೇಕೆ ವಾದಿಸುತ್ತಾರೆಂಬುದನ್ನು ಓದುಗರೇ ತೀರ್ಮಾನಿಸಬಲ್ಲರು.

'ಸಿರಿಗನ್ನಡ' ಸಂಪುಟದ ಸೊಬಗು

ಮೂಡುಬಿದ್ರೆಯ ಮೋಹನ ಆಳ್ವರು ಈ ಬಾರಿಯ ವಿಶ್ವ ನುಡಿಸಿರಿಯ ಸಂದರ್ಭದಲ್ಲಿ ಹೊರ ತಂದಿರುವ 'ಸಿರಿಗನ್ನಡ' ಸಂಪುಟ ನನ್ನ ಮುಂದಿದೆ. ಅದರ ಸೊಬಗನ್ನು ನೋಡುತ್ತಿದ್ದಂತೆ, ಅದರ ಪುಟಗಳನ್ನು ತಿರುವಿ ಹಾಕುತ್ತಿದ್ದಂತೆ ಆಳ್ವರ ಮೇಲೆ ನಮ್ಮ ಪ್ರಗತಿಪರ ಸಾಹಿತಿಗಳೆನಿಸಿ ಕೊಂಡವರು ಮಾಡುತ್ತಿರುವ ಆರೋಪಗಳು ನನ್ನ ಮನಸ್ಸಿನ ಹಿನ್ನೆಲೆಗೆ ಸರಿದು ಹೋಗುತ್ತಿವೆ. ಅವರು ಹಣ ಮಾಡುತ್ತಿರಬಹುದು. ಆದರೆ ಇಂದು ಹಣ ಮಾಡುತ್ತಿರುವ ಎಷ್ಟು ಜನ ಉದ್ಯಮಿಗಳು ಅದನ್ನು ಹೀಗೆ ಈ ಗುಣಮಟ್ಟದಲ್ಲಿ ಸಾಹಿತ್ಯ ಸಂಸ್ಕೃತಿಗಳ ಪೋಷಣೆಗೆ ಬಳಸುತ್ತಿದ್ದಾರೆ? ಅಚ್ಚ ತುಳುವರಾಗಿದ್ದುಕೊಂಡೂ ಅವರು ತಮ್ಮ 'ನುಡಿಸಿರಿ' ಮತ್ತು 'ಸಂಗೀತ ವಿರಾಸತ್'ಗಳ ಮೂಲಕ ಮಾಡುತ್ತಿರುವ ಕನ್ನಡ ನಾಡು ನುಡಿಗಳ ಸೇವೆಗೆ ಕನ್ನಡ ಸಾರಸ್ವತ ಲೋಕ ಮೊದಲು ಕೃತಜ್ಞತೆ ಸಲ್ಲಿಸಬೇಕು. ಆ ಮೇಲೆ ಪ್ರಶ್ನೆಗಳು. ಅವರ ಆರ್ಥಿಕ ಮೂಲಗಳು ಪ್ರಶ್ನಾರ್ಹವಾಗಿದ್ದರೆ, ಅದನ್ನು ಮೊದಲು ಪ್ರಶ್ನಿಸಬೇಕಾದವರು ಆರ್ಥಿಕ ಅಪರಾಧಗಳ ಇಲಾಖೆಯವರು. ಸಾಹಿತಿಗಳಲ್ಲ. ಸಾಹಿತಿಗಳದ್ದೇನಿದ್ದರೂ ಆನಂತರದ ಸರದಿ.

ಸುಮಾರು ಒಂಭೈನೂರು ಪುಟಗಳ ಡಬಲ್ ಡೆಮಿ ಆಕಾರದ ಈ ವರ್ಣಮಯ ಸಂಪುಟ ಬಹುಕಾಲ ನಮ್ಮ ನಾಡು–ನುಡಿ–ಸಂಸ್ಕೃತಿಗಳನ್ನು ಕುರಿತ ಒಂದು ಮಹತ್ವದ ಆಕರ ಗ್ರಂಥವಾಗಿ ಉಳಿಯುವುದರಲ್ಲಿ ಸಂಶಯವಿಲ್ಲ. ಮೋಹನ ಆಳ್ವರಿಗೆ ನಮ್ಮ ಅಭಿನಂದನೆಗಳು.

●

ಮಾರ್ಚ್, ೨೦೧೪

ಹೀಗೇ ಮುಂದುವರಿದ ಟಿಪ್ಪಣಿಗಳು...

ಸಾಹಿತ್ಯ ಚರ್ಚೆ ಎಂಬುದು 'ಪಬ್ಲಿಕ್ ರಿಲೇಷನ್ಸ್' ಕಸರತ್ತಲ್ಲ!

ಪತ್ರಿಕೆಯ ಕಳೆದ ಸಂಚಿಕೆಯಲ್ಲಿ 'ಹೀಗೇ ಕೆಲವು ಬಿಡಿ ಟಿಪ್ಪಣಿಗಳು' ಶೀರ್ಷಿಕೆಯಡಿ ನಾನು ಬರೆದ ಕೆಲವು ಮಾತುಗಳ ಬಗ್ಗೆ 'ನಿಮ್ಮ ಪತ್ರ'ದಲ್ಲಿನ ಕೆಲವು ಅಭಿಪ್ರಾಯಗಳು ಸೂಚಿಸುತ್ತಿರುವಂತೆ ಮಿಶ್ರ ಪ್ರತಿಕ್ರಿಯೆ ಬಂದಿದೆ. ಇದಲ್ಲದೆ ನನ್ನ ಕೆಲವು ಮಿತ್ರರೂ ಕರೆ ಮಾಡಿ ಕೆಲ ಮಾತುಗಳನ್ನಾಡಿದ್ದಾರೆ. ಶ್ರೀನಿವಾಸ ಕಾರ್ಕಳರು ನನ್ನ ಭಾಷೆ ಅವರೂರಿನ ಸಂಜೆ ಪತ್ರಿಕೆಯ ಭಾಷೆಯಂತಿದೆ ಎಂದಿರುವುರಲ್ಲದೆ (ಹಾಗೆಂದರೇನೆಂದು ಈ ಊರಿನಲ್ಲಿರುವ ನನಗೆ ತಿಳಿಯದು!), ವೈಯಕ್ತಿಕ ದ್ವೇಷ ಸಾಧನೆಗಾಗಿ ಪತ್ರಿಕೆ ಬಳಸಿಕೊಳ್ಳುತ್ತಿರುವ ಆರೋಪ ಮಾಡಿದ್ದಾರೆ. ನಾನು ಯಾರ್‍ಯಾರ ಬಗ್ಗೆ ಕಳೆದ ಬಾರಿ ಬರೆದಿರುವೆನೋ ಅವರ ಬಗ್ಗೆ ನನಗೆ ವೈಯುಕ್ತಿಕ ದ್ವೇಷವಿದೆ ಎಂಬುದಕ್ಕೆ ಕಾರ್ಕಳರ ಬಳಿ ಏನು ಆಧಾರವಿದೆಯೋ ನನಗೆ ತಿಳಿಯದು! ನನ್ನ ಇನ್ನೋರ್ವ ಸ್ನೇಹಿತರು ಕರೆ ಮಾಡಿ, ಅನಂತಮೂರ್ತಿಯವರು ಇಳಿ ವಯಸ್ಸಿನ ಅಸ್ವಸ್ಥತೆಯಲ್ಲಿರುವಾಗ ಹೀಗೆ ಟೀಕೆ ಮಾಡಬಾರದಿತ್ತು ಎಂದು 'ಮಾನವೀಯತೆ'ಯ ಪರಿಭಾಷೆಯಲ್ಲಿ ತಮ್ಮ ಪ್ರತಿಕ್ರಿಯೆ ನೀಡಿದರು. ಆದರೆ ಅನಂತಮೂರ್ತಿಯವರ ಯಾವ ಮಾತು ನನ್ನ ಟೀಕೆಗೆ ಒಳಗಾಗಿದೆಯೋ ಅದನ್ನು ಅನಂತಮೂರ್ತಿಯವರು ಆಡಿರುವುದೂ ಆ ಇಳಿವಯಸ್ಸಿನ ಅಸ್ವಸ್ಥತೆಯಲ್ಲಿಯೇ, ಧಾರವಾಡಕ್ಕೆ ದೂರ ಪ್ರಯಾಣ ಮಾಡಿ ಎಂಬುದನ್ನು ಇವರೇಕೆ ಮರೆಯುತ್ತಾರೋ ತಿಳಿಯದು!

ವೈಯುಕ್ತಿಕ ದ್ವೇಷ ಸಾಧನೆಯ ಮಾತಾಡಿರುವವರು ಎರಡು ಸಂಚಿಕೆಗಳ ಹಿಂದೆ ಅನಂತಮೂರ್ತಿಯವರ ಬಗ್ಗೆ ನಾನು ಬರೆದಿರುವ ಮಾತುಗಳನ್ನು ದಯವಿಟ್ಟು ಗಮನಿಸಬೇಕು.

ಸಾಹಿತ್ಯ–ಸಂಸ್ಕೃತಿಗೆ ಸಂಬಂಧಪಟ್ಟಂತೆ ಆಡಲಾಗುವ ಮಾತುಗಳಿಗೆಲ್ಲ ವೈಯಕ್ತಿಕ ದ್ವೇಷ ಸಾಧನೆಯ ಟೋಪಿ ಹಾಕತೊಡಗಿದರೆ, ಸಾಹಿತ್ಯ ಚರ್ಚೆ ಎಂಬುದು 'ಪಬ್ಲಿಕ್ ರಿಲೇಷನ್ಸ್'ನ ಕಸರತ್ತು ಮಾತ್ರ ಆದೀತೇನೋ. ನನ್ನ ಮಾತುಗಳು ಅನುಚಿತವಾದವು ಎನ್ನಿಸಿದವರು, ನಾನು ಮಾಡಿರುವ ಟೀಕೆಗಳಿಗೆ ಕಾರಣವಾಗಿರುವ ವಿಷಯವನ್ನೆತ್ತಿಕೊಂಡು ವಾದಿಸಿದ್ದರೆ ಹೆಚ್ಚು ಉಚಿತವಾಗುತ್ತಿತ್ತೇನೋ. ಮಾತುಗಳು ಉಗ್ರವಾದವು ಎನ್ನುವವರು, ಆ ಉಗ್ರತೆ ಹುಟ್ಟಿರುವುದು ಎತ್ತಿಕೊಂಡ ವಿಷಯದ ಸೂಕ್ಷ್ಮತೆಯಲ್ಲಿ, ಗಹನತೆಯಲ್ಲಿ ಎಂಬುದನ್ನು ಗಮನಿಸಿದಂತಿಲ್ಲ. ಸಾಹಿತ್ಯ–ಸಂಸ್ಕೃತಿ ಕ್ಷೇತ್ರಗಳಲ್ಲಿ ಅಭಿಮಾನಿ ಸಂಘಗಳ ರಾಜಕಾರಣ ತುಂಬ ಅಪಾಯಕಾರಿ ಎಂದಷ್ಟೇ ಇಲ್ಲಿ ಹೇಳಬಯಸುವೆ.

ಸಾಹಿತ್ಯದ ಸ್ವಾಯತ್ತತೆಯೂ, ಸಾಮಾಜಿಕತೆಯೂ...

'ನುಡಿಸಿರಿ'ಯಲ್ಲಿ ವೀರೇಂದ್ರ ಹೆಗ್ಗಡೆಯವರ ಪಾತ್ರವಿದೆಯೆಂದು ಅದನ್ನು ವಿರೋಧಿಸಲಾಗುತ್ತದೆಯಂತೆ! ನನಗಿದು ನಿಜವಾಗಿಯೂ ಅರ್ಥವಾಗದ ವಿಷಯ. ಮೊದಲಿಗೇ ನಾನು ಸ್ಪಷ್ಟಪಡಿಸಿಬಿಡುವೆ: ನಾನು 'ನುಡಿಸಿರಿ'ಯ ಬೆಂಬಲಿಗನೂ ಅಲ್ಲ;ವೀರೇಂದ್ರ ಹೆಗ್ಗಡೆಯವರ ಅಭಿಮಾನಿಯಂತೂ ಅಲ್ಲವೇ ಅಲ್ಲ. ಅದರ ನಮ್ಮ ಸರ್ಕಾರಿ ಪ್ರಾಯೋಜಿತ ಸಾಹಿತ್ಯ ಸಮ್ಮೇಳನಗಳು ಸಂಪೂರ್ಣ ನಿರರ್ಥಕವೆನ್ನಿಸತೊಡಗಿರುವ ಈ ಹೊತ್ತಿನಲ್ಲಿ, 'ನುಡಿಸಿರಿ' ಅನಗತ್ಯವೆನ್ನಿಸುವ ತನ್ನ ಖಾಸಗಿ ವೈಭವದ ನಡುವೆಯೂ ಸಾಹಿತ್ಯ–ಸಂಸ್ಕೃತಿಗಳ ಸಂಬಂಧವಾಗಿ ಒಂದಿಷ್ಟು ಅರ್ಥಪೂರ್ಣ ಕೆಲಸ ಮಾಡುತ್ತಿದೆ ಎಂದು ಎರಡು ಬಾರಿ ಅದರಲ್ಲಿ ಭಾಗವಹಿಸಿ ಬಂದ ನನಗನ್ನಿಸುತ್ತಿದೆ. ಮೋಹನ ಆಳ್ವರು ವೀರೇಂದ್ರ ಹೆಗಡೆಯವರೊಡಗೂಡಿ 'ನುಡಿಸಿರಿ'ಯ ಮೂಲಕ ಯಾವ ಸ್ವಾರ್ಥ ಸಾಧನೆಯಲ್ಲಿ ತೊಡಗಿದ್ದಾರೆ ಎಂಬುದನ್ನು ಯಾರಾದರೂ ವಿಷದವಾಗಿ ವಿರಿಸಿದರೆ ಒಳ್ಳೆಯದು. ಯಾವುದೋ ಸಾಹಿತ್ಯೇತರ ವಿಷಯಕ್ಕೆ ಸಂಬಂಧಿಸಿದ ವೀರೇಂದ್ರ ಹೆಗ್ಗಡೆಯವರ ಬಗೆಗಿನ ಕ್ರೋಧ ಇಲ್ಲೇಕೆ ತಲೆಹಾಕಬೇಕೆಂದು ನನಗೆ ಅರ್ಥವಾಗುತ್ತಿಲ್ಲ. ನನ್ನ ಪ್ರಕಾರ ಸಾಹಿತ್ಯ ಕ್ಷೇತ್ರದಲ್ಲಿ ಕ್ರಿಯಾಶೀಲವಾಗುವ ವೈಯಕ್ತಿಕ ದ್ವೇಷದ ಮಾದರಿ ಎಂದರೆ ಇದು.

ನನ್ನ ಇನ್ನೋರ್ವ ಗೆಳೆಯರು ಕರೆ ಮಾಡಿ ಸಾಹಿತ್ಯದ ಸ್ವಾಯತ್ತತೆಯ ಬಗ್ಗೆ ನಾನು ಆಡಿರುವ ಮಾತನ್ನು ಒಪ್ಪುವುದಿಲ್ಲ ಎಂದರು. ಒಪ್ಪುವುದು ಬಿಡುವುದು ಅವರ ವೈಯಕ್ತಿಕ ಸ್ವಾತಂತ್ರ್ಯಕ್ಕೆ ಸಂಬಂಧಿಸಿದ ವಿಷಯ. ಆದರೆ ಸಾಹಿತ್ಯ, ಬೇರೇನೋ ಆಗದೆ ಸಾಹಿತ್ಯವೇ ಅನ್ನಿಸಿಕೊಳ್ಳುವುದು ಅದರೊಳಗಿನ ತನ್ನದೇ ಆದ ಒಳಶಕ್ತಿ (Potential energy)ಯ ಸ್ಫುರಣದಿಂದ ಎಂದು ಅರಿಯದವರೊಂದಿಗೆ ನನ್ನ ಚರ್ಚೆಯೇ

ಇಲ್ಲ. ಏಕೆಂದರೆ ಇವರು ಮನುಷ್ಯ ಮೂಲತಃ ಸಮಾಜದಲ್ಲಿ ಬದುಕುವುದರಿಂದ ಮತ್ತು ಹಾಗಾಗಿ ತಾನಿರುವ ಸಮಾಜದ ಉನ್ನತಿಗಾಗಿ ಪ್ರಯತ್ನಿಸುವುದು ಅವನ ಕರ್ತವ್ಯವೂ ಆಗಿರುವುದರಿಂದ ಸಾಹಿತ್ಯ ಸಮಾಜಕ್ಕೆ ಬದ್ಧವಾಗಿರಬೇಕು ಎಂಬ ವಾದ ಮಂಡಿಸುತ್ತಾರೆ. ಆದರೆ ಮನುಷ್ಯ ಎಂದರೇನು? ಸಮಾಜ ಎಂದರೇನು? ಉನ್ನತಿ ಎಂದರೇನು? ಈ ಶಬ್ದಗಳ ಆಳ ವಿಸ್ತಾರಗಳೇನು, ಎಷ್ಟು? ಎಂಬುದರ ಗೊಡವೆಗೇ ಹೋಗದ ಇವರೊಂದಿಗೆ ವಾದಕ್ಕಿಳಿಯುವುದು ವ್ಯರ್ಥವೆಂದು ನನ್ನ ಅನುಭವ ಹೇಳುತ್ತಿದೆ. ಸಾಹಿತ್ಯಕ್ಕೆ ಕೈ ಕಾಲು, ಬಾಯಿಗಳಷ್ಟೇ ಇರುವುದೆಂದು ಭಾವಿಸಿ ಅವನ್ನಷ್ಟೇ ಹಿಡಿದು ಅಲ್ಲಾಡಿಸುತ್ತಿರುವ ಈ ಸಾಹಿತ್ಯದ ಸಾಮಾಜಿಕತಾವಾದಿಗಳು ಕಳೆದ ಮೂರು ದಶಕಗಳಲ್ಲಿ ಕನ್ನಡ ಸಾಹಿತ್ಯ ಹೃದಯ ಸ್ಪಂದನಕ್ಕೆ ಮಾಡಿರುವ ಆಘಾತ ಅಪಾರವಾದುದು. ಆದರೆ ಕನ್ನಡ ಸಾಹಿತ್ಯ ಪರಂಪರೆ ದೀರ್ಘವಾದದ್ದು ಮತ್ತು ಭದ್ರ ಸಾಹಿತ್ಯಿಕ ಅಡಿಪಾಯಗಳ ಮೇಲೆ ನಿಂತಿರುವುದು. ಹಾಗಾಗಿ ಈ ಆಘಾತಗಳನ್ನೆಲ್ಲ ಸಹಿಸಿ ಅದು ತನ್ನ ಸಹಜ ದಾರಿಯಲ್ಲಿ ನಡೆದಿದೆ.

ಮೊನ್ನೆ ಒಬ್ಬರು ಕೇಳಿದರು: ಕುಂವೀಯವರು ಅನಂತಮೂರ್ತಿ ಮತ್ತು ಕಾರ್ನಾಡರು ಜ್ಞಾನಪೀಠಕ್ಕೆ ಅನರ್ಹರು ಎಂದಿದ್ದಾರಲ್ಲ? ಅದಕ್ಕೆ ನನ್ನ ಉತ್ತರ: ಕುಂವೀಯವರು ಜ್ಞಾನಪೀಠ, ಅನಂತಮೂರ್ತಿ, ಕಾರ್ನಾಡರ ಬಗ್ಗೆ ಮಾತನಾಡುವಷ್ಟು ಸಾಹಿತ್ಯಿಕ ಸೂಕ್ಷ್ಮತೆ ಹೊಂದಿದ್ದಾರೆ ಎಂದು ಭಾವಿಸಿ ನೀವು ಈ ಪ್ರಶ್ನೆಯನ್ನು ಕೇಳುತ್ತಿದ್ದರೆ ನನ್ನಲ್ಲಿ ಉತ್ತರವಿಲ್ಲ.

●

ಏಪ್ರಿಲ್, ೨೦೧೪

ಬಸವ ಕಲ್ಯಾಣದಲ್ಲಿ ಬಸವನನ್ನು ಹುಡುಕುತ್ತಾ...

ಹೋದ ತಿಂಗಳು ಅನ್ಯಕಾರ್ಯ ನಿಮಿತ್ತ ಗುಲ್ಬರ್ಗದ ಕಡೆ ಹೋಗಿದ್ದಾಗ ಬಸವ ಕಲ್ಯಾಣಕ್ಕೆ ಹೋಗಿ ಬಂದೆ. ಬಸವ ಕಲ್ಯಾಣ ಬಸವಣ್ಣನ ಕ್ರಾಂತಿ ಭೂಮಿ. ಕನ್ನಡ ಪ್ರಜ್ಞೆಯ ಜಾಗೃತ ಸ್ಥಳ. ಬಸವನೊಡನೆ ಅಲ್ಲಮ, ಅಕ್ಕ ಇತ್ಯಾದಿ ಶರಣ ಮಹಾಮಹಿಮರು ನಡೆದಾಡಿದ, ಉಸಿರಾಡಿದ ಪವಿತ್ರ ಜಾಗವದು. ಅಷ್ಟು ದೂರ ಗುಲ್ಬರ್ಗಕ್ಕೆ ಹೋದವನು ಕನ್ನಡಿಗನಾಗಿ ಅಲ್ಲಿಗೆ ಹತ್ತಿರದ ಈ ಪವಿತ್ರ ಜಾಗದಲ್ಲೊಮ್ಮೆ ನಡೆದಾಡಿ ಉಸಿರಾಡಿ ಬರುವ ತವಕ ನನ್ನದು.

ಆದರೆ ಅಲ್ಲಿಗೆ ಹೋದೊಡನೆ ನನ್ನ ತವಕ–ತಲ್ಲಣಗಳೆಲ್ಲ ನಿಧಾನವಾಗಿ ಮಾಯವಾಗತೊಡಗಿದವು. ಊರೇನೋ ಪ್ರಾಚೀನವಾದದ್ದೇ. ಗಾರೆ ಗೋಡೆಗಳ ಹಳೆ ಮನೆಗಳ ಓಣಿಗಳು. ಮಧ್ಯೆ ಇತ್ತೀಚೆಗೆ ಮನೆಗಳನ್ನು ಒಡೆದು ಅಗಲಗೊಳಿಸಿದ ಒಂದೆರಡು ವಿಶಾಲ ರಸ್ತೆಗಳು. ಊರಿಗೆ ಕಾಲಿಟ್ಟೊಡನೆ ಕನ್ನಡ ಮಾತಾಡಿದರೂ ಉರ್ದುವಿನಲ್ಲಿ ಉತ್ತರ ಕೊಡುವ ಕನ್ನಡದ ಜನ! ಇನ್ನು ಬಿಜ್ಜಳನ ಕೋಟೆ ಎಂದು ಹೋದರೆ ಅದರಲ್ಲಿ ಮಸೀದಿ ಕಂಡು ನೀವು ಬೆಚ್ಚಿ ಬೀಳಬೇಕಾಗುತ್ತದೆ. ಅದು ಚಾಲುಕ್ಯರ ಕಾಲದ ನಂತರ ಎಷ್ಟೋ ದೊರೆಗಳ ಆಳ್ವಿಕೆಗೆ ಸಿಕ್ಕು ತನ್ನ ಚಹರೆಗಳನ್ನು ಪೂರ್ತಿ ಬದಲಾಯಿಸಿಕೊಂಡಿದೆ. ಅಲ್ಲಿ ಬಸವ–ಬಿಜ್ಜಳರನ್ನು ಹುಡುಕುವುದು ವ್ಯರ್ಥ.

ಇನ್ನು ಊರ ಹೊರಗೆ ಶರಣರ ಗುಹೆಗಳಿವೆ ಎಂದು ಕೇಳಿ ಹೋದರೆ, ಅಲ್ಲಿ ಎಲ್ಲವೂ ಬಸವ ಕಲ್ಯಾಣ ಪ್ರಾಧಿಕಾರದ ಕೋಟಿ ರೂಪಾಯಿಗಳ ಬಜೆಟ್ಟಿನಡಿಗೆ ಸಿಕ್ಕಿ ಕಾಂಕ್ರೀಟ್–ಗ್ರಾನೈಟುಗಳ ಅಲಂಕಾರಗಳಲ್ಲಿ ತಮ್ಮ

ಪ್ರಾಚೀನ ಸೌಂದರ್ಯ ಮತ್ತು ಪಾವಿತ್ರ್ಯಗಳನ್ನು ಕಳೆದುಕೊಂಡು ಜಡತೆಯೇ ಅಲ್ಲಿ ಮೈವೆತ್ತಂತೆ ಭಾಸವಾಗುತ್ತದೆ. ಅಕ್ಕ, ಹರಳಯ್ಯ ಇತ್ಯಾದಿ ಶರಣರು ಧ್ಯಾನ ಮಾಡಿದರೆಂದು ಹೇಳಲಾದ ಗುಹೆಗಳು ಸಿಮೆಂಟಿನ ಹಸಿ ವಾಸನೆಯೊಂದಿಗೆ ನಮ್ಮನ್ನು ದೂರ ತಳ್ಳುತ್ತವೆ. ಮಡಿವಾಳ ಮಾಚಯ್ಯನ ಹೊಂಡ ಎಂದು ಹೋದರೆ, ಆ ಹೊಂಡದಲ್ಲಿ ತುಂಬಿಕೊಂಡಿರುವ ಜೊಂಡನ್ನೂ ಕೀಳದೆ ಸುತ್ತ ಗ್ರಾನೈಟ್ ಕಾಲು ಹಾದಿ ನಿರ್ಮಿಸಿ ಮಾಚಯ್ಯನನ್ನು ಕಬ್ಬಿಣ-ಕಾಂಕ್ರೀಟಿನ ಮಹಾದ್ವಾರದ ಭವ್ಯ ಸಂಕೀರ್ಣದಲ್ಲಿ ಬಂಧಿಸಿಡುವ ಸನ್ನಾಹ ಭರದಿಂದ ಸಾಗಿರುವುದನ್ನು ಕಂಡು ಜಿಗುಪ್ಸೆ ಹುಟ್ಟುತ್ತದೆ. ಈಗಲೂ ಅಲ್ಲಿ ಮಾಚಯ್ಯನ ಜೀವ ಆಡುತ್ತಿರುವುದನ್ನು ಅಲ್ಲಿ ಇನ್ನೂ ಉಳಿದಿರುವ ಹಳೆಯ ಮರ ಗಿಡಗಳ ನೆರಳಲ್ಲಿ ಒಂದರೆಕ್ಷಣ ಕೂತಾಗ ನೀವು ಅನುಭವಿಸಬಹುದು. ಆದರೆ ಇದು ಬಹುಕಾಲ ಉಳಿಯುವುದಿಲ್ಲ. ಬಸವ ಕಲ್ಯಾಣ ಅಭಿವೃದ್ಧಿ ಪ್ರಾಧಿಕಾರದ ಜಲ್ಲಿ-ಮರಳು-ಗ್ರಾನೈಟ್ ತುಂಬಿದ ಲಾರಿಗಳು ಅಲ್ಲಿ ಹರಿದಾಡತೊಗಿವೆ. ಕಬ್ಬಿಣದ ಸದ್ದು, ಡೀಸೆಲ್ಲಿನ ದಟ್ಟ ವಾಸನೆ ಅಲ್ಲಿ ಅಡರಿಕೊಂಡಿದೆ.

ಇಡೀ ಬಸವ ಕಲ್ಯಾಣದಲ್ಲಿ ನಮಗೊಂದಿಷ್ಟು ವಚನ ಕಾಲದ ಸ್ಪಂದನ ಸಿಕ್ಕಿದ್ದು, ಯಾರೋ ಒಬ್ಬ ಬಡ ಶರಣರ ಸುಪರ್ದಿಯಲ್ಲೇ ಉಳಿದುಕೊಂಡು ಬಂದು ಅಭಿವೃದ್ಧಿ ಪ್ರಾಧಿಕಾರದ ಹದ್ದಿನ ಕಣ್ಣಿಗೆ ಇನ್ನೂ ಬೀಳದಿರುವ ಅಲ್ಲಮನ ಗದ್ದುಗೆ ಎಂದು ಕರೆಯಲಾಗುವ ಹಳೆಯ ಇಮಾರತ್ತೊಂದರಲ್ಲಿ. ನಾಲ್ಕಾರು ಮರಗಳ ಮರ್ಮರದೊಂದಿಗೆ ಸ್ಪಂದನಶೀಲವಾಗಿರುವ ಆ ಒಳ ಬಯಲು ಆವರಣದಲ್ಲಿ ಗದ್ದುಗೆ ಇದೆ. ಅದು ಬಹುಶಃ ಅಲ್ಲಮ ಕಲ್ಯಾಣದಲ್ಲಿದ್ದಾಗ ಏಕಾಂತ ಧ್ಯಾನ ಮಾಡುತ್ತಿದ್ದ ಜಾಗವಿರಬಹುದು. ಅಲ್ಲಿ ನಾವು ಒಂದರೆಕ್ಷಣ ಕೂತು ಆವರೆಗೆ ನೋಡಿ ಬಂದ ಅಭಿವೃದ್ಧಿಯ ಸುಸ್ತನ್ನು ಸುಧಾರಿಸಿಕೊಂಡೆವು. ನಾನಂತೂ ಆ ಅರೆ ಕ್ಷಣದಲ್ಲಿ ಅಲ್ಲಿನ ಬಡ ಶರಣರಲ್ಲಿ ಅಲ್ಲಮನನ್ನೇ ಕಂಡೆ. ಬಸವ ಕಲ್ಯಾಣದಲ್ಲಿ ಅದೊಂದೇ ಧನ್ಯತೆಯ ಕ್ಷಣ.

ಅಲ್ಲಿಂದ ಊಟ ಹುಡುಕಿಕೊಂಡು ಹೊರಟ ನಮಗೆ ಬಸವ ಕಲ್ಯಾಣದ ಅಂಚಿನಲ್ಲಿ ಈ ಎಲ್ಲ ಅಭಿವೃದ್ಧಿಯ ನಿವೇಶನಗಳಿಗೆ ತಾಕಿಕೊಂಡಂತೇ ಇರುವ ಮತ್ತು ಇದರ ವಿಸ್ತರಣೆಯೇ ಅದೆಂಬಂತಿರುವ ಬಸವ ಕಲ್ಯಾಣದ ಶ್ರೀಮಂತ ವ್ಯಾಪಾರಿಗಳ ಕಾಲೋನಿ ನಮ್ಮ ಕಣ್ಣು ಕುಕ್ಕಿತು. ಶರಣರ ನಿವೇಶನಗಳ ಆಧುನೀಕರಣದ ಅಧ್ವಾನಗಳ ಸೆಲೆ ಸಿಕ್ಕಂತಾಗಿ ಮನಸ್ಸು ಮುದುಡಿತು.

ಇದೆಲ್ಲದಕ್ಕೆ ಕಳಶವಿಟ್ಟಂತೆ ಅಲ್ಲೇ ಒಂದಿಷ್ಟು ದೂರದಲ್ಲಿ ಮಾತೆ ಮಹಾದೇವಿ ಬಸವಣ್ಣನ ನೂರು ನಾಲ್ಕು ಅಡಿ ಎತ್ತರದ ಪ್ರತಿಮೆ ಸ್ಥಾಪಿಸಿ ಅದರ ಸುತ್ತ ಬಹುಶಃ ನೂರಾರು ಎಕರೆ ಜಾಗದಲ್ಲಿ ನಿರ್ಮಿಸುತ್ತಿರುವ ಬಸವ ಸಂಕೀರ್ಣ ಕಂಡು ಅಯ್ಯೋ ನಾನು ಬಸವಣ್ಣನನ್ನು ಹುಡುಕಿಕೊಂಡು ಇಲ್ಲಿಗೇಕೆ ಬಂದೆ ಎಂದು ಮನಸ್ಸು ಪರಿತಪಿಸತೊಡಗಿತು. ಅಲ್ಲೇ ಸನಿಹದಲ್ಲಿಯೇ ಈ ಮಾತೆಯು ಅನುಭವ ಮಂಟಪವೊಂದನ್ನು ಕಟ್ಟಿ ಈ ದೊಡ್ಡ ಅಣಕವಾಟಕ್ಕೆ ಕಿರೀಟವಿಟ್ಟಿದ್ದಾರೆ! ಇದನೆಲ್ಲ ನೋಡಿ, ಕನ್ನಡದ ಮನಸ್ಸೇಕೆ ಇಷ್ಟು ಅಭಿರುಚಿಹೀನವಾಗುತ್ತಿದೆ ಎಂದು ನನ್ನ ಮನಸ್ಸು ವ್ಯಾಕುಲಗೊಂಡಿತು.

●

ಜುಲೈ, ೨೦೧೪

ಅನಂತಮೂರ್ತಿ, ಕಲ್ಬುರ್ಗಿ ಮತ್ತು ಪ್ರಶಸ್ತಿ ರಾಜಕಾರಣ

ಕೆಲ ದಿನಗಳ ಹಿಂದೆ ನಾನು, ನನ್ನ ಪತ್ನಿ ಸವಿತಾ ಮತ್ತು ಆಕೆಯ ಸೋದರ ಜಯವಂತ್, ಅನಂತಮೂರ್ತಿಯವರನ್ನು ಅವರ ಅಳಿಯ ವಿವೇಕ ಶಾನುಭಾಗರ ಮನೆಯಲ್ಲಿ ಭೇಟಿ ಮಾಡಿದ್ದೆವು. ಮಧುಮೇಹದ ಕಾರಣದಿಂದಾಗಿ ಮೂತ್ರ ಪಿಂಡಗಳ ದೌರ್ಬಲ್ಯ ಹೆಚ್ಚಾಗಿ ಅವರೀಗ ವಾರದಲ್ಲಿ ನಾಲ್ಕು ದಿನ ಡಯಾಲಿಸಿಸ್ ಚಿಕಿತ್ಸೆಗೆ ಒಳಗಾಗಬೇಕಿದೆ. ಇದು ಅವರನ್ನು ಸಹಜವಾಗಿಯೇ ಬಳಲಿಸಿದೆ. ಅವರ ಧ್ವನಿ ಕ್ಷೀಣಗೊಂಡಿದೆ. ಅವರನ್ನು ಈಗ ಕಂಡಾಗ, ಬಿಳಿಗಡ್ಡದ ನಡುವೆಯೂ ಸದಾ ಚಿರ ಯೌವ್ವನಿಗರಂತೆ ನನಗೆ ಕಾಣುತ್ತಿದ್ದ ಅವರು ಮೊದಲ ಬಾರಿಗೆ ನಿಜವಾಗಿ ವೃದ್ಧರಾಗಿರುವಂತೆ ಕಂಡರು.

ಅನಂತಮೂರ್ತಿಯವರು ನಾವು ಭೇಟಿ ಮಾಡಿದ ಹಿಂದಿನ ಕೆಲ ದಿನಗಳಿಂದ ಬಹಳ ನೊಂದಿದ್ದರು. ಮೋದಿ ಕುರಿತ ಅವರ ಹೇಳಿಕೆಯನ್ನು ಮಾಧ್ಯಮಗಳು ಬಳಸಿದ ರೀತಿ ಮತ್ತು ನಂತರ ಮೋದಿ ಗಳಿಸಿದ ಭಾರಿ ವಿಜಯ ಅವರನ್ನು ಮೋದಿ ಬೆಂಬಲಿಗರ ದಾಳಿಗೆ ಒಳಗಾಗಿಸಿತ್ತು. ದಿನ ನಿತ್ಯ ನಿಂದನಾ ಮೇಲ್, ಅವಹೇಳನಕಾರಿಯಾದ ದೂರವಾಣಿ ಕರೆ ಮತ್ತು ಸಂದೇಶಗಳಿಂದ ಅವರು ಜರ್ಝರಿತರಾಗಿದ್ದರು. ಈ ಮಧ್ಯೆ ಹಿರಿಯ ವಿದ್ವಾಂಸ–ಸಂಶೋಧಕ ಎಂ.ಎಂ. ಕಲ್ಬುರ್ಗಿಯವರು ಸೃಷ್ಟಿಸಿದ ಇನ್ನೆರಡು ವಿವಾದಗಳು ಅವರನ್ನು ಇನ್ನಷ್ಟು ಮನೋವ್ಯಥೆಗೆ ದೂಡಿದ್ದವು. ಅವರು ತಾವು ಒಂಟಿಯಾಗಿ ಇದನ್ನೆಲ್ಲ ಎದುರಿಸಬೇಕಾಗಿರುವ ಅಸಹಾಯಕತೆಯಿಂದ ಖಿನ್ನರಾಗಿ ಹೋಗಿರುವಂತೆ ನನಗೆ ಕಂಡರು. ಹೀಗಾಗಿ ನಾವು ಶಿವಮೊಗ್ಗದ ಅವರ ಕೆಲ ಕಿರಿಯ ಗೆಳೆಯರು,

ಅನಂತಮೂರ್ತಿಯವರ ಮೇಲಿನ ಮಾನಸಿಕ ಹಲ್ಲೆಯನ್ನು ಖಂಡಿಸಿ ಮತ್ತು ಈ ವಿವಾದಗಳ ಹಿಂದಿನ ವಾಸ್ತವಗಳನ್ನು ವಿವರಿಸಿ ಒಂದು ಪತ್ರಿಕಾ ಹೇಳಿಕೆ ನೀಡಿದೆವು. ಅನಂತಮೂರ್ತಿಯವರು ನಮ್ಮ ಈ ಸಾಂಕೇತಿಕ ನೈತಿಕ ಬೆಂಬಲದಿಂದ ಹರ್ಷಗೊಂಡಿದ್ದನ್ನು ತಿಳಿದು ನಮಗೆ ಸಮಾಧಾನವಾಯಿತು.

ಕಲ್ಬುರ್ಗಿಯವರು ಎತ್ತಿದ ಬಸವ ಪ್ರಶಸ್ತಿಯ ವಿವಾದಕ್ಕೆ ಅವರದ್ದೇ ಕಾರಣವಿದ್ದಂತಿತ್ತು. ನಮ್ಮ ಪತ್ರಿಕಾ ಹೇಳಿಕೆ ಪ್ರಕಟವಾದ ಮೇಲೆ ಅವರು ನನಗೆ ಕರೆ ಮಾಡಿ, ಈ ವಿವಾದದಲ್ಲಿ ತಮ್ಮನ್ನೇಕೆ ಬೆಂಬಲಿಸಿ ಹೇಳಿಕೆ ನೀಡಲಿಲ್ಲ ಎಂದು ಕೇಳಿದರು. ಆ ಪುರಸ್ಕಾರವನ್ನು ಅದರ ನಿಯಮಾವಳಿ ಪ್ರಕಾರ ಸಾಹಿತಿಗೆ ನೀಡುವಂತಿಲ್ಲವಾದ್ದರಿಂದ ಆ ಪ್ರಶ್ನೆಯನ್ನು ತಾವು ಎತ್ತಿದ್ದಾಗಿ ಅವರು ವಿವರಿಸಿದರು. ನಾನು, ಹಾಗಾದರೆ ಪುರಸ್ಕಾರ ಪ್ರಕಟವಾದ ಕೂಡಲೇ ನೀವೇಕೆ ಅದನ್ನು ಪ್ರಶ್ನಿಸಲಿಲ್ಲವೆಂದು ಕೇಳಿದೆ. ಹಾಗೇ, ಕಳೆದ ವರ್ಷ ಅದನ್ನು ರಂಜಾನ್ ದರ್ಗಾ ಅವರಿಗೆ ನೀಡಿದಾಗ ನೀವು ಏಕೆ ಸುಮ್ಮನಿದ್ದಿರಿ ಎಂದೂ ಕೇಳಿದೆ. ಅವರ ಉತ್ತರ ಗೊಂದಲದಿಂದ ಕೂಡಿದ್ದು, ನನಗೆ ಒಪ್ಪಿಗೆಯಾಗಲಿಲ್ಲ. ಜೊತೆಗೆ, ಈ ವಿವಾದದ ಕಹಿಯ ಮುಂದುವರಿಕೆಯಂತೆ ಕಾಣುವ ಹಾಗೆ ಅವರು ಅನಂತಮೂರ್ತಿಯವರು ತಮ್ಮ ಸಾಹಿತ್ಯ ಮನಸ್ಸು ರೂಪುಗೊಂಡ ಬಗೆ ಕುರಿತು ಹೇಳುವಾಗ ಸಾಂದರ್ಭಿಕವಾಗಿ ಬರೆದ ಮಾತುಗಳನ್ನು ಅಸಾಂದರ್ಭಿಕವಾಗಿ, ಅದೂ ತಪ್ಪಾಗಿ ಉಲ್ಲೇಖಿಸಿದ ಪರಿಯ ಬಗ್ಗೆ (ಇದೇ ತಪ್ಪನ್ನು ಮೊನ್ನೆ ಗೆಳೆಯ ಎಚ್.ಎಸ್. ಶಿವಪ್ರಕಾಶ ಅವರೂ ತಮ್ಮ 'ಪ್ರಜಾವಾಣಿ' ಅಂಕಣದಲ್ಲಿ ಮಾಡಿರುವದೇತಕ್ಕೆ ಎಂಬ ಪ್ರಶ್ನೆಯೂ ಇದೆ.) ನನ್ನ ಅಸಮಧಾನವನ್ನು ಸೂಚಿಸಿದೆ. ಅನಂತಮೂರ್ತಿ ದೆವ್ವದ ಕಲ್ಲಿನ ಬಗ್ಗೆ ಬರೆದದ್ದನ್ನು ಅವರು ದೇವರ ಪ್ರತಿಮೆಗೆ ಆರೋಪಿಸಿ ಮಾತಾಡಿದ್ದನ್ನು, ಕರಾವಳಿಯಲ್ಲಿ ಭೂತಾರಾಧನೆ ದೈವಾರಾಧನೆಗೆ ಸಮ ಎಂದು ಸಮರ್ಥಿಸಿಕೊಳ್ಳುವ ಪ್ರಯತ್ನವನ್ನು ಅವರು ಮಾಡಿದರು. ಮತ್ತು ತಾವೂ ವಚನ ಸಾಹಿತ್ಯದ ಅನುಯಾಯಿಯಾಗಿ ಮೂರ್ತಿ ಪೂಜೆಯ ಬಗ್ಗೆ ಶ್ರದ್ಧೆ ಇಲ್ಲದವರು ಎಂದೂ ಹೇಳಿದರು. ಹಾಗಿದ್ದಲ್ಲಿ ಈ ವಿಷಯ ಮಾಧ್ಯಮಗಳಲ್ಲಿ ವಕ್ರವಾಗಿ ಪ್ರಚಾರ ಪಡೆದು ಜನರನ್ನು ಪ್ರಚೋದಿಸಿದಾಗ ನೀವು ನಿಮ್ಮ ನಂಬಿಕೆಯನ್ನು ಸಮರ್ಥಿಸಿಕೊಳ್ಳುವ ನೈತಿಕ ಸ್ಥೈರ್ಯ ತೋರದೆ, ರಾಜಿ ರೀತಿಯ ಸ್ಪಷ್ಟೀಕರಣ ಏಕೆ ನೀಡಿದಿರಿ ಎಂದು ಕೇಳಿದರೆ, ಬಲಪಂಥೀಯ ಗುಂಪುಗಳು ತಮ್ಮ ಮತ್ತು ತಮ್ಮ ಕುಟುಂಬಕ್ಕೆ ಸಂಬಂಧಿಸಿದಂತೆ ಹುಟ್ಟಿಸಿದ್ದ ಭಯ–ಆತಂಕಗಳ ವಾತಾವರಣ ಹಾಗಿತ್ತು ಮತ್ತು ತಾವು ಇದೆಲ್ಲದರಿಂದ ಮುಕ್ತನಾಗಿ ತಮ್ಮ ಸಂಶೋಧನೆಯ ಕೆಲಸ ಮುಂದುವರೆಸಬೇಕಿತ್ತು ಎಂದರು.

ಒಟ್ಟಿನಲ್ಲಿ ಕಲ್ಬುರ್ಗಿಯವರು ತೀವ್ರ ಬೇಸರ ಮತ್ತು ದುಃಖದಲ್ಲಿದ್ದರು. ಮುಖ್ಯವಾಗಿ ಈ ವಿವಾದಗಳಲ್ಲಿ ತಾವು 'ಖಳ'ರಂತೆ ಚಿತ್ರಿತವಾದ ಬಗ್ಗೆ ಅವರಲ್ಲಿ ಬೇಸರವಿತ್ತು. ಮತ್ತು ತಾವೂ ಭಯ ಆತಂಕಗಳನ್ನು ಎದುರಿಸುತ್ತಿದ್ದಾಗ ತಮ್ಮ ಬೆಂಬಲ–ರಕ್ಷಣೆಗೆ ಯಾರೂ ಬರಲಿಲ್ಲ ಎಂಬ ದುಃಖವಿತ್ತು. ಇದಕ್ಕೆ ಕಲ್ಬುರ್ಗಿಯವರ ಅರ್ಧ ಸೌಜನ್ಯ

ಮತ್ತು ಅರ್ಧ ಪ್ರತಿಭಟನೆಯ ಚೌಕಾಶಿ ನಡವಳಿಕೆಯೇ ಅರ್ಧ ಕಾರಣ. ಅವರು ಬಸವ ಪ್ರಶಸ್ತಿಯ ಬಗ್ಗೆ ಅದು ಪ್ರಕಟವಾದ ಕೂಡಲೇ ಪ್ರತಿಭಟಿಸಬೇಕಿತ್ತು ಮತ್ತು ತಮ್ಮ ತಡವಾದ ಪ್ರತಿಭಟನೆಗೆ ಅನುಮಾನಾಸ್ಪದವಾದ ದಾಖಲೆಯನ್ನು ಅವಲಂಬಿಸುವ ಹುಂಬತನ ಪ್ರದರ್ಶಿಸಬಾರದಿತ್ತು. ಹಾಗೇ ಮೂಢ ನಂಬಿಕೆಗಳನ್ನು ಕುರಿತ ತಮ್ಮ ಭಾಷಣವನ್ನು, ಅದು ಸಾರ್ವಜನಿಕವಾಗಿ ವಿವಾದಾಸ್ಪದವಾದಾಗ ತಮ್ಮ ನಂಬಿಕೆಯ ಪ್ರಕಾರ ಸಮರ್ಥಿಸಿಕೊಳ್ಳುವ ನೈತಿಕ ಸ್ಥೈರ್ಯ ತೋರಬೇಕಿತ್ತು. ಆಗ ಅವರ ಅಭಿಮಾನಿಗಳು ಅವರ ಬೆಂಬಲ–ರಕ್ಷಣೆಗೆ ಬರುವ ಸಾಧ್ಯತೆ ಇತ್ತು. ಇನ್ನು ಈ ಜಿಗುಪ್ಸೆಕರ ವಿವಾದಕ್ಕೆ ಇನ್ನರ್ಧ ಕಾರಣವೆಂದರೆ ಕೆಲ ಮಾಧ್ಯಮಗಳ ಬೇಜವಾಬ್ದಾರಿ ವರ್ತನೆ. ಕೆಲ ಪತ್ರಿಕೆಗಳು ಮತ್ತು ಟಿ.ವಿ. ವಾಹಿನಿಗಳು ವಿವಾದವನ್ನು ವಿಕೃತಗೊಳಿಸಿ ಅಗ್ಗದ ಚರ್ಚೆಗಳ ಮೂಲಕ ಜನರನ್ನು ಪ್ರಚೋದಿಸಿದವು.

ಇಪ್ಪತ್ತು ನಾಲ್ಕು ಘಂಟೆಗಳ ಕಾಲ ಜನರನ್ನು ಹಿಡಿದಿಡುವ ವ್ಯಾಪಾರಿ ಒತ್ತಾಯಗಳಿಗೆ ಒಳಗಾಗಿರುವ ಈ ಕೆಲ ಮಾಧ್ಯಮಗಳು, ಯಾವುದನ್ನೂ ತಾಳೆ ನೋಡುವ ವ್ಯವಧಾನವಾಗಲೀ, ವಿವೇಕವಾಗಲೀ ಇಲ್ಲದೆ ಇದನ್ನೆಲ್ಲ ರೋಚಕಗೊಳಿಸಿ ಅಮಾಯಕ ಜನರಿಗೆ ಉಣಬಡಿಸತೊಡಗಿವೆ. ಹಾಗಾಗಿ ತಮ್ಮದೇ ವ್ಯಾಪಾರಿ ಉದ್ದೇಶಗಳಿಗಾಗಿ ಸಾರ್ವಜನಿಕ ಬದುಕನ್ನು ಆಳತೊಡಗಿರುವ ಮಾಧ್ಯಮಗಳ ಮತ್ತು ಅವನ್ನು ತಮ್ಮದೇ ಪಟ್ಟಭದ್ರ ಹಿತಾಸಕ್ತಿಗಳಿಗಾಗಿ ಬಳಸಿಕೊಳ್ಳಲು ಕಾತುರರಾಗಿರುವ ಶಕ್ತಿಗಳಿಗೆ ತಮ್ಮ ಬುದ್ಧಿ ಮತ್ತು ಬದುಕನ್ನು ಒಪ್ಪಿಸಿಕೊಳ್ಳದಂತೆ ಸಾಮಾನ್ಯ ಜನತೆ ಎಚ್ಚರ ವಹಿಸುವಂತಹ ಸಾರ್ವತ್ರಿಕ ಜಾಗೃತಿ ಉಂಟಾಗುವವರೆಗೆ ನಮ್ಮ ಲೇಖಕ–ಬುದ್ಧಿಜೀವಿಗಳು ಸ್ವಲ್ಪ ಸಂಯಮದಿಂದ, ಜಾಣ್ಮೆಯಿಂದ ವರ್ತಿಸಬೇಕಾದ ಅವಶ್ಯಕತೆ ಇದೆ. ಅದೂ, ಈ ವಿಷಯಗಳಲ್ಲಿ ಕಾಲ ಇನ್ನೂ ಕೆಡುವ ಸೂಚನೆಗಳು ಬರತೊಡಗಿರುವಾಗ.

ಪ್ರಶಸ್ತಿ–ಪುರಸ್ಕಾರಗಳ ಮೌಲ್ಯ ಅದರ ನಗದು ಮೌಲ್ಯದ ಹೊರತಾಗಿ ಇನ್ನೆಲ್ಲ ಮೌಲ್ಯವನ್ನೂ ಕಳೆದುಕೊಂಡು, ಎಲ್ಲಂದರಲ್ಲಿ ಮತ್ತು ಯಾರೆಂದರವರ ಬಳಿ ಇಟ್ಟಾಡುತ್ತಿರುವಂತೆ ಮಾಡಿರುವ ಪುಢಾರಿ ಸಾಹಿತ್ಯಿಕ–ಸಾಂಸ್ಕೃತಿಕ ರಾಜಕಾರಣವನ್ನು ಕಳೆದ ಹಲವಾರು ವರ್ಷಗಳಿಂದ ನಾವು ನಂನಮ್ಮ ಅನುಕೂಲಕ್ಕಾಗಿ ಪ್ರೋತ್ಸಾಹಿಸುತ್ತಲೋ ಅಥವಾ ಕಣ್ಮುಚ್ಚಿ ಅನುಮೋದಿಸುತ್ತಲೋ ಬಂದಿದ್ದೇವೆ. ಹೀಗಿರುವಾಗ ನಾವು ಈಗ ಈ ಪ್ರಶಸ್ತಿ ಗಳ ಬಗ್ಗೆ ಚರ್ಚೆ ಮಾಡುವ ನೈತಿಕತೆಯನ್ನು ಕಳೆದುಕೊಂಡಿದ್ದೇವೆ ಎಂದೇ ನನಗನ್ನಿಸುತ್ತದೆ. ಅನಂತಮೂರ್ತಿಯವರೊಂದಿಗೆ ಮಾತಾಡಿದಾಗ, ಅವರೂ ಬಸವ ಪ್ರಶಸ್ತಿ ಬಗೆಗಿರುವ ಗೊಂದಲದ ಪ್ರಸ್ತಾಪ ಮಾಡಿದರು. ತಾವು ಅದನ್ನು ಜೆ.ಎಚ್. ಪಟೇಲ್‌ಗೆ ಹೇಳಿ ಸ್ಥಾಪನೆ ಮಾಡಿಸಿದಾಗ ಅದು ಹೋರಾಟಗಾರನಿಗೆ (Activist) ಎಂಬ ನಿಬಂಧನೆ ಇತ್ತೆಂದು ಅವರು ನೆನಪಿಸುತ್ತಾ ಹೇಳುವಾಗ ಈ ಪ್ರಶಸ್ತಿ ಈಗ ತಮಗೆ ಸಂದಿರುವ ಬಗ್ಗೆ ಅವರು ಪುನರಾಲೋಚನೆಗೆ ತೊಡಗಿರುವಂತೆಯೂ ನನಗೆ ಕಂಡಿತು.

ಅದೇನೇ ಇರಲಿ, ಇಂದು ಸಾಹಿತ್ಯ-ಸಂಸ್ಕೃತಿಗಳನ್ನು ಕುರಿತ ಚರ್ಚೆಗಳ ಘನತೆ-ಗೌರವಗಳನ್ನು ಮರುಸ್ಥಾಪಿಸಬೇಕಾದರೆ ಅನಂತಮೂರ್ತಿ ಮತ್ತು ಕಲ್ಬುರ್ಗಿಯವರಂತಹ ಹಿರಿಯರು ಮಾಡಬೇಕಾದ ಮೊದಲ ಕೆಲಸವೆಂದರೆ, ಈ ಸರ್ಕಾರಿ ಪ್ರಶಸ್ತಿಗಳ ಸಂಖ್ಯೆಯನ್ನು ಆದಷ್ಟೂ ಕಡಿಮೆ ಮಾಡಿಸಲು ಮುಂದಾಗುವುದು. ಈ ಎಲ್ಲ ಪ್ರಶಸ್ತಿಗಳನ್ನು ಪಡೆಯುವಂತಹ ಪ್ರತಿಭಾವಂತರು ಮಾತ್ರವಲ್ಲ, ಅವನ್ನು ನೀಡುವಂತಹ ಪ್ರಬುದ್ಧ ಪ್ರಭುತ್ವದ ಕಾಲ ಕೂಡ ಮುಗಿದಂತೆ ಕಾಣುತ್ತದೆ. ಇತ್ತೀಚೆಗೆ, ಘನತೆವೆತ್ತ ಹೆಸರುಗಳುಳ್ಳ ಈ ಕೆಲವು ಪ್ರಶಸ್ತಿಗಳನ್ನು ಸ್ವೀಕರಿಸುತ್ತಿರುವ ಹಲವು ಮುಖಗಳನ್ನು ಕಂಡರೆ ನಿಮಗೆ ಹಾಗೆನಿಸುವುದಿಲ್ಲವೇ?

●

ಆಗಸ್ಟ್, ೨೦೧೪

<u>ಅನಂತಮೂರ್ತಿಯವರ ಕೊನೆಯ ಸಂದರ್ಶನ:</u>

ನಾವು ಕುವೆಂಪು ಅವರ ಮುಂದುವರಿಕೆ: ಯು.ಆರ್. ಅನಂತಮೂರ್ತಿ

ಕನ್ನಡದ ಏಕೆ, ಭಾರತದ ಸಮಕಾಲೀನ ಲೇಖಕರ ಪೈಕಿ ಮಹತ್ವಪೂರ್ಣ ಲೇಖಕರಲ್ಲೊಬ್ಬರಾಗಿರುವ ಯು.ಆರ್. ಅನಂತಮೂರ್ತಿಯವರು ಲೇಖಕ ಮಾತ್ರವಲ್ಲ, ಸಾಂಸ್ಕೃತಿಕ ಮತ್ತು ರಾಜಕೀಯ ಚಿಂತಕ ಹಾಗೂ ವ್ಯಾಖ್ಯಾನಕಾರರಾಗಿಯೂ ಹೆಸರು ಮಾಡಿದವರು. ತಮ್ಮ ಹಲವು ವಿವಾದಾತ್ಮಕ ಹೇಳಿಕೆಗಳ ಮೂಲಕ ಈ ಮೂರೂ ಕ್ಷೇತ್ರಗಳಲ್ಲಿ ಬಿಸಿ ಬಿಸಿ ಹಾಗೂ ಅರ್ಥಪೂರ್ಣ ಚರ್ಚೆಗಳಿಗೆ ಕಾರಣರಾದವರು ಮತ್ತು ಟೀಕೆ–ನಿಂದನೆಗಳಿಗೂ ಸಿಕ್ಕಿ ಬಳಲಿದವರು. ಎಂಬತ್ತನ್ನೂ ಮೀರಿದ ತಮ್ಮ ಈ ಇಳಿ ವಯಸ್ಸಿನಲ್ಲಿಯೂ ಬತ್ತದ ಜೀವನೋತ್ಸಾಹದೊಂದಿಗೆ ಸಾರ್ವಜನಿಕ ಜೀವನದ ಎಲ್ಲ ಚರ್ಚೆಗಳಲ್ಲೂ ಪಾಲ್ಗೊಳ್ಳುತ್ತಿರುವ ಅನಂತಮೂರ್ತಿಯವರನ್ನು, ಈ ಎಲ್ಲ ಹಿನ್ನೆಲೆಯೊಂದಿಗೆ 'ಹೊಸ ಮನುಷ್ಯ'ಕ್ಕಾಗಿ ಇಲ್ಲಿ ಒಂದು ಬಿಚ್ಚುಮನಸ್ಸಿನ ಮಾತುಕತೆಗೆ ಎಳೆಯುವ ಪ್ರಯತ್ನ ಮಾಡಿದೆ. ಇದರ ಫಲವೆಂಬಂತೆ ಅವರ ಬಾಯಿಂದ ಕೆಲ ಹೊಸ ಸತ್ಯಗಳು ಹೊಮ್ಮಿ, ಕಳೆದ ಐವತ್ತು ವರ್ಷಗಳ ಕನ್ನಡ ಸಾಹಿತ್ಯ ಚರಿತ್ರೆಯ ಒಂದು ಪುನರ್ನಿರೂಪಣೆಯೂ ಸಾಧ್ಯವಾಗಿದೆ ಎನ್ನಿಸುತ್ತದೆ. ೨೦೧೪ರ ಜೂನ್ ೧೪ರಂದು ಅನಂತಮೂರ್ತಿಯವರ ಅಳಿಯ ವಿವೇಕ ಶಾನುಭಾಗರ ಮನೆಯಲ್ಲಿ ನಡೆದ ಈ ಸಂದರ್ಶನ ಬಹುಶಃ ಅವರೊಡನೆ ದಾಖಲಾದ ಕೊನೆಯ ಸಂದರ್ಶನವೆಂದು ಕಾಣುತ್ತದೆ:

ನೀವು ಕನ್ನಡದ ತುಂಬ ಮಹತ್ವದ ಲೇಖಕರು. ಲೇಖಕರು ಅಂದ್ರೆ ಬರೀ ಸೃಜನಶೀಲ ಅಂತ ಸಾಮಾನ್ಯವಾಗಿ ಕರೆಯುವಂತಹ ಲೇಖಕರು

ಮಾತ್ರ ಅಲ್ಲ. ಸಾಹಿತ್ಯ–ಸಂಸ್ಕೃತಿ–ರಾಜಕಾರಣಗಳನ್ನು ಕುರಿತು ಒಟ್ಟೊಟ್ಟಿಗೇ ಚಿಂತಿಸಿದ್ರೋ, ಜಿಜ್ಞಾಸೆ ಮಾಡಿರೋ ಲೇಖಕರು ಕೂಡ. ನೀವು ನವ್ಯ ಸಾಹಿತ್ಯ ಸಂಪ್ರದಾಯದ ಒಬ್ಬ ಹರಿಕಾರರು ಕೂಡ ಅಂತ ಹೇಳಬಹುದೇನೋ. ಆದ್ದರಿಂದ ನಮ್ಮ ಮಾತುಕತೆಯನ್ನು ಅಲ್ಲಿಂದ ಆರಂಭಿಸಬಹುದೂಂತ ಕಾಣುತ್ತೆ. ಈ ನವ್ಯ ಪಂಥದ ಬಗ್ಗೆ ಒಂದು ಅಭಿಪ್ರಾಯ ಇದೆ ಸರ್, ಅದು ಕನ್ನಡ ಸಾಹಿತ್ಯ ಆವರೆಗೆ ಸತತವಾಗಿ ಕಾಪಾಡಿಕೊಂಡು ಬಂದಿದ್ದ ತನ್ನ ಪರಂಪರೆಯೊಂದಿಗಿನ ಸಾವಯವ ಸಂಬಂಧವನ್ನು ಕಡಿದುಕೊಂಡಿತು ಅಥವಾ ಕಡಿದು ಹಾಕಿತು ಅಂತ. ಇದರ ಬಗ್ಗೆ ನೀವೇನು ಹೇಳ್ತೀರಾ ಸರ್?

ಕಡಿದು ಹೋಗಬಹುದಿತ್ತು, ಆದರೆ ಕಡಿದು ಹೋಗಲಿಲ್ಲ. ಅಸಂಗತವಾದದ ಹೆಸರಲ್ಲಿ ಕೆಲವು ಪ್ರಯೋಗಗಳು ನಡೆದವು. ನ.ರತ್ನ ಮಾಡಿದ್ದ, ಕೆ. ಸದಾಶಿವ ಮಾಡಿದ್ದ, ನಾನೂ ಮಾಡಿದ್ದೆ. ಆದರೆ ಅಡಿಗರು ಮಾಡಿರಲಿಲ್ಲ. ಅವರ ಮಟ್ಟಿಗೆ ಅಡಿಗರು ಪರಂಪರೆಯಿಂದಲೇ ಬಂದವರು. ಅವರನ್ನು ನಾವು ದೃಢವಾಗಿ ಹಿಡಿದುಕೊಂಡಿದ್ದರಿಂದ ಕನ್ನಡವನ್ನ ಸರಿಯಾಗಿ ಬರೀಬೇಕು, ಛಂದಸ್ಸು ತಪ್ಪಬಾರದು, ಸಾಹಿತ್ಯದ ಮರ್ಯಾದೆಗಳನ್ನು ಮೀರಬಾರದು ಇದನ್ನು ಕಲಿತ್ವಿ ನಾವು. ಅಡಿಗರು ತಿದ್ದತಾ ಇದ್ದರು ನಮ್ಮನ್ನ. ಆದ್ರಿಂದ ನಾವು ಎತ್ಲೆತ್ಲೋ ಹೋಗ್ಲಿಲ್ಲ. ಮತ್ತು... ಈಗ ತೇಜಸ್ವಿ ತಗೊಳ್ಳಿ. ಅವನು ನಮ್ಮ ನವ್ಯರ ಜೊತೆಗೆ ಬರ್ದೇ ಇದ್ದಿದ್ರೆ, ಅವನು ಕುವೆಂಪು ಅವರ ಸುತ್ತ ಒಂದು ಗುಂಪಿತ್ತಲ್ಲ, ಅಲ್ಲೇ ಇದ್ದಿದ್ರೆ ಕ್ರಿಯೇಟೀವ್ ಆಗ್ತಿರಲಿಲ್ಲ. ಅದೇನೇ ನಾನು ಹೇಳೋದು... ಕೆದಕುವ, ಹುಡುಕುವ, ಪ್ರಶ್ನಿಸುವ ಅನುಮಾನಿಸುವ ಗುಣ ಇತ್ತು. ಅದು ಅತಿ ಆಗಿ ಇರ್ತಿತ್ತು ಕೆಲವು ಸಲ. ಯಾವಾಗಲೂ ನೀನು ಕಂಡ ಸತ್ಯವನ್ನು ಹೇಳಬೇಕು ಅಂತಿದ್ರೆ ಅತಿಗೆ ಹೋಗೋದಕ್ಕೆ ಹೆದರಬೇಡ ಅಂತ ಬ್ಲೇಕ್ ಹೇಳ್ತಾ ಇದ್ದ. Gateways of Heaven open to those who go to the extreme. ಆದರೆ ನಾವು ಆ ಅತಿಗೆ ಹೋಗಲಿಲ್ಲ ಕಮೂ ತರ. ಕಮೂ ಹೋಗಿದ್ದ. ಕಮೂ ಈಸ್ ಎ ಗ್ರೇಟ್ ರೈಟರ್ ಇವೊತ್ತೂ!

ಆದರೆ ನವ್ಯ ಬಂದ ಮೇಲೆ ಕನ್ನಡದ ಓದುಗ ವರ್ಗದ ಸ್ವರೂಪವೇ ಬದಲಾಯಿತು ಮತ್ತು ಅದಕ್ಕಿಂತ ಹೆಚ್ಚಾಗಿ ಸಾಹಿತ್ಯ ಅನ್ನೋದು ಒಂದು ಪರಿಣಿತ ಅನ್ನಬಹುದಾದ ಸೀಮಿತ ವರ್ಗಕ್ಕೆ ಸಂಕುಚಿತಗೊಂಡ್ತು ಅನ್ನೋ ಮಾತು ಕೂಡ ಇದೆ.

ಅದನ್ನು ಮೊಕಾಶಿನೂ ಹೇಳ್ತಾ ಇದ್ರು, ಅವರು ಹೇಳೋರು, ತರಾಸುಗೆ ಒಂದು ಓದುಗ ವರ್ಗ ಇತ್ತು. ನೀವು ಅಂತದನ್ನ ಕಳಕೊಂಡ್ರಿ ಅಂತ. ನಾವು ಕೆಲವು ಸಲ ಉದ್ದೇಶಪೂರ್ವಕವಾಗಿಯೇ ಕಳಕೊಂಡ್ವಿ, ನಂಗೆ ಬಹಳ ಜನ ಓದಬೇಕು ಅಂತಾನೇ ಇರಲಿಲ್ಲ. ಒಂದು ಎಂಟು ಹತ್ತು ಜನ ಒಬ್ರಿಗೊಬ್ಬರು ನಮ್ಮೊಳಗೇ ಓದಿಕೊಂಡ್ರೆ ಸಾಕು. ನನಗೆ ನಾನೇ ಹೇಳಿಕೊಂಡ್ರೆ ಸಾಕು. ಅಷ್ಟರಮಟ್ಟಿಗೆ ಹೋಗಿದ್ರಿಂದಲೋ ಏನೋ ಒಂದು ಹೊಸತನ್ನ ಹುಟ್ಟಿಸೋಕೆ ನಮ್ಮ ಮೂರೂ ಜನಕ್ಕೆ–ನಾನು, ಲಂಕೇಶ್, ತೇಜಸ್ವಿಗೆ–ಸಾಧ್ಯ ಆಯಿತು.

ಆದರೆ ಸಾಹಿತ್ಯ ಕೆಲವರಿಗೆ ಮಾತ್ರ ಅಂತಾಗಿ ಅದು ಒಂದು ದೊಡ್ಡ ಓದುಗ ವರ್ಗವನ್ನು ಕಳಕೊಂಡಿದ್ದಂತೂ ನಿಜವಲ್ಲವಾ ಸರ್?

ಈಗ ಪಡೆದಿದೆ. ಕ್ರಮೇಣ ಪಡೀತಾ ಇದೆ.

ಹೀಗೆ ಕಳಕೊಂಡಿದ್ದರ ಹಿಂದೆ ನವೋದಯದ ಲೇಖಕರು ಪಶ್ಚಿಮದ ವಿಚಾರಗಳನ್ನ, ಪ್ರಭಾವಗಳನ್ನ ಅರಗಿಸಿಕೊಂಡು internalise ಮಾಡಿಕೊಂಡಂತೆ-ರಕ್ತಗತ ಮಾಡಿಕೊಂಡಂತೆ ನೀವು ನವ್ಯರು ಮಾಡಿಕೊಳ್ಳಕ್ಕಾಗದ ಕೊರತೆನೂ ಇದೆ ಅಂತ ಅನ್ನಿಸುತ್ತೆ.

ಇಲ್ಲ. ಇಲ್ಲ ನಾವು ಸಿಕ್ಕಾಪಟ್ಟೆ ಮಾಡಿಕೊಂಡ್ವಿ. ನಾನು ಇಡೀ ಬ್ರಾಹ್ಮಣ ವರ್ಗವನ್ನ ಟೀಕಿಸಿದ ಕ್ರಮ ಇದೆಯಲ್ಲ ಅದರಲ್ಲಿ ಪಶ್ಚಿಮದ ಪ್ರಭಾವ ಒಂತರದಲ್ಲಿ ಇದೆ. ಹೇಗೆ ಕುವೆಂಪು ಆಗಿನ ಕಾಲದ ಸಾಹಿತ್ಯದ ಐರೋಪ್ಯೀಕರಣದ ಮುಖ್ಯ ಲೇಖಕರೋ... He got more from Europe than any other writer. We are a continuation of Kuvempu and not Gokak. ಕುವೆಂಪೂನ ಪ್ರಶ್ನಿಸ್ತಾನೇ ನಾವು ಕುವೆಂಪೂನ continue ಮಾಡಿದಿವಿ.

ಹಾಗಿದ್ದರೆ 'ಗತಿಸ್ಥಿತಿ' ಅಂತಹ ಕಾದಂಬರಿ ಬಂದಾಗ ಅದನ್ನ ಸಿಕ್ಕಾಪಟ್ಟೆ ಹೊಗಳಿ ಅಟ್ಟಕ್ಕೇರಿಸಿದ ನೀವು 'ಮಲೆಗಳಲ್ಲಿ ಮದುಮಗಳು'ನಂತಹ ಕಾದಂಬರಿ ಬಂದಾಗ ಅದೊಂದು ಮಹತ್ವದ ಕಾದಂಬರಿ ಅಂತ ಗುರುತಿಸೋದಕ್ಕೆ ಏಕೆ ಸಾಧ್ಯವಾಗಲಿಲ್ಲ ಸರ್?

ಆಗ ನಾವು ತುಂಬ ತಪ್ಪು ಮಾಡಿದಿವಿ. ನಂಗೆ ಅದು ಗ್ರೇಟ್ ನಾವೆಲ್ ಅಂತ ಅನ್ನಿಸಿದ್ದು ಆಮೇಲೆ. ಆಗ ನಾನು ಏನಂದೆ, ಅದು ವಿವರಗಳಲ್ಲಿ ಸೊಕ್ಕಿದೆ, ಜಾಸ್ತಿ ಇದೇಂತ ಹೇಳಿದೆ. ಅದಕ್ಕೆ ಒಂದು ಕಾರಣ ಇತ್ತು. ನನಗೊಂದು ಸಿದ್ಧಾಂತ ಇತ್ತು. ಈಗ ನೋಡಿ, ಮೇಜನ್ನ ವರ್ಣಿಸುವಾಗ ಅದರಲ್ಲಿರುವ ಎಲ್ಲ ವಿವರಗಳನ್ನೂ ಹೇಳ್ತಾ ಹೋದ್ರೆ ಮೇಜೇ ಕಣ್ಮರೆಯಾಗುತ್ತೆ. ಮುಖ್ಯವಾದ ವಿವರಗಳನ್ನ ಒಟ್ಟಿಗೇ ಹೇಳಿದಾಗ ಮೇಜು ಕಾಣುತ್ತದೆ. ಅದನ್ನು ನಾವು significant detailss ಅಂತೀವಿ. ನಾನು ಏನು ತಿಳಕೊಂಡಿದ್ದೆ ಅಂದ್ರೆ 'ಮಲೆಗಳಲ್ಲಿ ಮದುಮಗಳು'ನಲ್ಲಿ ಅವರು significant detailss ಹುಡುಕ್ತಾ ಇಲ್ಲ, ಎಲ್ಲವನ್ನೂ ಒಟ್ಟಿಗೇ ಹೇಳ್ತಾರೆ. ಅದಕ್ಕೆ ತೇಜಸ್ವಿ ಹೇಳಿದ್ದ, ನೀನು ಒಂದು ಅಪಾರವಾದ ಬಯಲನ್ನು ಕಂಡ್ರೆ ಹೇಗೆ ಸುಖಿಸ್ತೀಯೋ ಹಾಗೆ ಅಂತಹ ಅಪಾರವಾದ ಬಯಲನ್ನು ಕುವೆಂಪು ತೆರೀತಾ ಇದಾರೇಂತ. ಆದ್ರೆ ಅವನ ಜೊತೆಗೂ ನಾನು ಜಗಳ ಆಡ್ತಾ ಇದ್ದೆ.

ಅಂದರೆ ಸಾಹಿತ್ಯ ಅಂದರೇನು ಅನ್ನುವ ನಿಮ್ಮ ಗ್ರಹಿಕೆಯ ದೋಷ ಇದು...

ಇರಬಹುದೇನೋ. ಆದರೆ ನನಗೆ ಅಚ್ಚುಕಟ್ಟಾದ, ಬಿಗಿಯಾದ ಬಂಧದ ಪದ್ಯ ರೂಪದಲ್ಲಿ ಸಾಹಿತ್ಯ ಇರಬೇಕು ಅನ್ನುವ ನಂಬಿಕೆ ಇತ್ತು.

ಸಾಹಿತ್ಯದ ಈ ಡೆಫಿನೆಷನ್ ಅಥವಾ ನಿಮ್ಮ ಈ ನಂಬಿಕೆ ಸರಿ ಅನಿಸುತ್ತಾ ಸರ್ ಈಗ?

ಈಗ ಕೆಲವರಿಗೆ ಸರಿ ಅನ್ನಿಸದೇ ಇರಬಹುದು. ಆದರೆ ಆಗ ನಮಗೆ ಆ ರೀತಿಯ ಬರವಣಿಗೆ ಅಗತ್ಯ ಅನಿಸಿತ್ತು. I won't regret it. ಆಗ ನಾನು 'ಘಟಶ್ರಾದ್ಧ' ಬರೆದೆನಲ್ಲ... ಒಂದು ಮಗುವನ್ನು ಹಿಡಿದು ಆ ಮಗುವಿನ ಕಣ್ಣಿನ ಮೂಲಕವೇ ನೋಡ್ತಾ–ಅದರಲ್ಲಿ ಯಾವ ಬೇರೆ ವಿಷಯವನ್ನೂ ತರದೆ–ಒಂದು ಹೆಣ್ಣು ಮತ್ತು ಒಂದು ಮಗು ಒಬ್ಬರಿಗೊಬ್ಬರು ಹತ್ತಿರ ಆಗೋದು, ಅವಳ ಗರ್ಭದಲ್ಲಿ ಇರುವ ಮಗುವೇ ಇವನಾಗೋದು... ಇವನು ಗರ್ಭದಲ್ಲಿ ಇರೋ ಮಗುವಾಗೋದು ಬರೆದೆ. ನೋಡಿ ಎಷ್ಟು tight ಆದ construction. ಕನ್ನಡಕ್ಕೆ ಅದು ಬೇಕಿತ್ತು. (ಅಡಿಗರ) 'ಭೂತ'ದಂತಹ construction ಬೇಕಿತ್ತು. ಇಡೀ ಕನ್ನಡದಲ್ಲಿ ಬೇಂದ್ರೆ ಅವರ ಕೆಲವು ಪದ್ಯಗಳಲ್ಲಿ ಆ ತರದ ರಚನೆ ಇದೆ. ಕುವೆಂಪು ಕಾದಂಬರಿಗಳಲ್ಲಿ ಆ ತರದ ರಚನೆಗೂ ವಿರೋಧವಾದ ಒಂದು ಬಾಹುಳ್ಯ ಇದೆ. ಆದರೆ ಈ ಬಿಗಿಯಾದ ರಚನೆಗೂ ಜಾಗ ಇದೆ. ಅದು ಏನಪ್ಪಾ ಅಂದ್ರೆ ಅದು ಮೂರ್ತ ರೂಪ ಪಡೆದು ಅತ್ತಿತ್ತ ಹರಿಯಲ್ಲ.

ಇದೇ ಸಂದರ್ಭದಲ್ಲಿ ಪ್ರಸ್ತಾಪಿಸಬಹುದಾದಂತಹ ಒಂದು ಚಾರಿತ್ರಿಕ ಸಂಗತಿ ಅಂದರೆ, ಇಂತಹ ಸಾಹಿತ್ಯ ಮೀಮಾಂಸೆಯನ್ನು ನಮ್ಮ ಜಾತಿ ಪದ್ಧತಿಯ ಹಿನ್ನೆಲೆಯಲ್ಲಿ ವಿಶ್ಲೇಷಿಸ್ತಾ, ವಿರೋಧಿಸ್ತಾ ಅಖಿಲ ಕರ್ನಾಟಕ ಬರಹಗಾರರ ಮತ್ತು ಕಲಾವಿದರ ಒಕ್ಕೂಟ ಹುಟ್ಟಿಕೊಳ್ತು. ನಿಮ್ಮ 'ಭಾರತೀಯ ಸಂಸ್ಕೃತಿ ಮತ್ತು ಕನ್ನಡ ಲೇಖಕ' ಅನ್ನೋ ಲೇಖನವನ್ನೇ ಪ್ರಧಾನವಾಗಿ ಇಟ್ಟುಕೊಂಡು ಅದನ್ನು ಕಟುವಾಗಿ ಟೀಕಿಸ್ತಾ ತೇಜಸ್ವಿ ಹೊಸ ಸಾಹಿತ್ಯ ಮೀಮಾಂಸೆಯನ್ನ ಮಂಡಿಸಿದರು. ಈ ಒಕ್ಕೂಟಕ್ಕೆ ನಮ್ಮ ಸಾಹಿತ್ಯ ಚರಿತ್ರೆಯಲ್ಲಿ ಒಂದು ಮಹತ್ವದ ಸ್ಥಾನ ಇದೇಂತ ಅನ್ನಿಸುತ್ತಾ ನಿಮಗೆ?

ಖಂಡಿತ ಇದೆ. ಇನ್ನೊಂದು ಹೇಳ್ತೀನಿ. ಆ ಒಕ್ಕೂಟ ನನ್ನನ್ನ ಒಳಗೆ ಬಿಟ್ಕೊಳ್ಳಲಿಲ್ಲ. ಅದರಿಂದ ಆಲನಹಳ್ಳಿ ಕೃಷ್ಣ ಸಿಟ್ಟಿಗೆದ್ದ. ತೇಜಸ್ವಿ ಮಧ್ಯರಾತ್ರೀಲಿ ನನ್ನ ಮನೆಗೆ ಬಂದು ನನ್ನನ್ನ ಎಬ್ಬಿಸಿ, 'ನಿಮ್ಮನ್ನ ಬಹಳ ಕೆಟ್ಟದಾಗಿ ಬೈಯ್ತಾ ಇದ್ದೀವಿ... ಆದ್ರೆ ಇದರಿಂದ ನೀವು ಜಾತಿವಾದಿ ಆಗ್ಬಾರ್ದು' ಅಂತ ಹೇಳ್ದ. It was a very affectionate Statement. ನಾವು ಹೀಗೇ ಹೇಳ್ತೀವೀಂತ ನೀವು ತಿರುಗೇಟು ನೀಡಬಾರ್ದು ಅಂತ.

ಆಗ ಲಂಕೇಶ್ ಕೂಡ ಅಸಮಧಾನಗೊಂಡಿದ್ರೂಂತ ಕೇಳಿದ್ದೀನಿ.

ಆಗ ನಾನು ಲಂಕೇಶನಿಗೆ ಹೇಳ್ದೆ. ನೀನು ಲಿಂಗಾಯತ, ನಿನಗೆ ಬ್ರಾಹ್ಮಣರನ್ನು ಬೈಯೋದಕ್ಕೆ, ಜಾತಿ ಮೇಲೆ ಒಗ್ಗಟ್ಟಾಗೋದಕ್ಕೆ ಹತ್ತು ಪರ್ಸೆಂಟ್ ಅಧಿಕಾರ ಇದೆ. ಹೊಲೇರವನಿಗೆ ಅಂಥ ನೂರು ಪರ್ಸೆಂಟ್ ಅಧಿಕಾರ ಇದೆ. ಗೌಡ್ರಿಗೊಂದು ೫೦ ಪರ್ಸೆಂಟ್ ಅಧಿಕಾರ ಇದೆ. ನನಗೆ ಯಾವ ಪರ್ಸೆಂಟೂ ಅಂಥ ಅಧಿಕಾರ ಇಲ್ಲಾಂತ ತಿಳಕೊಂಡೋನು ನಾನು. ಆಗ ಕೆಲವು ಬ್ರಾಹ್ಮಣ ಲೇಖಕರು ಬಂದು ನಾವೂ ಒಂದು ಒಕ್ಕೂಟ ಮಾಡ್ಕೊಂಡು ಒಗ್ಗಟ್ಟಾಗಬೇಕು ಅಂತ ಅಂದ್ರು. ನಾನು ಹೇಳ್ದೆ, ನಾವು

ಆಗಬಾರ್ದು. ಯಾಕೆ ಆಗ್ಬಾರ್ದು ಅಂದ್ರೆ, ಶೂದ್ರರಲ್ಲಿ ಪಬ್ಲಿಷರ್ಸ್ ಇರಲಿಲ್ಲ, ಪತ್ರಿಕೆಗಳಲ್ಲಿ ಅವರು ಇರಲಿಲ್ಲ. ಎಲ್ಲ ಬ್ರಾಹ್ಮಣಮಯ ಆಗಿತ್ತು. ಆಗ ಇಂತಹ ಒಂದು ಚಳುವಳಿ ಬಂದ ನಂತರ ಹೊಸ ಪ್ರಕಾಶಕರು ಹುಟ್ಟಿಕೊಂಡ್ರು, ಹೊಸ ಲೇಖಕರು ಬಂದ್ರು, ಅದಕ್ಕೇ ನಾನು ಅದನ್ನು ವಿರೋಧ ಮಾಡ್ಲಿಲ್ಲ. ಆದರೆ ಅವರ ಪರವಾಗಿ ನಿಂತು ಸಿಕ್ಕಾಪಟ್ಟೆ ಮಾತಾಡೋದು ಕೂಡ ಅವರನ್ನು ಓಲೈಸುವ ಗುಣ ಅಂತ ಕಾಣುವ ಸಾಧ್ಯತೆ ಇತ್ತು. ಚೆನ್ನಾಗಿದ್ರೆ ಚೆನ್ನಾಗಿದೆ ಅಥವಾ ಚೆನ್ನಾಗಿಲ್ಲ ಅನ್ನಿಸಿದ್ರೆ ಚೆನ್ನಾಗಿಲ್ಲ ಅಂತ ಹೇಳೋ ನಿಲುವಿಗೆ ಬಂದೆ ನಾನು.

ಆ ಒಕ್ಕೂಟದ ಭಾಷಣದಲ್ಲಿ ತೇಜಸ್ವಿ ನವ್ಯ ಸಾಹಿತ್ಯ ಅನ್ನೋದು ವೈದಿಕ ರಾಜಕಾರಣದ ವಿಸ್ತರಣೆ ಅನ್ನೋ ರೀತಿ ವಿಶ್ಲೇಷಣೆ ಮಾಡ್ತಾರೆ. ಅದನ್ನು ನೀವು ಒಪ್ತೀರಾ ಸರ್?

ಅದು ತಪ್ಪು ಅಂತ ಹೇಳ್ತೀನಿ. ವೈದಿಕ ಅನ್ನೋ ಶಬ್ದಾನ ಧಾರಾಳವಾಗಿ, ಬಹು ಸುಲಭವಾಗಿ ಬಳಸ್ತಾ ಇದೀವಿ. ಒಂದು ನೋಡ್ರಿ, Kuvempu attacked ವೈದಿಕ ಸಂಸ್ಕೃತಿ. ಅದ್ರಿಂದ ವೈದಿಕ ಸಂಸ್ಕೃತಿ ಬೆಳಗೋ ಹಂಗೆ ಮಾಡಿದ್ರು. ಉಪನಿಷತ್ತು ಬೆಳಗೋ ಹಂಗೆ ಮಾಡಿದ್ರು, ಪರಮಹಂಸರು ಬೆಳಗೋ ಹಂಗೆ ಮಾಡಿದ್ರು, ನಾರಾಯಣ ಗುರು attacked ವೈದಿಕ ಸಂಸ್ಕೃತಿ. But he saved ವೈದಿಕ ಸಂಸ್ಕೃತಿ. ಯಾಕೆ ವೈದಿಕ ಸಂಸ್ಕೃತಿಯನ್ನ attack ಮಾಡಿದವರೆಲ್ಲರೂ ವೈದಿಕ ಸಂಸ್ಕೃತಿಯನ್ನೇ ಉಳಿಸಿ ಬೆಳೆಸಿದರು? ಮತ್ತಷ್ಟು ತಿದ್ದಿ ಅದನ್ನು ಸರಿ ಮಾಡಿದ್ರು? ಅನ್ನೋದನ್ನ historical ಪ್ರಶ್ನೆಯಾಗಿ ನಾವು ತಗೊಳ್ಳಬೇಕು. ಅದನ್ನ ಟ್ಯಾಗೋರ್ ತಗೊಂಡಿದಾರೆ. ಬೌದ್ಧರು ಇಡೀ ಭಾರತದ ಇದನ್ನೇ change ಮಾಡೋಕೆ ಶುರು ಮಾಡಿದಾಗ ಒಂದು ರೀತಿಯ ಅರಾಜಕತೆ ಉಂಟಾಯಿತು. ಬ್ರಾಹ್ಮಣರು ಬಂದು ಅದನ್ನು save ಮಾಡಿದರು.

ಎಲ್ಲೋ ಒಂದು ಕಡೆ ವೈದಿಕ ಸಂಸ್ಕೃತಿಯ ಅತಿಗೆ ಹೋಗದೇ ಇರುವ ಒಂದಿದೆ. ಅದು intensityಗೆ ಅವಕಾಶ ಮಾಡಿಕೊಡ್ತು. ಈ intensityಗೆ ಅವಕಾಶ ಮಾಡಿಕೊಡಬೇಕಾದ್ರೆ ನೀನು ಬಸವಣ್ಣನ ಹಾಗೆ ಆಗಬೇಕು. ಜನಿವಾರ ಕಿತ್ತು ಒಗೀಬೇಕು. Intensity ಇಲ್ದೆ ಎಲ್ಲರ ಜೊತೆ ಒಪ್ಪಂದ ಮಾಡಿಕೊಂಡ್ರೆ, ಸರಿ ಮಾಡಿಕೊಳ್ಳಬೇಕಾದ್ರೆ ಅದನ್ನ ಹಾಕ್ಕೋಬೇಕು. ಹಾಕ್ಕೋಬೇಕು ಅಂತ ಅಲ್ಲ. ನಾನು ತಾತ್ವಿಕವಾಗಿ ಹೇಳ್ತಾ ಇರೋದು. ಅರ್ಥ ಆಯ್ತಲ್ಲಾ? ಆವಾಗ ಏನಾಯ್ತು? ನಾರಾಯಣ ಗುರು ಮತ್ತೆ ಇದಕ್ಕೇ ಬಂದ್ರು. ಎಲ್ಲರೂ ವೈದಿಕ ಸಂಸ್ಕೃತಿಯನ್ನ attack ಮಾಡಿದವರು critical insiders. ಪುಟ್ಟಪ್ಪ was a critical insider of whole ವೈದಿಕ ಸಂಸ್ಕೃತಿ. ಅದರಲ್ಲಿ ತಗೋಬೇಕಾದ್ದೂ ಇದೆ, ಬಿಡಬೇಕಾದ್ದೂ ಇದೆ. ಅದರಲ್ಲಿ ಅತ್ಯಂತ ಹೀನವಾದದ್ದು ಏನೂಂದ್ರೆ ಅದು ಸೃಷ್ಟಿಸುವ ವರ್ಣ ವ್ಯವಸ್ಥೆ. ಮೇಲು-ಕೀಳು ಅನ್ನೋ ವ್ಯವಸ್ಥೆ. ಅದು ಎಷ್ಟು ಜಾಣ ವ್ಯವಸ್ಥೆ ಅಂದ್ರೆ ಇದರಲ್ಲಿ ಕೆಳಗಿನವರು ಮೇಲೆ ಬರೋದಕ್ಕೆ ಯಾವತ್ತೂ ಅವಕಾಶವನ್ನು ಅದು ಹೊರಗಿಟ್ಟಿತ್ತು.

ನಮ್ಮ ರಾಜರೆಲ್ಲ ಶೂದ್ರರೇ. ಬ್ರಾಹ್ಮಣರೆಲ್ಲ ಹೊಗಳ್ತಾ ಇದ್ದದ್ದು ಇಂತಹ ರಾಜರನ್ನೇ. India went on being what it is. ಅದಕ್ಕೇನೇ ಅಡಿಗರ 'ಬತ್ತಲಾರದ ಗಂಗೆ' a great poem. ಈ ಗಂಗೆ ಬತ್ತೋಕ್ಕೆ ಸಾಧ್ಯವೇ ಇಲ್ಲ. ಇಲ್ದೇ ಹೋಗಿದ್ರೆ ಒಂದು ಹೊಸ ಸಂಸ್ಕೃತಿ ಹುಟ್ತಾ ಇತ್ತು.

ಆದ್ರೆ ಅಡಿಗರು 'ಮತ್ತೆ ಮೊಳಗಲಿ ಪಾಂಚಜನ್ಯ' ಮತ್ತು 'ನಾನು ಹಿಂದೂ ನಾನು ಬ್ರಾಹ್ಮಣ' ಅನ್ನೋ ಪದ್ಯಗಳನ್ನೂ ಬರೆದಿದ್ದಾರೆ!

ಕೆಟ್ಟ ಪದ್ಯಗಳು ಅವು.

ಅವು ಬರೀ ಕೆಟ್ಟ ಪದ್ಯಗಳಲ್ಲ ಅಂತ ಅನ್ಕೊಂಡಿದ್ದೀನಿ...

ಯಾಕೇಂದ್ರೆ ಬ್ರಾಹ್ಮಣರ ಮೇಲಿನ attack ಇದೆಯಲ್ಲ, ಅದ್ರಿಂದ ಬರೆದ ಪದ್ಯಗಳು. ಅದರಿಂದ ನೊಂದು ಬಿಟ್ಟಿದ್ರೆ ನಾನೂ ಆ ತರಹ ಬರೆದುಬಿಡ್ತಿದ್ನೇನೋ.

ಎಷ್ಟು ಸುಲಭವಾಗಿ ಈ ಮಾತುಗಳನ್ನ ಹೇಳ್ತೀರಿ ಸರ್ ನೀವು! ಪ್ರಜ್ಞಾಸ್ತರದಲ್ಲಿ ಆ heightನಲ್ಲಿದ್ದ ಒಬ್ಬ ಕವಿ ಈ ಪಾತಾಳಕ್ಕೆ ಇಳಿಯೋದು ಅಂದ್ರೆ?

Attack was strong and he was a Brahmin. ನಾನಲ್ಲ.

In a sense, ಇದು ನೀವು ಹೇಳ್ತಿರೋ ಹೊಸ 'ಸತ್ಯ' ಸರ್! ಅದನ್ನೇ ತೇಜಸ್ವಿ ಆಗ ಹೇಳಿದ್ದು ಅಂತ ಕಾಣುತ್ತೆ!

ಹೌದಯ್ಯ. Adiga was a great poet and he could over come all these... ಹೆಂಗೆ ಲಂಕೇಶ್ ಅನೇಕ ಸಾರಿ ಮೀರುತ್ತಿದ್ದನೋ ಈ ಮೀರೋ ಗುಣಗಳು ಯಾರ್ಯಾರ ಹತ್ರ ಇತ್ತೋ ಆ ಮೀರುವಿಕೆಯ ಗುಣ ಅಡಿಗರಲ್ಲೂ ಇದೆ. ಕುವೆಂಪುನಲ್ಲಿ ಇದೆ. ಕುವೆಂಪು ಶೂದ್ರ ಸಮಾವೇಶಕ್ಕೆ ಹೋಗಿ–ನೀವೆಲ್ಲ ಅವರನ್ನ ಬೈತೀರಾ ಈಗ, ಆದರೆ ನೀವೆಲ್ಲ ದಡ್ಡಬಡ್ಡರಾಗಿದ್ದಾಗ ನಿಮಗೊಂದು ಸಂಸ್ಕೃತಿ ಮಾಡಿಕೊಟ್ಟವರು ಅವರು ಅಂತ ಏನು ಹೇಳ್ತಾರೆ, ಅದನ್ನ ಶೂದ್ರ ಸಮ್ಮೇಳನದಲ್ಲಿ ಯಾರೂ ಹೇಳೋಕೆ ತಯಾರಿರಲಿಲ್ಲ. ಆದ್ರೆ ಕುವೆಂಪು ಹೇಳಿದ್ರು, ಯಾಕೇಂದ್ರೆ ಅವರಿಗೆ awareness ಇತ್ತು.

ಇರಲಿ ಸರ್, ಈಗ ಒಕ್ಕೂಟದಲ್ಲಿ ತೇಜಸ್ವಿ ಏನು ಮಾತಾಡಿದ್ರು, ಅದನ್ನ, ಆ ವಾದದ ತರ್ಕವನ್ನು ನೀವು ಒಪ್ತೀರಾ?

ನೋಡಿ, ಸಾಹಿತ್ಯದಲ್ಲಿ ಇದೆಲ್ಲ ಇರುತ್ತೆ. ಲಂಕೇಶ್ ತೇಜಸ್ವಿ ಮೇಲೆ ಬಿದ್ದ ಆಗ ಅವನು ಸುಬ್ಬಣ್ಣನನ್ನೂ attack ಮಾಡಿದ. ನೀವು hypocritical ಆಗಿ ನಿಮ್ಮ ರಂಗಮಂದಿರಕ್ಕೆ ಕಾರಂತರ ಹೆಸರನ್ನ ಇಟ್ಟಿದೀರಾ ಅಂತ. ಇದೆಲ್ಲ ಯಾಕೆ ಹೇಳ್ತೀನಿ ಅಂದ್ರೆ ತೇಜಸ್ವಿ, ಲಂಕೇಶ್ ಇಬ್ರಿಗೂ ನನಗೆ ಇರೋ ಹಾಗೆ ಪುಟ್ಟಪ್ಪನವರ ಬಗ್ಗೆ

ಅನುಮಾನಗಳಿದ್ದವು. ಯಾವುದು? ಅತಿ ವಿಸ್ತಾರದ ಬರವಣಿಗೆ ಬಗ್ಗೆ. ನಾವೆಲ್ಲ ಯೂರೋಪಿನ ನವ್ಯ ಸಾಹಿತ್ಯದ ಪ್ರೇರಣೆಗೆ ಒಳಪಟ್ಟವು, ಅದರಿಂದ ಕನ್ನಡಕ್ಕೆ ಒಂದು ಓಘ, ಹೊಳಪು ಬಂತು. ಆಗ ಮರಾಠಿಯಲ್ಲಿ ಹೀಗಾದವು ಮಹಾರಾಷ್ಟ್ರದ ಉಳಿದ ಸಾಹಿತ್ಯದ ಜೊತೆಗೆ ಮುಖಾಮುಖಿಯಾಗಲೇ ಇಲ್ಲ. ಕನ್ನಡದ ಮಟ್ಟಿಗೆ ನಾವೆಲ್ಲ ಕನ್ನಡದ ನವೋದಯದ ಜೊತೆ ಮುಖಾಮುಖಿ ಆದೆವು.

ಒಂದು ಮಾತು. ನಾನು ಆಗ ಒಬ್ಬ ಕಿರಿಯ ಸಾಹಿತ್ಯದ ಅಭ್ಯಾಸಿಯಾಗಿ ಗಮನಿಸಿದ ಹಾಗೆ, ಒಕ್ಕೂಟದ ನಂತರ ಇಡೀ ಕನ್ನಡ ಸಾಹಿತ್ಯದಲ್ಲಿನ ಗಂಭೀರ ಬರವಣಿಗೇಂತ ನಾವು ಏನು ಕರೀಬಹುದು, ಅದು ಒಂದೆರಡು ವರ್ಷ ಸ್ತಬ್ಧವಾಗಿ ಹೋಯಿತು. ಆನಂತರ ಕನ್ನಡದಲ್ಲಿ ಹೊಸ ರೀತಿಯ ಬರವಣಿಗೇನೇ ಶುರುವಾಯ್ತು. ನೀವು 'ನವಿಲುಗಳು' ಬರೆದ್ರಿ, ಚಿತ್ತಾಲರು 'ಕತೆಯಾದಳು ಹುಡುಗಿ' ಬರೆದ್ರು, ಲಂಕೇಶ್ 'ಉಮಾಪತಿಯ ಸ್ಕಾಲರ್‌ಶಿಪ್ ಯಾತ್ರೆ', 'ಮುಸ್ಸಂಜೆ ಕಥಾ ಪ್ರಸಂಗ' ಬರೆದ್ರು, ಎಲ್ಲ ಸಂಪೂರ್ಣ ಬೇರೆ ತರದ ಬರವಣಿಗೆ. ಅಂದ್ರೆ ಒಕ್ಕೂಟ ಕನ್ನಡ ಸಾಹಿತ್ಯದ ದಿಕ್ಕು ದೆಸೆಗಳ ಸ್ವರೂಪದ ಮೇಲೆ ಒಂದು ದೊಡ್ಡ ರೀತಿಯ ಪ್ರಭಾವ ಬೀರಿತು ಅಂತ ಅನ್ನಿಸೋಲ್ವ ಸರ್ ನಿಮಗೆ?

ಬೀರಿದೆ. ಉದಾಹರಣೆಗೆ ಹೇಳ್ತೀನಿ. ಅದು ಎಲ್ಲೂ ಲಿಖಿತವಾಗಿಲ್ಲ. ಯಶವಂತ ತಬ್ಬಿಬ್ಬಾಗಿ ಬಿಟ್ಟಿದ್ದ. ಯಾಕೇಂದ್ರೆ ಒಂದು ಮುಗ್ಧ, ಬರೀ ಸಾಹಿತ್ಯ ಮುಖವಾಗಿ ಬರೆದದ್ದು, ನನ್ ಜಾತಿ ಏನು, ಅದು ಇದು ಎಲ್ಲ ಇದೆ, ಆದ್ರೆ ಇದೆಲ್ಲ ಮುಖ್ಯವಾದದ್ದಲ್ಲ ಅಂತ ತಿಳಿದವನು ಅವ್ನು. He was a great writer in his own way. We cannot deny it. ಅವ್ನು ಒಂದು ಕಥೆ ಬರ್ದ. ಅದು ಏನೂಂದ್ರೆ ಮಹಾದೇವನಿಗೆ ಒಂದು ರೀತಿಯಲ್ಲಿ ಮುಖಾಮುಖಿಯಾಗಿ ಬರೆದದ್ದು. ಒಬ್ಬ ಬಡ ಬ್ರಾಹ್ಮಣ ಹುಡುಗ ಎಷ್ಟು ಪೇಚಿಗೆ ಸಿಕ್ತಾನೆ, ದುಃಖ ಪಡ್ತಾನೆ ಅಂತ. ಅದೆಲ್ಲ ಹೆಂಗೆ ಬರೆದಿದ್ದ ಅಂದ್ರೆ, ಇವೊತ್ತು ಬರೀ ದಲಿತರಷ್ಟೇ ಅಲ್ಲ ದುಃಖದಲ್ಲಿರೋದು, ಬ್ರಾಹ್ಮಣರೂ ದುಃಖದಲ್ಲಿದಾರೇಂತ. ಅದು ನಿಜ ಕೂಡ. ಆದ್ರೆ ಅವನು ಬರೆಯೋ ಕ್ರಮದಲ್ಲಿ ಹೆಂಗೆ ಬರೆದ ಅಂದ್ರೆ, ಅವರೂ ದುಃಖದಲ್ಲಿದಾರೆ ಇವ್ರೂ ದುಃಖದಲ್ಲಿದಾರೇಂತ ಅಲ್ಲ. ಅವರು ಮಾತ್ರ ದುಃಖದಲ್ಲಿರೋದಲ್ಲ, ನಮ್ಮ ಮಟ್ಟಿಗೆ ನಾವೂ ದುಃಖದಲ್ಲಿದ್ದೇವಂತ. ಇದೇ ವ್ಯತ್ಯಾಸ ಆಯ್ತು ನೋಡು. ಅದಕ್ಕೇ ಮಹಾದೇವ ಹೇಳ್ದ, ಅದ್ಯಾಕೆ ಹಂಗೆ ಹೇಳಬೇಕು ಸರ್? ನಮ್ಮಲ್ಲೂ ದುಃಖಿಗಳಿದಾರೆ ಅವರಲ್ಲೂ ದುಃಖಿಗಳಿದಾರೇಂತ ಯಾಕೆ ಹೇಳಬಾರ್ದೂಂತ. ಅಂದ್ರೆ ಆಗಿದ್ದು ಮುಖ್ಯವಾಗಿ ನೋಡೋ ಕ್ರಮದಲ್ಲಿ.

ಒಕ್ಕೂಟ ಆದ ಮೇಲೆ ಅದರಿಂದ ಸಾವಯವವಾಗಿ ಪ್ರತ್ಯೇಕವಾದಂತೆ ಎರಡು ಮೂರು ವರ್ಷಗಳಲ್ಲೇ ಬಂಡಾಯ ಸಾಹಿತ್ಯಾಂತ ಬಂತು. ಸಮ್ಮೇಳನ ನಡೀತು. ಆದ್ರೆ ಇವೊತ್ತು ನಿಂತುಕೊಂಡು ನೋಡಿದ್ರೆ ಅದರ ಬಗ್ಗೆ ನಿರಾಶೆ ಆಗತ್ತೆ. ಇದನ್ನು ಹೇಳಿ ನಾನು ಬಹಳ ಜನ ಶತ್ರುಗಳನ್ನು ಕಟ್ಟಿಕೊಂಡಿದ್ದೀನಿ. ಪರವಾಗಿಲ್ಲ. ಆ ಸಾಹಿತ್ಯದಿಂದ

ಸೃಜನಾತ್ಮಕವಾಗಿಯಾಗಲಿ ಸೃಜನೇತರವಾಗಿಯಾಗ್ಲಿ, ಅಂದರೆ ಸಾಹಿತ್ಯ ವಿಮರ್ಶೆ, ಚಿಂತನೆಯಲ್ಲಾಗ್ಲೀ ಗಮನಾರ್ಹವಾದದ್ದೂಂತ ಏನೂ ಬರಲೇ ಇಲ್ಲ. ಬದಲಿಗೆ ಸಾಹಿತ್ಯದ ಕಲ್ಪನೆಯನ್ನೇ ಅದು ಒಂದು ರೀತಿಯಲ್ಲಿ ರೂಕ್ಷ ಮಾಡಿಬಿಡ್ತು ಅನ್ನಿಸುತ್ತೆ. ನಿಮಗೇನನ್ನಿಸುತ್ತೆ ಸರ್? ಯಾಕೆ ಹೀಗಾಯ್ತು?

ನಿಮ್ಮ ಅಭಿಪ್ರಾಯವೇ ನನ್ನದು. ಯಾಕೆ ಹೀಗಾಯ್ತು ಅಂದ್ರೆ, ಅವರು 'ಕೋಗಿಲೆ ಮತ್ತು ಸೋವಿಯಟ್ ರಷ್ಯಾ' ಪದ್ಯ ಓದಿರಲಿಲ್ಲ. ಓದಿದ್ದರೆ ಅವರು ಆಡುತ್ತಿದ್ದ ಬಂಡಾಯದ ಮಾತುಗಳನ್ನ ಆಡ್ತಿರಲಿಲ್ಲ. ಅವರು ವರ್ಗ ವಿಶ್ಲೇಷಣೆಯ ರೀತಿಯ ಸಮಾಜವಾದಿ ನುಡಿಗಟ್ಟನ್ನ ಹುಡುಕ್ತಾ ಹೋದ್ರು, ಇಂತಹ ನುಡಿಗಟ್ಟು ನಮ್ಮಲ್ಲಿ ನಡೆಯೋದಿಲ್ಲ. ನಡೆಯೋದಾಗಿದ್ದರೆ ಕಮೂನಂತಹ ಬರಹಗಾರರಾಗಬೇಕಿತ್ತು. ಆದ್ದರಿಂದ ಅವರೆಲ್ಲ ನಿಜವಾದ experienceನಿಂದ ವಂಚಿತರಾದ್ರು, ಜೊತೆಗೆ ಅವರು ಎಷ್ಟು ಬೇಗ ಸರ್ಕಾರದ ಹತ್ತಿರಕ್ಕೆ ಹೋದ್ರು ಅಂದ್ರೆ... ನೋಡಿ, ಈಗ ಹಿಂದೆ ಸರ್ಕಾರದ ನೀತಿಗಳೂ ಒಂಥರಾ ಸೋಷಲಿಸ್ಟ್ ಆಗಿದ್ದವು, ನಾವೂ ಸೋಷಲಿಸ್ಟ್ ಆಗಿದ್ದೆವು. ಆದ್ದರಿಂದ ಯಾವುದೇ ಅಪಾಯವಿಲ್ಲದೆ ಮಾತಾಡಬಹುದಿತ್ತು. ಈಗ ಏನಾಯ್ತು ಅಂದರೆ ಏಕಕಾಲಕ್ಕೆ ಸರ್ಕಾರಕ್ಕೂ ಬೇಕಾದವರೂ, ಬಂಡಾಯಗಾರರೂ ಆಗಬೇಕಾದದ್ದರಿಂದ corruptionಗೆ ಅವಕಾಶವಾಯ್ತು.

ಅವರಿಗೆ ಆಗಿದ್ದು ನಮಗೂ ಆಗಬಹುದಿತ್ತು, ಹೆಗ್ಡೆ ಕಾಲದಲ್ಲಿ, ಪಟೇಲನ ಕಾಲದಲ್ಲಿ. ಆದ್ರೆ ಹೆಚ್ಚೆಚ್ಚು ಆತ್ಮ ವಿಮರ್ಶೆ ಮಾಡಿಕೊಂಡು ಬರೆಯೋ ನನಗೆ ಹಾಗೆ ಆಗೋದು ಕಡಿಮೆ ಸಾಧ್ಯತೆ ಇತ್ತು. ಅದಲ್ಲದೆ, ನಿತ್ಯವೂ ಬರೀ ಬಹಿರಂಗದಲ್ಲೇ ಇರುವವನಿಗೆ, ಅಂತರಂಗದ ಸತ್ಯವಿಲ್ಲದೆ ಬಹಿರಂಗ ಸತ್ಯ ಹೇಳ ಹೊರಟವನಿಗೆ– ಬಸವಣ್ಣ ಹೇಳ್ತಾನಲ್ಲ ಅಂತರಂಗ ಸತ್ಯ ಮತ್ತು ಬಹಿರಂಗ ಸತ್ಯ ಒಂದೇ ಆಗಿರಬೇಕೂಂತ–ಅದು ನಿಜವಾದ ಸಾಹಿತ್ಯ. ಬಂಡಾಯ ಸಾಹಿತ್ಯ ಅದಾಗಲಿಲ್ಲ. ಸೋವಿಯತ್ ಯೂನಿಯನ್‌ನಲ್ಲೂ ಫೇಲಾಯ್ತು. ಅದನ್ನ ಇವೊತ್ತು ಯಾರೂ ಓದ್ತಿಲ್ಲ. ಅದು 'ಕೋಗಿಲೆ ಮತ್ತು ಸೋವಿಯಟ್ ರಷ್ಯ' ಬರೆದ ಕುವೆಂಪುಗೂ ಗೊತ್ತಿತ್ತು. ಇವರಿಗೆ ಗೊತ್ತಾಗಲಿಲ್ಲ. ಅದು ಬಂಡಾಯದ ಸಮಸ್ಯೆ ಅನಿಸುತ್ತೆ.

ಬಂಡಾಯದಲ್ಲಿ ಲೋಹಿಯಾ ಸೋಷಲಿಸ್ಟರೂ ಇದ್ರು ಸರ್! ದೇವನೂರ ಮಹಾದೇವ ಸಮ್ಮೇಳನವನ್ನು ಉದ್ಘಾಟನೆ ಮಾಡಿದ್ರು, ಸಿ.ಜಿ.ಕೆ., ರೆಡ್ಡಿ ಅಲ್ಲಿ ಮುಖ್ಯ ಅತಿಥಿಗಳಾಗಿದ್ರು, ಚಂಪಾ, ಕಾಳೇಗೌಡ ಇದ್ರು

ಇದ್ರೂಂದ್ರೆ ಏನೋ ದೊಡ್ಡದು ಆಗುತ್ತೆ ಅನ್ನೋ ನಿರೀಕ್ಷೆಯಲ್ಲಿ ಇದೆಲ್ಲ ಆಯಿತು. ಆದ್ರೆ...

ಬಂಡಾಯದವರ ಬಗ್ಗೆ ನೀವು ಹೇಳಿದ್ದಕ್ಕೆ ಸಂಬಂಧಿಸಿದಂತೆ ನಿಮ್ಮ ಬಗ್ಗೆನೂ ಒಂದು ಟೀಕೆ ಇದೆ ಸರ್. ಅಧಿಕಾರದ ಸಮೀಪವಿದ್ದಾಗ ನೀವು ಆ ಸಾಮೀಪ್ಯವನ್ನು, ನಿಮ್ಮದೇ

ಭಾಷೆಯಲ್ಲಿ ಹೇಳೋದಾದ್ರೆ ಸುಖಿಸಿದಿರೇ ಹೊರತು ಅಧಿಕಾರದಲ್ಲಿದ್ದ ನಿಮ್ಮ ಗೆಳೆಯರು ತಪ್ಪು ಮಾಡಿದಾಗ ಅವರಿಗೆ ಬುದ್ಧಿ ಹೇಳಲಿಲ್ಲ, ಅದನ್ನ ಖಂಡಿಸಲಿಲ್ಲ ಅಂತ.

ಹಾಗಲ್ಲ ಅದು. ಹೆಗ್ಡೆಗೆ ನಾನೇ ಹೇಳಿದ್ದೆ ನಿಮಗೆ passion ಇಲ್ಲಾಂತ. ಅಂದ್ರೆ ದೊಡ್ಡ ವಿಚಾರಗಳ passion ಇಲ್ಲ ಅಂತ. ದೇವರಾಜ ಅರಸ್‌ಗೆ ಅದಿತ್ತು. ಇಲ್ಲ, ತನಗೂ ಇದೇಂತ ಹೆಗ್ಡೆ ಹೇಳ್ತಿದ್ರು. ನೋಡಿ, ಅಧಿಕಾರದ ವಿಕೇಂದ್ರೀಕರಣದ ಕೆಲಸ ನಜೀರ್ ಸಾಬ್ ಮಾಡಿದ್ರೂ ಅದರ ಹಿಂದೆ ಇದ್ದೋರು ಹೆಗ್ಡೆ. ಬೊಮ್ಮಾಯಿ ಮತ್ತು ದೇವೇಗೌಡ were opposed to it. ನಾವು ಆಗ ಯಾವುದನ್ನು ಬೆಂಬಲಿಸ್ತಾ ಇದ್ವೋ ಅದರ ಹಿಂದೆ ಜನಹಿತಾತ್ಮಕತೆ ಇತ್ತು. ಅದೆಂತಹ ಕಾಲ! ನಜೀರ್ ಸಾಬು ಹೋಗಿ ಬಂದು, 'ಇವೊತ್ತು ನಾನು ಹೊಲೇರ ಕಾಲೋನಿಗೇ ಹೋಗಿ ಬೋರ್‌ವೆಲ್ ಹೊಡಿಸಿ ಬಂದೆ, ಅವ್ರಿಗೆ ನೀರು ಇನ್ಮೇಲೆ ಅವರಿದ್ದಲ್ಲೇ ಸಿಕ್ಕುತ್ತೆ' ಅಂತ ಹೇಳ್ತಿದ್ದ...

ಆದ್ರೆ ನಿಮ್ಮ ಗೆಳೆಯರು ತಪ್ಪು ಮಾಡಿದಾಗ ಏನು ಮಾಡಿದ್ರಿ? ಉದಾಹರಣೆಗೆ ಪಟೇಲ್ ದಾರಿ ತಪ್ಪಿದಾಗ? ಬಹುಶಃ ಕರ್ನಾಟಕದ ರಾಜಕೀಯ ಇತಿಹಾಸದಲ್ಲೇ ಪಟೇಲ್ ತಮ್ಮ ಬೇಜವಾಬ್ದಾರಿ ಮಾತು ಮತ್ತು ವರ್ತನೆಗಳಿಂದ ಪಡೆದಷ್ಟು ಕೆಟ್ಟ ಹೆಸರನ್ನ ಇನ್ನಾರೂ ಪಡೀಲಿಲ್ಲ ಅಂತ ಕಾಣುತ್ತೆ.

ತಪ್ಪು. ಅವನ ಅಧಿಕಾರ ಹೋದ ನಂತರ ಎಸ್.ಎಂ. ಕೃಷ್ಣರನ್ನ ನಾನು ಟಿವಿಗಾಗಿ ಇಂಟರ್‌ವ್ಯೂ ಮಾಡ್ದೆ. ಕ್ಯಾಮೆರಾ ಆಫ್ ಆದ ಮೇಲೆ ಅವರನ್ನು ಕೇಳ್ದೆ, ಪಟೇಲರ ಆಡಳಿತ ಹೇಗಿತ್ತು ಅಂತ. ಅದಕ್ಕೆ ಅವರು, ಅವರ ಕಾಲದಲ್ಲಿ infrastructure ಕ್ಷೇತ್ರದಲ್ಲಿ ಬಹಳ ಕೆಲಸ ಆಗಿದೆ ಅಂದ್ರು. ಅಲ್ದೆ ನಾಗಭೂಷಣ, ಇನ್ನೊಂದು ಮಾತು. ಲಿಂಗಾಯ್ತರಲ್ಲಿ ಆಗ ಅವನೊಬ್ಬನೇ ಕಮ್ಯೂನಲ್ ಆಗದಿದ್ದವನು. ಹೀಗೇ...

ಆದ್ರೆ ಪಟೇಲರೇ ತಾನೆ ಬಿಜೆಪಿ ಜೊತೆಗೆ ಸಖ್ಯಕ್ಕೂ ಕಾರಣರಾದವರು?

ಅದಕ್ಕೆ ನಿಜವಾದ ಕಾರಣ, ಜಾರ್ಜ್. ಪಟೇಲ್‌ಗೆ ಜಾರ್ಜ್ ಕಂಡ್ರೆ ತುಂಬ ಪ್ರೇಮ. ಜಾರ್ಜ್ ಪ್ರಧಾನ ಮಂತ್ರಿ ಆಗಬೇಕೂ ಅಂತ ಅವನಿಗೆ ದೊಡ್ಡ ಆಸೆಯಿತ್ತು. ನನಗೂ ಇತ್ತು. ಅವನಿಗೆ ಆ ಶಕ್ತಿ ಇತ್ತೂಂತ ನಾನು ತಿಳಿದಿದ್ದೆ. ಮೊರಾರ್ಜಿನೂ ಹಾಗೆ ಭಾವಿಸಿದ್ರು. ಆದರೆ ಆತ ಎಲ್ಲಿ ಚೆಲ್ಲಿ ಹೋದನೋ ಯಾಕೆ ಹುಸಿಯಾದನೋ ನನಗೆ ಈವರೆಗೆ ಬಿಡಿಸಲಾಗಿಲ್ಲ. ದಾಸ್ತೊವಸ್ಕಿಯಂತಹ ಲೇಖಕನಾಗಿದ್ರೆ ಅದನ್ನ ಹುಡುಕ್ತಿದ್ನೇನೋ! '

ಆದರೆ ಜಾರ್ಜ್‌ಗೆ ನಿಜವಾಗಿ ಆ ಶಕ್ತಿ ಇತ್ತಾ? ಒಮ್ಮೆ ಕಿಷನ್ ಪಟ್ನಾಯಕ್ ನನಗೆ ಹೇಳಿದ್ದು ಜ್ಞಾಪಕ, ಜಾರ್ಜ್‌ದು ಆಳವಿಲ್ಲದ ಬಹು ತೆಳು ವ್ಯಕ್ತಿತ್ವ ಅಂತ.

ಕಿಷನ್ ಅದನ್ನ ನನಗೂ ಹೇಳಿದ್ರು. ಸ್ವಲ್ಪ ಅವನು ಜನಪ್ರಿಯತೆಯ ಅಬ್ಬರಕ್ಕೆ ಬಿದ್ದುಹೋದ ಅಂತ ಕಾಣುತ್ತೆ. ಅಲ್ಲದೆ ಜಾರ್ಜ್ ಬಗ್ಗೆ ನನಗೆ ಪ್ರೀತಿ ಜಾಸ್ತಿ ಇತ್ತು.

ಅವನ ಬಗ್ಗೆ ನಾನು ಸ್ವಲ್ಪ ಉದಾರವಾಗಿ ಯೋಚಿಸಿದೆ ಅಂತ ಕಾಣುತ್ತೆ.

(ಇದಕ್ಕೆ ಪೂರಕವಾಗಿ ಅನಂತಮೂರ್ತಿಯವರು ದೀರ್ಘವಾಗಿ ಜಾರ್ಜ್ ಆಸ್ತಿ ವಿವಾದ, ಅದನ್ನು ಅವರು ಪರಿಶೀಲಿಸಿದ್ದು, ನಂತರ ಜಯಾ ಜೈಟ್ಲಿ ಕಥೆ ಎಲ್ಲ ಹೇಳಿ, ಕೊನೆಗೆ ಲೇಖಕ ಹೇಗೆ **opinionate** ಆಗದೆ ಎಲ್ಲ ವಿವರಗಳನ್ನು ಗಮನಿಸ್ತಾ ಇರ್ತಾನೆ ಎನ್ನುವುದನ್ನು ಹೇಳಿದರು)

ಆಮೇಲೆ ಸರ್, ನಿಮ್ಮ ಪತ್ನಿಯವರೇ ಒಮ್ಮೆ ಹೇಳಿದ ಹಾಗೆ ಯಾವಾಗ್ಲೂ ಸುದ್ದಿಯಲ್ಲಿರೋಕೆ ಇಷ್ಟಪಡ್ತೀರಿ. ನಾನು ನಿಮ್ಮನ್ನು ಗಮನಿಸ್ತಾ ಇರುವಾಗಿನಿಂದ್ಲೂ ವಿವಾದಗಳನ್ನು ಸೃಷ್ಟಿಸೋದ್ರಲ್ಲಿ ಎತ್ತಿದ ಕೈ ಆಗಿದ್ದೀರಿ!

ನೋಡಿ ಬೆಳಿಗ್ಗೆ ಪಕ್ಕದ ಪಾರ್ಕ್‌ಗೆ ವಾಕಿಂಗ್ ಹೋಗಿದ್ದೆ. ಅಲ್ಲಿ ಒಬ್ಬ ಹೆಂಗಸು ಇನ್ನೊಬ್ಬ ಹೆಂಗಸಿಗೆ ಹೇಳ್ತಾ ಇದ್ಲು. ಯಾರೋ ಜ್ಞಾನಪೀಠ ಬಂದವನಂತೆ; ಕಲ್ಲಿನ ಮೇಲೆ ಉಚ್ಚೆ ಹುಯ್ದನಂತೆ ಅಂತ. ಇದನ್ನೆಲ್ಲ ಕೇಳಿದಾಗ ನನ್ನ ಹೆಂಡತಿಗೆ ನೋವಾಗೋದು ಸಹಜ.

ಇದು ಬಿಡಿ ಸರ್. ಇದು ಕಲ್ಬುರ್ಗಿಯವರ ಮಾತನ್ನ ಕೆಲ ಬುದ್ಧಿಗೇಡಿ ಮಾಧ್ಯಮಗಳು ಪ್ರಚಾರ ಮಾಡಿದ ರೀತಿಯಿಂದ ಆದದ್ದು. ಆದ್ರೆ ನೀವೇ ಸೃಷ್ಟಿಸಿದ ಹಲವಾರು ವಿವಾದಗಳು ಇವೆ ಉದಾಹರಣೆಗೆ ಜಾತಿ ಸೃಜನಶೀಲ ಅಂದ್ರಿ, ಆ ಮೇಲೆ ಗೋಕಾಕ್ ಚಳುವಳಿ ಸಂದರ್ಭದಲ್ಲಿ ನೀವೊಬ್ರೇ ಅದನ್ನು ಯಾವುದೋ ಕಾರಣ ಕೊಟ್ಟು ವಿರೋಧಿಸಿದ್ರಿ...

ಏನು ಮಾಡೋದು. ನಾನು ಚೆನ್ನಾಗಿ ಮಾತಾಡ್ತೀನಿ. ಹಾಗಾಗಿ...

ಬರೀ ಚೆನ್ನಾಗಿ ಮಾತಾಡೋದಷ್ಟೇ ಅಲ್ಲ, ನೋಡೋಕೂ ಚೆನ್ನಾಗಿದೀರಿ... ಅದೇ ನಿಮಗೆ ಪ್ರಾಬ್ಲೆಮ್ಮಾಗಿರೋದು...

ಈಗ ನೋಡಿ, ಜಾತಿ ಸೃಜನಶೀಲ ಅಂದಾಗ ಅದನ್ನು ವಿಶಾಲಾರ್ಥದಲ್ಲಿ ತಗೋಬೇಕು. ಜಾತಿಯಲ್ಲಿ ಇರೋವನಿಗೆ ಜಾತಿ ಸೃಜನಶೀಲವೇ. ಅದು ಅವನು ಅದರಲ್ಲಿ ಹುಟ್ತಾನೆ, ಬೆಳಿತಾನೆ, ಮದುವೆ ಆಗ್ತಾನೆ, ನಂಟಸ್ತಿಕೆ ಮಾಡ್ತಾನೆ, ಆಶ್ರಯ ಪಡೀತಾನೆ. ಕಷ್ಟ ಆದಾಗ ಮಕ್ಕಳನ್ನ ಜಾತಿ ಹಾಸ್ಟೆಲ್‌ಗೆ ಸೇರ್ಸಿ ಓದಿಸ್ತಾನೆ. ಅಲ್ಲೇ ಸಾಯ್ತಾನೆ. ಜಾತಿಯನ್ನೋದು complete ಆಗಿ ಸಾಕುತ್ತೆ.

ಇದು ಜಾತಿಯ ಸೃಜನಶೀಲತೆ ಹೇಗಾಗುತ್ತೆ ಸರ್?

ಇಲ್ಲಿ ಸ್ವಲ್ಪ ಕೇಳಿ. ಇವೊತ್ತು ಕರ್ನಾಟಕದಲ್ಲಿ ಹೊಸ ಮನಸ್ಸುಗಳು ಹೊಸ ಜಾತಿಗಳಲ್ಲಿ ಹುಟ್ಟಿದ್ರೆ ಅದಕ್ಕೆ ಎರಡು ಕಾರಣ. ಒಂದು ಲಿಂಗಾಯ್ತ ಮಠಗಳು ಅವ್ರು ಈ ಐವತ್ತು ವರ್ಷಗಳಲ್ಲಿ ಶಿಕ್ಷಣ ಕೊಡೋದ್ರಲ್ಲಿ ಎಷ್ಟು ಕೆಲಸ ಮಾಡಿದ್ರು ಅಂದ್ರೆ, ಇವೊತ್ತು ಅವರು ಎಲ್ಲ ಮುಖ್ಯ ಸ್ಥಾನಗಳಲ್ಲಿ ಅವರನ್ನು ಕೂರ್ಸಿದ್ದಾರೆ. ಬ್ರಾಹ್ಮಣರು ಮಾಡದ್ದನ್ನು ಇವರು ಮಾಡಿದ್ರು.

ಇದು ಆ ಜಾತಿಯನ್ನ ಒಂದು ಪಟ್ಟಭದ್ರ ಹಿತಾಸಕ್ತಿಯನ್ನಾಗಿಯೂ ಮಾಡಿದೆ ಸರ್! ಅವನ್ನೂ ನಾವು ಗಮನಿಸಿ ಯೋಚಿಸಬೇಕು.

ಅದು ಆಗಿದ್ದು ಆಮೇಲೆ. ಚರಿತ್ರೆಯಲ್ಲಿ ಆಗಿದ್ದು, ಮಾಡಿದ್ದಲ್ಲ. ಹೊಸ ಮನಸ್ಸನ್ನು ಹುಟ್ಟಿಸಿರೋ ಇನ್ನೊಂದು ಅಂದ್ರೆ ಮೀಸಲಾತಿ. ಇತ್ತೀಚೆಗೆ ಒಂದು ವಿ.ವಿ.ಗೆ ಕುಲಪತಿ ಹುಡುಕೋ ಕೆಲಸದಲ್ಲಿ ತೊಡಗಿದ್ದಾಗ ನನಗೆ ಇದು ಗೊತ್ತಾಯ್ತು, ಮೀಸಲಾತಿಯಿಂದ ಮೇಲೆ ಬಂದವರ ಸಂಖ್ಯೆ ಎಷ್ಟಿದೇಂತ.

ಇದು ನಿಮ್ಮ ಹಳೇ stuff ಬಿಡಿ ಸರ್! ಇಲ್ಲಿ ಜಾತಿಗೂ ಸೃಜನಶೀಲತೆಗೂ ಏನು ಸಂಬಂಧ ಅಂತ!

ಇಲ್ಲಿ ಕೇಳಿ. ಈ ಗೌಡ್ರದ್ದು, ಲಿಂಗಾಯತ್ರದ್ದು, ಕುರುಬ್ರದ್ದು ಜಾತಿ ಸಂಘಟನೆಗಳು active ಆಗಿ ಇದ್ದದ್ದಕ್ಕೇ ಅವರಿಗೆ ಅವಕಾಶ ಸಿಕ್ಕಿ ಅವರು ಸೃಜನಶೀಲರಾಗಿದ್ದು.

ಬಿಡಿ ಸರ್, ಇದೆಲ್ಲ ಜಾತಿ ವ್ಯವಸ್ಥೆ ಕುರಿತ ನಮ್ಮ ತಿಳುವಳಿಕೆಯಿಂದ, ಜಾತಿ ಅನ್ನೋದು ಚರಿತ್ರೆಯಲ್ಲಿ ಏನು ಮಾಡಿದೆ ಅನ್ನೋ ತಿಳುವಳಿಕೆಯಿಂದ ಇದೆಲ್ಲ ಆಗಿರೋದೇ ಹೊರತು ನೀವು ಹೇಳುವ ರೀತಿಯಲ್ಲಲ್ಲ. ಇದು ಬಹಳ ಅಪಾಯದ ತರ್ಕ ಸರ್.

ಮೀಸಲಾತಿ gave them seats, jobs, security. ಇದು ಅವನನ್ನ ಸೃಜನಶೀಲನನ್ನಾಗಿ ಮಾಡುತ್ತೆ ಇಲ್ಲ ಭ್ರಷ್ಟನನ್ನಾಗಿಯೂ ಮಾಡಬಹುದು. ಅದು ಬೇರೆ ವಿಷಯ. ಈ ಎರಡೂ ಇಲ್ಲದಿದ್ದೆ ನಿಮ್ಮಲ್ಲಿ ಎಷ್ಟು ಜನ ಮೇಲಕ್ಕೆ ಬರೋದಕ್ಕೆ ಸಾಧ್ಯಾಗ್ತಾ ಇತ್ತು? ಬರೀ ಬ್ರಾಹ್ಮಣರೇ ತುಂಬಿಕೊಂಡಿರ್ತಿದ್ರು. ಈ ದೇಶದಲ್ಲಿ ಎಲ್ಲವನ್ನೂ ಸರ್ಕಾರನೇ ಮಾಡೋಕ್ಕಾಗೊಲ್ಲ. ಅನೇಕ ಅಗತ್ಯಗಳಿಗೆ ಜಾತಿಯನ್ನ ಆಶ್ರಯಿಸಬೇಕಾಗುತ್ತೆ ಇಲ್ಲಿ. ಅಂದ್ರೆ ನಾನು ಜಾತಿ ಇರಬೇಕೂಂತ ಹೇಳ್ತಿಲ್ಲ. ಜಾತಿ ಅನ್ನೋದು ಇದೆ ಅಂತ ಹೇಳ್ತಿದೀನಿ. ಜಾತಿಯೊಳಗೆ ಇರೋ ಸೃಜನಶೀಲತೆ ಬಗ್ಗೆ ಹೇಳ್ತಾನೇ, ಜಾತಿಯನ್ನು ಮೀರಿದಾಗ ಇನ್ನೂ ದೊಡ್ಡ ಸೃಜನಶೀಲತೆಯನ್ನ ಸಾಧಿಸೋದಕ್ಕೆ ಆಗುತ್ತೆ ಅನ್ನೋದೂ ನಿಜ. ಆದ್ರೆ ಇರೋ ಜಾತಿಯನ್ನ ಕಿಂಚಿತ್ತಾದರೂ ಅರ್ಥ ಮಾಡಿಕೊಳ್ಳೋಕೆ ನೀವು ತಯಾರಿಲ್ಲ ಅಂದ್ರೆ... ಏನು ಹೇಳೋದು. ನಿಜ, We have created a middle class which is ugly. ಇವರೆಲ್ಲ ಮೋದಿಗೆ ಓಟು ಹಾಕಿದಾರೆ. ಇದರಲ್ಲಿ ಎಲ್ಲ ಜಾತಿಗಳೂ ಇವೆ, ಶೂದ್ರರೂ ಇದ್ದಾರೆ, ಬ್ರಾಹ್ಮಣರೂ ಇದಾರೆ, ಸಾಬರೂ ಇದ್ದಾರೆ. ಈ ಶಕ್ತಿಗಳೆಲ್ಲ ಲೋಹಿಯಾರ ಜಾತಿ ನೀತಿಯಿಂದ ಸೃಷ್ಟಿಯಾದೋವು.

ಈ ಮಾತುಗಳನ್ನ ಹಿರಿಯ ಲೋಹಿಯಾವಾದಿಯೊಬ್ಬರ ಬಾಯಿಂದ ಕೇಳಿ ನನಗೆ ಸದ್ಯಕ್ಕೆ ಇದಕ್ಕಿಂತ ದೊಡ್ಡ ಸಂಗತಿಯಿಲ್ಲ ಅನ್ನಿಸ್ತಿದೆ!

ಲೋಹಿಯಾ, ನಾನು ಶೂದ್ರರ ಬಗ್ಗೆ ಮಾತಾಡ್ತಿದ್ರೂ ನನಗೆ ಹತ್ತಿರವಾದೋನು

ಮಧು ಲಿಮಯೆ ಅನ್ತಿದ್ರು. ಕೆಲವು ಮಧ್ಯಮ ಜಾತಿಗಳು ಮೇಲಕ್ಕೆ ಬರ್ತಾ disappoint ಮಾಡಿವೆ ಅನ್ತಿದ್ರು.

ಕೆಳ ಜಾತಿಗಳು ಮೇಲಕ್ಕೆ ಬರ್ತಾ ಮೇಲ್ಜಾತಿಗಳನ್ನ ಅನುಕರಿಸುವ, ಅವುಗಳ ದುರ್ಲಕ್ಷಣಗಳನ್ನು ಗಳಿಸಿಕೊಳ್ಳುವ ಅಪಾಯಗಳ ಬಗ್ಗೆ ಲೋಹಿಯಾ ಎಚ್ಚರಿಸಿದ್ದರು. ಇವೊತ್ತು ಈ ಸ್ಥಿತಿಯಲ್ಲಿ ಲೋಹಿಯಾ ಅವರ ಜಾತಿ ನೀತಿಯನ್ನು ನಾವು ನಿಷ್ಠುರವಾಗಿ ಪುನರ್ವಿಮರ್ಶಿಸಬೇಕಾಗಿದೇಂತ ನನಗಂತೂ ಅನ್ನಿಸ್ತಿದೆ. ಆದ್ರೆ ನೀವು ಜಾತಿ ಕುರಿತಂತೆ ಇನ್ನೊಂದು ಅಪಾಯಕಾರಿ ಹೇಳಿಕೆಯನ್ನೂ ಕೊಟ್ಟು ನಮ್ಮನ್ನ ಗಾಬರಿಗೊಳಿಸಿದ್ದೀರಿ. ಅದೂಂದ್ರೆ, ಜಾತಿ ಬಿಟ್ಟರೂ ಜಾತಿ ಸಂಸ್ಕೃತಿಯನ್ನು ಬಿಡಬೇಡಿ ಅನ್ನೋದು. ಸರ್ ನಿಮ್ಮ ಪ್ರಕಾರ ಜಾತಿ ಸಂಸ್ಕೃತಿ ಅಂದ್ರೆ ಏನು ಸರ್?

ಜಾತಿ ಸಂಸ್ಕೃತಿ ಊಟದ ಕ್ರಮದಲ್ಲಿದೆ, ಆಚರಣೆಗಳಲ್ಲಿವೆ, ಅನೇಕ ವಿಚಾರಗಳಲ್ಲಿವೆ. ಜಾತಿಗಳ ಮೇಲೆ ಭಾಷೆ ನಿಂತಿದೆ. ನಂನಮ್ಮ ಜಾತಿಗಳ ಜೊತೆ ಸಂಪರ್ಕ ಇಟ್ಟುಕೊಂಡ ಮಟ್ಟಿಗೆ ಭಾಷೆ ಉಳಿದಿರುತ್ತೆ. ಉದಾಹರಣೆಗೆ ಅಂತರ್ಜಾತಿ ವಿವಾಹಗಳಲ್ಲಿ ಕನ್ನಡ ಹೊರಟು ಹೋಗುವಷ್ಟು ಇನ್ನಾವುದರಿಂದಲೂ ಹೊರಟು ಹೋಗಲ್ಲ. ಅದೃಷ್ಟಕ್ಕೆ ನೀನು ಕನ್ನಡತಿಯನ್ನು ಮದುವೆಯಾದಿ. ನಿನ್ನ ಕುಟುಂಬದಲ್ಲಿ ಕನ್ನಡ ಉಳಿದಿದೆ.

ಸರ್ ಇದೆಲ್ಲ ಜಾತಿಗೆ ನಿರ್ದಿಷ್ಟವಾಗಿ ಸಂಬಂಧಿಸಿರೋ ವಿಷಯಗಳಲ್ಲ. ಅವು ನಿಮ್ಮ ಸಾಮಾನ್ಯ ವಿವೇಕಕ್ಕೆ, ನನಗೆ ಯಾವುದು ಬೇಕು, ಯಾವುದು ಬೇಡ, ಯಾವುದು ಒಳ್ಳೆಯದು, ಯಾವುದು ಕೆಟ್ಟದು ಅಂತ ತೀರ್ಮಾನಿಸೋ ಶಕ್ತಿಗೆ ಸಂಬಂಧಿಸಿದ್ದು ಅಲ್ಲವಾ ಸರ್?

ಅದೂ ಇರಬಹುದು. ಆದ್ರೆ ಇವೆಲ್ಲ ಜಾತಿ ಆಧಾರಿತವಾದ ನಮ್ಮ ದೇಶದ ಕೊಡುಗೆಗಳು. ನೋಡಿ ನೀವು ಹಳ್ಳಿಗೆ ಹೋದ್ರೆ ಮುಸ್ಲಿಮರನ್ನ ಒಂದು ಜಾತಿ ಅಂತಾರೆ. ಆದ್ದರಿಂದ ದ್ವೇಷ ಇಲ್ಲ. ಮತ ಅಂದುಬಿಟ್ರೆ ಬೇರೇನೇ ಆಗಿಹೋಗುತ್ತೆ. ಇದನ್ನೆಲ್ಲ ನೀವು ಗಮನಿಸೋಲ್ಲ.

ನೀವು ಏನೇ ಹೇಳಿದ್ರೂ ಇದನ್ನೆಲ್ಲ ಜಾತಿಗೆ ಕನೆಕ್ಟ್ ಮಾಡೋದನ್ನ ಒಪ್ಪೋಕೆ ಸಾಧ್ಯ ಇಲ್ಲ ಸರ್. ಈಗ ಸ್ವಲ್ಪ ರಾಜಕೀಯಕ್ಕೆ ಬಂದು ಅಲ್ಲಿನ ನಿಮ್ಮ ಒಂದು ವಿವಾದಾಸ್ಪದ ಹೇಳಿಕೆಯನ್ನ ನೋಡೋಣ. ಇತ್ತೀಚೆಗೆ ನೀವು ಮೋದಿ ಪ್ರಧಾನಮಂತ್ರಿ ಆದ್ರೆ ನಾನು ಈ ದೇಶದಲ್ಲಿ ಇರೋದಕ್ಕೆ ಇಷ್ಟಪಡೋಲ್ಲ ಅನ್ನೋ ಅರ್ಥದ ಹೇಳಿಕೆ ಕೊಟ್ಟು ಈಗ ತೊಂದರೆಗಳನ್ನ ಅನುಭವಿಸ್ತಿದೀರಿ. ನಿಮ್ಮ ಹೇಳಿಕೆಯನ್ನ ಅಪವ್ಯಾಖ್ಯಾನ ಮಾಡಲಾಯ್ತು ಮತ್ತು ಅದನ್ನ ಬಳಸಿಕೊಂಡ ಕೆಲವು ಪುಂಡಶಕ್ತಿಗಳು ನಿಮಗೆ ತೊಂದರೆ ಕೊಡ್ತಿರೋದನ್ನ ನಾವಾರೂ ಒಪ್ಪೋಲ್ಲ. ಅದನ್ನ ಖಂಡಿಸ್ತೀವಿ. ಆದರೆ ನೀವು ಮೋದಿ ವಿರುದ್ಧ ಆ ಹೇಳಿಕೆ ಕೊಟ್ಟಿದ್ದು ಮುಖ್ಯವಾಗಿ ಎರಡು ಕಾರಣಗಳ ಮೇಲೆ ಅಂತ ನಾನು ತಿಳ್ಕೊಂಡಿದೀನಿ. ಒಂದು, ೨೦೦೨ರಲ್ಲಿ ಅವರು ಮುಖ್ಯಮಂತ್ರಿಯಾಗಿದ್ದಾಗ ನಡೆದ ಹತ್ಯಾಕಾಂಡ.

ಇನ್ನೊಂದು ಅವರ ಅಭಿವೃದ್ಧಿ ಮಾದರಿ.ನಿಮ್ಮ ಹೇಳಿಕೆಯ ತೀವ್ರತೆಗೆ ಮುಖ್ಯವಾಗಿ ಕಾರಣವಾಗಿದ್ದು ಮುಸ್ಲಿಮರ ಆ ಸಾಮೂಹಿಕ ಹತ್ಯೆ ಅಂತಲೇ ನಾನು ಭಾವಿಸಿದ್ದೀನಿ. ಈ ಹಿನ್ನೆಲೆಯಲ್ಲಿ ಈ ಪ್ರಶ್ನೆ. ಆ ಹತ್ಯಾಕಾಂಡ ನಡೆದಾಗ ನೀವು ಏನನ್ನೂ ಹೇಳದೆ ಈಗ ಇಷ್ಟು ತೀವ್ರ ಹೇಳಿಕೆ ನೀಡಿದ್ದು ಯಾಕೆ ಸರ್?

ನಾನು ಆಗ ಎಲ್ಲಿದ್ದೆ, ಏನು ಮಾಡ್ತಿದ್ದೆ, ಏನು ಹೇಳಿದೆ, ಏನು ಹೇಳಲಿಲ್ಲ ಅನ್ನೋದು ನನಗೆ ಈಗ ನೆನಪಿಲ್ಲ.

ನನಗೆ ನೆನಪಿದೆ ಸರ್. ಅದನ್ನ ನನ್ನ ಅಂಕಣವೊಂದರಲ್ಲಿ ಬರೆದಿದ್ದೇನೆ ಕೂಡ. ಆಗ ವಾಜಪೇಯಿಯವರ ಎನ್.ಡಿ.ಎ. ಸರ್ಕಾರ ಇತ್ತು. ಆಗ ನೀವು ಪುಣೆ ಫಿಲ್ಮ್ ಇನ್‌ಸ್ಟಿಟ್ಯೂಟ್‌ನ ಛೇರ್ಮನ್ ಏನೋ ಆಗಿದ್ರಿ. ಹತ್ಯಾಕಾಂಡದ ಬಗ್ಗೆ, ಅದರಲ್ಲಿ ಮೋದಿ ಪಾತ್ರದ ಬಗ್ಗೆ ನೀವೇನೂ ಹೇಳದಿರುವುದನ್ನು ಗಮನಿಸಿ, ಆ ಬಗ್ಗೆ ಲೇಖನ ಮಾಡುತ್ತಿದ್ದ ಔಟ್‌ಲುಕ್ ಪತ್ರಿಕೆಯ ವರದಿಗಾರನೊಬ್ಬ ನಿಮ್ಮನ್ನು ಗುಜರಾತ್ ಹತ್ಯಾಕಾಂಡದ ಬಗ್ಗೆ ನಿಮಗೇನೂ ಅನ್ನಿಸುತ್ತಿಲ್ಲವೇ ಅಂತ ಪ್ರಶ್ನೆ ಕೇಳಿದಾಗ ನೀವು ಕೊಟ್ಟ ಉತ್ತರ: 'Both Modi and Lalu are not good for the country'. ಅಂದರೆ ಆಗಿನ ಕಾಲಕ್ಕೆ ಒಂದು ರಾಜಕೀಯ balancing statement ಆಗಿತ್ತು ಅದು.

ನಾನೊಬ್ಬ ಲೇಖಕ. ಒಬ್ಬ ಲೇಖಕನನ್ನ ಈ ರೀತಿ ಪ್ರಶ್ನಿಸೋಕ್ಕೇ ಆಗೊಲ್ಲ. ಬಹಳ ವಿಷಯ ಜನಕ್ಕೆ ಗೊತ್ತಿರೋಲ್ಲ. ನಾನು ಆಗ ಅಹಮದಾಬಾದ್‌ನಲ್ಲಿರೋ ಗಾಂಧಿ ವಿದ್ಯಾಪೀಠಕ್ಕೆ ಹೋಗಿ ಗಾಂಧಿಯ ಅಹಿಂಸೆ ಬಗ್ಗೆ ಮಾತಾಡಿದ್ದೀನಿ. ಆಮೇಲೆ, ಗಾಂಧಿಯವರ ಕಾರ್ಯದರ್ಶಿ ಇದ್ದರಲ್ಲ (ಮಹದೇವ ದೇಸಾಯಿ), ಅವರ ಮಗ ನಾರಾಯಣ ದೇಸಾಯಿ ಗಾಂಧಿ ಜೀವನ ಚರಿತ್ರೆ ಬರೆದಿದ್ದರು. ಅದನ್ನ ತಾನು ಬಿಡುಗಡೆ ಮಾಡಬೇಕೂಂತ ಮೋದಿ ಹೇಳಿದ್ದ. ಆದ್ರೆ ಗುಜರಾತ್‌ನ ಲೇಖಕರು-ಕಲಾವಿದರು ಅದನ್ನ ತಪ್ಪಿಸೋಕೆ-(ಗಣೇಶ್)ದೇವಿ ಅವರೆಲ್ಲ ಸೇರಿ-ಪುಸ್ತಕದ ಬಿಡುಗಡೆಯನ್ನ ಮುಂಬೈಯಲ್ಲಿ ಏರ್ಪಡಿಸಿ ನನ್ನನ್ನ ಕರೆದು ಬಿಡುಗಡೆ ಮಾಡಿಸಿದ್ರು. ಆಗ ಯಾರ ಮೇಲಾದ್ರೂ ಮೋದಿ ಕೃಪಾಕಟಾಕ್ಷ ಬಿದ್ರೆ ಅವನನ್ನ ಅಸ್ಪೃಶ್ಯನ ಹಾಗೆ ನೋಡೋರು. ಇವೊತ್ತು ಮೋದಿ ಎಲ್ಲರಿಗೆ ಬೇಕಾಗಿದ್ದಾನೆ. ಗುಜರಾತ್‌ನ ಒಬ್ಬ ಕವಿ ಇದ್ದಾನೆ. ಅವನು ಲೋಹಿಯಾಗೆ ಹತ್ತಿರವಾಗಿದ್ದವನು. ನನಗೂ ಹತ್ತಿರವಾಗಿದ್ದವನು. ಅವನು ಹೇಳ್ತಿದ್ದ ಮೋದಿ ಮುಸ್ಲಿಮರ ಬಾಯಿ ಮುಚ್ಚಿಸಿದ್ದಾನೇಂತ, ಅದರಿಂದ ಒಳ್ಳೇದಾಗಿದೆ ಅನ್ನೋ ಅರ್ಥದಲ್ಲಿ ಹೇಳಿದ್ದ. ಇವರಿಗೆಲ್ಲ ಏನಾಗಿದೆ ಅಂತ ಕೇಳ್ತೀನಿ. ಕನ್ನಡದ ಕವಿ ಮಿತ್ರನೊಬ್ಬ ನನಗೆ ಪತ್ರ ಬರೆದು ಮೋದಿ ಭದ್ರ ಸರ್ಕಾರ ರಚಿಸಿ ನಿಷ್ಠ ಆಡಳಿತ ಕೊಟ್ರೆ ನಾವ್ಯಾಕೆ ಸ್ವಾಗತಿಸಬಾರ್ದು ಅಂತಾನೆ. ನಮ್ಮ ಕೊಡಗಿನ ವೀರ ಸುಬ್ಬಯ್ಯ ಮೋದಿ ಏನೇ ಮಾಡಿರಲಿ ಆತನ ಪ್ರಧಾನಮಂತ್ರಿ ಅವತಾರದಿಂದ ಒಳ್ಳೆಯದಾಗುತ್ತೆ ಅಂತ ಹೇಳ್ತಿದ್ದಾರಂತೆ. ನಾನು ಎರಡು ತುದಿಯನ್ನೂ ನೋಡಿದ್ದೇನೆ. ಆ ತುದಿಯಿಂದ ಈ ತುದಿಗೆ ಬಂದವರನ್ನ.

ಮೋದಿ ಭಯ ಇದಕ್ಕೆಲ್ಲ ಕಾರಣಾಂತ ಅನ್ನಿಸುತ್ತೆ

ಇಲ್ಲ. ಮೋದಿ ಇವರ ನಿರೀಕ್ಷೆಯಂತೆ ಕೆಲಸ ಮಾಡಿಬಿಡಬಹುದು. ಜನ ಕೆಲಸ ಮಾಡೋ ಹಾಗೆ ಮಾಡಬಹುದು. ಅದು ಲೋಹಿಯಾ ಹೇಳುತ್ತಿದ್ದ Maximum efficiency ನೆಲೆಯಲ್ಲಿ. Total efficiency ನೆಲೆಯಲ್ಲಿ ಅಲ್ಲ. ಅದರಿಂದ ಬಡವರ ಮೇಲೆ ಒತ್ತಡ ಹೆಚ್ಚಬಹುದು ಅವರು ಕೀಳರಿಮೆಗೆ ಒಳಗಾಗಬಹುದು. ಇದನ್ನೆಲ್ಲ ಬರಿತಿದೀನಿ.

ಬರೀರಿ ಸರ್. ಈ. efficiencyಗಳ ಮಾತನ್ನೆಲ್ಲ ಲೋಹಿಯಾ ಆಡಿದ್ದು ನಾಗರೀಕತೆಗಳ ಉತ್ಥಾನ ಮತ್ತು ಪತನದ ಸಂದರ್ಭಗಳಿಗೆ ಸಂಬಂಧಿಸಿದಂತೆ ಅಂತ ಕಾಣುತ್ತೆ. ಇರಲಿ, ಈಗ ಕೊನೆಯದಾಗಿ ಮೊದಲಿಗೇ, ಸಾಹಿತ್ಯದ ವಿಷಯಕ್ಕೇ ಬರೋಣ.. ನಿನ್ನೆ ನಿಮ್ಮತ್ರ ಮಾತಾಡ್ತಿದ್ದಾಗ ಕಷ್ಟ, ಮುಜುಗರದ ಪ್ರಶ್ನೆ ಅಂತ ನೀವು ಹೇಳಿದ್ದ ಪ್ರಶ್ನೆಯನ್ನ ಕೇಳಲೇಬೇಕು ಅನ್ನಿಸ್ತಿದೆ. ಉತ್ತರಿಸೋದು ಬಿಡೋದು ನಿಮಗೆ ಬಿಟ್ಟದ್ದು. ನೀವು ಒಬ್ಬ ಸಾಹಿತ್ಯದ ಓದುಗರಾಗಿ ಹೇಳಿ ಸರ್, ನೀವು, ಲಂಕೇಶ್, ತೇಜಸ್ವಿ–ಇವರಲ್ಲಿ ನಿಮ್ಮ ಪ್ರಕಾರ ಲೇಖಕರಾಗಿ ನಂಬರ್ ಒನ್ ಯಾರು?

ನನಗೆ ಈ ಮೂರು ಜನರಲ್ಲಿ ಹೆಚ್ಚು ಇಷ್ಟ ಲಂಕೇಶ್, ಬರವಣಿಗೇನಲ್ಲಿ. ಆದ್ರೆ ನಾವು ಮೂರೂ ಜನ ಲೇಖಕರು ಇಲ್ದೆ ಇದ್ರೆ ಕನ್ನಡದಲ್ಲಿ ಏನೋ ಒಂದು ಶೂನ್ಯ ಇರ್ತಾ ಇತ್ತು. ನಾವು ಮೂರೂ ಜನ ಅಗತ್ಯ.

ನಿಮಗೆ ಲಂಕೇಶ್ ಹೆಚ್ಚು ಇಷ್ಟ ಯಾಕೆ?

He was a deeply disturbed man. ಅವನು ಒಂಥರಾ ನ್ಯೂರಾಟಿಕ್. ತೇಜಸ್ವಿನೂ ಹಾಗೇ ಹೇಳ್ತಿದ್ದ. ಯಾಕೆ ಅಂದ್ರೆ ನ್ಯೂರಾಟಿಕ್ ಆದವನು ಒಂದು ಸಲ ಈ ಕಡೆ ಇದ್ರೆ ಇನ್ನೊಂದು ಸಲ ಆ ಕಡೆ ಇರ್ತಾನೆ. ಅದಕ್ಕೆ ಸಮರ್ಥನೆ ಇರೋದಿಲ್ಲ. ಅವನ ಒಂದು ನಾಟಕದಲ್ಲಿ ಮೂರು ಜನ ಬಂದು ಒಬ್ಬನ್ನ ಬೈದು ಬೈದು ಅವನನ್ನ ನೇಣಿಗೆ ಹಾಕಬೇಕು ಅನ್ನುವಾಗ ನಾಟಕ ಸಂಪೂರ್ಣವಾಗಿ ತಿರುಗುಮುರುಗಾಗಿ ಬಿಡುತ್ತೆ. ಅದೊಂದು ನ್ಯೂರಾಟಿಕ್ ನಾಟಕ. ಈ ನ್ಯೂರಾಟಿಕ್ ಆದ ಎನರ್ಜಿ ಇದೆಯಲ್ಲ, ಅದು ಕೆಲವು ಪ್ರಾಮಾಣಿಕವಾದ ಸತ್ಯಗಳನ್ನ ಹೊರಕ್ಕೆ ತಂದುಬಿಡುತ್ತೆ. ಒಂದು, ಮಾಸ್ತಿಯವರ ತರಹ ಎಲ್ಲವನ್ನೂ ಮುಚ್ಚಿಟ್ಟುಕೊಳ್ಳುವುದು. ಅದು ಮುಚ್ಚಿಟ್ಟುಕೊಳ್ಳುವ ಭಾಷೆ. ಇನ್ನೊಂದು ಲಂಕೇಶನದು ಮುಚ್ಚಿಡಲಾರದವನ ಭಾಷೆ. ಅದು ಬಿಚ್ಚುವ ಭಾಷೆ ಅವನ 'ಬಿಚ್ಚು' ಕವನ ಸಂಕಲನ ಬಿಡುಗಡೆಯಾದಾಗ ಅಡಿಗರು ಹೇಳಿದ್ರು, ಕಟ್ಟುವ ಕಾಲ ಒಂದಿರುತ್ತೆ, ಬಿಚ್ಚುವ ಕಾಲ ಒಂದಿರುತ್ತೆ ಅಂತ.

ಹಾಗೆ ನಾವು ಮೂರೂ ಜನ ಮುಖ್ಯ. ನನಗೇನೋ ಜ್ಞಾನಪೀಠ ಬಂತು. ಲಂಕೇಶ್‌ಗೆ ಬರಲಿಲ್ಲ, ತೇಜಸ್ವಿಗೂ ಬರಲಿಲ್ಲ. ಅಡಿಗರಿಗೂ ಬರಲಿಲ್ಲ, ಪು.ತಿ.ನ.ಗೆ ಕೂಡ. ಅವರೆಲ್ಲ ನನಗಿಂತ ದೊಡ್ಡವರಲ್ವಾ? ಅಡಿಗರು ನನಗಿಂತ ದೊಡ್ಡವರೂಂತ

ಇವೊತ್ತಿಗೂ ತಿಳಿದಿದ್ದೀನಿ ನಾನು.

ನನಗೆ ಈ ಮೂವರನ್ನೂ ಜೊತೆಯಾಗಿ ನೋಡಿದಾಗ ತರತಮ ಗೊತ್ತಾಗಲ್ಲ. ಆದ್ರೂ ಎಲ್ಲೋ ಲಂಕೇಶ್ ಮೂವರಲ್ಲಿ ವಿಶಿಷ್ಟ ಅಂತ feel ಮಾಡ್ತಿದ್ದೆ ಅಷ್ಟೆ. ಅವರ್ದು intensity ಜಾಸ್ತಿ. ಆದ್ರೆ reachನಲ್ಲಿ ತೇಜಸ್ವಿ ಜಾಸ್ತಿ ಅನ್ನಿಸುತ್ತೆ. ಅಂದ್ರೆ horizontal reachನಲ್ಲಿ

ತೇಜಸ್ವಿಯಲ್ಲಿ horizontal reach ಬಹಳ ಇದೆ. ಅವನು ತನ್ನ ಅಪ್ಪನ ಗುಣವನ್ನ ಇದರಲ್ಲಿ ಪಡೆದುಕೊಂಡಿದ್ದಾನೆ.

ಸರ್ ಬಹಳ ಮಾತಾಡಿದೀವಿ. ನಿಮಗೆ ದಣಿವಾಗಿರಬೇಕು. ಇಲ್ಲಿಗೆ ಈ ಮಾತುಕತೆ ಸಾಕು ಅಂತ ಕಾಣುತ್ತದೆ. ಥ್ಯಾಂಕ್ಸ್, ನಮಸ್ಕಾರ.

ನಮಸ್ಕಾರನಪ್ಪ.

(ಧ್ವನಿಯಿಂದ ಲಿಪಿಗೆ: ಸವಿತಾ ನಾಗಭೂಷಣ)

●

ಸೆಪ್ಟೆಂಬರ್, ೨೦೧೪

ಅನಂತಮೂರ್ತಿಯವರಿಗೆ ಶ್ರದ್ಧಾಂಜಲಿ ಮತ್ತು ಇತರೆ ಮೂರು ಟಿಪ್ಪಣಿಗಳು

ಪತ್ರಿಕೆ ಮುದ್ರಣಕ್ಕೆ ಹೋಗುವ ಒಂದೆರಡು ದಿನಗಳ ಮುನ್ನ ಅನಂತಮೂರ್ತಿಯವರ ಸಾವಿನ ಸುದ್ದಿ ಬಂದಿದೆ. ಇವರ ಸಾವು ಕನ್ನಡಕ್ಕೆ ದೊಡ್ಡ ನಷ್ಟ ಎಂದು ಈ ಸಂದರ್ಭದಲ್ಲಿ ಹೇಳುವುದು ಕೇವಲ ಸುಲಭದ ಮಾತಾಗಿಬಿಡಬಹುದು. ಏಕೆಂದರೆ ಇವರ ಸಾವು ಒಂದರ್ಥದಲ್ಲಿ ಒಂದು ಯುಗದ ಸಾವು. ಲಂಕೇಶ್, ತೇಜಸ್ವಿ , ಚಿತ್ತಾಲ, ಶಾಂತಿನಾಥ ಮುಂತಾದ ಬಹು ದೊಡ್ಡ ಪತ್ರಿಭೆಗಳು ಸೇರಿ ಕಟ್ಟಿದ ಹೊಸ ಯುಗವೊಂದರ ಕೊನೆಯ ಪ್ರತಿನಿಧಿಯಾಗಿ ಅವರು ನಮ್ಮನ್ನು ಅಗಲಿ ಹೋಗಿದ್ದಾರೆ. ಅನಂತಮೂರ್ತಿ ತಮ್ಮ ಮೊದಲ ಕಾದಂಬರಿ 'ಸಂಸ್ಕಾರ'ದ ಮೂಲಕ ಕನ್ನಡಕ್ಕೆ ಹೊಸ ಸಂವೇದನೆ ಮತ್ತು ಆ ಮೂಲಕ ಬದುಕನ್ನು ನೋಡುವ ಒಂದು ಹೊಚ್ಚ ಹೊಸ ನೋಟಕ್ರಮವೊಂದನ್ನು ನೀಡಿದವರು. ನಂತರ ಅದರ ಸಾಧುತ್ವ ಚರ್ಚೆಗೀಡಾಯಿತು ಮತ್ತು ಅವರ ಪಾರ್ಥಿವ ಶರೀರದ ಸಂಸ್ಕಾರದ ರೀತಿ ನೀತಿಗಳನ್ನೇ ನೋಡಿ ಹೇಳುವುದಾದರೆ, ಸ್ವತಃ ಅವರಿಂದಲೇ ಪುನರ್‌ವಿಮರ್ಶೆಗೆ ಒಳಗಾಯಿತೆಂದು ಹೇಳಬಹುದಾದರೂ. ಅದೇನೇ ಇದ್ದರೂ, ಇದು ಇತ್ತೀಚೆಗೆ ತಾನೇ ಅವರನ್ನು ನಮ್ಮ ವಿಶೇಷಾಂಕಕ್ಕಾಗಿ ಅವರನ್ನು– ಒಳಹೊಕ್ಕು– ಮಾತನಾಡಿಸಿ ಬಂದಿದ್ದ ನನಗೆ ವೈಯುಕ್ತಿಕವಾಗಿ ವಿಚಿತ್ರ ಸಂಕಟವನ್ನುಂಟು ಮಾಡಿರುವ ಸಾವು.

ಯು.ಆರ್. ಅನಂತಮೂರ್ತಿ ಆಧುನಿಕ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ ಲೋಕ ಕಂಡ ಒಂದು ಉಜ್ವಲ ಬೌದ್ಧಿಕ ವ್ಯಕ್ತಿತ್ವ. ಈ ಬೌದ್ಧಿಕತೆ ಎಷ್ಟೇ ವಿವಾದಾಸ್ಪದವಾದುದಾದರೂ, ಅದು ಕನ್ನಡಕ್ಕೆ

ಒಳ್ಳೆಯದನ್ನೇ ಮಾಡಿದೆ, ಕನ್ನಡ ಮನಸ್ಸು ಜಡಗೊಳ್ಳದೆ ಸದಾ ಕ್ರಿಯಾಶೀಲ ಮತ್ತು ಸೃಜನಶೀಲವಾಗಿರುವಂತೆ ಮಾಡುವ ಮೂಲಕ. ಅವರ ದೌರ್ಬಲ್ಯಗಳನ್ನು ಹೇಳುವ ಸಂದರ್ಭ ಇದಲ್ಲ. ಹಾಗಾಗಿ ಒಂದೇ ಮಾತಲ್ಲಿ ಹೇಳುವುದಾದರೆ, ಕನಿಷ್ಠ ಅವರ ನಾಲ್ಕು ಕತೆಗಳು, ಮೂರು ಚಿಂತನೆಗಳು, ಎರಡು ಕವಿತೆಗಳು ಮತ್ತು ಒಂದು ಕಾದಂಬರಿ ಅವರನ್ನು ಕನ್ನಡ ಮನಸ್ಸಿನಲ್ಲಿ ಬಹುಕಾಲ ಉಳಿಯುವಂತೆ ಮಾಡಿದೆ. ಇದು ಬಹುಶಃ ಅವರ ಸಮಕಾಲೀನರಲ್ಲಿ ಬಹಳ ಜನಕ್ಕೆ ದೊರಕದ ಸೌಭಾಗ್ಯ. ಮಿಕ್ಕಂತೆ, ಅವರೊಡನೆಯ ಸಂದರ್ಶನದಲ್ಲಿಯೇ ಅವರ ಬಗ್ಗೆ ನಾನು ಹೇಳಬಹುದಾದದ್ದನ್ನೆಲ್ಲ ಸೂಚ್ಯವಾಗಿ ಹೇಳಿರುವುದರಿಂದ ಮತ್ತು ಮುಂದಿನ ಪುಟಗಳಲ್ಲಿ ಗೆಳೆಯ ಜಿ. ರಾಜಶೇಖರ್ ಒಂದು ಶ್ರದ್ಧಾಂಜಲಿ ಟಿಪ್ಪಣಿ ಬರೆದಿರುವುದರಿಂದ ಅವರ ಬಗ್ಗೆ ಇಲ್ಲಿ ಇನ್ನು ಹೆಚ್ಚು ಬರೆಯುವ ಅಗತ್ಯವಿಲ್ಲವೆಂದು ಭಾವಿಸಿರುವೆ.

೧. 'ಸಂಕ್ರಮಣ'ಕ್ಕೆ ೫೦ ವರ್ಷ

ಮುಖ್ಯವಾದದ್ದು ಮೊದಲು. ಚಂದ್ರಶೇಖರ ಪಾಟೀಲರ ಸಂಪಾದಕತ್ವದ 'ಸಂಕ್ರಮಣ' ಸಾಹಿತ್ಯ ದ್ವೈಮಾಸಿಕಕ್ಕೆ ಈಗ ೫೦ ವರ್ಷ. ಮೊಟ್ಟಮೊದಲಿಗೆ ಚಂಪಾ ಅವರಿಗೆ ಈ ಸಾಹಸಕ್ಕೆ ಮತ್ತು ನಿರ್ದಿಷ್ಟವಾಗಿ ಅವರ ಸಾಹಿತ್ಯ ಪ್ರೀತಿಗೆ ನಮ್ಮ ತುಂಬು ಹೃದಯದ ಅಭಿನಂದನೆಗಳು. ಪತ್ರಿಕೆಯ ಇತ್ತೀಚಿನ ಸಂಚಿಕೆಯಲ್ಲಿ ಪತ್ರಿಕೆಯನ್ನು ೧೯೬೪ರಲ್ಲಿ ಒಟ್ಟಿಗೆ ಆರಂಭಿಸಿದ ಚಂಪಾ, ಸಿದ್ಧಲಿಂಗ ಪಟ್ಟಣಶೆಟ್ಟಿ ಮತ್ತು ಗಿರಡ್ಡಿ ಗೋವಿಂದರಾಜ ಅವರು ಈ ಕುರಿತ ತಮ್ಮ ನೆನಪುಗಳನ್ನು ಬರೆದಿದ್ದಾರೆ. ಒಂದು ಅರ್ಥದಲ್ಲಿ ಅವು ಅವರ ನೆನಪುಗಳಾಗಿ ಮಾತ್ರವಲ್ಲ, ಪತ್ರಿಕೆಯನ್ನು ಬಹಳ ವರ್ಷಗಳಿಂದ ಓದುತ್ತಾ ಬಂದಿರುವ ನಮ್ಮೆಲ್ಲರ ನೆನಪುಗಳೂ ಆಗಿವೆ. ಸಾಹಿತ್ಯವನ್ನು ಸಾವು–ಬದುಕುಗಳ ಪ್ರಶ್ನೆಯೆಂಬಂತೆ ಸ್ವೀಕರಿಸಿದ್ದ ಅರವತ್ತು–ಎಪ್ಪತ್ತರ ದಶಕಗಳ ಆ ಸಾಹಿತ್ಯೋತ್ಸಾಹ ಮತ್ತು ಸಂಭ್ರಮಗಳ ಕಾವು ಮತ್ತೆ ನಮ್ಮನ್ನು ತಾಗಿದಂತಾಗಿ ಅದೆಂತಹ ಕಾಲ ಎಂಬ ರೋಮಾಂಚನವನ್ನುಂಟು ಮಾಡುತ್ತದೆ.

ವೈಯುಕ್ತಿಕವಾಗಿ ಹೇಳುವುದಾದರೆ, ನನ್ನ ಮೊದಲ ಕವನ ಪ್ರಕಟವಾಗಿದ್ದು 'ಸಂಕ್ರಮಣ'ದಲ್ಲೇ. ಹಾಗಾಗಿ ನಾನೊಬ್ಬ ಲೇಖಕ ಎಂಬ ಆತ್ಮವಿಶ್ವಾಸ ಮೂಡಿದ್ದು 'ಸಂಕ್ರಮಣ'ದ ಮೂಲಕವೇ. ಅದು ೧೯೭೧. ಆನಂತರ 'ಪ್ರಜಾವಾಣಿ' ದೀಪಾವಳಿ ನಾಟಕ ಸ್ಪರ್ಧೆಯಲ್ಲಿ ತೀರ್ಪುಗಾರರ ಉಲ್ಲೇಖಕ್ಕೆ ಪಾತ್ರವಾಗಿದ್ದ ನನ್ನ (ಏಕೈಕ) ನಾಟಕ ಪ್ರಕಟವಾಗಿದ್ದೂ 'ಸಂಕ್ರಮಣ'ದಲ್ಲೇ. ಅದಾದ ನಂತರ ನಾನು ದೆಹಲಿಯಲ್ಲಿದ್ದಾಗ ಚಂಪಾ ನನ್ನಿಂದ ಕೆಲ ಪುಸ್ತಕ ವಿಮರ್ಶೆಗಳನ್ನು ಬರೆಸಿದ ನೆನಪು. ಎಲ್ಲಕ್ಕಿಂತ ಮುಖ್ಯವಾಗಿ 'ಸಂಕ್ರಮಣ'ದೊಂದಿಗೆ ನನ್ನ ಸಂಬಂಧ ಬಲಗೊಂಡದ್ದು ಅದರ ಲೋಹಿಯಾ ವಿಶೇಷಾಂಕದ (೧೯೮೦) ಸಂಪಾದಕನಾಗಿ. ಆಗಿನಿಂದ ಈಗಿನವರೆಗೆ ಈ ಪತ್ರಿಕೆಯನ್ನು ನಾನು ಓದುತ್ತಲೋ/ಗಮನಿಸತ್ತಲೋ ಬಂದಿರುವೆ. ಬಹುಶಃ ಈ ಪತ್ರಿಕೆಯಲ್ಲಿ ಬರೆಯದೆ ಈ ೫೦ ವರ್ಷಗಳಲ್ಲಿ ಕನ್ನಡದಲ್ಲಿ ಲೇಖಕ ಅನ್ನಿಸಿಕೊಂಡವರೇ

ಇಲ್ಲವೇನೋ! ಇದ್ದರೂ ಅವರ ಸಂಖ್ಯೆ ಬಹು ವಿರಳ. ಆ ಮಟ್ಟಿಗೆ 'ಸಂಕ್ರಮಣ'ಕ್ಕೆ ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಒಂದು ಚಿರಸ್ಥಾಯಿಯಾದ ಸ್ಥಾನವಿದ್ದೇ ಇದೆ. ಪತ್ರಿಕೆ ತನ್ನ ಸುವರ್ಣ ಸಂಭ್ರಮವನ್ನು ತಾನು ಹುಟಿದ್ದ ಊರಾದ ಧಾರವಾಡದಲ್ಲಿ ಆಚರಿಸಿಕೊಂಡಿದೆ.

ಗಿರಡ್ಡಿ ಮತ್ತು ಪಟ್ಟಣಶೆಟ್ಟಿ ಸುಮಾರು ೪೦ ವರ್ಷಗಳ ಹಿಂದೆಯೇ ಪತ್ರಿಕೆಯಿಂದ ದೂರ ಸರಿದ ಮೇಲೆ ಚಂಪಾ ಎತ್ತಿದ ಹಲವಾರು ಅವತಾರಗಳನ್ನು ಅನುಸರಿಸಿ ಪತ್ರಿಕೆ ಗುಣಮಟ್ಟದಲ್ಲಿ ಹಲವಾರು ಏರಿಳಿತಗಳನ್ನು ಕಂಡು ಉಳಿದುಕೊಂಡು ಬಂದಿರುವುದೇ ಒಂದು ಆಶ್ಚರ್ಯ ಮತ್ತು ಅದರ ಪೂರ್ಣ ಕೀರ್ತಿ ಚಂಪಾ ಅವರಿಗೆ, ಅವರ ಜಿಗುಟುತನಕ್ಕೇ ಸಲ್ಲಬೇಕು.

೨. ಸಾಹಿತ್ಯದಲ್ಲಿ 'ಹ್ಯಾಂಗ್-ಓವರ್'!

ಇತ್ತೀಚೆಗೆ ಇನ್ನೊಂದು (ಮಾಜಿ) ಸಾಹಿತ್ಯ ನಗರಿಯಲ್ಲಿ ಇನ್ನೊಂದು ಸುವರ್ಣ ಸಂಭ್ರಮ ನಡೆಯಿತು. ಅದು ನಮ್ಮ ಶಿವಮೊಗ್ಗದಲ್ಲಿ, ರಾಜ್ಯ ಸಾಹಿತ್ಯ ಅಕಾಡೆಮಿಯದ್ದು. ಎಷ್ಟೋ ವರ್ಷಗಳ ಹಿಂದೆ ನಡೆಯಬೇಕಾಗಿದ್ದ ಈ ಸಂಭ್ರಮ ನಮ್ಮ ಸರ್ಕಾರಗಳ ಸಂಸ್ಕೃತಿವಿಹೀನ ನಡವಳಿಕೆಗಳಿಂದಾಗಿ ಈಗ ಎಂತಹ ಸಂಭ್ರಮದಿಂದ ನಡೆಯಿತೆಂದರೆ, ಅಕಾಡೆಮಿಯ ಅಧ್ಯಕ್ಷೆ ಮಾಲತಿ ಪಟ್ಟಣಶೆಟ್ಟಿಯವರು, ಖಾಲಿ ಹೊಡೆಯುತ್ತಿದ್ದ ಸಭಾ ಭವನವನ್ನು ನೋಡಿ ಗಾಬರಿಯಾಗಿ, ಸಭಾ ಭವನ ತುಂಬುವ ಸಾಧ್ಯತೆ ಇಲ್ಲದ ಹೊರತು ಅಕಾಡೆಮಿ ಶಿವಮೊಗ್ಗಕ್ಕೆ ಕಾಲಿಡುವುದಿಲ್ಲ ಎಂದು ಘೋಷಿಸಬೇಕಾಯಿತು! ಇದೇ ಸಂಭ್ರಮದಲ್ಲಿ ಸಂಭ್ರಮಾಚರಣೆಯ ಸಮಿತಿಯ ನೇತೃತ್ವ ವಹಿಸಿರುವ ಮಿತ್ರ ಕೆ.ವೈ. ನಾರಾಯಣಸ್ವಾಮಿಯವರು ಮಾತನಾಡಿ ಯಾಕೋ, ಯಾರಿಗೋ ಎಚ್ಚರಿಕೆ ಕೊಡುವಂತೆ ಸಾಮಾಜಿಕ ನ್ಯಾಯವು ಅಕಾಡೆಮಿಯ ಒಂದು ಮುಖ್ಯ ಬದ್ಧತೆಯಾಗಿದ್ದು, ತಳವರ್ಗಗಳ ಲೇಖಕರ ಹಿತಾಸಕ್ತಿ ಅಕಾಡೆಮಿಯ ಹೊಣೆಯೆಂದು ಘೋಷಿಸಿದಾಗ ನೆರೆದಿದ್ದ ಕೆಲವೇ ಸಭಿಕರಲ್ಲಾದರೂ (ಅಕಾಡೆಮಿಯ ದಂಡಿನ ಹೊರತಾಗಿ) ಅಕಾಡೆಮಿಯೇನಾದರೂ ಸಮಾಜ ಕಲ್ಯಾಣ ಇಲಾಖೆಯ ಸುಪರ್ದಿಗೆ ವರ್ಗಾವಣೆಯಾಗಿದೆಯೇ ಎಂದು ಆಶ್ಚರ್ಯಪಡುವಂತಾಯಿತು. ಅಥವಾ ಇದು ಇನ್ನು ಮುಂದೆ ಸಭಾ ಭವನಗಳನ್ನು ತುಂಬಲು ಅಕಾಡೆಮಿಯು ಹಮ್ಮಿಕೊಂಡಿರುವ ಯೋಜನೆಯ ಒಂದು ಭಾಗವೇ ಎಂದು ಸಂದೇಹ ಪಡುವಂತೆಯೂ ಆಯಿತು.

ನಾರಾಯಣ ಸ್ವಾಮಿ ವೇದಿಕೆಯಿಂದ ಕೆಳಗಿಳಿದು ಬಂದಮೇಲೆ ಅವರಿಗೆ ಹೀಗೆ ಹೇಳಿದೆ: "ಸಾಹಿತಿಯಾಗುವುದಕ್ಕೂ ಸರ್ಕಾರಿ ನೌಕರನಾಗುವುದಕ್ಕೂ ವ್ಯತ್ಯಾಸವಿದೆ. ಅವುಗಳಿಗೆ ಬೇಕಾದ ಪ್ರೋತ್ಸಾಹದ ರೀತಿ ನೀತಿಗಳಲ್ಲೂ ವ್ಯತ್ಯಾಸವಿದೆ. ಕನಿಷ್ಠ ಗುಣಮಟ್ಟವಿಲ್ಲದ ಲೇಖಕರಿಗೆ ಮಾತ್ರ ಸಾಮಾಜಿಕ ನ್ಯಾಯದ ಆಸರೆ ಬೇಕಾಗುತ್ತದೆ. ಅದು ಈಗಾಗಲೇ ಕನ್ನಡ ಸಾಹಿತ್ಯದಲ್ಲಿ ಸಾಬೀತಾಗಿ ಅನಾಹುತಗಳನ್ನೇ ಸೃಷ್ಟಿಸಿದೆ. ಹಲವಾರು ಬೆದರು ಬೊಂಬೆಗಳು ನಮ್ಮ ಕಣ್ಮುಂದೆಯೇ ಭಯಂಕರವಾಗಿ

ಕುಣಿಯುತ್ತಿವೆ". ಕೆ.ವೈ. ಏನೂ ಮಾತಾಡಲಿಲ್ಲ. ಆನಂತರ ಅವರ ಗುರು ಕೆ.ವಿ. ನಾರಾಯಣ, ಹಿಂದಿನೆರಡು ದಿನಗಳ ಮೈಸೂರು ಸಾಹಿತ್ಯ ಸಮಾರಂಭದ 'ಹ್ಯಾಂಗ್ ಓವರ್'ನಲ್ಲಿ ನಾರಾಯಣಸ್ವಾಮಿ ಹಾಗೆ ಮಾತನಾಡಿರಬಹುದೆಂದರು. ಆದರೆ ಯಾವುದೇ ಇಂತಹ ಹ್ಯಾಂಗ್‌ಓವರುಗಳು ಇಂತಹ ಮೂಲತಃ ಸಾಹಿತ್ಯ ವಿರೋಧಿ ಮಾತುಗಳನ್ನಾಡಿಸಬಾರದು ಅಲ್ಲವೆ?

೩. 'ರಾಗಮಾಲಾ' ಪುಸ್ತಕ ಮಾಲಿಕೆ

ಮೈಸೂರಿನ ಮಿತ್ರರಾದ ಟಿ.ಎಸ್. ವೇಣುಗೋಪಾಲ್ ಮತ್ತು ಅವರ ಪತ್ನಿ ಶೈಲಜಾ ಕಳೆದೊಂದೆರಡು ವರ್ಷಗಳಿಂದ ಕನ್ನಡ ಪುಸ್ತಕ ಪ್ರಕಾಶನ ಕ್ಷೇತ್ರದಲ್ಲಿ ವಿಶಿಷ್ಟ ಪ್ರಯತ್ನವೊಂದನ್ನು ಮಾಡುತ್ತಿದ್ದಾರೆ. ಸಂಗೀತ ಮತ್ತು ಸಂಗೀತಗಾರರನ್ನು ವಿಮರ್ಶಾತ್ಮಕವಾಗಿ ಪರಿಚಯಿಸುವ ಪುಸ್ತಕಗಳನ್ನು ಅವರು ಪ್ರಕಟಿಸುವ ಸಾಹಸಕ್ಕೆ ಕೈಹಾಕಿದ್ದಾರೆ. ನನಗೆ ತಿಳಿದಂತೆ ಕೆಲ ವಾಗ್ಗೇಯಕಾರರ ಚರಿತ್ರಾ ರೂಪದ ಪರಿಚಯದ ಅಥವಾ ಪ್ರಸಿದ್ಧ ಸಂಗೀತ ಕೃತಿಗಳ ಸ್ವರ ಪ್ರಸ್ತಾರದ ಪಠ್ಯ ಪುಸ್ತಕಗಳ ಹೊರತಾಗಿ ಸಂಗೀತ ರಸಾಸ್ವಾದನೆಗೆ ಪೂರಕವಾದ ಪ್ರಕಟಣೆಗಳು ಅಪರೂಪವೆಂದೇ ಹೇಳಬೇಕು. ಈಗ ಇಂತಹ ಪ್ರಯತ್ನದ ಭಾಗವಾಗಿ ಈ ದಂಪತಿ 'ರಾಗಮಾಲಾ ಪುಸ್ತಕ ಮಾಲಿಕೆ' ಹೆಸರಿನಲ್ಲಿ ಈಗಾಗಲೇ ನಾಲ್ಕು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಅವುಗಳಲ್ಲಿ ಇತ್ತೀಚಿನ ಪುಸ್ತಕ, ಕರ್ನಾಟಕ ಸಂಗೀತದ ಧ್ರುವತಾರೆಗಳಲ್ಲಿ ಒಬ್ಬರೆನಿಸಿದ ಸುಬ್ಬುಲಕ್ಷ್ಮಿಯವರನ್ನು ಕುರಿತ 'ಭುವನದ ಭಾಗ್ಯ ಎಂ.ಎಸ್.' ಎಂಬುದು. ಅತ್ಯಂತ ಆಕರ್ಷಕವಾಗಿ ಬಣ್ಣದ ಹಾಳೆಗಳಲ್ಲಿ ಮತ್ತು ಸುಬ್ಬುಲಕ್ಷ್ಮಿ ಅವರ ಸಂಗೀತ ಬದುಕಿನ (ಅದರಲ್ಲಿ ಸಂಗೀತ ಬಿಟ್ಟು ಇನ್ನೇನಿದೆ!) ವಿವಿಧ ಘಟ್ಟಗಳ ಬಹು ಅಪರೂಪದ ಮತ್ತು ಮನಮೋಹಕ ಕಪ್ಪುಬಿಳುಪು ಚಿತ್ರಗಳನ್ನು ಆಯ್ದು ಬಹುಸುಂದರವಾಗಿ ವಿನ್ಯಾಸಮಾಡಿ ಪ್ರಕಟಿಸಿದ್ದಾರೆ.

ಸುಬ್ಬುಲಕ್ಷ್ಮಿ ಅವರ ಸಂಗೀತ ಬದುಕಿನ ಒಂದು ಪೂರ್ಣ ಮತ್ತು ಸ್ವಲ್ಪಮಟ್ಟಿಗೆ ವಿಮರ್ಶಾತ್ಮಕವೂ ಎನ್ನಬಹುದಾದ ಚಿತ್ರ ಕಟ್ಟಿಕೊಡುವ ಲೇಖನಗಳನ್ನು ಒಳಗೊಂಡ ಈ ಪುಸ್ತಕ ಸಂಗೀತಪ್ರಿಯರೆಲ್ಲರ ಪುಸ್ತಕ ಕಪಾಟಿನಲ್ಲಿರಲೇಬೇಕಾದ ಪುಸ್ತಕ. ಈ ಪುಸ್ತಕ ಓದಿದಾಗ ನನ್ನನ್ನು ಕಾಡಿದ ಎರಡು ವಿಷಾದದ ಸಂಗತಿಗಳೆಂದರೆ, ಒಂದು ಈ ಪುಸ್ತಕದ ಹೊರಗಿನದ್ದು: ಸುಬ್ಬುಲಕ್ಷ್ಮಿಯವರಂತಹ ಮಹಾನ್ ಕಲಾವಿದೆ ಕುರಿತು ಈ ಪುಸ್ತಕದಲ್ಲಿ ಬಹುಪಾಲು ಅನುವಾದ ಲೇಖನಗಳನ್ನೇ ತುಂಬುವ ಹಾಗೆ ಕನ್ನಡದಲ್ಲೇಕೆ ಲೇಖನಗಳು ಬಂದಿಲ್ಲ ಎಂಬುದು. ಇನ್ನೊಂದು ಪುಸ್ತಕದ ಒಳಗಿನದ್ದು: ಇದರೊಳಗಿನ ಎರಡು ಲೇಖನಗಳೇ ಹೇಳುವಂತೆ, ದೇವದಾಸಿ ಕುಟುಂಬದ ಹಿನ್ನೆಲೆಯಿಂದ ಬಂದ ಈ ಕಲಾವಿದೆ ಅಂತಿಮವಾಗಿ ಬ್ರಾಹ್ಮಣ ಕುಟುಂಬದ ಭಕ್ತಿ ಸಂಗೀತದ ಪರಂಪರೆಗೆ ಸೇರಿಹೋದದ್ದರ ಮರ್ಮವಾದರೂ ಏನು ಎಂಬುದನ್ನು ಈ ಪುಸ್ತಕ ಚರ್ಚಿಸದೇ ಹೋಗಿರುವುದು.

೧೫೨ ಪುಟಗಳ ಈ ಪುಸ್ತಕದ ಬೆಲೆ: ರೂ. ೧೨೫/– ಪ್ರಕಾಶನದ ವಿಳಾಸ:

ಸಿ.ಹೆಚ್-೭೩, ೭ನೇ ಮುಖ್ಯ ರಸ್ತೆ, ಸರಸ್ವತಿಪುರಂ, ಮೈಸೂರು-೫೭೦ ೦೦೯
ದೂ: ೯೯೦೦೦೮೨೭೭೩

ಇದೇ ಪ್ರಕಾಶನದ ಇತರ ಮೂರು ಪುಸ್ತಕಗಳಲ್ಲಿ ಒಂದು ಪಂಡಿತ್ ರವಿಶಂಕರರ ಬದುಕು ಮತ್ತು ಸಂಗೀತವನ್ನು ಕುರಿತ ಪುಸ್ತಕವಾದರೆ, ಇನ್ನೊಂದು ಸಂಗೀತವನ್ನು ಆಲಿಸುವ ಬಗೆ ಮತ್ತೆ ಅದಕ್ಕೆ ಬೇಕಾದ ತಯಾರಿಯನ್ನು ಕುರಿತ ಪುಸ್ತಕ: 'ಕೇಳು ಜನಮೇಜಯ'. ಮೂರನೆಯದು, ಹೊಸ ತಲೆಮಾರಿನ ಕರ್ನಾಟಕ ಸಂಗೀತ ಗಾಯಕರೂ ಮತ್ತು ಹೊಸ ಬಗೆಯ ಚಿಂತಕರೂ (ಇವರು ಇತ್ತೀಚೆಗೆ *ಔಟ್‌ಲುಕ್* ಪತ್ರಿಕೆಯಲ್ಲಿ ಮೋದಿ ಬಗ್ಗೆ ಬರೆದ ಲೇಖನ ದಿಟ್ಟವೂ ಕುತೂಹಲಕಾರಿಯೂ ಆಗಿತ್ತು) ಆದ ವಿದ್ವಾನ್ ಟಿ.ಎಂ. ಕೃಷ್ಣ ಅವರ ಸಂಗೀತ ಕುರಿತ ಚಿಂತನೆಗಳ ಸಂಗ್ರಹ. ಹಿರಿಯ ಸಂಗೀತಗಾರರು ಮತ್ತು ಸಂಗೀತ ಸಂಪ್ರದಾಯಗಳನ್ನು ಕುರಿತ ಸೃಜನಶೀಲ ಮತ್ತು ಸಂಶೋಧನಾತ್ಮಕ ಲೇಖನಗಳನ್ನೊಳಗೊಂಡ ಈ ಪುಸ್ತಕ ಕನ್ನಡಕ್ಕೇ ಹೊಸದೆನ್ನಿಸುವಂತಹದ್ದು.

ವೇಣುಗೋಪಾಲ್-ಶೈಲಜಾ ಅವರಿಗೆ ಅಭಿನಂದನೆಗಳು.

●

ಅಕ್ಟೋಬರ್, ೨೦೧೪

ವಿಜ್ಞಾನ, ಭಾಷೆ, ಸಾಹಿತ್ಯ ಇತ್ಯಾದಿ...

ಭಾರತ ಪಾರಂಪರಿಕವಾಗಿ ಖಭೌತಶಾಸ್ತ್ರದಲ್ಲಿ ಅತೀವ ಆಸಕ್ತಿ ಹೊಂದಿದ ಮತ್ತು ಸಾಧನೆಗಳನ್ನು ಮಾಡಿರುವ ದೇಶ. ಕಾರಣ, ಖಭೌತದಲ್ಲಿರುವ 'ಖ'-ತ್ವ ಅಂದರೆ ಆಕಾಶ ತತ್ವದ ಬಗ್ಗೆ ಈ ದೇಶ ತಳೆದಿರುವ ತಾತ್ವಿಕ ಆಸಕ್ತಿ ಮತ್ತು ರಚಿಸಿರುವ ಅಪೂರ್ವ ಮೀಮಾಂಸೆ. ಈ ಅಮೂರ್ತ ಮೀಮಾಂಸೆ ಈಗ ಮಂಗಳಯಾನದ ಯಶಸ್ಸಿನ ರೂಪದಲ್ಲಿ ಸಾಕಾರಗೊಳ್ಳುತ್ತಿದೆ ಎಂದೆನ್ನಬಹುದೇ? ಎಷ್ಟಾದರೂ ಇದು ಆರ್ಯಭಟನ ದೇಶವಲ್ಲವೇ?

ಸಾರಾಭಾಯಿ-ಸತೀಶ್ ಧವನ್-ಯು.ಆರ್. ರಾವ್ ಅವರಂತಹ ಕರ್ಮಜೀವಿಗಳ ಪರಂರೆಯಿರುವ ನಮ್ಮ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ಇತರ ಪ್ರತಿಷ್ಠಿತ ವಿಜ್ಞಾನ ಸಂಸ್ಥೆಗಳಂತಲ್ಲ. ಇದರಲ್ಲಿ ತುಂಬಿರುವವರು ನಮ್ಮ ಐ.ಐ.ಟಿ.ಗಳಿಂದ ಬಂದ 'ಬೃಹತ್' ವಿಜ್ಞಾನಿಗಳಲ್ಲ. ಬದಲಿಗೆ ಸಣ್ಣಪುಟ್ಟ ಊರುಗಳ ಸಾಮಾನ್ಯ ಕಾಲೇಜುಗಳಿಂದ ಕಲಿತು ಬಂದ ಸಾಹಸ ಪ್ರಿಯ 'ಸಣ್ಣ ಪ್ರಮಾಣ'ದ ವಿಜ್ಞಾನಿಗಳು ಮತ್ತು ತಂತ್ರಜ್ಞರು. ಇದು ಭಾರತದ ವಿಜ್ಞಾನ ಸಂಶೋಧನೆಯ ನಿಜವಾದ ನೆಲೆ ಮತ್ತು ಸೆಲೆಗಳು ಎಲ್ಲಿವೆ ಎಂಬುದನ್ನು ಸೂಚಿಸುತ್ತಿರುವಂತಿದೆ. ಈ ಎಲ್ಲ ವಿಜ್ಞಾನಿಗಳು ಮತ್ತು ತಂತ್ರಜ್ಞರಿಗೆ ನಮ್ಮ-ನಿಮ್ಮ ಅಭಿನಂದನೆಗಳು.

ಅದಿರಲಿ, ಈ ಯಶಸ್ಸಿನ ಸಂಬಂಧವಾಗಿ ಕೇಳಿಬರುತ್ತಿರುವ ಎರಡು ಜನಪ್ರಿಯ ಸುದ್ದಿಗಳಿಗೆ ಇಲ್ಲಿವೆ ನಮ್ಮ ಪತ್ರಿಕೆಯ 'ಗುದ್ದು'ಗಳು-

ಒಂದು: ಲಕ್ಷಾಂತರ ಕಿ.ಮೀ.ಗಳ ಈ ಯಾನದ ಖರ್ಚನ್ನು

ಲೆಕ್ಕಹಾಕಿ, ಇದು ಪ್ರತಿ ಕಿ.ಮೀ.ಗೆ ನಮ್ಮ ಆಟೋ ರಿಕ್ಷಾ ಪ್ರಯಾಣ ದರಕ್ಕಿಂತ ತುಂಬ ಕಡಿಮೆ ಇದೆ ಎಂದು ಹೇಳಲಾಗುತ್ತಿದೆ. ಹಾಗಿದ್ದಲ್ಲಿ ಈ ತಂತ್ರಜ್ಞಾನವನ್ನು ನಮ್ಮ ಆಟೋ ರಿಕ್ಷಾಗಳಿಗೂ ಏಕೆ ಅಳವಡಿಸಬಾರದು?

ಎರಡು: ಈ ಸಾಹಸವನ್ನು ನೋಡಿ ಎದೆಯುಬ್ಬಿಸಿ ಹೆಮ್ಮೆಪಟ್ಟ ಪ್ರಧಾನಿ ಮೋದಿಯವರು ಇನ್ನು ಮುಂದಾದರೂ, ತಾವು ಅಧಿಕಾರಕ್ಕೆ ಬರುವವರೆಗೆ ಈ ದೇಶದಲ್ಲಿ ನಡೆದದ್ದೆಲ್ಲ ಬರೀ ಬುರ್ನಾಸು ಎಂದು ಹೇಳುವುದನ್ನು ನಿಲ್ಲಿಸಬೇಕು.

ಒಂದು ದಲಿತ ಸಾಹಿತ್ಯ ಸಮ್ಮೇಳನ

ಇದು ಮೈಸೂರಿನಲ್ಲಿ ಅರ್ಜುನ ಗೊಳಸಂಗಿ ಎಂಬ ಸುಪ್ರಸಿದ್ಧ ಲೇಖಕರ ನೇತೃತ್ವದಲ್ಲಿ ಮತ್ತು ಮಲ್ಲೇಪುರಂ ವೆಂಕಟೇಶ್ ಎಂಬ ಘನ ವಿದ್ವಾಂಸರ ಅಧ್ಯಕ್ಷತೆಯಲ್ಲಿ ನಡೆಯಿತು ಎಂಬುದೇ ಅದರ ಬಗ್ಗೆ ಎಲ್ಲ ಹೇಳುತ್ತಾದ್ದರಿಂದ ಬೇರೆ ಏನೂ ಹೇಳುವ ಅವಶ್ಯಕತೆ ಇಲ್ಲ ಎಂದು ಭಾವಿಸುತ್ತೇನೆ.

ಹೀಗಿದೆ ನಮ್ಮ ಕನ್ನಡ ಮಾಧ್ಯಮ ಪ್ರಪಂಚ:

ನಮ್ಮ ಕನ್ನಡದ ಸಮೂಹ ಮಾಧ್ಯಮಗಳ ಬಗ್ಗೆ ಸದ್ಯಕ್ಕೆ ಎರಡು ಪ್ರಶ್ನೆಗಳನ್ನು ಕೇಳಲೇಬೇಕು: ರೈಲ್ವೇ ಮಂತ್ರಿ ಸದಾನಂದಗೌಡರ ಮಗನಿಗೆ ಮತ್ತು ರಾಘವೇಶ್ವರ ಭಾರತಿ ಎಂಬ ಮಠಾಧೀಶರಿಗೆ ಸಂಬಂಧಿಸಿದ ಹಗರಣಗಳ ಪೈಕಿ ಮೊದಲನೆಯದರ ವರದಿಗಾರಿಕೆ ಒಂದೇ ದಿನದಲ್ಲಿ ವಿರುದ್ಧ ದಿಕ್ಕಿಗೆ ತಿರುಗಿ, ಸಂಬಂಧಪಟ್ಟ ಹೆಣ್ಣುಮಗಳ ಚಾರಿತ್ರ್ಯಹನನದ ಮಟ್ಟ ತಲುಪಿದರೆ, ಮಠಾಧೀಶರಿಗೆ ಸಂಬಂಧಿಸಿದ ಹಗರಣದ ವರದಿ ಒಂದೇ ದಿನಕ್ಕೆ ಪತ್ರಿಕೆಯ ಪುಟಗಳಿಂದ ಮತ್ತು ಟಿವಿಗಳ ತೆರೆಗಳಿಂದ ಮಾಯವಾಗಿ ಹೋಯಿತಲ್ಲಾ ಏಕೆ? ಮಠಾಧೀಶರ ಮೇಲೆ ಗಂಭೀರ ದೂರು ದಾಖಲು ಮಾಡಿದವರ ವಿರುದ್ಧ ಕ್ಷಿಪ್ರ ಕಾರ್ಯಚರಣೆಗೆ ಮುಂದಾದ ನಮ್ಮ ಪೋಲೀಸು ಮತ್ತು ನ್ಯಾಯಾಂಗ ಅದಕ್ಕಿಂತ ಬಹು ಮುಂಚೆಯೇ ಮಠಾಧೀಶರ ಮೇಲೆ ದಾಖಲಾದ ಆರೋಪದ ಬಗ್ಗೆ ಏಕೆ ಹೀಗೆ ಮೀನ–ಮೇಷ ಎಣಿಸುತ್ತಿದೆ ಎಂಬ ಪ್ರಶ್ನೆಯನ್ನು ಈ ಗೊಗ್ಗರು ಗಂಟಲಿನ ಕ್ರೈಂ ಕಾರ್ಯಕ್ರಮಗಳ ಪ್ರವೀಣರು ಕೇಳಲಿಲ್ಲವೇಕೆ? ಈ ಸಂಬಂಧ ಒಂದು ಪತ್ರಿಕೆ ಮತ್ತು ಎರಡು ಟಿವಿ ವಾಹಿನಿಗಳ ಹೊರತಾಗಿ ಮಿಕ್ಕಾವ ಮಾಧ್ಯಮಗಳೂ ಕನಿಷ್ಠ ಮಾಧ್ಯಮ ಘನತೆಯನ್ನೂ ಕಾಯ್ದುಕೊಳ್ಳಲಿಲ್ಲ ಎಂಬುದನ್ನು ನಾವೆಲ್ಲ ವಿಷಾದದಿಂದ ಗಮನಿಸಬೇಕಾಗಿದೆ.

ಅನಂತಮೂರ್ತಿಯವರ ದ್ವಂದ್ವ ಮೀಮಾಂಸೆ ಮತ್ತು ಕನ್ನಡ ಹೋರಾಟ

ಅನಂತಮೂರ್ತಿಯವರು ಬದುಕಿದ್ದಾಗ ಹೇಗೋ ನಿಧನರಾದ ಮೇಲೂ ವಿವಾದಗಳನ್ನು ಹುಟ್ಟುಹಾಕುವಲ್ಲಿ ಯಶಸ್ವಿಯಾಗಿದ್ದಾರೆ! ಅವರು ತಮ್ಮ ವಿರೋಧಿಗಳೂ ಸೇರಿದಂತೆ ಎಲ್ಲರನ್ನೂ ಮೆಚ್ಚಿಸಲು ಯತ್ನಿಸುತ್ತಿದ್ದ ಅವರ ಗುಣವೇ

ಅವರ ಶವಸಂಸ್ಕಾರ (ಮಾಧ್ವ ವಿಧಿ-ವಿಧಾನಗಳ ಪ್ರಕಾರ) ನಡೆದ ರೀತಿಯನ್ನು ನಿರ್ಧರಿಸಿದ್ದು ಎಂದು ಕೆಲವರು ಲಘುಶೈಲಿಯಲ್ಲಿ ಹೇಳುತ್ತಿದ್ದಾರೆ. ಅಂದರೆ, ಅವರ ನಿಧನವನ್ನು ಸಂತೋಷದ ಘಟನೆಯೆಂದು ಆಚರಿಸಿದ 'ಹಿಂದೂವಾದಿ'ಗಳನ್ನೂ ಈ ರೀತಿ ಅವರು ಮೆಚ್ಚಿಸಿ ಹೋದರಂತೆ!

ಅದೇನೇ ಇರಲಿ, ಅನಂತಮೂರ್ತಿಯವರ ಶವ ಸಂಸ್ಕಾರದ ರೀತಿ-ನೀತಿಗಳನ್ನು ಕುರಿತು ಆರಂಭವಾದಂತೆ, ಅವರ ನಿಜ ವ್ಯಕ್ತಿತ್ವದ ಬಗ್ಗೆ ನಡೆದಿರುವ ಚರ್ಚೆ (ನಮ್ಮ ಪತ್ರಿಕೆಯ 'ನಿಮ್ಮ ಪತ್ರ' ಅಂಕಣದಲ್ಲೂ ಗಮನಿಸಬಹುದು) ಈಗ ಜನಪ್ರಿಯ ಧಾಟಿಯನ್ನು ಮೀರಿ ಗಂಭೀರ ತಾತ್ವಿಕ ಶೈಲಿಗೆ ತಿರುಗಿದೆ. ಅವರ ವ್ಯಕ್ತಿತ್ವದ ಸಹಜ ಓರೆಕೋರೆಗಳನ್ನು ತಿದ್ದಿ ಪ್ರಸ್ತುತಪಡಿಸುವ ಮರಣೋತ್ತರ ರಿಪೇರಿ ಪ್ರಯತ್ನಗಳು ಈಗ ನಡೆದಿವೆ. ಈ ಸಂಬಂಧವಾಗಿ 'ಪ್ರಜಾವಾಣಿ'ಯಲ್ಲಿ ಪ್ರಕಟವಾದ ಒಂದು ಬರಹ ಮತ್ತು ಅದೇ ದಿನ ಅದೇ ಪತ್ರಿಕೆಯಲ್ಲಿ ಪ್ರಕಟವಾದ ಮಾತೃಭಾಷಾ ಶಿಕ್ಷಣ ಕುರಿತ ನಟರಾಜ ಹುಳಿಯಾರರ ಅಂಕಣದ ಬಗ್ಗೆ ನಾನೊಂದು ಪ್ರತಿಕ್ರಿಯೆ ಬರೆದು ಕಳಿಸಿದೆ. ಅದು ಪ್ರಕಟವಾಗಲಿಲ್ಲ. ಏಕೆಂದು ನೀವೇ ತೀರ್ಮಾನಿಸಲಿ ಎಂದು. ಅದನ್ನು ಇಲ್ಲಿ ಕೊಡುತ್ತಿರುವೆ:

'ಪ್ರಜಾವಾಣಿ' ಪ್ರಕಟಿಸದ ಒಂದು ಪತ್ರ

೧೭ನೇ ಸೆಪ್ಟಂಬರ್ (೨೦೧೪) 'ಪ್ರಜಾವಾಣಿ'ಯ 'ಅಭಿಮತ' ಪುಟದ ಎರಡು ಬರಹಗಳ ಬಗ್ಗೆ ನನ್ನ ಪ್ರತಿಕ್ರಿಯೆ:

೧. ರೋಹಿತ್ ಚಕ್ರತೀರ್ಥ ಅವರು 'ಸಂಗತ'ದಲ್ಲಿ 'ಬ್ರಾಹ್ಮಣನ ಕಷ್ಟ...' ಇತ್ಯಾದಿ ಶೀರ್ಷಿಕೆಯಲ್ಲಿ ಯು.ಆರ್. ಅನಂತಮೂರ್ತಿಯವರ ವ್ಯಕ್ತಿತ್ವ ವಿಶ್ಲೇಷಣೆಯ ಪ್ರಯತ್ನ ಮಾಡಿದ್ದಾರೆ. ಆ ಮೂಲಕ ಅವರನ್ನು ದ್ವಂದ್ವಮೂರ್ತಿ ಎಂಬ ಟೀಕೆಯಿಂದ ಪಾರು ಮಾಡುವ ಬೌದ್ಧಿಕ ಕಸರತ್ತೊಂದನ್ನು ನಡೆಸಿದ್ದಾರೆ. ಆದರೆ ಅನಂತಮೂರ್ತಿಯವರು, ಇಂತಹ ಬೌದ್ಧಿಕ ಸಹಾನುಭೂತಿಯ ಪ್ರಯತ್ನಗಳು ಅನಗತ್ಯವೆನ್ನಿಸುವಷ್ಟರ ಮಟ್ಟಿಗೆ ಸ್ವತಃ ತಾವೇ ತಮ್ಮ ಸೃಜನಶೀಲ ಬರಹಗಳ ಮೂಲಕ ಕನ್ನಡದ ಸಾರಸ್ವತ ಲೋಕದಲ್ಲಿ ಚಿರಸ್ಥಾಯಿಯಾದ ಸ್ಥಾನವನ್ನು ಸಾಧಿಸಿಕೊಂಡಿದ್ದಾರೆ. ಹೀಗಾಗಿ ರೋಹಿತ್ ಅವರ ಬರಹ ಯಾವುದೋ ಸಾಹಿತ್ಯೇತರ ಹಿತಾಸಕ್ತಿಯ ಧ್ವನಿಯಾಗಿ ನಮ್ಮನ್ನು ತಾಗಿ, ಅನುಮಾನಾಸ್ಪದವೆನ್ನಿಸುತ್ತದೆ.

'ಬ್ರಾಹ್ಮಣನ ಕಷ್ಟ' ಎಂಬ ಶೀರ್ಷಿಕೆಯೊಂದಿಗೆ ಆರಂಭವಾಗುವ ರೋಹಿತ್ ಅವರ ಈ ಬರಹದ ಈ ಶೀರ್ಷಿಕೆಯೇ, ಅವರ ಬರಹ ಯಾವುದನ್ನು ಹಲವು ಆಧುನಿಕ ಸಿದ್ಧಾಂತಗಳ ಉಲ್ಲೇಖಗಳ ಮೂಲಕ 'ನ್ಯಾಯಸಮ್ಮತ'(rationalise)ಗೊಳಿಸಲು ಹೊರಟಿದೆಯೋ (ಅಂದರೆ ದಂದ್ವಗಳನ್ನು ಯುಗ್ಮಗಳೆಂದು ಸಾಬೀತುಪಡಿಸುವುದು) ಅದನ್ನೇ ಮೂಲತಃ ಧಿಕ್ಕರಿಸುತ್ತಿದೆ. ಅಂದರೆ ಯಾವ ಆಧುನಿಕತೆಯೂ ಬ್ರಾಹ್ಮಣನನ್ನು

ಬ್ರಾಹ್ಮಣ ಪಟ್ಟದಿಂದ (ಅಂದರೆ ಬ್ರಾಹ್ಮಣ್ಯದಿಂದ) ಬಿಡುಗಡೆಗೊಳಿಸಲಾರದು ಎಂದು ಅದು (ಶೀರ್ಷಿಕೆ) ಧ್ವನಿಸುತ್ತಿದೆ. ಇದರರ್ಥ, ಆಧುನಿಕತೆ ಎಂಬುದು ಬ್ರಾಹ್ಮಣನಿಗೆ ಬ್ರಾಹ್ಮಣ ಪ್ರಾಧಾನ್ಯವಲ್ಲದ ಹೊಸ ಕಾಲದಲ್ಲಿ ತನ್ನ ಪ್ರಾಧಾನ್ಯವನ್ನು ಉಳಿಸಿಕೊಳ್ಳಲು ಹೊರ ವೇಷ ಭೂಷಣಗಳನ್ನು ಒದಗಿಸಬಲ್ಲುದೇ ಹೊರತು ಅವನನ್ನು ಒಳಗಿಂದ ಬದಲಾವಣೆ ಮಾಡಲಾರದು ಎಂಬುದೇ ಆಗಿದೆ.

ಇದು ಅನಂತಮೂರ್ತಿಯವರು ನಂಬಿದ್ದ, ಬರೆದ ಮತ್ತು ಕೆಲವು ಸಂದರ್ಭಗಳಲ್ಲಿ (ಉದಾ: ಅವರ ಮದುವೆ) ಕ್ರಿಯಾಶೀಲರೂ ಆಗಿದ್ದ ಸನ್ನಿವೇಶಗಳು ಸೂಚಿಸುವ ಆಧುನಿಕತೆಯ ಅರ್ಥಗಳಿಗೆ ತದ್ವಿರುದ್ಧವಾದದ್ದು. ನಿಜ, ಅವರು ತಮ್ಮನ್ನು ಒಳ ಟೀಕಾಕಾರ (critical insider) ಎಂದು ಕರೆದುಕೊಂಡು ಸಂಪ್ರದಾಯ ಮತ್ತು ಆಧುನಿಕತೆಗಳೆರಡನ್ನೂ ಟೀಕಿಸಿದ್ದಾರೆ. ಆದರೆ ಈ ಟೀಕೆಗಳೆರಡೂ ಸಂಧಿಸುವ; ವ್ಯಾವಹಾರಿಕವಾಗಿ ಸುಸಂಬದ್ಧವೆನಿಸುವ ಜಾಗವನ್ನು (Social space) ಮಾತ್ರ ಅವರು ಎಲ್ಲೂ ಸೂಚಿಸಿಲ್ಲ. ಹಾಗಾಗಿ ಅವರ ಈ ವಿಚಾರ ವಿಮರ್ಶೆ ಯುಗ್ಮ ರೂಪದಲ್ಲಿ ಕಾಣದೆ ಅವರು ದ್ವಂದ್ವಗಳಿಗೇ ಹೆಸರಾದರೆಂದು ತೋರುತ್ತದೆ. ಒಂದು ಪ್ರಾತಿನಿಧಿಕ ಉದಾ: ಮಿಶ್ರ ಜಾತಿ-ಮತಗಳ ಮತ್ತು ವಿಧವಾ ವಿವಾಹಗಳನ್ನು ಹಾಗೂ ಜಾತಿ ಭೇಧವಿಲ್ಲದ ಸಾಮೂಹಿಕ ಊಟದ ವ್ಯವಸ್ಥೆಯನ್ನು ಧರ್ಮಸಮ್ಮತವಲ್ಲವೆಂದು ನಂಬುವ ಮಠಾಧೀಶರನ್ನು ಪೂಜ್ಯರೆಂದು ಮಾನ್ಯ ಮಾಡುವ ಮತ್ತು ಅವರು ಕೊಡಮಾಡುವ 'ಸಮಾಜ ಭೂಷಣ'ವೆಂಬ ಪ್ರಶಸ್ತಿಯನ್ನು ಅಭಿಮಾನದಿಂದ ಸ್ವೀಕರಿಸುವ ಅನಂತಮೂರ್ತಿಯವರ ಸಾಮಾಜಿಕ ವರ್ತನೆಯನ್ನು ಏನೆಂದು ಕರೆಯುವುದು? ಹೇಗೆ ಅರ್ಥ ಮಾಡಿಕೊಳ್ಳುವುದು?

ಅನಂತಮೂರ್ತಿ ಆಧುನಿಕ ಕನ್ನಡದ ಓರ್ವ ಬಹು ಪ್ರತಿಭಾಶಾಲಿ ಲೇಖಕ. ನಮಗೆ ಅವರು ಅಷ್ಟರಮಟ್ಟಿಗೆ 'ಹೀರೋ' ಆಗಿರುವುದು ಸಾಕು. ಇದರಾಚೆಗೂ ಮಾಡುವ ಅವರ ಬಿಂಬ ರಕ್ಷಣೆಯ ಪ್ರಯತ್ನಗಳು ವ್ಯರ್ಥ ಪಾರಿಭಾಷಿಕ ರಾಜಕಾರಣ ಮಾತ್ರವೆನಿಸಿಕೊಂಡೀತು. ಅವರ ಶವಸಂಸ್ಕಾರಕ್ಕೆ ಸರ್ಕಾರದ ವತಿಯಿಂದ ಖರ್ಚಾದ ಕೇಜಿಗಟ್ಟಲೆ ತುಪ್ಪ ಮತ್ತು ಶ್ರೀಗಂಧ ಹಾಗೂ ಪುರೋಹಿತರ ಶುಲ್ಕ ಇತ್ಯಾದಿಗಳನ್ನು ನಮ್ಮ ಸರ್ಕಾರಗಳು ಮಾಡುವ ಹಲವು ರೀತಿಗಳ ದುಂದುವೆಚ್ಚಗಳಲ್ಲಿ ಒಂದೆಂದು ಪರಿಗಣಿಸಿಬಿಡೋಣ!

೨. ಇನ್ನು ಸರ್ವೋಚ್ಚ ನ್ಯಾಯಾಲಯದ ಇತ್ತೀಚಿನ ಮರುತೀರ್ಪಿನ ಹಿನ್ನೆಲೆಯಲ್ಲಿ ಮಾತೃಭಾಷಾ ಶಿಕ್ಷಣದ ಬಿಕ್ಕಟ್ಟಿನ ಬಗ್ಗೆ ತಮ್ಮ ಅಂಕಣದಲ್ಲಿ ('ಕನ್ನಡಿ') ನಟರಾಜ ಹುಳಿಯಾರರು ಬರೆದಿದ್ದಾರೆ. ತಾವು ಮತ್ತು ತಮ್ಮ ಗೆಳೆಯರು ಕೆಲವು ವರ್ಷಗಳ ಹಿಂದೆ ಒಂದನೇ ತರಗತಿಯಿಂದಲೇ ನಮ್ಮ ಮಕ್ಕಳಿಗೆ ಇಂಗ್ಲಿಷ್ ಕಲಿಸಬೇಕೆಂಬ ಪ್ರಚಾರ ಕಾರ್ಯಕ್ರಮ ಶುರು ಮಾಡಿದಾಗ ಕೆಲ ಹಿರಿಯ ಸಾಹಿತಿಗಳು ನ್ಯಾಯಾಲಯ ತೀರ್ಪು ಮಾತೃಭಾಷಾ ಶಿಕ್ಷಣ ಮಾಧ್ಯಮದ ಪರವಾಗಿ ಬರಲಿದೆಯೆಂಬ ನಿರೀಕ್ಷೆಯಿಂದ ಅದನ್ನು ವಿರೋಧಿಸಿದ್ದಾಗಿ ಅಲ್ಲಿ ಅವರು ಬರೆದಿದ್ದಾರೆ. ಆದರೆ

ಇದು ಸರಿಯಾದ ಮಾಹಿತಿಯಲ್ಲ. ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಸುವ ನೀತಿಯನ್ನು ನಾನೂ ಸೇರಿದಂತೆ ಹಲವರು ವಿರೋಧಿಸಿದ್ದು ಅವರು ಹೇಳಿರುವ ಕಾರಣದಿಂದ ಖಂಡಿತ ಅಲ್ಲ. ಬದಲಿಗೆ, ಈ ಹಿನ್ನೆಲೆಯಲ್ಲಿ: ಈ ನೀತಿಯನ್ನು ಪ್ರತಿಪಾದಿಸಿದವರೆಲ್ಲರೂ ಇಂದಿನ ಪರಿಸ್ಥಿತಿಯಲ್ಲಿ ಮಾತೃಭಾಷಾ ಶಿಕ್ಷಣ ಮಾಧ್ಯಮದ ಪ್ರಶ್ನೆಯೇ ಅಸಂಗತವೆಂದು ನಿರ್ಧರಿಸಿ ತಂತಮ್ಮ ಮಕ್ಕಳನ್ನೆಲ್ಲ ಪ್ರತಿಷ್ಠಿತ ಇಂಗ್ಲಿಷ್ ಶಾಲೆಗಳಿಗೆ ಸೇರಿಸಿ; ಕನ್ನಡ ಶಾಲೆಯ ಮಕ್ಕಳ ಬಗ್ಗೆ ತಮ್ಮ (ಅನಗತ್ಯ ಮತ್ತು ಅವಮಾನಕರ) ಮರುಕ ವ್ಯಕ್ತಪಡಿಸುವ ರೂಪದಲ್ಲಿ ಅದನ್ನು ಸಮರ್ಥಿಸತೊಡಗಿದಾಗ. ಇನ್ನೂ ಮುಖ್ಯವಾಗಿ, ಇವರೆಲ್ಲ ಮಾತೃಭಾಷಾ ಶಿಕ್ಷಣದ ಪ್ರಶ್ನೆಯನ್ನು ಜಾತಿ-ಸಮುದಾಯಗಳ ಪ್ರಶ್ನೆಯನ್ನಾಗಿ ಬಿಂಬಿಸಿದಾಗ ಮತ್ತು ಇದು ಸಾರ್ವತ್ರಿಕವಾದ ಇಂಗ್ಲಿಷ್ ಶಿಕ್ಷಣ ಮಾಧ್ಯಮದ ಆಗ್ರಹದ ಮುನ್ನುಡಿ ಎಂದೆನ್ನಿಸತೊಡಗಿದಾಗ. (ಮುಂದೆ ಅದು ನಿಜವೇ ಆಯಿತು) ಮಾತೃ ಭಾಷಾ ಮಾಧ್ಯಮವನ್ನು ಕಡ್ಡಾಯ ಮಾಡಿ ಯಾವ ತರಗತಿಯಿಂದಲಾದರೂ ಇಂಗ್ಲಿಷ್ ಕಲಿಸಿ ಎಂಬುದು ನಮ್ಮ ವಾದವಾಗಿತ್ತು. ಮತ್ತು ನಮ್ಮ ಮಕ್ಕಳ ಮನಸ್ಸಿನಲ್ಲಿ ಆರಂಭದಿಂದಲೇ ಕನ್ನಡದ ಪ್ರಾಥಮಿಕತೆಗೆ ಭಂಗ ಉಂಟಾಗಬಾರದೆಂಬುದೂ ನಮ್ಮ ಉದ್ದೇಶವಾಗಿತ್ತು.

ನಟರಾಜರ ಅಂಕಣ ಓದಿದಾಗ ಅವರು ಕನ್ನಡಿಗರು ಶಿಕ್ಷಣ ಮಾಧ್ಯಮವಾಗಿ ಕನ್ನಡವನ್ನು ಕೈಬಿಡುವುದು ಲೇಸೆಂಬ ಭಾವನೆಯನ್ನೇ ಹೊಂದಿರುವುದು ಗೊತ್ತಾಗುತ್ತದೆ. ಅವರು ರಾಜ್ಯದಲ್ಲಿ ಕನ್ನಡವನ್ನು ಕನ್ನಡದ ಮಕ್ಕಳು ಪ್ರಥಮ ಭಾಷೆಯಾಗಿಯಾದರೂ ಕಲಿಯುವುದನ್ನು ಕಡ್ಡಾಯ ಮಾಡಿ ಕನ್ನಡವನ್ನು ಉಳಿಸುವ ಸಲಹೆ ನೀಡಿದ್ದಾರೆ. ಇದು ಶಿಕ್ಷಣ ಮಾಧ್ಯಮದ ವಿಷಯದಲ್ಲಿ ಅಂಕಣಕಾರರು ನ್ಯಾಯಾಲಯದ ತೀರ್ಪು ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಪ್ರಶ್ನೆಗಳನ್ನು ನಿರ್ವಹಿಸಿರುವ ನೆಲೆಗಳ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಂಡಿಲ್ಲವೆಂಬುದನ್ನು ಸೂಚಿಸುತ್ತದಷ್ಟೆ. ಅದಕ್ಕಿಂತ ಹೆಚ್ಚಾಗಿ ಯಾವ ಆಧಾರದ ಮೇಲೆ ಇವರು ತಮ್ಮ ಈ ಸಲಹೆಯಾದರೂ ನ್ಯಾಯಾಲಯದ ಮಾನ್ಯತೆ ಪಡೆಯುವುದೆಂದು ಭಾವಿಸಿದ್ದಾರೋ ತಿಳಿಯದಾಗಿದೆ!

ಮಾತೃಭಾಷಾ ಶಿಕ್ಷಣವನ್ನು ಉಳಿಸಿಕೊಳ್ಳಲು ನಮ್ಮ ರಾಜ್ಯ ಸರ್ಕಾರ ಇತರ ರಾಜ್ಯಗಳ ಸರ್ಕಾರಗಳೊಡನೆ ಚರ್ಚಿಸಿ ಒಂದು ಸಂಘಟಿತ ರಾಷ್ಟ್ರೀಯ ಪ್ರಯತ್ನ ಮಾಡುವ ಪ್ರಸ್ತಾವವನ್ನು ನಟರಾಜರು ಅನುಮಾನದಿಂದ ನೋಡಿರುವುದೇ ಮಾತೃಭಾಷಾ ಶಿಕ್ಷಣ ಕುರಿತ ಅವರ ಮೂಲ ನಿಲುವನ್ನು ಸ್ಪಷ್ಟಪಡಿಸುವಂತಿದೆ. ಕರ್ನಾಟಕ ಸರ್ಕಾರ ಈ ವಿಷಯದಲ್ಲಿ ಆಸಕ್ತಿ ತಳೆಯುತ್ತಿರುವಾಗ ಇತರ ಸರ್ಕಾರಗಳು ತಾಳಲಾರವು ಎಂದು ನಟರಾಜರು, ಇಂತಹ ಪ್ರಯತ್ನಗಳು ಆರಂಭವಾಗುವ ಮುನ್ನವೇ ಸಂದೇಹಿಸಲು ಏನು ಕಾರಣ? ಹಾಗಿದ್ದಲ್ಲಿ ಅವರು ಇಂದು ಕನ್ನಡ ಉಳಿಸಲು ಸೂಚಿಸಿರುವ ಕ್ರಮಗಳಾದರೂ ವ್ಯಾವಹಾರಿಕ ಎಂದು ಹೇಗೆ ನಂಬುವುದು? ಇಂತಹ (ಇವರು ಪ್ರಸ್ತಾಪಿಸುವ ಉನ್ನತ ಹಂತದ ತರಗತಿಗಳಿಗಾಗಿ ವಿಜ್ಞಾನ ವಿಷಯಗಳ ಪಠ್ಯಪುಸ್ತಕಗಳ ಲಭ್ಯತೆಯೂ ಸೇರಿದಂತೆ) ಪ್ರಯತ್ನಗಳು

ಈ ಹಿಂದೆ ನಡೆದಿದ್ದವು ಎಂಬುದು ನಟರಾಜರಿಗೆ ಗೊತ್ತಿದ್ದಂತಿಲ್ಲ. ಆದರೆ ಭಾಷೆ ಕುರಿತ ಇಂತಹವರ ಇಂತಹ 'ವ್ಯಾವಹಾರಿಕ' ನಿಲುವಿನಿಂದಾಗಿ ಅವೆಲ್ಲ ವಿಫಲವಾಗಿ ಇಂದು ಕನ್ನಡಕ್ಕೆ ಈ ದುರ್ಗತಿ ಒದಗಿದೆ ಎಂದು ಇಲ್ಲಿ ಹೇಳಬೇಕಿದೆ. ನಟರಾಜರು ಪಂಜಾಬ್‌ನ ಜೋಗಾ ಸಿಂಗ್‌ರ ಹೋರಾಟದ ಉದಾಹರಣೆಯನ್ನು ನೀಡಿರುವುದು ಅವರ ಈ ನಿಲುವಿನ ಹಿನ್ನೆಲೆಯಲ್ಲಿ ಒಂದು ತಮಾಷೆಯಾಗಿ ಮಾತ್ರ ಕಾಣಬಲ್ಲುದು. ಕನ್ನಡಕ್ಕೆ ಒದಗಿರುವ ಇಂದಿನ ದುರ್ಗತಿಯ ಹಿಂದಿರುವ ತಮ್ಮಂತಹವರ ಕೇವಲ ವ್ಯಾವಹಾರಿಕೆನ್ನಿಸುವ ನಿಲುವಿನ ಸಮೀಪ ದೃಷ್ಟಿ ದೋಷವನ್ನು ಮರೆಮಾಚಿಕೊಳ್ಳಲಷ್ಟೇ ಅವರು ಈ ಉದಾಹರಣೆಯನ್ನು ತಮ್ಮ ಬರಹದಲ್ಲಿ ಸೇರಿಸಿದಂತಿದೆ.

ಇಂದಿನ ಜಾಗತೀಕರಣದ ಸವಾಲುಗಳ ಸಂದರ್ಭದಲ್ಲಿ ನಮ್ಮ ಮಾತೃಭಾಷೆಗಳನ್ನು ಶಿಕ್ಷಣ ಕ್ರಮದಲ್ಲಿನ ಒಂದು ಭಾಷೆಯಾಗಿ ಮಾತ್ರವಲ್ಲ, ಕನಿಷ್ಟ ಅಡಿಪಾಯದ ಶಿಕ್ಷಣ ಮಾಧ್ಯಮವಾಗಿಯಾದರೂ ಉಳಿಸುವುದು ಹಲವು ದೃಷ್ಟಿಗಳಿಂದ ಎಷ್ಟು ಮಹತ್ವದ ಸಂಗತಿ ಮತ್ತು ಅದಕ್ಕಾಗಿ ಯಾವ ರೀತಿಯ ಮತ್ತು ಪ್ರಮಾಣದ ಪ್ರಯತ್ನ ಇಂದು ಅಗತ್ಯವಾಗಿದೆ ಎಂಬುದು ನಟರಾಜರ ಅರಿವಿಗೆ ಬಂದಂತಿಲ್ಲ. ಬಂದಿದ್ದಲ್ಲಿ, ನ್ಯಾಯಾಲಯದ ತೀರ್ಪನ್ನು ನಾವು ಎದುರಿಸಬೇಕಾದ ರೀತಿ–ನೀತಿಗಳನ್ನು ಕುರಿತು ಅವರು ತಮ್ಮ ಈ ಅಂಕಣದಲ್ಲಿ ಬರೆದಿರುವಷ್ಟು ಸುಲಭ ತರ್ಕ ಮತ್ತು ಶೈಲಿ ಮತ್ತು ಹುಸಿಯೆನಿಸುವ ಶೀರ್ಷಿಕೆಯೊಂದಿಗೆ ('ಶುರುವಾಗಲಿದೆ ತಾಯ್ನುಡಿ ಪರ ಯುದ್ಧ') ಬರೆಯುತ್ತಿರಲಿಲ್ಲ.

●

ನವೆಂಬರ್, ೨೦೧೪

'ನೀನಾಸಂ'ನ ಬೌದ್ಧಿಕ ಸಂಪ್ರದಾದಾಯವೂ, ಅದರ ಎರಡು ನಾಟಕಗಳೂ

ಕಳೆದ ಅಕ್ಟೋಬರ್ ೨ರಿಂದ ೮ರವರೆಗೆ ನಡೆದ ಹೆಗ್ಗೋಡಿನ ನೀನಾಸಂ ಸಂಸ್ಕೃತಿ ಶಿಬಿರದ ಈ ವರ್ಷದ ವಿಷಯ 'ಭಾರತೀಯ ಚಿಂತನಾ ಕ್ರಮವೊಂದಿದೆಯೇ?' ಎಂಬುದಾಗಿತ್ತು. ಇದು ಎರಡು-ಮೂರು ದಶಕಗಳ ಹಿಂದೆ ಎ.ಕೆ. ರಾಮಾನುಜನ್ ತಮ್ಮದೊಂದು ಮುಖ್ಯ ಲೇಖನವೊಂದರ ಮೂಲಕ ಎತ್ತಿದ ಪ್ರಶ್ನೆ ಕೂಡಾ ಆಗಿತ್ತು. ಅದು ವಸಾಹತೋತ್ತರ ಚಿಂತನೆಯೆಂಬುದೊಂದು ಬಲಿಯುತ್ತಿದ್ದ ಕಾಲದಲ್ಲಿ ಹುಟ್ಟಿದ ಮುಖ್ಯ ಪ್ರಶ್ನೆಯಾಗಿತ್ತು. ಆಗ ಅದಕ್ಕೊಂದು ಬೌದ್ಧಿಕ ಸಂದರ್ಭವೂ ಇತ್ತು. ಅದಕ್ಕೆ ತಕ್ಕಂತೆ ಆಗ ಆ ಬಗ್ಗೆ ಸಣ್ಣ ಪುಟ್ಟ ಚರ್ಚೆಯೂ ನಡೆದಿದ್ದ ನೆನಪು ನನಗೆ. ಆ ಸಂದರ್ಭದಲ್ಲೇ ಈ ಲೇಖನವನ್ನು ಕೆ.ವಿ. ಸುಬ್ಬಣ್ಣನವರು ಕನ್ನಡಕ್ಕೆ ಅನುವಾದಿಸಿದ್ದರು. ಆದರೆ ಅದು ಕನ್ನಡದಲ್ಲಿ ಅಂತಹ ದೊಡ್ಡ ಚರ್ಚೆಯನ್ನೇನೂ ಹುಟ್ಟುಹಾಕಿದ ನೆನಪು ನನಗಿಲ್ಲ.

ಆ ಪ್ರಶ್ನೆಯನ್ನು ನೀನಾಸಂ ಮತ್ತೆ ಈಗ ಎತ್ತಿರುವ ಅಗತ್ಯದ ಬಗ್ಗೆ ಸ್ವತಃ ನೀನಾಸಂ ಏನೂ ಹೇಳಿದಂತಿಲ್ಲ. ಜಾಗತೀಕರಣವು ವಸಾಹತೋತ್ತರ ಚಿಂತನೆಯನ್ನು ಒಯ್ದಿರುವ ಹೊಸ-ಆಧುನಿಕೋತ್ತರ-ನೆಲೆಯ ದೃಷ್ಟಿಯಿಂದ ಈ ಚರ್ಚೆ ಪುನರಾರಂಭಕ್ಕೆ ಅರ್ಹ ಅಥವಾ ಸೂಕ್ತ ಕಾಲ ಎಂದು ಕೆ.ವಿ. ಅಕ್ಷರ ಅವರಿಗೆ ಅನಿಸಿರಬೇಕು. ಅವರು ಶಿಬಿರಕ್ಕೆ ಮುನ್ನ ಅನೌಪಚಾರಿಕವಾಗಿ ಶಿಬಿರದ ವಿಷಯದ ಬಗ್ಗೆ ನನ್ನೊಂದಿಗೆ ಪ್ರಸ್ತಾಪ ಮಾಡಿದಾಗ ನಾನು ವಿಷಯದಲ್ಲಿನ 'ಭಾರತೀಯ' ಎಂಬುದೇ ಒಂದು ಜಟಿಲ ಮತ್ತು ಸಮಸ್ಯಾತ್ಮಕ ಶಬ್ದ

ಮತ್ತು ಅನುಮಾನಾಸ್ಪದ ಪರಿಕಲ್ಪನೆಯಾಗಿದೆ ಎಂದು ಹೇಳಿದ್ದೆ. ಹಾಗಾಗಿ ಈ ವಿಷಯ ಕುರಿತ ಚರ್ಚೆಯ ಈ ಮುಖ್ಯ ನೆಲೆಯೇ ಭದ್ರವಿಲ್ಲದಿರುವಾಗ ಚರ್ಚೆ ಕಷ್ಟವಾಗಬಹುದು ಎಂದೂ ಸೇರಿಸಿದ್ದೆ. ಸತ್ಯಜಿತ್ ರೇ ಅವರಂತಹ ಸತ್ಯಜಿತ್ ರೇ ಅವರೇ ತಮ್ಮ ಚಲನಚಿತ್ರಗಳನ್ನು ಕುರಿತ ಚರ್ಚೆಯ ಸಂದರ್ಭದಲ್ಲಿ 'ನಾನೊಬ್ಬ ಬಂಗಾಳಿ ನಿರ್ದೇಶಕನೇ ಹೊರತು ಭಾರತೀಯನಲ್ಲ' ಎಂದು ಹೇಳಿದ್ದನ್ನು ನೆನಪಿಸಿದೆ. ಜಾಗತೀಕರಣದ ಹಿಂದಿರುವ ರಾಜಕಾರಣದ ಗುಟ್ಟುಗಳು ರಟ್ಟಾಗುತ್ತಿರುವಂತೆಯೇ 'ಭಾರತ ರಾಷ್ಟ್ರ' ಎಂಬ ಪರಿಕಲ್ಪನೆಯ ಹಿಂದಿರುವ ರಾಜಕಾರಣದ ಗುಟ್ಟುಗಳೂ ರಟ್ಟಾಗುತ್ತಿರುವುದನ್ನು ಗಮನಿಸಿದಾಗ ಭಾರತೀಯ ಚಿಂತನ ಕ್ರಮದ ಅನನ್ಯತೆಯನ್ನು ಕುರಿತು ಜಾಗತಿಕ ನೆಲೆಯಲ್ಲಿ–ಅಂದರೆ ರಾಮಾನುಜನ್‌ರಂತೆ–ಚರ್ಚಿಸಲಾಗದೆಂದು ನನ್ನ ಅಭಿಮತವಾಗಿತ್ತು. ರಾಮಾನುಜನ್ ಭಾರತದ ಹೊರಗಿದ್ದುಕೊಂಡು ಓರ್ವ ಅಂತಾರಾಷ್ಟ್ರೀಯ ವಿದ್ವಾಂಸನಾಗಿ ಈ ಪ್ರಶ್ನೆಯನ್ನು ಎತ್ತಿದುದಕ್ಕೆ ಒಂದು ಸ್ಥಳನಿರ್ದೇಶಿತವಾದ ಪರಿಪ್ರೇಕ್ಷ್ಯವಿದ್ದುದರಿಂದ ಅದು ಆಗ ಅಸಂಗತವಾಗೇನೂ ಕಾಣುತ್ತಿರಲಿಲ್ಲ. ಆದರೆ ಈಗ ಈ ಜಾಗತೀಕರಣದ ಸಂದರ್ಭದಲ್ಲಿ, ಭಾರತದೊಳಗಿದ್ದುಕೊಂಡೇ ಈ ಪ್ರಶ್ನೆಯನ್ನು ಎತ್ತಿಕೊಂಡಾಗ ಈ ಚರ್ಚೆಯ ಪರಿಪ್ರೇಕ್ಷ್ಯವೇ ಬೇರೆಯಾಗಿ, ಚರ್ಚೆ ಮೊದಲಾಗಿ ಭಾರತವೆಂದರೇನೆಂಬುದನ್ನು ಮೊದಲು ನಿರ್ವಚಿಸಿಕೊಂಡು ನಂತರ ಚರ್ಚೆ ಮುಂದುವರೆಯಬೇಕಾಗುತ್ತದೆ ಎಂದು ನನಗನ್ನಿಸಿತು.

ಶಿಬಿರಕ್ಕೆ ಎರಡು ದಿನ ಹೋಗಿದ್ದೆ. ಶಿವ ವಿಶ್ವನಾಥನ್, ಗೋಪಾಲ ಗುರು, ಸುಂದರ ಸಾರುಕ್ಕೈ, ರಘುರಾಂ ರಾಜು, ಪ್ರಭಾಕರ ಜೋಷಿ, ಲಕ್ಷ್ಮೀಶ ತೋಳ್ಪಾಡಿ ಮುಂತಾದವರ ಮಾತುಗಳನ್ನು ಕೇಳಿದೆ. ಎಲ್ಲರೂ ಘನ ವಿದ್ವಾಂಸರೇ. ಎಲ್ಲರೂ ವಿದ್ವತ್ಪೂರ್ಣವಾಗಿಯೇ ಮಾತನಾಡಿದರು. ಆದರೆ ಎಲ್ಲರೂ ಭಾರತ ಕುರಿತ ಸ್ಥಾಪಿತ ಗ್ರಹೀತದೊಂದಿಗೇ ಅದರ ಚಿಂತನಾ ಕ್ರಮದ ಚಹರೆಗಳನ್ನು–ಗುಣ ವಿಶೇಷಗಳನ್ನು ಗುರುತಿಸುತ್ತಾ ಹೋದರೇ ಹೊರತು, ಯಾರೂ ಪ್ರಧಾನ ಪ್ರಶ್ನೆಯ (ಅಂದರೆ ಭಾರತೀಯ ಚಿಂತನಾಕ್ರಮದ ತುಲನಾತ್ಮಕ ಅನನ್ಯತೆ) ಹತ್ತಿರ ಕೂಡ ಸುಳಿಯಲಿಲ್ಲ! ಇದಕ್ಕೆ ನನ್ನ ಬಳಿ ಅಕ್ಷರ ನೀಡಿದ ವಿವರಣೆ: ನಾವು ಏನೋ ಹೇಳಿದರೆ, ಉಪನ್ಯಾಸಕರು ಇನ್ನೇನನ್ನೋ ಅರ್ಥ ಮಾಡಿಕೊಂಡು ಮಾತನಾಡುತ್ತಾರೆ! ಇಷ್ಟಾದರೂ, ಪ್ರಶ್ನೆ ಕೇಳಿ ಒಂದಿಷ್ಟು ಚರ್ಚೆಗೆ ಕಾರಣರಾದ ಕೆಲ 'ಪ್ರತಿಷ್ಠಿತ ಆಹ್ವಾನಿತ'ರ ಹೊರತಾಗಿ ಶಿಬಿರಾರ್ಥಿಗಳ ಮುಖ್ಯವಾಹಿನಿಗೆ ಇವರೆಲ್ಲರ ಮಾತುಗಳು ಎಷ್ಟರ ಮಟ್ಟಿಗೆ ತಲುಪಿತೋ ನಾ ಕಾಣೆ.

ನಿಜವಾಗಿ ಶಿಬಿರದ ಪ್ರಧಾನ ವಿಷಯಕ್ಕೆ ಸಂಬಂಧಿಸಿದಂತೆ ಪರೋಕ್ಷವಾಗಿಯಾದರೂ ಒಂದು ಮುಖ್ಯ ಮಾತನಾಡಿದಂತೆ ತೋರಿದವರು, ಶಿಬಿರದ ಕೊನೆಯೆರಡು ದಿನಗಳಿಗೆ ಬಂದ ಆಶೀಶ್ ನಂದಿಯವರು. ಅವರ ಮಾತುಗಳ ಸಾರಾಂಶವನ್ನು ನಾನು ಪತ್ರಿಕೆಗಳಲ್ಲಿ ಓದಿದೆ. ಅವರು ಗಾಂಧಿ ಚಿಂತನೆ

ನಮ್ಮ ಸಂವಿಧಾನದಲ್ಲಿ ಅಳವಡಿಕೆಯಾಗದಿರುವ ಲೋಪದ ಬಗ್ಗೆ-ತುಂಬಾ ತಡವಾಗಿಯಾದರೂ-ಮಾತನಾಡಿದ್ದರು. ಭಾರತವನ್ನು ಕೇವಲ ಒಂದು ಬೌದ್ಧಿಕ ವಿದ್ಯಮಾನವಾಗಿ ನೋಡಲು ನಿರಾಕರಿಸಿದ ತನ್ನ ಅಸಲೀ ಚಿಂತನೆಯ ಕ್ರಮದಲ್ಲೇ ಗಾಂಧಿ ಭಾರತವೆಂದರೇನು ಎಂದು ಅರ್ಥ ಮಾಡಿಕೊಳ್ಳುವ ನಿಜವಾದ ಪ್ರಯತ್ನ ಮಾಡಿದ್ದರು. ರಾಷ್ಟ್ರವೊಂದನ್ನು ಅಥವಾ ಅದರ ಚಲನಶೀಲತೆಯನ್ನು ಪಶ್ಚಿಮದ ನೋಟಕ್ರಮಕ್ಕೆ ವಿರುದ್ಧವಾಗಿ ನೋಡುವ ಕ್ರಮವಿದು.

ಈ ದೃಷ್ಟಿಯಿಂದ ನೋಡಿದಾಗ ಈ ಶಿಬಿರ ಚರ್ಚಿಸ ಹೊರಟ ರಾಮಾನುಜನ್‌ರ ಮೂಲ ಪ್ರಶ್ನೆಯೇ ಅ-ಭಾರತೀಯವಾಗಿತ್ತು. ಅದು, 'I think, so I am' ಎಂಬ ಡೆಕಾರ್ಟ್‌ನ ತತ್ವದ ತಾರ್ಕಿಕತೆಯನ್ನು ಅನುಸರಿಸಿ, ಸಹಜವಾಗಿಯೇ ಅಂತಹುದೇ ತರ್ಕಕ್ಕೆ ಸಮ್ಮತವಾಗಬಹುದಾದ 'ನಾಗರಿಕ ಚಿಂತನಾ ಶಿಸ್ತಿನ' ಉತ್ತರವನ್ನು ಬೇಡುವ ರೀತಿಯಲ್ಲಿ ಸಂಯೋಜಿತವಾಗಿತ್ತು. ಆದರೆ ಭಾರತ ಡೆಕಾರ್ಟನ ತತ್ವವನ್ನು ನಂಬಿಯೇನೂ ಬದುಕಿಲ್ಲ. ಗಾಂಧಿ ಇನ್ನೂ ಉಸಿರಾಡುತ್ತಿರುವ ಅವರ 'ಹಿಂದ್ ಸ್ವರಾಜ್'ನಲ್ಲಿ ವ್ಯಕ್ತವಾಗಿರುವಂತೆ ಅವರಿಗೆ ಸ್ವಾತಂತ್ರ್ಯ ಎಂದರೆ ಬ್ರಿಟಿಷರ ನಿರ್ಗಮನದಷ್ಟೇ ಮುಖ್ಯವಾಗಿ, ಬ್ರಿಟಿಷ್ ನಾಗರೀಕತೆಯಿಂದ ಕಿಂಚಿತ್ತೂ ಪ್ರಭಾವಿತರಾಗದಿರುವ (ರೈತ)ಭಾರತವನ್ನು ಬ್ರಿಟಿಷ್ ಪ್ರಭುತ್ವದ ನಾಗರೀಕತೆಗೆ ಮಾರು ಹೋಗಿದ್ದ ಭಾರತೀಯರಿಂದ ರಕ್ಷಿಸುವುದೇ ಆಗಿತ್ತು. ಆದರೆ ಆಶೀಶ್ ನಂದಿಯವರ ಹೊರತಾಗಿ ಶಿಬಿರದ ಇತರ ಯಾರೂ ಗಾಂಧಿಯ ಈ ಭಾರತದ ಕಡೆ ಸುಳಿಯಲೇ ಇಲ್ಲ. ಗಾಂಧಿಯ ಹೆಸರನ್ನೂ ಎತ್ತಲಿಲ್ಲ.

ಹಾಗಾಗಿಯೇ ಚರ್ಚೆ ಭಾರತೀಯ ತತ್ವಶಾಸ್ತ್ರದ ಮಾದರಿ ಪಠ್ಯಪುಸ್ತಕದ ಶಿಷ್ಟ ಚೌಕಟ್ಟಿನೊಳಗೇ ಸಿಕ್ಕಿಕೊಂಡು ಸೂತ್ರಬದ್ಧ ಉತ್ತರಕ್ಕಾಗಿ ತೊಳಲಾಡಿ ಆಯಾಸಪಟ್ಟುಕೊಂಡಂತೆ ಕಂಡಿತು. ಆ ಆಯಾಸ ಘನವಾದ ಬೌದ್ಧಿಕ ಆಯಾಸವೇ ಆಗಿದ್ದರೂ! ಆದರೆ ಶಿಬಿರ ನಿಜವಾಗಿ ಆಶೀಶ್ ನಂದಿಯವರು ಬರುವ ಮುನ್ನವೇ ಒಮ್ಮೆ ಸರಿ ದಾರಿಯ ಹತ್ತಿರಕ್ಕೇ ಬಂದಂತೆ ಕಂಡಿತ್ತು. ಆದರೆ ಅದು ದಾರಿ ತೋರಿಸುವ ತೋರುಗೈಯಾಗಿ ಶಿಬಿರದಲ್ಲಿ ಅಳವಡಿಕೆಯಾಗಿರಲಿಲ್ಲ. ಅದು ಶಿಬಿರದ ಮಧ್ಯೆ ಪ್ರದರ್ಶಿತವಾದ 'ಇಲ್ಲಿಯ ತೀರ್ಪು' ಎಂಬ ಮಾಸ್ತಿಯವರ ಸಣ್ಣ ಕತೆಯನ್ನು ಆಧರಿಸಿದ ಕಿರುನಾಟಕವನ್ನು ಚರ್ಚೆಗೆ (ಸಂಜೆಯ ದೊಡ್ಡ ನಾಟಕಗಳನ್ನು ಕುರಿತ ವರ್ಣನಾತ್ಮಕ ಚರ್ಚೆಯ ಬದಲಿಗೆ) ಎತ್ತಿಕೊಂಡು ಆ ನಾಟಕದಲ್ಲಿ ಬರುವ ತಿಮ್ಮಾಬೋಯಿ ಮತ್ತು ರಾಮಾಬೋಯಿಗಳ 'ವಿವೇಚನೆ'ಯನ್ನು ಚರ್ಚೆಗೆ ಒಡ್ಡಿದ್ದರೆ ಸಾಕಿತ್ತು, ಆಗ ಶಿವ ವಿಶ್ವನಾಥನ್-ಸಾರುಕ್ಕೈಗಳು ಹೇಳಲಾಗದ್ದೆಲ್ಲ, ಈ ನಾಟಕವನ್ನು ಮನದುಂಬಿಕೊಂಡು ನೋಡಿದ ಶಿಬಿರಾರ್ಥಿಗಳ ಬಾಯಿಂದಲೇ ಹೊರಹೊಮ್ಮುತ್ತಿತ್ತು. ಆಗ ಚರ್ಚೆ ಸಹಜವಾಗಿಯೇ ನಮ್ಮ ಜಾತಿ ಪದ್ಧತಿಯ ಕಡೆಗೂ ಹೊರಳಿ ಒಂದಿಷ್ಟು ನಿಜಸತ್ವವನ್ನು ಪಡೆದುಕೊಳ್ಳುತ್ತಿತ್ತು. ನೀನಾಸಂ ಏನಾದರೂ, ನಮ್ಮ ಚಿಂತನಾ ಕ್ರಮಕ್ಕೂ ನಮ್ಮ ಜಾತಿ ಪದ್ಧತಿಗೂ ಏನೂ ಸಂಬಂಧವೇ ಇಲ್ಲ ಎಂದು ಭಾವಿಸಿದೆಯೇ?

ಪುರೋಹಿತರುಗಳಿಗೂ ಚಿಂತನೆಗೂ ಅಂಥ ಸಂಬಂಧವೇನೂ ಇರಲಾರದು, ಅವರ ಹುಟ್ಟು ಜಾತಿ ಯಾವುದೇ ಆಗಿದ್ದರೂ.

ಅಥವಾ ಶಿಬಿರದಲ್ಲಿ ಒಂದೆರಡು ಗೋಷ್ಠಿಗಳಲ್ಲಾದರೂ ನಮ್ಮ ಒಂದೆರಡು ಅಭಿಜಾತ (ಅವೈದಿಕದವೂ ಸೇರಿದಂತೆ) ಮಹಾಕಾವ್ಯ, ಜನಪದ ಮಹಾಕಾವ್ಯ ಮತ್ತು ಪ್ರೇಂಚಂದ್, ಟ್ಯಾಗೋರ್, ಮಾಸ್ತಿ ಮತ್ತು ಕುವೆಂಪು ಅವರ ಆಯ್ದ ಕೃತಿಗಳನ್ನು ಚರ್ಚೆಗೆ ಇಟ್ಟಿದ್ದರೂ ಚರ್ಚೆಗೆ ಒಂದು ದಿಕ್ಕು ದೊರಕುತ್ತಿತ್ತು. ಉದಾಹರಣೆಗೆ ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯನ್ನೇ ಒಂದು ಪಠ್ಯವಾಗಿ ತೆಗೆದುಕೊಂಡು ಅದನ್ನು ತಾತ್ವಿಕವಾದ ಚರ್ಚೆಗೆ ಈಡು ಮಾಡಿದ್ದರೆ, ಈ ಇಡೀ ಶಿಬಿರದಲ್ಲಿ ಏನು ಮಂಥನ ನಡೆದು ವಿಚಾರಾಮೃತ ಉಕ್ಕಿತೋ ಅದಕ್ಕಿಂತ ಹೆಚ್ಚು ಕುತೂಹಲಕಾರಿ ಮತ್ತು ಪರಿಣಾಮಕಾರಿ ಆದ ಅಮೃತ ದಕ್ಕುತ್ತಿತ್ತು ಎಂದು ನನಗನ್ನಿಸಿತು. ಏಕೆಂದರೆ ಶಿಬಿರಾರ್ಥಿಗಳೇ ಶಿಬಿರದ ಮುಖ್ಯ ಗಮನವಾಗಿದ್ದಲ್ಲಿ, ಅವರನ್ನು ವಿಶ್ವಾಸಕ್ಕೆ ತೆಗೆದುಕೊಂಡೇ ಚರ್ಚೆ ನಡೆಯಬೇಕಾಗುತ್ತದೆ. ಶಿಬಿರದುದ್ದಕ್ಕೂ ವೇದ, ಉಪನಿಷತ್ತು, ಪುರಾಣ, ಶಾಸ್ತ್ರ, ಆಗಮ, ಅಪೋಹ, ಬುದ್ಧ, ಜೈನ, ಸಾಂಖ್ಯ, ಚಾರ್ವಾಕ, ಕುಮಾರಿಲ ಭಟ್ಟ ಇತ್ಯಾದಿ ಹೆಸರುಗಳನ್ನು ಎತ್ತಿಕೊಂಡು ಪುಂಖಾನುಪುಂಖವಾಗಿ ಮಂತ್ರ-ಶ್ಲೋಕ-ಸೂತ್ರಾದಿಗಳನ್ನು ಉಲ್ಲೇಖಿಸುತ್ತಾ ಶಿಬಿರಾರ್ಥಿಗಳಿಗೆ ಬೌದ್ಧಿಕ ಮಂಕು ಹಿಡಿಸುವುದರಿಂದ ಏನು ಪ್ರಯೋಜನ? ಉದಾಹರಣೆಗೆ, ಪ್ರಭಾಕರ ಜೋಷಿ-ಲಕ್ಷ್ಮೀಶ ತೋಳ್ಪಾಡಿಯವರ ಏಕಮುಖವಾದ ಜೋಡಿ ಭಾಷಣ ಮಾಹಿತಿ ಮತ್ತು ಬೋಧನೆಯ ಮಟ್ಟಕ್ಕಿಂತ ಮೇಲೇರಲಾಗಲಿಲ್ಲ ಏಕೆ? ಅದು ಅವರು ಮಾತಾಡಿದ ವಿಷಯದ ಸಂಪೂರ್ಣ ಅಪರಿಚಿತತೆಯಿಂದಾಗಿ ಮೂಲಸ್ವರೂಪದಲ್ಲೇ participatoryಯಾಗಿರಲಿಲ್ಲ ಎಂಬುದೂ ಒಂದು ಕಾರಣ.

ಹಾಗೆ ನೋಡಿದರೆ ಪ್ರಭಾಕರ ಜೋಷಿಯವರ ಭಾಷಣ ಒಂದು ರೀತಿಯಲ್ಲಿ participatoryಯಾಗಿತ್ತು ಎಂದೇ ಹೇಳಬೇಕು! ಎಷ್ಟಾದರೂ ಅವರದ್ದು ತಾಳಮದ್ದಲೆ ಶೈಲಿಯಲ್ಲವೇ? ಅವರು ಒಂದೇ ಸಮನೆ ಬಿಡುತ್ತಿದ್ದ ಮಂತ್ರ-ಶ್ಲೋಕಗಳ ಬಾಣ ಬಿರುಸುಗಳ ವಾಗ್ವೈಖರಿಯಲ್ಲಿ ಭಾರತೀಯ ಪರಂಪರೆಯ ಹೆಮ್ಮೆಯನ್ನು ಗುರುತಿಸಿ ಹಿಗ್ಗಿ ಹೀರೇಕಾಯಿಯಾಗಿದ್ದ ನನ್ನ ಪಕ್ಕ ಕೂತಿದ್ದ ಮಹಿಳೆಯೊಬ್ಬರು ಆ ಹೆಮ್ಮೆಯನ್ನೆಲ್ಲ ಟಿಪ್ಪಣಿ ಮಾಡಿಕೊಳ್ಳಲು ಹವಣಿಸುತ್ತಾ; ಆದರೆ ಜೋಷಿಯವರ ವೇಗಕ್ಕೆ ಹೊಂದಿಕೊಳ್ಳಲಾಗದೆ ತಮ್ಮ ಟಿಪ್ಪಣಿಗಳು, ಅಪೂರ್ಣ ಮತ್ತು ಅಸ್ತವ್ಯಸ್ತವಾಗುತ್ತಿದ್ದುದರ ಬಗ್ಗೆ ಅಭಿಮಾನ-ಆತಂಕಗಳ ಮಿಶ್ರ ಭಾವದ ಮಧ್ಯೆ ಸಿಕ್ಕಿಕೊಂಡಂತೆ ವಿಚಿತ್ರವಾಗಿ ಭುಸುಗುಡುತ್ತಿದ್ದುದನ್ನು ಗಮನಿಸುವುದೇ ಒಂದೆ ಚೆಂದವಾಗಿತ್ತು!

ಇರಲಿ. ಇದು ಎಷ್ಟಾದರೂ ನೀನಾಸಂ ಶಿಬಿರ. ಅದಕ್ಕೊಂದು ಸಂಪ್ರದಾಯವಿದೆ. ಹಾಗಾಗಿ ಅದಕ್ಕೆ ತನ್ನದೇ ಆದ ಮಡಿ-ಮೈಲಿಗೆಗಳೂ ಇವೆ. ಅವೇನೂ ಭೌತಿಕ ಮಡಿ-ಮೈಲಿಗೆಗಳಲ್ಲವಾದ್ದರಿಂದ, ಆ ಮಡಿ-ಮೈಲಿಗೆಗಳನ್ನು ಒಪ್ಪಿಕೊಂಡು ಆ ಚೌಕಟ್ಟಿನಲ್ಲಿ ನಡೆಯುವ ಸಂಸ್ಕೃತಿ ಶಿಬಿರವೆಂಬ ಈ ಬೌದ್ಧಿಕ ಆಟವನ್ನು

ನೋಡುವುದೂ ಒಂದು ಖುಷಿಯೇ. ಕಾರಣ, ಕರ್ನಾಟಕದ ಇತರ ವಲಯಗಳಲ್ಲಿ–ಅಕಾಡೆಮಿಗಳು, ವಿಶ್ವವಿದ್ಯಾನಿಲಯಗಳು ಇತ್ಯಾದಿ–ಬೌದ್ಧಿಕ ಚಟವಟಿಕೆಯ ಹೆಸರಿನಲ್ಲಿ ನಡೆಯುತ್ತಿರುವ ಆಟ ಪಾಠಗಳನ್ನು ನೋಡಿದರೆ ಜಿಗುಪ್ಸೆ ಹುಟ್ಟುತ್ತದೆ. ಆದರೆ ಇಲ್ಲಿ ಬೌದ್ಧಿಕತೆ ತನ್ನೆಲ್ಲ ಗಾಂಭೀರ್ಯದೊಂದಿಗೆ ತನ್ನದೇ ಆದ ಒಂದು ಶಿಸ್ತಿನಲ್ಲಿ ಉಳಿದು ಬೆಳೆಯುತ್ತಿರುವುದನ್ನು ನೋಡಿದರೆ ಸಂತೋಷವೇ ಆಗುತ್ತದೆ. ನಿಮ್ಮ ಮನಸ್ಸು ಎಲ್ಲೆ ಮೀರಿ ಹಾರುತ್ತದೆ. ಈ ಬಾರಿ ನಾನು ಇಷ್ಟು ಯೋಚಿಸಲು ಈ ಶಿಬಿರ ಪ್ರೇರಣೆ ನೀಡಿದೆಯಲ್ಲಾ, ಇದೂ ಈ ಶಿಬಿರದ ಪ್ರತಿಫಲವೇ ಎಂದು ನಾನು ಭಾವಿಸಿದ್ದೇನೆ. ಮುಂದಿನ ವರ್ಷದಿಂದ ಶಿಬಿರದ ಅವಧಿ ಕಡಿಮೆ ಮಾಡಿ, ಅದರ ಸ್ವರೂಪವನ್ನು ಬದಲಿಸುವ ಯೋಚನೆ ಇದೆಯೆಂದು ಅಕ್ಷರ ಹೇಳಿದರು. ನಾವೆಲ್ಲ ಕುತೂಹಲದಿಂದ ಕಾಯಬಹುದು. ಏಕೆಂದರೆ ಅದರೆಲ್ಲ ಮಿತಿಗಳೊಂದಿಗೂ, ಕರ್ನಾಟಕದಲ್ಲಿ ಉಳಿದಿರುವ ನಿಜವಾದ ಬೌದ್ಧಿಕ ಕೇಂದ್ರ ಇದೊಂದೇ. ಅದನ್ನು ವಿಮರ್ಶಿಸುತ್ತಲೇ ನಾವು ಕಾಪಾಡಬೇಕಿದೆ.

ಟ್ಯಾಗೋರ್‌ರ 'ಚಿರಕುಮಾರ ಸಭಾ'

ಶಿಬಿರದ ಭಾಗವಾಗಿ ನಡೆದ ಮೂರು ಸಂಜೆಯ ಕನ್ನಡ ನಾಟಕಗಳ ಪೈಕಿ ಎರಡನ್ನು ನಾನು ನೋಡಿದೆ. ರಘುನಂದನರ 'ನಮ್ಮ ಸಂಸಾರ'ವನ್ನು ಅವರ ಅಭಿಮಾನಿಗಳ ಶಿಫಾರ್ಸಿನಿಂದಾಗಿ ಮತ್ತು ಸ್ವತಃ ಅವರೇ ನಾನು ಅದನ್ನು ನೋಡಬಾರದೆಂದು ಬಯಸಿದಂತೆ ತೋರಿದ್ದರಿಂದ ನೋಡಲಿಲ್ಲ. ಈ ಹಿಂದಿನ ಅವರ 'ಪರಿಮಳದವರು' ಪ್ರಯೋಗದ ನೆನಪೂ ಇದಕ್ಕೆ ಕಾರಣವಿರಬಹುದು. ಅದೇನೇ ಇರಲಿ, ಹೆಗ್ಗೋಡು ಮತ್ತು ಸುತ್ತಮುತ್ತಲಿನ ಹಳ್ಳಿಗಳ ಸಾರ್ವಜನಿಕರೇ ಮೌನೇಶ್ ಬಡಿಗೇರರ ನಿರ್ದೇಶನದಲ್ಲಿ ಆಡಿದ ರವೀಂದ್ರನಾಥ ಟ್ಯಾಗೂರರ 'ಚಿರಕುಮಾರ ಸಭಾ'ದ ಕನ್ನಡ ಅವತರಣಿಕೆ ಒಂದು ಲಘು ಮನರಂಜನೆಯ ನಾಟಕ. ಆದರೂ ಅದು ಎರಡು ಕಾರಣಗಳಿಗಾಗಿ ನನ್ನ ಗಮನ ಸೆಳೆಯಿತು. ಒಂದು, ಇದನ್ನು ಟ್ಯಾಗೂರ್ ವಿವೇಕಾನಂದರ ಧೀರ ಗಂಭೀರ ಧರ್ಮ ಪ್ರಚಾರದ ಭಾವ–ಭಂಗಿಗಳನ್ನು ಚುಡಾಯಿಸಲು ಬರೆದದ್ದು ಎಂಬ ವ್ಯಾಖ್ಯಾನದ ಹಿನ್ನೆಲೆಯಲ್ಲಿ ವಂಗ ನವೋದಯದ ಜೀವಂತಿಕೆಯನ್ನು ಸೂಚಿಸುತ್ತದೆ ಎಂಬುದು. ಇನ್ನೊಂದು, ನೀನಾಸಂ ಹೆಗ್ಗೋಡಿನಲ್ಲಿದೆ ಎಂಬ ಕಾರಣಕ್ಕೇ ಅದರ ಗಾಳಿಗೆ ಸಿಕ್ಕವರಂತೆ ಈ ಊರಿನ ಮತ್ತು ಸುತ್ತಮುತ್ತಲಿನ ಜನ ಎಂತಹ ಅದ್ಭುತ ರಂಗ ಪ್ರಜ್ಞೆಯೊಂದಿಗೆ ಎಷ್ಟು ಒಳ್ಳೆಯ ನಟ–ನಟಿಯರಾಗಿದ್ದಾರೆ ಎಂದು ಆಶ್ಚರ್ಯ ಹುಟ್ಟಿಸುವ ಕಾರಣಕ್ಕೆ.

ಭವಭೂತಿಯ ರಾಮ: ಕೆಲವು ಪ್ರಶ್ನೆಗಳು

ಇನ್ನು ಬನ್ನಂಜೆ ಗೋವಿಂದಾಚಾರ್ಯರ ಅತಿ ಸೊಬಗಿನ ಕನ್ನಡದಲ್ಲಿ ಅನುವಾದಿತವಾಗಿರುವ ಭವಭೂತಿಯ ಸಂಸ್ಕೃತ ನಾಟಕ 'ಉತ್ತರ ರಾಮಚರಿತೆ'

ಬಿ.ಆರ್ ವೆಂಕಟರಮಣ ಐತಾಳರ ನಿರ್ದೇಶನದಲ್ಲಿ ಅಚ್ಚುಕಟ್ಟಾಗಿ ಪ್ರದರ್ಶಿತಗೊಂಡಿತು. ನೀನಾಸಂ ತಿರುಗಾಟದ ರಂಗತಂಡದ ಭಾವಪೂರ್ಣ ಅಭಿನಯ (ವಿಶೇಷವಾಗಿ ಸೀತೆ ಪಾತ್ರದ ತೇಜು), ಶಿಶಿರ-ವಿದ್ಯಾ-ಅಕ್ಷರರು ಸಂಯೋಜಿಸಿರುವ ಅಲ್ಲಲ್ಲಿ ಪಾಶ್ಚಿಮಾತ್ಯ ಲಯಗಳೊಂದಿಗೆ ಪಲುಕಾಡುವ ಮೃದುಮಧುರ ಸಂಗೀತ ಮತ್ತು ಐತಾಳರ ಮೂಲ ಶಕ್ತಿಯಾದ ಯಕ್ಷಗಾನ ಮತ್ತು ಕಥಕ್ಕಳಿಯ ರಂಗ ಪಟ್ಟುಗಳು ಒಂದು ಘನವಾದ ಮೆಲೋಡ್ರಾಮವನ್ನು ಸೃಷ್ಟಿಸಿ, ನಾಟಕದ ಒಳಗಿಂದೇಳುವ ಹಲವು ಪ್ರಶ್ನೆಗಳನ್ನು ಮುಳುಗಿಸುವ ಪ್ರಯತ್ನವೂ ಇಲ್ಲಿ ನಡೆದಂತೆ ನನಗೆ ತೋರಿತು.

ಐತಾಳರು ಭವಭೂತಿಗೆ ನಿಷ್ಠರಾಗಿದ್ದಾರೆ ಎಂದು ಭಾವಿಸಿ ಹೇಳುವುದಾದರೆ, ರಾಮಾಯಣದ ಎಲ್ಲ ಸಾಂಪ್ರದಾಯಿಕ ಆವೃತ್ತಿಗಳಂತೆಯೇ ಇದು ಕೂಡಾ ರಾಮನನ್ನು, ಶೂದ್ರ ಮತ್ತು ಹೆಣ್ಣಿಗೆ ಸಂಬಂಧಿಸಿದಂತಿರುವ ಹಲವು ರೀತಿಯ ವಧೆ, ಹಿಂಸೆ ಮತ್ತು ಪರಿತ್ಯಾಗಗಳಿಂದ ಕೂಡಿದ ಅವನ ಅಪರಾಧ ಪರಂಪರೆಯ ಹೊರತಾಗಿಯೂ- ಅವುಗಳ ಹಿನ್ನೆಲೆಗಳನ್ನು ಇಲ್ಲಿ ನಿಸರ್ಗದ ಭಿತ್ತಿಯಲ್ಲಿ ಹೆಚ್ಚು ಸಂಕೀರ್ಣಗೊಳಿಸಿ ನ್ಯಾಯಸಮ್ಮತಗೊಳಿಸುವ ಸಾಹಿತ್ಯಿಕ ಪ್ರಯತ್ನದ ಮೂಲಕ-ಪುಣ್ಯ ಪುರುಷನಂತೆ ಮಂಡಿಸುವ ಪ್ರಯತ್ನವೇ ಆಗಿದೆ ಎಂದೆನ್ನಿಸದಿರದು. ರಾಮನ ಈ ಅಪರಾಧಗಳನ್ನು ಪ್ರಜಾವಾತ್ಸಲ್ಯದ ಆದರ್ಶದ ಹಿನ್ನೆಲೆಯಲ್ಲಿ ಸಮರ್ಥಿಸಲಾಗುತ್ತದೆ. ಆದರೆ ನಾನು ನೋಡಿದ, ಓದಿದ, ಕೇಳಿದ ರಾಮಾಯಣ ಕಥೆಯ ಯಾವ ಆವೃತ್ತಿಯಲ್ಲೂ ಈ ಅಪರಾಧಗಳನ್ನು ಮನ್ನಿಸಬಲ್ಲ ಈ 'ಪ್ರಜಾವಾತ್ಸಲ್ಯ'ದ ಯಾವೊಂದು ಜೀವಂತ ದೃಷ್ಟಾಂತವೂ ನನಗೆ ಕಂಡಿಲ್ಲ. ಹಾಗಿದ್ದೂ ಏಕೆ ಈ ಪ್ರಯತ್ನ? ಈ ನಾಟಕದಲ್ಲಂತೂ ರಾಮ ತೀವ್ರ ಮಾನಸಿಕ ಅಸ್ವಸ್ಥತೆಯಿಂದ ಬಳಲುವ ದುರಂತ ನಾಯಕನಂತೆಯೇ ಕಾಣುತ್ತಾನೆ ಮತ್ತು ಬಹಳ ಸಹಜವೇ ಅನ್ನಿಸಿಬಿಡುತ್ತದೆ

ಪದೇ ಪದೇ ನನಗೆ ಅನ್ನಿಸುವುದು, ರಾಮಾಯಣ ಸಂಪ್ರದಾಯವು ಮೂಲತಃ ಗಂಡು ಉತ್ತರವು ಹೆಣ್ಣು ದಕ್ಷಿಣದ ಮೇಲೆ ನಡೆಸಿದ ವಸಿಷ್ಠ ರಾಜಕಾರಣವನ್ನು ನ್ಯಾಯಸಮ್ಮತಗೊಳಿಸುವ ಒಂದು ನಿರಂತರ ಸಾಂಸ್ಕೃತಿಕ ಯೋಜನೆಯೇ ಆಗಿದೆ. ಭವಭೂತಿಯ ಪ್ರಯತ್ನ ಹೆಚ್ಚು 'ಆಧುನಿಕ'ವಾಗಿದೆ ಅಷ್ಟೆ. ಆದರೆ ನನ್ನ ಮುಖ್ಯ ಪ್ರಶ್ನೆ: ಈ ಬಾರಿಯ ಸಂಸ್ಕೃತಿ ಶಿಬಿರ ಚರ್ಚಿಸಿದ ಭಾರತೀಯ ಚಿಂತನ ಕ್ರಮದ ರೀತಿ-ನೀತಿಗಳಿಗೂ ಈ ನಾಟಕದ ಸ್ವರೂಪಕ್ಕೂ ಏನಾದರೂ ಸಂಬಂಧವಿರಬಹುದಾ ಎಂಬುದು!

●

ಡಿಸೆಂಬರ್, ೨೦೧೪

ಎರಡು ಪುಸ್ತಕಗಳು ಮತ್ತು ಪ್ರಶಸ್ತಿಯೆಂಬ ಮುಜುಗರಗಳು...

ಸಂಕ್ರಮಣ ಸುವರ್ಣ ಸಂಪುಟ–೧

ಚಂಪಾ ಸಂಪಾದಕತ್ವದ ದ್ವೈಮಾಸಿಕ ಸಾಹಿತ್ಯ ಪತ್ರಿಕೆ 'ಸಂಕ್ರಮಣ' ಐವ್ವತ್ತು ವರ್ಷಗಳನ್ನು ಪೂರೈಸಿದ ಐತಿಹಾಸಿಕ ಸಂದರ್ಭದಲ್ಲಿ ಅದರ ಈವರೆಗಿನ ೪೨೪ ಸಂಚಿಕೆಗಳನ್ನೂ ೨೫ ಸಂಪುಟಗಳಲ್ಲಿ ಹೊರತರುವ ಯೋಜನೆಯನ್ನು ಸಂಕ್ರಮಣ ಪ್ರಕಾಶನ ಕೈಗೆತ್ತಿಕೊಂಡಿದ್ದು ಅದರ ಮೊದಲ ಸಂಪುಟ ಬಿಡುಗಡೆಯಾಗಿದೆ. ಆಗಸ್ಟ್ ೧೯೬೪ರ ಮೊದಲ ಸಂಚಿಕೆಯಿಂದ ಹಿಡಿದು ಜೂನ್ ೧೯೬೪ರಂವರೆಗಿನ ಹನ್ನೆರಡು ಸಂಚಿಕೆಗಳನ್ನು ಒಳಗೊಂಡು ೭೨೦ ಪುಟಗಳಷ್ಟು ಹರಡಿರುವ ಈ ಬೃಹತ್ ಸಂಪುಟವನ್ನು ಒಮ್ಮೆ ತಿರುವಿ ಹಾಕುವುದೇ ಒಂದು ಸಂಭ್ರಮದ, ರೋಮಾಂಚನದ ಅನುಭವ. ಏಕೆಂದರೆ, ಮೊದಲ ಸಂಚಿಕೆಯ ಸಂಪಾದಕೀಯವೇ ಹೇಳುವಂತೆ, ಆಗ ಕನ್ನಡದಲ್ಲಿ ಮೂಡುತ್ತಿದ್ದ ಹೊಸ ಪ್ರಜ್ಞೆಯೊಂದಕ್ಕೆ ಸಾಕ್ಷಿಯಾಗಿ ಈ ಸಂಚಿಕೆಗಳು ರೂಪುಗೊಂಡಿವೆ.

ಆ ಕಾಲದ ಮೈಲಿಗಲ್ಲುಗಳು ಎಂದು ಕರೆಯಬಹುದಾದ ಅಡಿಗರ 'ಪ್ರಾರ್ಥನೆ', ಕೆಎಸ್‌ನ ಅವರ 'ಕುಂಕುಮ ಭೂಮಿ', ಗಂಗಾಧರ ಚಿತ್ತಾಲರ 'ಹರಿವ ನೀರಿದು', ಲಂಕೇಶರ 'ಅವ್ವ', ಎ.ಕೆ. ರಾಮಾನುಜನ್‌ರ 'ಇದೂ ಒಂದು ಕವಿತೆ', ಕಂಬಾರರ 'ಋಷ್ಯಶೃಂಗ', ನಾಡಿಗರ 'ಕಪ್ಪುದೇವತೆ', ಎಚ್.ಎಂ. ಚೆನ್ನಯ್ಯನವರ 'ಆಮೆ', ಆಲನಹಳ್ಳಿಯ 'ಬೆಳಗು' ಮುಂತಾದ ಕವನಗಳೂ, ಯಶವಂತ ಚಿತ್ತಾಲರ 'ಸೆರೆ', ಶಾಂತಿನಾಥ ದೇಸಾಯಿಯವರ 'ಗಂಡ ಸತ್ತ ಮೇಲೆ', ಗಿರಡ್ಡಿಯವರ 'ಆ ಮುಖಾ

ಈ ಮುಖಾ', ಟಿ.ಜಿ. ರಾಘವರ 'ಶ್ರಾದ್ಧ' ಮುಂತಾದ ಕಥೆಗಳೂ ಮೊದಲ ಬಾರಿಗೆ ಪ್ರಕಟವಾಗಿ ಕನ್ನಡ ಓದುಗರ ಸಂವೇದನೆ ಒಂದು ಹೊಸ ನೆಲೆಯನ್ನು ಮುಟ್ಟಿದ ಸಂದರ್ಭಗಳ ಸಂಭ್ರಮ-ರೋಮಾಂಚನಗಳ ದಟ್ಟ ವಾಸನೆ ಈ ಸಂಪುಟದ ತುಂಬ ಹರಡಿಕೊಂಡಿದೆ. ಹಾಗೇ ಗೌರೀಶ ಕಾಯ್ಕಿಣಿ, ಶಂಕರ ಮೊಕಾಶಿ, ಗಿರೀಶ ಕಾರ್ನಾಡ, ಶಾಂತಿನಾಥ ದೇಸಾಯಿ, ರಾಜೀವ್ ತಾರಾನಾಥ ಮುಂತಾದವರು ನಡೆಸಿರುವ ಚರ್ಚೆಗಳು ಸಾಹಿತ್ಯಿಕವಾಗಿ ಒಮ್ಮೆಗೇ ತೀವ್ರವೂ, ಆತ್ಮೀಯವೂ ಆಗಿ ನಮ್ಮ ಗಮನ ಸೆಳೆದು ಇಂದಿನ ಸಾಹಿತ್ಯಿಕ ಚರ್ಚೆಗಳ ಪಾರಿಭಾಷಿಕ ಗೊಡ್ಡುತನದ ಬಗ್ಗೆ ಯೋಚನೆ ಮಾಡುವಂತೆ ಒತ್ತಾಯಿಸುತ್ತವೆ. ಚಂಪಾ ಕಥೆಯನ್ನೂ, ಕಣವಿಯವರು ಸಾಹಿತ್ಯ ವಿಮರ್ಶೆಯನ್ನೂ ಬರೆದಿರುವ ದಾಖಲೆಯೂ ಈ ಸಂಪುಟದಲ್ಲಿದ್ದು, ಅಂದಿನ ಸಾಹಿತ್ಯಿಕ ವಾತಾವರಣದ ಕಾವನ್ನು ಪರಿಚಯ ಮಾಡಿಕೊಡುವಂತಿವೆ. ಆದರೆ, ಈ ಕಾವಿನ ಮಧ್ಯೆಯೂ ಈ ಸಂಪುಟದಲ್ಲಿ, ಮುಂದೆ ದೊಡ್ಡ ಹೆಸರು ಮಾಡಿದ ಲಂಕೇಶ್, ತೇಜಸ್ವಿ, ಅನಂತಮೂರ್ತಿಯವರು ಒಂದೋ ಎರಡೋ ಕವನಗಳ ಮೂಲಕವಷ್ಟೇ ಹಣಕಿರುವುದನ್ನೂ ಮತ್ತು ಮತ್ತೆ ಮತ್ತೆ ಪ್ರತ್ಯಕ್ಷವಾಗಿರುವ ಹಲವು ಹೆಸರುಗಳು ಈಗ ಕಾಣೆಯಾಗಿರುವುದನ್ನೂ; ಹಾಗೇ, ಇಡೀ ಸಂಪುಟದಲ್ಲಿ ಲೇಖಕಿಯರ ಸುಳಿವೆಂಬುದೇ ಇಲ್ಲದಿರುವುದನ್ನೂ ಕುತೂಹಲದಿಂದ ಗಮನಿಸಬಹುದು.

ಕಳೆದ ಐವತ್ತು ವರ್ಷಗಳ ಕನ್ನಡ ಸಾಹಿತ್ಯದ ಹೆಜ್ಜೆ ಗುರುತುಗಳ ಅಧ್ಯಯನ ಮಾಡಬಯಸುವವರಿಗೆ ಮತ್ತು ಈ ಅವಧಿಯ ಸಾಹಿತ್ಯಿಕ ಕಿಟಕಿಗಳನ್ನು ತೆರೆದುನೋಡುವ ಕುತೂಹಲ ಇರುವವರಿಗೆ ಇದೊಂದು ಉಪಯುಕ್ತ ಆಕರ ಗ್ರಂಥ. ಈ ಸಂಪುಟಗಳನ್ನು ಕನ್ನಡ ಸಂಸ್ಕೃತಿ ಇಲಾಖೆಯ ನೆರವಿನೊಡನೆ ಪ್ರಕಟಿಸುತ್ತಿರುವ ಚಂಪಾ ಅವರು ರಕ್ಷಾಪುಟವೂ ಸೇರಿದಂತೆ ಪುಸ್ತಕ ವಿನ್ಯಾಸವನ್ನು ಸ್ವಲ್ಪ ಆಕರ್ಷಕ ಮಾಡಬಹುದಿತ್ತು. ಈ ಸಂಪುಟದ ಬೆಲೆ ರೂ. ೪೬೬/- ಎಲ್ಲ ೨೫ ಸಂಪುಟಗಳ ಒಟ್ಟು ಬೆಲೆ: ರೂ. ೮೦೦೦/- ಕಂತು ಸೌಲಭ್ಯವೂ ಉಂಟು!

ಹಂಪನಾ ಅವರ ಪ್ರಾಕೃತ ಕಥಾ ಸಾಹಿತ್ಯ

ಹಂಪನಾ ಕನ್ನಡದ ಹಿರಿಯ ವಿದ್ವಾಂಸರಲ್ಲೊಬ್ಬರು. ವಿಶೇಷವಾಗಿ ಜೈನ ಸಾಹಿತ್ಯ ಮತ್ತು ಸಂಸ್ಕೃತಿಗೆ ಸಂಬಂಧಪಟ್ಟ ಕ್ಷೇತ್ರಗಳಲ್ಲಿ. ಅವರು ಈ ಸಂಬಂಧ ಇತ್ತೀಚೆಗೆ ಹಲವು ಉದ್ಗ್ರಂಥಗಳನ್ನು ರಚಿಸಿ ಸಹ ವಿದ್ವಾಂಸರ ಗಮನ ಸೆಳೆದಿದ್ದಾರೆ. ಈ ಸಾಲಿನ ಇತ್ತೀಚಿನ ಗ್ರಂಥ: 'ಪ್ರಾಕೃತ ಕಥಾ ಸಾಹಿತ್ಯ: ಆಕೃತಿ-ಆಶಯ-ಆಯಾಮ-ಅನನ್ಯತೆ' ಈ ಗ್ರಂಥದ ಒಂದು ವಿಶೇಷತೆ ಎಂದರೆ ಇದರ ಭಾರಿ ಉಪಶೀರ್ಷಿಕೆಯ ಹೊರತಾಗಿಯೂ ಸಾಮಾನ್ಯ ಓದುಗರೂ ಇದನ್ನು ಓದಿ ಸವಿಯಬಹುದು ಎಂಬುದು. 'ವಡ್ಡಾರಾಧನೆ'ಯ ಆಚೆಗೂ ಜೈನ ಕಥಾವಲ್ಲರಿಯಲ್ಲಿ ಏನೆಲ್ಲ ಇದೆಯೆಂದು ನೋಡಬಹುದು.

ಭಾರತೀಯ ಪಾರಂಪರಿಕ ಕಥಾ ಸಂಪ್ರದಾಯದ ವಿಶಿಷ್ಟತೆ ಮತ್ತು

ಸಮೃದ್ಧಿಗಳೆರಡಕ್ಕೂ ಬೌದ್ಧದ ಜೊತೆಗೇ ದೊಡ್ಡ ಕೊಡುಗೆ ನೀಡಿದ ಜೈನ ಕಥಾ ವಲ್ಲರಿಯನ್ನು ಸಮಗ್ರವಾಗಿ, ಪ್ರಾಕೃತ ಮೂಲಗಳಿಂದ ಹೆಕ್ಕಿ ತೆಗೆದು ಹಂಪನಾ ಅವರು ಇಲ್ಲಿ ಒಂದು ಶಾಸ್ತ್ರೀಯ ಚೌಕಟ್ಟಿನಲ್ಲಿ ವಿಂಗಡಿಸಿ ಹಲವು ನೆಲೆಗಳ ವಿಶ್ಲೇಷಣೆಗಳಿಗೆ ಒಳಪಡಿಸಿದ್ದಾರೆ. ಅಷ್ಟೇ ಅಲ್ಲದೆ, ಇತರ ಮೂಲಗಳ ಮತ್ತು ಇತರ ವಿದ್ವಾಂಸರ ಕಥೆ ಮತ್ತು ವ್ಯಾಖ್ಯಾನಗಳನ್ನು ನೀಡುವ ಒಂದು ತೌಲನಿಕ ಪ್ರಯತ್ನವನ್ನೂ ಇಲ್ಲಿ ಅವರು ಮಾಡಿದ್ದಾರೆ. ಈ ಕೃತಿಯ ಪ್ರಕಾರ, "ಜೈನ ಕಥಾ ಸ್ವರೂಪದ ಮೊದಲ ಮುಖ್ಯ ಲಕ್ಷಣವೆಂದರೆ ಅಧ್ಯಾತ್ಮಿಕ ವಿಕಾಸದ ಅನಿಶ್ಚಿತ ಸ್ಥಿತಿಗಳ ಚಿತ್ರಣ. ಜೀವಿಗಳು ಬರೀ ಊರ್ಧ್ವಗಾಮಿ ಎನ್ನುವ ಸರಳ ಅಧ್ಯಾತ್ಮಿಕ ಆಶಾವಾದಗಳನ್ನು ಜೈನಕಥೆಗಳು ಒಪ್ಪುವುದಿಲ್ಲ. ಮೇಲಕ್ಕೆ ಏರುತ್ತಾ ಹೋದವನು ಹಾಗೆಯೇ ಕೆಳಗೂ ಬೀಳಬಲ್ಲ. ಮನುಷ್ಯರ ಬಗೆಗೆ ಕಟುನಿಷ್ಠುರ ದೃಷ್ಟಿಕೋನ ಜೈನ ಕಥಾ ಸಂವೇದನೆಯ ಮುಖ್ಯ ಲಕ್ಷಣ"

ಇಂತಹ ಘನಗಂಭೀರ ವ್ಯಾಖ್ಯಾನದ ಹೊರತಾಗಿಯೂ ಕೆಲ ಕಥೆಗಳು ತಮ್ಮ ಸರಳತೆಯಿಂದಾಗಿಯೇ ಕುತೂಹಲ ಹುಟ್ಟಿಸುವಂತಿವೆ. ಉದಾಹರಣೆಗೆ, ವಿವಾಹಿತೆಯೊಬ್ಬಳು ಕಳ್ಳನನ್ನು ಮೋಹಿಸತೊಡಗಿದಾಗ ವೈರಾಗ್ಯ ಮೂಡುವುದು ಆಕೆಯ ಗಂಡನಿಗಲ್ಲ; ಕಳ್ಳನಿಗೆ! ಇನ್ನೊಂದು ಕಥೆಯಲ್ಲಿ, ಮಾಂಸದ ಚೂರೊಂದಕ್ಕಾಗಿ ಪರಸ್ಪರ ಕಾದಾಡುವ ಹಕ್ಕಿಗಳ ಹಿಂಡೊಂದನ್ನು ನೋಡಿದ ರಾಜನೊಬ್ಬನಿಗೆ ವೈರಾಗ್ಯ ಮೂಡಿ, ತನ್ನ ಹದಿನಾರು ಸಾವಿರ ಮಡದಿಯರನ್ನು ತ್ಯಜಿಸಿ ಕಾಡಿಗೆ ತೆರಳುತ್ತಾನೆ. ಇದಕ್ಕೆ ನನ್ನ ಟೀಕೆ: ಆ ರಾಜನಿಗೆ ಹದಿನಾರು ಸಾವಿರಕ್ಕೆ ಬದಲಾಗಿ ಒಬ್ಬಳೇ ಮಡದಿ ಇದ್ದಿದ್ದರೆ, ಅವನಿಗೆ ಕಾಡಿಗೆ ತೆರಳುವಷ್ಟು ವೈರಾಗ್ಯವೇನೂ ಮೂಡುತ್ತಿರಲಿಲ್ಲ! ನನ್ನ ಟೀಕೆ ಕೇಳಿ ಹಂಪನಾ ಜೋರಾಗಿ ನಕ್ಕರು. ಅದೇನೇ ಇರಲಿ, ಈ ಗ್ರಂಥ ವಿಶೇಷ ಪರಿಶ್ರಮದ ದುಡಿಮೆಯ ಫಲ. ಕನ್ನಡ ವಿದ್ವತ್ತಿಗೊಂದು ದೊಡ್ಡ ಕೊಡುಗೆ. ಹಂಪನಾ ಅವರಿಗೆ ಅಭಿನಂದನೆಗಳು.

ಅಂದಹಾಗೆ, ಈ ಕೃತಿಯ ಬಗ್ಗೆ ಒಂದೆರಡು ವಾರಗಳ ಹಿಂದೆ 'ಪ್ರಜಾವಾಣಿ'ಯ ಸಾಪ್ತಾಹಿಕದಲ್ಲಿ ನಟರಾಜ ಬೂದಾಳು ಅವರು ಬರೆದ ವಿಮರ್ಶೆಯನ್ನು ಓದಿ ಹೆದರಿ ಯಾರೂ ಈ ಕೃತಿಯನ್ನು ಓದಲು ಹಿಂಜರಿಯಬೇಕಿಲ್ಲ. ಆ ವಿಮರ್ಶೆಗೂ ಈ ಕೃತಿಗೂ ಅಂತಹ ಸಂಬಂಧವೇನಿಲ್ಲ!

ಪ್ರಶಸ್ತಿಗಳೆಂಬ ಮುಜುಗರಗಳು

ಮಹಿಳಾ ಸಾಹಿತ್ಯಕ್ಕೆ ಸುದೀರ್ಘ ಮತ್ತು ಅನನ್ಯ ಸೇವೆ ಸಲ್ಲಿಸಿದವರಿಗೆ ಕರ್ನಾಟಕ ಸರ್ಕಾರ ನೀಡುವ ವಾರ್ಷಿಕ 'ದಾನ ಚಿಂತಾಮಣಿ ಅತ್ತಿಮಬ್ಬೆ' ಪ್ರಶಸ್ತಿಯನ್ನು ಈ ಬಾರಿ ಸರಸ್ವತಿ ಗೌಡ ಎನ್ನುವವರಿಗೆ ನೀಡಲಾಗಿದೆಯಂತೆ! ಆಶ್ಚರ್ಯಪಟ್ಟ ನಾನು ಇವರ ಅನನ್ಯ ಸೇವೆಯ ವಿವರ ತಿಳಿದುಕೊಳ್ಳಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧಿಕಾರಿಯೊಬ್ಬರಿಗೆ ಕರೆ ಮಾಡಿ ಕೇಳಿದರೆ, ಅವರು ಈ ಹಿಂದೆ

ಇದೇ ಪ್ರಶಸ್ತಿ ಪಡೆದ ಸರಸ್ವತಿ ಚಿಮ್ಮಲಗಿ ಎಂಬುವವರ ಅನನ್ಯ ಸೇವೆ ಏನು, ಗೊತ್ತಿದ್ದರೆ ತಿಳಿಸಿ ಎಂದು ವ್ಯಂಗ್ಯವಾಗಿ ನನ್ನನ್ನೇ ಮರುಪ್ರಶ್ನಿಸಿದರು! ಇದು ನಮ್ಮ ಸರ್ಕಾರಿ ಪ್ರಶಸ್ತಿಗಳು ಮುಟ್ಟಿರುವ ದುಃಸ್ಥಿತಿ! ಅಂದ ಮಾತ್ರಕ್ಕೆ ಖಾಸಗಿ ಪ್ರಶಸ್ತಿಗಳು ಶ್ರೇಷ್ಠವೆಂದೇನಲ್ಲ. ಅಲ್ಲಿಯೂ ಚಮಚಾಗಿರಿ, ಜಾತಿವಾದ, ವಶೀಲಿಬಾಜಿ, ದಗಲ್ಬಾಜಿ ಎಲ್ಲವೂ ನಡೆಯುತ್ತದೆ. ಈಗ ಪ್ರಶಸ್ತಿ ಸ್ವೀಕರಿಸುವುದೇ ಒಂದು ಮಹಾ ಮುಜುಗರದ, ಹಿಂಸೆಯ ಸಂಗತಿಯಾಗಿಬಿಟ್ಟಿದೆ.

ಹಾಗಾಗಿಯೇ ಈ ಬಾರಿ ರಾಜ್ಯೋತ್ಸವ ಪ್ರಶಸ್ತಿ ಆಯ್ಕೆ ಸಮಿತಿ ಸದಸ್ಯರೊಬ್ಬರು ಕರೆ ಮಾಡಿ 'ನಿಮಗೆ ಪ್ರಶಸ್ತಿ ನೀಡಲು ಯೋಚಿಸಿದ್ದೇವೆ. ನೀವು ತಿರಸ್ಕರಿಸುವುದಿಲ್ಲ ತಾನೇ?' ಎಂದು ಮುನ್ನೆಚ್ಚರಿಕೆಯ ಕ್ರಮವಾಗಿ ಕೇಳಿದಾಗ 'ಬೇಡ. ನಾನು ತಿರಸ್ಕರಿಸುತ್ತೇನೆ' ಎಂದು ಹೇಳಲು ನನಗೆ ಹೆಚ್ಚು ಸಮಯವೇನೂ ಬೇಕಾಗಲಿಲ್ಲ!

●

ಜನವರಿ, ೨೦೧೫

ಕನ್ನಡ ಸೇವೆಯ ವಿವಿಧ ರೂಪಗಳೂ, ರೂಹುಗಳೂ...

ಎಲ್ಲ ನಿರೀಕ್ಷೆಯಂತೇ ಆಗಿದೆ! ದೇವನೂರು ಮಹಾತ್ಮೆ ಮತ್ತೊಮ್ಮೆ ನಡೆದಿದೆ!! ಸಿದ್ದಲಿಂಗಯ್ಯ ಈ ಬಾರಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಶಾಲಾ ಶಿಕ್ಷಣ ಮಾಧ್ಯಮ ಮಾತೃಭಾಷೆಯಲ್ಲಿರಬೇಕೆಂಬ ಪುರಾತನ ಹೋರಾಟದ ನೆಪವೊಡ್ಡಿ ಸಾಹಿತ್ಯ ಸಮ್ಮೇಳನದ ಪ್ರಸ್ತುತತೆಯನ್ನು ಪ್ರಶ್ನಿಸಿ ಅದರ ಅಧ್ಯಕ್ಷತೆಯನ್ನು ನಿರಾಕರಿಸಿದ್ದ ಮಹಾದೇವ, ತಾವು ನಿರಾಕರಿಸಿದ್ದ ಈ ಅಧ್ಯಕ್ಷ ಸ್ಥಾನಕ್ಕೆ ಬದಲಿ ವ್ಯಕ್ತಿಯನ್ನು ಪರಿಷತ್ತು ನಿರ್ಧರಿಸುವ ಸರಿಯಾಗಿ ಒಂದು ದಿನ ಮುಂಚೆ ಒಂದು ದೀರ್ಘ ಪತ್ರಿಕಾ ಪ್ರಕಟಣೆ ನೀಡಿ ತಮ್ಮ ಗೆಳೆಯ ಸಿದ್ದಲಿಂಗಯ್ಯನವರ ಆಯ್ಕೆಯನ್ನು ಸುಗಮಗೊಳಿಸಿದ್ದಾರೆ. ಈ ಪ್ರಕಟಣೆಯಲ್ಲಿ ಮಹಾದೇವ, ಅವರನ್ನು ಯಾವುದಕ್ಕಾಗಿ ಸಾರ್ಥಕ ಶಿಕ್ಷಣದ ಪರವಾಗಿದ್ದವರು ಮತ್ತು ಅವರ ಅಭಿಮಾನಿಗಳು ಬೆಂಬಲಿಸಿದ್ದರೋ ಆ ಕನ್ನಡ ಪರವಾದ ಪ್ರಾಮಾಣಿಕ ನಂಬಿಕೆ ಮತ್ತು ದೃಢನಿಶ್ಚಯದ ನಿಲುವು ಮಾಯವಾಗಿವೆ. ಹೋರಾಟದ ಹುರುಪಿನ ಜಾಗದಲ್ಲಿ ಉಪದೇಶ ಮತ್ತು ರಾಜಕೀಯ ಭೋಳೆ ತುಂಬಿ ಹೋಗಿ, ಪರಿಸ್ಥಿತಿ ತಹಬಂದಿಗೆ ಬಂದಿದೆ! ಸಿದ್ದಲಿಂಗಯ್ಯ ಈಗ ಯಾವುದೇ ಮುಜುಗರವಿಲ್ಲದೆ ತಮ್ಮ ಆಯ್ಕೆಯನ್ನು ಒಪ್ಪಿಕೊಳ್ಳಲು ಅನುವು ಮಾಡಿಕೊಟ್ಟಿದೆ. ಇದೆಲ್ಲವೂ, ಹಾವೂ ಸಾಯಬಾರದು, ಕೋಲೂ ಮುರಿಯಬಾರದೆಂಬ ಮಹಾದೇವ ಅವರ ಅಚ್ಚುಕಟ್ಟಾದ ಲೆಕ್ಕಾಚಾರದ ಜೀವನ ದರ್ಶನಕ್ಕೆ ತಕ್ಕಂತೆಯೇ ನಡೆದಿದೆ!

ಇದರಿಂದ ಪರಿಷತ್ತಿನ ಅಧ್ಯಕ್ಷರೂ ಸೇರಿದಂತೆ ಸಮ್ಮೇಳನದ ಊಟ-ಪೆಂಡಾಲು-ಗೋಷ್ಠಿ ಇತ್ಯಾದಿ ವ್ಯಾಪಾರಗಳ ಕಂಟ್ರಾಕ್ಟುದಾರರೂ

ಮತ್ತು ಮುಂದೆ ಪರಿಷತ್ತಿನ ಉಸ್ತುವಾರಿ ವಹಿಸಿಕೊಳ್ಳಲು ಸ್ಪರ್ಧೆಗೆ ಕಾದು ನಿಂತಿರುವ ಬಕಪಕ್ಷಿಗಳೂ ಸಂತುಷ್ಟಗೊಂಡಿದ್ದಾರೆ. ಮಹಾದೇವ ಅವರ ಆಶಯದಂತೆಯೇ ಸಮ್ಮೇಳನ ನಡೆಯುವುದಾಗಿ ಹಾಲಂಬಿ ಅಪ್ಪಣೆ ಕೊಟ್ಟು ಮಹಾದೇವರನ್ನೂ ಸಂತುಷ್ಟಗೊಳಿಸಿದ್ದಾರೆ. ಮಹಾದೇವ ಅವರೂ ತಮ್ಮ ಜೀವನ 'ದರ್ಶನ'ಕ್ಕೆ ತಕ್ಕಂತೆ ತಾವೂ ಒಂದು ಅರ್ಧ ದಿನ ಸಮ್ಮೇಳನಕ್ಕೆ ಆಗಮಿಸಿ (ತಮ್ಮ ಆಶಯದಂತೆಯೇ ಎಲ್ಲವೂ ನಡೆಯುತ್ತಿದೆಯೇ ಎಂದು ಪರಿಶೀಲಿಸಲು, ಅಷ್ಟೆ!) ಅಭಿಮಾನಿಗಳಿಗೆ ಒಂದಷ್ಟು ಆಟೋಗ್ರಾಫ್ ಹಾಕಿ ಅಭಿಮಾನಿ ಪತ್ರಕರ್ತರಿಂದ ಫೋಟೋ ತೆಗೆಸಿಕೊಂಡು ಹೋಗಲೂಬಹುದು.

ಹೇಗೂ ತಮ್ಮ ಮೂಲ ಹೇಳಿಕೆಯ ಆಶಯಕ್ಕೆ ವಿರುದ್ಧವಾಗಿ ಸಮ್ಮೇಳನ ನಡೆಯುತ್ತಿರುವುದರಿಂದ, ಮಾತೃಭಾಷಾ ಶಿಕ್ಷಣದ ಪರವಾದ ಹೋರಾಟದ ನೇತೃತ್ವ ವಹಿಸಿಕೊಳ್ಳುವ ತರಲೆ-ತಾಪತ್ರಯವಿಲ್ಲದೆ ಹಾಯಾಗಿ ನಿದ್ದೆ ಹೊಡೆಯಬಹುದಲ್ಲಾ! ಭಲೇ ಮಹಾದೇವ, ಭಲೇ! ಬರೀ ಜಾಣ ಹೇಳಿಕೆಗಳ ಮೂಲಕವೇ 'ಕ್ರಾಂತಿ' ಮಾಡಿದ ಕೀರ್ತಿ ಸಂಪಾದಿಸಿಕೊಳ್ಳುವ ನಿಮ್ಮ ಕೌಶಲ್ಯ ನಿಜವಾಗಿಯೂ ಮೆಚ್ಚಬೇಕಾದದ್ದೇ. ನಿಜವಾಗಿ ಹೇಳಿ, ನಿಮ್ಮ ನಿಲುವಿನಿಂದಾಗಲೀ, ನಂತರ ನೀವು ಹಾಲಂಬಿಯವರಿಗೆ ಬರೆದ ಪತ್ರದಿಂದಾಗಲೀ ನಿಮ್ಮ ಮೆಚ್ಚಿನ ಮುಖ್ಯಮಂತ್ರಿಯವರೂ ಸೇರಿದಂತೆ ಯಾವ ಕನ್ನಡಿಗನ್ನಲ್ಲಾಗಲೀ, ಕನ್ನಡ ಮತ್ತು ಪ್ರಾಥಮಿಕ ಶಿಕ್ಷಣದ ಬಗ್ಗೆ ಹೊಸ ಉತ್ಸಾಹ ಉಂಟಾಗಿದೆಯೇ? ಅವರ ಆತ್ಮ ಸಾಕ್ಷಿ ಎಚ್ಚರಗೊಂಡ ಸೂಚನೆಗಳೇನಾದರೂ ನಿಮಗೆ ಸಿಕ್ಕಿವೆಯೇ? ಹಾಗಿಲ್ಲದಿದ್ದರೆ ಏಕೀ ನಿಮ್ಮ ನಿರ್ಧಾರದ ದಿಢೀರ್ ಬದಲಾವಣೆ?

ಇರಲಿ, ಇದೆಲ್ಲ ಮಾಯಾ ಬಜಾರ್ ನಡುವೆ ಕನ್ನಡದ ಇಂದಿನ ಸ್ಥಿತಿಗತಿಗಳ ಬಗ್ಗೆ ತುಂಬಾ ದಿಟ್ಟ, ನೇರ ಹೇಳಿಕೆ ನೀಡಿರುವವರೆಂದರೆ ನಮ್ಮ ಚಂಪಾ! ಅವರ ಪ್ರಕಾರ, ಸಮ್ಮೇಳನಕ್ಕೂ ಕನ್ನಡದ ಹೋರಾಟಕ್ಕೂ ಸಂಬಂಧವಿಲ್ಲ. ಏಕೆಂದರೆ ಕನ್ನಡದ ಹೋರಾಟ ನಿರಂತರ! ಅಲ್ಲವೇ ಮತ್ತೆ? ಅದು ನಿರಂತರವಾಗಿರದೆ, ಎಲ್ಲಾದರೂ ನಿಂತು ಹೋದರೆ ಅದೆಷ್ಟು ಜನಕ್ಕೆ ಉದ್ಯೋಗ, ಆದಾಯ, ಕುರ್ಚಿ, ಕೀರ್ತಿ ನಷ್ಟ!

ಕನ್ನಡ ಸಾಹಿತ್ಯ ಸಮ್ಮೇಳನವನ್ನು ವಿರೋಧಿಸಿ ಮಹಾದೇವ ಅವರು ನೀಡಿದ್ದ ಮೂಲ ಹೇಳಿಕೆಯನ್ನು ಅವರ ಅಭಿಮಾನಿ ಬಳಗ ನನಗೆ (ಮತ್ತು ಹಲವರಿಗೆ) ಕಳಿಸಿ ಬೆಂಬಲ ಕೋರಿತ್ತು. ಅವರಿಗೆ ಆಗ ನೀಡಿದ ಉತ್ತರ, ನನ್ನ ಈ ಮೇಲಿನ ಮಾತುಗಳನ್ನು ಸ್ವಲ್ಪವಾದರೂ ಸಹಾನುಭೂತಿಯಿಂದ ಅರ್ಥ ಮಾಡಿಕೊಳ್ಳಲು ನೆರವಾಗಬಹುದೆಂದು ಇಲ್ಲಿ ನೀಡುತ್ತಿರುವೆ:

೨, ಡಿಸೆಂಬರ್, ೨೦೧೪

ಪ್ರಿಯರೇ,

ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಶಿಕ್ಷಣ ಮಾಧ್ಯಮ ಕುರಿತಂತೆ ದೇವನೂರ ಮಹಾದೇವ ತೆಗೆದುಕೊಂಡಿರುವ ನಿಲುವು ಅಪೂರ್ವವಾದದ್ದು ಮತ್ತು ಎಲ್ಲ ವಿವೇಕಿ ಕನ್ನಡಿಗರು ಒಪ್ಪುವಂತಹದ್ದು. ಅದಕ್ಕಾಗಿ ಅವರಿಗೆ ಅಭಿನಂದನೆಗಳು.

ಏಳೆಂಟು ವರ್ಷಗಳ ಹಿಂದೆ ಕೆಲವು ದಾರಿ ತಪ್ಪಿದ 'ಪ್ರಗತಿಪರ'ರ ಮಾತುಗಳಿಗೆ ಮಣಿದು ಮಹಾದೇವ ಕನ್ನಡದ ಮಕ್ಕಳಿಗೆ ಒಂದನೇ ತರಗತಿಯಿಂದಲೇ ಇಂಗ್ಲಿಷ್ ಕಲಿಸಬೇಕೆನ್ನುವ ಸರ್ಕಾರದ ನೀತಿಯನ್ನು ಬೆಂಬಲಿಸಿದಾಗ ನಾನು ಆಘಾತಗೊಂಡಿದ್ದೆ. ಅದನ್ನು ಸಾಮಾಜಿಕ ನ್ಯಾಯದ ವಾದದ ನೆಲೆಯಲ್ಲಿ ಸಮರ್ಥಿಸಿದ ಕೆಲವರ ನೀತಿಯಂತೂ ಕನ್ನಡವನ್ನು ಇನ್ನಷ್ಟು ನಿಕೃಷ್ಟ ಸ್ಥಾನಕ್ಕೆ ತಳ್ಳುವಂತೆಯೇ ಇತ್ತು. ಅವರ ಆ ನಿಲುವು, ಆ ಬೆಂಬಲ ಈಗಾಗಲೇ ಸ್ಥಾಪಿತವಾಗಿದ್ದ ಕನ್ನಡದ ಮೇಲಿನ ಇಂಗ್ಲಿಷ್ ಸವಾರಿಯನ್ನು ತಾತ್ವಿಕವಾಗಿ ಒಪ್ಪಿಕೊಂಡಿದ್ದರ ಸೂಚನೆಯಾಗುತ್ತದೆ ಮತ್ತು ಈಗಾಗಲೇ ಹದಗೆಟ್ಟಿರುವ ಕನ್ನಡದ ಪರಿಸ್ಥಿತಿಯನ್ನು ಇನ್ನೂ ಹದಗೆಡಿಸುತ್ತದೆ ಎಂದು ಸೂಚಿಸಿದ್ದೆ. ಜೊತೆಗೆ ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಸಬೇಕೆಂಬ ಈ ನೀತಿಯನ್ನು ಬೆಂಬಲಿಸುವುದು ಅನಿವಾರ್ಯವೇ ಆದರೆ, ಕನ್ನಡ ಮಾಧ್ಯಮ ಶಿಕ್ಷಣವನ್ನು ಕಡ್ಡಾಯ ಮಾಡಿ, ಆನಂತರ ಆ ನೀತಿಯನ್ನು ಜಾರಿಗೆ ತನ್ನಿ ಎಂದು ಹೇಳಬಹುದು ಎಂದೂ ತಿಳಿಸಿದ್ದೆ. ಆದರೆ ಸ್ವತಃ ಮಹಾದೇವ ಅವರೇ ಅದನ್ನು 'ಅವಾಸ್ತವಿಕ' ಎಂದು ತಳ್ಳಿಹಾಕಿದ್ದರು ಮತ್ತು ಸಾಮಾಜಿಕ ನ್ಯಾಯದ ಹೆಸರಿನಲ್ಲಿ ಯಾರೂ ಆ ಬಗ್ಗೆ ಮಾತಾಡಲಿಲ್ಲ.

ಆಗ ಮಾಡಿದ ಕನ್ನಡ ದ್ರೋಹದ ಪಾಪವನ್ನು ತೊಳೆದುಕೊಳ್ಳಲಾದರೂ ಸರಿ, ಮಹಾದೇವ ಈಗ ಕನ್ನಡ ಶಿಕ್ಷಣ ಮಾಧ್ಯಮವಾಗುವವರೆಗೆ ಕನ್ನಡ ಸಾಹಿತ್ಯ ಸಮ್ಮೇಳನ ಬೇಡ ಎಂಬ ಈ ನಿಲುವನ್ನು ತೆಗೆದುಕೊಂಡಿದ್ದರೆ, ಅವರನ್ನು ಅಭಿನಂದಿಸುತ್ತೇನೆ ಮತ್ತು ಅದನ್ನು ಮನಃಪೂರ್ವಕವಾಗಿ ಬೆಂಬಲಿಸುತ್ತೇನೆ. ಆದರೆ ಒಂದು ಮಾತು: ಮಹಾದೇವ ಜಾಣ ಮಾತುಗಳಿಗೆ ಹೆಸರುವಾಸಿ. ಅವರು ಸಮ್ಮೇಳನವನ್ನು ನಿಲ್ಲಿಸಿದರೆ ತಾವು ಶಿಕ್ಷಣ ಮಾಧ್ಯಮ ಆಂದೋಲನದ ನೇತೃತ್ವ ವಹಿಸಿಕೊಳ್ಳುವುದಾಗಿ ಹೇಳಿದ್ದಾರೆ. ಒಂದು ವೇಳೆ ಸಾಹಿತ್ಯ ಸಮ್ಮೇಳನ ನಡೆಯುವಂತಾದರೆ? ನೀವು ಮಾತೃಭಾಷಾ ಶಿಕ್ಷಣ ಮಾದ್ಯಮದ ಪರವಾಗಿ ಆಡಿರುವ ಮಾತುಗಳೆಲ್ಲವೂ ನಿಜವಾಗಿದ್ದರೆ ಮತ್ತು ಅವುಗಳಲ್ಲಿ ನಿಮಗೆ ನಂಬಿಕೆ ಇದ್ದರೆ, ಸಮ್ಮೇಳನ ನಡೆಯಲಿ–ನಡೆಯದಿರಲಿ, ಮಾತೃಭಾಷಾ ಶಿಕ್ಷಣ ಮಾಧ್ಯಮ ಆಂದೋಲನದ ನೇತೃತ್ವ ವಹಿಸುವುದು ನಿಮ್ಮ ನೈತಿಕ ಜವಾಬ್ದಾರಿಯಾಗಿರುತ್ತದೆ ಎಂದು ಅವರಿಗೆ ಹೇಳಬೇಕಿದೆ. ಇದು ಸಾಧ್ಯವಾದರೆ, ಅದು ಅವರ ಈವರೆಗಿನ ಸಾಹಿತ್ಯಕ್ಕಿಂತ ದೊಡ್ಡ ಸಾಧನೆ ಎನಿಸೀತು.

– ಡಿ.ಎಸ್. ನಾಗಭೂಷಣ

ಸಾಹಿತ್ಯ ಅಕಾಡೆಮಿ ಕಂದಾಯ ಇಲಾಖೆಯ ಸುಪರ್ದಿಗೆ?!

ಮಾಲತಿ ಪಟ್ಟಣಶೆಟ್ಟಿವರ ಅಧ್ಯಕ್ಷತೆಯ ಕರ್ನಾಟಕ ಸಾಹಿತ್ಯ ಅಕಾಡೆಮಿ ಹೆಮ್ಮೆಯಿಂದ ೨೦೧೦ ಮತ್ತು ೨೦೧೧ರ ತನ್ನ ಬ್ಯಾಕ್‌ಲಾಗ್ ಪ್ರಶಸ್ತಿಗಳನ್ನು ಪ್ರಕಟಿಸಿದೆ. ಆ ಪ್ರಶಸ್ತಿ ಪಟ್ಟಿಯನ್ನು ನೋಡಿದ ಗೆಳೆಯರೊಬ್ಬರು ಗಾಬರಿಯಾಗಿ ನನಗೆ ಕರೆ ಮಾಡಿ, 'ಅಯ್ಯೋ, ಹೆಸರೇ ಕೇಳದವರಿಗೆಲ್ಲ ಗೌರವ ಪ್ರಶಸ್ತಿ ನೀಡಿದ್ದಾರಲ್ಲಾ!'

ಎಂದಾಗ ಅವರಿಗೆ ನಾನು, 'ಈ ಅಕಾಡೆಮಿಯ ಸದಸ್ಯರ ಪಟ್ಟಿಯನ್ನೂ ಪ್ರಶಸ್ತಿ ವಿಜೇತರ ಈ ಪಟ್ಟಿಯನ್ನೂ ಜೊತೆಗಿಟ್ಟುಕೊಂಡು ನೋಡಿದ್ದರೆ ನಿಮಗೆ ಇಂತಹ ಗಾಬರಿಯೇನೂ ಆಗುತ್ತಿರಲಿಲ್ಲ! ಅಕಾಡೆಮಿ ಹೇಗಿರುತ್ತದೋ ಹಾಗಿರುತ್ತವೆ ಅವು ನೀಡುವ ಪ್ರಶಸ್ತಿಗಳು.' ಎಂದೆ. ಅವರು ಮುಂದೆ ಏನೂ ಮಾತನಾಡಲಿಲ್ಲ!

ಈ ಗೆಳೆಯರು ಪತ್ರಿಕೆಗಳಲ್ಲಿ ಪ್ರಶಸ್ತಿ–ಬಹುಮಾನ ವಿಜೇತರ ಪಟ್ಟಿಯ ಕೆಳಗೆ ಅಕಾಡೆಮಿಯ ವಕ್ತಾರರು ಆಡಿರುವ ಮಾತುಗಳನ್ನು ಗಮನಿಸಿದ್ದಂತಿರಲಿಲ್ಲ. ಆ ವಕ್ತಾರರು, ರಾಜ್ಯದ ಕಂದಾಯ ವಿಭಾಗಗಳನ್ನು ಗಮನದಲ್ಲಿಟ್ಟುಕೊಂಡು ಪ್ರಶಸ್ತಿಗಳನ್ನು 'ನ್ಯಾಯಬದ್ಧ'ವಾಗಿ ಹಂಚಿರುವುದಾಗಿ ಹೇಳಿದ್ದಾರೆ. ಅಯ್ಯೋ, ನಮಗೆ ಗೊತ್ತೇ ಇರಲಿಲ್ಲ, ಅಕಾಡೆಮಿ ಈಗ ಕಂದಾಯ ಇಲಾಖೆಯ ಸುಪರ್ದಿಗೆ ಬಂದು 'ಕಂದಾಯ ನ್ಯಾಯ' ಪದ್ಧತಿಗೆ ಒಳಗಾಗಿದೆ ಎಂದು! ಸಾಹಿತಿಗಳು ಇನ್ನು ಮುಂದೆ ತಮ್ಮ (ಸಾಹಿತ್ಯಿಕ) ಆಸ್ತಿಪಾಸ್ತಿಯ 'ಕಂದಾಯ'ವನ್ನು ಸಕಾಲದಲ್ಲಿ ಸ್ಥಳೀಯ ಸಾಹಿತ್ಯ ಸಂಬಂಧಿ ರೆವೆನ್ಯೂ ಇನ್‌ಸ್ಪೆಕ್ಟರ್‌ಗಳಿಗೆ (ಈ ಹಿಂದೆ ಶಾನುಭೋಗರುಗಳಿಗೆ ಸಲ್ಲಿಸುತ್ತಿದ್ದಂತೆ) ಸಲ್ಲಿಸದರೆ ಮಾತ್ರ ಪ್ರಶಸ್ತಿ–ಬಹುಮಾನಗಳು ಲಭ್ಯ ಎಂದು ಈಗ ಗೊತ್ತಾಯಿತು. ಹಾಗಾಗಿ, ಅಕಾಡೆಮಿಯ ಸದಸ್ಯರೊಬ್ಬರು,. ಇದು ಸರ್ಕಾರಿ ಸಂಸ್ಥೆಯಾದ್ದರಿಂದ ಸರ್ಕಾರದ ನೀತಿಯಂತೆ ಜಾತಿ, ಮತ, ಲಿಂಗ, ಭೂಗೋಳ ಇತ್ಯಾದಿಗಳನ್ನು ನೋಡಿ ಸಾಹಿತ್ಯ ಪ್ರಶಸ್ತಿಗಳನ್ನು ಹಂಚಬೇಕು ಎಂದು ಮಾಡಿದರೆಂದು ಹೇಳಲಾದ ವಾದ ಸರಿಯಾಗಿಯೇ ಇದೆ.

ಇದೆಲ್ಲ ಸರಿಯೇ. ಆದರೆ ಇದನ್ನು ಎಲ್ಲರೂ ಸಹಾನುಭೂತಿಯಿಂದ ಒಪ್ಪಿಕೊಳ್ಳಲಾಗುವಂತೆ ಕನ್ನಡ ಸಾಹಿತ್ಯ ಕ್ಷೇತ್ರದ ಒಂದು ಸಮೀಕ್ಷೆ ಮಾಡಿ, ಸಾಹಿತ್ಯದ ಬಡತನ ರೇಖೆಯೊಂದನ್ನು ನಿಶ್ಚಯಿಸಿ, ಅಗತ್ಯವಿದ್ದವರಿಗೆ ಸಾಹಿತ್ಯದ ಬಿ.ಪಿ.ಎಲ್ ಕಾರ್ಡ್ ನೀಡಬೇಕು. ನಂತರ ಅವರಲ್ಲಿ ನಿಜ ಅರ್ಹರನ್ನು ಗುರುತಿಸಿ ಕ್ರಮವಾಗಿ ಈ ಸಾಹಿತ್ಯ ಅಕಾಡೆಮಿಯ ಮತ್ತು ಇತರೆ ಸರ್ಕಾರಿ ಪ್ರಶಸ್ತಿಗಳನ್ನು ನೀಡಿದರೆ ಅದು ಕಂದಾಯ ನಿಯಮಗಳ ಅನುಸಾರವಾಗಿಯೂ ನ್ಯಾಯಬದ್ಧವೆನಿಸೀತು. ಈ ಸಮೀಕ್ಷೆಯ ಸಾರಥ್ಯವನ್ನು ಕಾಂಗ್ರೆಸ್ ಪಕ್ಷ ಹಮ್ಮಿಕೊಂಡ ಇಂತಹುದೇ ಕಂದಾಯ ಸಮೀಕ್ಷೆಯಲ್ಲಿ ಹೆಚ್ಚು ಅರ್ಹತೆ ಗಳಿಸಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷತೆ ಗಿಟ್ಟಿಸಿಕೊಂಡಿರುವ 'ಕವಿ' ಎಲ್ ಹನುಮಂತಯ್ಯನವರಿಗೆ ವಹಿಸಬೇಕು. ಮಾಲತಿ ಪಟ್ಟಣಶೆಟ್ಟಿಯವರು ಈ ದಿಕ್ಕಿನಲ್ಲಿ ಗಂಭೀರವಾಗಿ ಆಲೋಚಿಸುವ ಕಾಲವೀಗ ಬಂದಿದೆ!!

ಒಂದು ಕಡೆ ಸಾಹಿತ್ಯದ ಈ ಖೂಳ ಸರ್ಕಾರೀಕರಣ, ಇನ್ನೊಂದೆಡೆ ಸಾಹಿತ್ಯ, ಹಬ್ಬ, ಸಂಭ್ರಮಗಳ ಅಸಹ್ಯ ಕಾರ್ಪೋರೇಟೀಕರಣ. ಸಾಹಿತ್ಯಕ್ಕೆ ನಿಜವಾಗಿಯೂ ಇದು ಕಷ್ಟದ ಕಾಲ. ಈ ಎರಡೂ ಸುಳಿಗಳಿಂದ ಪಾರಾಗಿ ಬರೆಯುವುದೇ ಇಂದು ಬರಹಗಾರರ ಮುಂದಿರುವ ನಿಜವಾದ ಸವಾಲು.

ಈ ಎಲ್ಲದರ ನಡುವೆ ಹಿರಿಯ ವಿಮರ್ಶಕ ಜಿ.ಹೆಚ್. ನಾಯಕರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಸಂದಿದೆ. ಅವರಿಗೆ ಪತ್ರಿಕೆಯ ಅಭಿನಂದನೆಗಳು.

●

ಫೆಬ್ರವರಿ, ೨೦೧೫

ಇದು ಎಲ್ಲರೂ 'ಎಲ್ಲ'ವನ್ನೂ ಕಳೆದುಕೊಂಡಿರುವ ಕಾಲವೆ?

ಅದು ಎಪ್ಪತ್ತರ ದಶಕದ ಕೊನೆಯ ವರ್ಷಗಳಿರಬಹುದು. ದೆಹಲಿಯಿಂದ ಹೀಗೇ ಬಂದಿದ್ದ ನಾನು ನಮ್ಮ ಗುರು ಕೆ.ಎಂ. ಶಂಕರಪ್ಪನವರೊಂದಿಗೆ ಬೆಂಗಳೂರಿನ ಸೆಂಟ್ರಲ್ ಕಾಲೇಜಿನ ಹಿಂಭಾಗದ ಪ್ಯಾಲೇಸ್ ರಸ್ತೆಯಲ್ಲಿ ನಡೆದಿದ್ದೆ. ಇದ್ದಕ್ಕಿದಂತೆ ಭರ್ರನೆ ದೊಡ್ಡ ಕಾರೊಂದು ನಮ್ಮ ಪಕ್ಕಕ್ಕೇ ಬಂದು ನಿಂತಿತು. ಗಾಬರಿಯಿಂದ ನಾವು ನೋಡುತ್ತಿದ್ದಂತೆ ಕಾರಿನ ಕಿಟಕಿಯ ಗಾಜು ಇಳಿದು ತಲೆಯೊಂದು ಇಣುಕಿ 'ಶಂಕರಪ್ಪಾ!' ಎಂದು ಕೂಗಿತು. ನೋಡಿದರೆ ಅವರು ಮುಖ್ಯಮಂತ್ರಿ ದೇವರಾಜ ಅರಸು! ನಾನು ಸಾವರಿಸಿಕೊಳ್ಳುತ್ತಿರುವಂತೆಯೇ ಅವರು 'ಎಷ್ಟು ಸರ್ತಿ ಹೇಳಿಕಳಿಸಬೇಕು, ನನ್ನನ್ನು ಕಾಣವೇಕೆಂದು? ನಿಮ್ಮಂತಹವರ ಪ್ರತಿಭೆಯನ್ನು ಬಳಸಿಕೊಳ್ಳುವುದು ನಮ್ಮ ಕರ್ತವ್ಯ. ಬಾ, ಫಿಲ್ಮ್ ಡೆವಲಪ್‌ಮೆಂಟ್ ಕಾರ್ಪೋರೇಷನ್‌ದೋ, ಮತ್ತೊಂದರದ್ದೋ ಜವಾಬ್ದಾರಿ ಕೊಡುವೆ' ಎಂದರು. ಶಂಕರಪ್ಪ ತುಸು ನಕ್ಕು, 'ಆಗಲಿ ಸಾಹೇಬ್ರೇ, ಬರುತ್ತೇನೆ' ಎಂದು ಕೈಮುಗಿಯುತ್ತಿದ್ದಂತೆ ಕಾರು ಮುಂದೆ ಹೊರಟಿತು. ಆಗ ಸಮಾಜವಾದಿಯಾಗಿ ಕಾಂಗ್ರೆಸ್ಸೇತರವಾದದ ಪ್ರಬಲ ಪ್ರತಿಪಾದಕರಾಗಿದ್ದ ಶಂಕರಪ್ಪ ಅರಸು ಅವರತ್ತ ಸುಳಿಯಲಿಲ್ಲವೆಂಬುದು ಬೇರೆ ವಿಚಾರ.

ಇನ್ನೊಂದು ಪ್ರಸಂಗ. ಸಿದ್ದಲಿಂಗಯ್ಯ ತಮ್ಮ 'ಊರು ಕೇರಿ'ಯಲ್ಲಿ ದಾಖಲಿಸಿರುವುದು. ಅವರೊಮ್ಮೆ ತಮ್ಮ ಗೆಳೆಯರೊಂದಿಗೆ ಮುಖ್ಯಮಂತ್ರಿ ದೇವರಾಜ ಅರಸು ಮನೆಗೆ ಹೋಗಬೇಕಾಯಿತು. ಅವರ ಗೆಳೆಯ ಅರಸುಗೆ ಸಾಷ್ಟಾಂಗ ನಮಸ್ಕಾರ ಮಾಡಿದರಲ್ಲದೆ,

ಸಿದ್ದಲಿಂಗಯ್ಯನವರನ್ನೂ ಅಡ್ಡಬೀಳುವಂತೆ ನೂಕಿದರು. ಆದರೆ ಸಿದ್ಧಲಿಂಗಯ್ಯ ಅದನ್ನು ಪ್ರತಿರೋಧಿಸುತ್ತಿದ್ದಂತೆ, ಇದನ್ನು ಗಮನಿಸುತ್ತಿದ್ದ ಅರಸು ಅದನ್ನು ತಡೆದು 'ಇವರು ಯಾರು?' ಎಂದು ಕೇಳಲಾಗಿ ಸಿದ್ಧಲಿಂಗಯ್ಯ ಕೂಡಲೇ ತಮ್ಮ ಜೋಳಿಗೆಯಿಂದ ಆಗ ತಾನೇ ಬಿಡುಗಡೆಯಾಗಿದ್ದ ತಮ್ಮ 'ಹೊಲೆಮಾದಿಗರ ಹಾಡು' ಕವನ ಸಂಕಲನವನ್ನು ತೆಗೆದು ಸಹಿ ಮಾಡಿ ಅವರಿಗೆ ಕೊಟ್ಟರು. ಪುಸ್ತಕ ತೆಗೆದುಕೊಂಡ ಅರಸು ಪದ್ಯಗಳ ಮೇಲೆ ಕಣ್ಣಾಡಿಸುತ್ತಿರುವಾಗಲೇ ಅವರನ್ನು ಮನೆಯೊಳಗೆ ಬರಲು ಹೇಳಿದರು. ಪದ್ಯ ಓದಿಸಿ ಚಹಾ ತರಿಸಿಕೊಟ್ಟು ಹೇಳಿದರು: 'ನೀವು ಆಗಾಗ ಬಂದು ಹೋಗಬೇಕು'

ಇದರೊಂದಿಗೇ, ನಿಜಲಿಂಗಪ್ಪನವರು ಮುಖ್ಯಮಂತ್ರಿಯಾಗಿದ್ದಾಗ ಯಾವುದೋ ಸಾಹಿತ್ಯಿಕ-ಸಾಂಸ್ಕೃತಿಕ ವಿಷಯವಾಗಿ ಕುವೆಂಪು ಅವರ ಸಲಹೆ ಬೇಕಾಗಿಬಂದು, ಅದಕ್ಕಾಗಿ ಕುವೆಂಪು ಅವರೇ ಬರಲು ಸಿದ್ಧವವಿದ್ದಾಗ ನಿಜಲಿಂಗಪ್ಪನವರು ಅವರಿಗೆ 'ನೀವು ಬರಬೇಡಿ. ನಿಮ್ಮ ಬಳಿಗೆ ನಾನು ಬರಬೇಕು' ಎಂದು ಹೋಗಿಬಂದದ್ದನ್ನು ಎಲ್ಲೋ ಓದಿದ್ದ ನೆನಪು ಬರುತ್ತಿದೆ.

ಇಂತಹ ಪರಂಪರೆಯುಳ್ಳ ಕರ್ನಾಟಕದಲ್ಲಿ ಇಂದೇನಾಗುತ್ತಿದೆ? ನಮ್ಮ ಇಂದಿನ ಮುಖ್ಯಮಂತ್ರಿಗಳಿಗೆ ಲೇಖಕ-ಬುದ್ಧಿಜೀವಿ-ಚಿಂತಕರ ಸಹವಾಸವೇ ಬೇಡವಾಗಿದೆ. ಅಹಿಂದದ ರಾಜಕೀಯ ಪುಢಾರಿಗಳ ಸಹವಾಸವೇ ಅವರಿಗೆ ಬಹು ಅಪ್ಯಾಯಮಾನವಾಗಿದೆ. ಹೆಚ್ಚೆಂದರೆ ಅವರ ಕಣ್ಣಿಗೆ ಬೀಳಲು ಹವಣಿಸುತ್ತಾ ಅವರ ಸುತ್ತ ತಿರುಗಿ ಸಣ್ಣ ಪುಟ್ಟ ಸ್ಥಾನಮಾನಗಳನ್ನು ಗಿಟ್ಟಿಸಿರುವ ಅಥವಾ ಗಿಟ್ಟಿಸಬಯಸುವ ಸಾಹಿತ್ಯ ಪುಢಾರಿಗಳು ಸಾಕು. ಇವರಿಗೆಲ್ಲ ಈ ಮುಖ್ಯಮಂತ್ರಿ ಕರ್ನಾಟಕದ ಶಾಸನ ಸಭೆಯ ಇತಿಹಾಸದಲ್ಲಿ ಮೊದಲ ಬಾರಿಗೆ ವಿಧಾನ ಪರಿಷತ್ತಿನಲ್ಲಿ ಸಾಹಿತಿಯೊಬ್ಬರಿಗೆ ಸ್ಥಾನ ಕೊಡುವ ಅಗತ್ಯವೇನೂ ಇಲ್ಲವೆನ್ನುವಷ್ಟು ಸಾಂಸ್ಕೃತಿಕ ಜಡತ್ವಕ್ಕೀಡಾಗಿದ್ದಾರೆ ಎಂಬುದು ಮುಖ್ಯವೇ ಆಗಿಲ್ಲ. ಇಂತಹ ಜಡತ್ವದಿಂದಾಗಿಯೇ ಶಿಕ್ಷಣ ಮಾಧ್ಯಮ ಕುರಿತ ಸರ್ವೋನ್ನತ ನ್ಯಾಯಾಲಯದ ತೀರ್ಪಿನ ಪರಿಣಾಮಗಳನ್ನು ನಿವಾರಿಸಿಕೊಳ್ಳಲು ಕೈಗೊಳ್ಳಬೇಕಾದ ತುರ್ತು ಶಾಸನಾತ್ಮಕ ಕ್ರಮಗಳ ಬಗ್ಗೆ ಅವರಿಂದ ಸೊಲ್ಲೇ ಇಲ್ಲ ಎಂಬ ಯಾವ ಯೋಚನೆಯೂ ಈ ಸಾಹಿತಿಗಳ ಬಳಿ ಸುಳಿದಿರಲಾರದು. ಇದು ಕಂತೆಗೆ ತಕ್ಕ ಬೊಂತೆ ಅಷ್ಟೆ.

ಅದೇನೇ ಇದ್ದರೂ, ಶ್ರವಣಬೆಳಗೊಳದಲ್ಲಿನ ಹಾಲಂಬಿಯವರ ಕನ್ನಡ ಸಂತೆಯಲ್ಲಿ ಕನ್ನಡಪರವಾದ ವೀರಾವೇಶದ ಮಾತುಗಳು ಮೊಳಗಲಿವೆ. ಜನ ಚಪ್ಪಾಳೆ ತಟ್ಟಿ ಅಂಡೊರೆಸಿಕೊಂಡು ಎದ್ದು ಹೋಗಲಿದ್ದಾರೆ. ಆನಂತರ ಹಾಲಂಬಿ ಮತ್ತವರ ಗೆಣೆಕಾರರು ಕನ್ನಡದ ಸುದ್ದಿ ಮರೆತು ಹಾಯಾಗಿ ನಿದ್ದೆ ಮಾಡಬಹುದು. ಏಕೆಂದರೆ ಪರಿಷತ್ತಿನ ತಮ್ಮ ಅಧ್ಯಕ್ಷತೆಯ ಅವಧಿಯಲ್ಲಿ ಸಮ್ಮೇಳನಾಧ್ಯಕ್ಷತೆಯ ಜೊತೆಗೆ 'ನೃಪತುಂಗ' ಇತ್ಯಾದಿ ದೊಡ್ಡ ಗಂಟುಗಳ ಪ್ರಶಸ್ತಿಗಳನ್ನು ಹಿಂದುಳಿದವರು, ಮಹಿಳೆಯರು ಮತ್ತು ಅಲ್ಪಸಂಖ್ಯಾತರಿಗೆ ಸಂದಾಯವಾಗುವಂತೆ ನೋಡಿಕೊಂಡ ತೃಪ್ತಿ ಅವರಿಗಿದೆಯಂತೆ! ಇದು ಪ್ರಶಸ್ತಿಗಳು ಮತ್ತು ಸಮ್ಮೇಳನಾಧ್ಯಕ್ಷತೆ ಇಂದು

ಯಾವ ದುಃಸ್ಥಿಗೀಡಾಗಿವೆ ಎಂಬುದನ್ನು ತೋರಿಸುತ್ತದೆ ಎಂಬ ಪರಿವೆಯೂ ಹಾಲಂಬಿಯವರಿಗೆ ಇದ್ದಂತಿಲ್ಲ. ಇದೆಲ್ಲದರ ಜೊತೆಗೆ ಒಂದು ದುಃಖದ ಸಂಗತಿ ಎಂದರೆ, ಸಿದ್ಧಲಿಂಗಯ್ಯ ಈ ಸಮ್ಮೇಳನದ ಅಧ್ಯಕ್ಷತೆಯನ್ನು ಒಪ್ಪಿಕೊಳ್ಳುವ ಮುನ್ನ ಒಮ್ಮೆಯಾದರೂ, 'ಕನ್ನಡಕ್ಕೆ ನನಗಿಂತ ಹೆಚ್ಚು ಸೇವೆ ಸಲ್ಲಿಸಿದ ನನ್ನ ಹಿರಿಯರೂ, ಮೇಷ್ಟ್ರೂ ಆದ ಚಿದಾನಂದಮೂರ್ತಿ ಇದ್ದಾರೆ' ಎಂಬ ಮುಜುಗರದ ಮಾತನ್ನಾಡಬಹುದೆಂಬ ನನ್ನ ಊಹೆ ಸುಳ್ಳಾಗಿ ಹೋಗಿದೆ.

ಇದು ಎಲ್ಲರೂ 'ಎಲ್ಲ'ವನ್ನೂ ಕಳೆದುಕೊಂಡಿರುವ ಕಾಲ ಎನಿಸುತ್ತಿದೆ.

●

ಏಪ್ರಿಲ್, ೨೦೧೫

ಕೆಲವು ಬಿಡಿ ಟಿಪ್ಪಣಿಗಳು

ಕನ್ನಡದ ಹುಸಿ ರಾಜಕಾರಣ

ಶಿಕ್ಷಣ ಮಾಧ್ಯಮದ ಸಂಬಂಧವಾಗಿ (ದೇವನೂರ ಮಹಾದೇವ ಅವರ ಕೃಪೆಯಿಂದಾಗಿ) ಭಾರಿ ಧೂಳು ಎಬ್ಬಿಸಿ ಕೋಟಿ ಕೋಟಿ ರೂಪಾಯಿಗಳ ವೆಚ್ಚದಲ್ಲಿ ನಡೆದ ಸಾಹಿತ್ಯ ಸಮ್ಮೇಳನ ಆ ಧೂಳಿನ ಮೇಲೆ ಭಾಷಣ–ಘೋಷಣೆ–ಗೋಷ್ಠಿಗಳ ತಣ್ಣೀರೆರಚಿ 'ಸದ್ಯ!' ಎಂದು ನಿಟ್ಟುಸಿರಿನೊಂದಿಗೆ ಮುಕ್ತಾಯವಾಗಿದೆ. ಸರ್ಕಾರವೂ ಸಂತೆ ಹೊತ್ತಿಗೆ ಮೊಳ ನೇಯ್ದುಕೊಂಡು ಬಂದಂತೆ ಯಾವುದೋ ಕಾಯಿದೆಗೆ ಏನೋ ತಿದ್ದುಪಡಿ ಮಾಡಿ ಕನ್ನಡವನ್ನು ಕಾಪಾಡುವ 'ಬೂಸಿ' ಬಿಟ್ಟು ಹೋಗಿದೆ. ಜನ ಕೂಡ ಇದೆಲ್ಲವನ್ನೂ ತಾವು ಸಮ್ಮೇಳನದಲ್ಲಿ ನಿರೀಕ್ಷಿಸಿದ ವಿಚಾರ–ವಿಹಾರದ ಭಾಗವಾಗಿ ಒಪ್ಪಿಕೊಂಡು ತಂತಮ್ಮ ಊರುಗಳಿಗೆ ಹಿಂತಿರುಗಿ, ಇನ್ನೇನು ಬರಲಿರುವ ಶೈಕ್ಷಣಿಕ ವರ್ಷದಲ್ಲಿ ಶಾಲಾ ಪ್ರವೇಶಕ್ಕೆ ಅರ್ಹರಾದ ತಮ್ಮ ಮಕ್ಕಳಿಗೆ ಯಾವ ಇಂಗ್ಲಿಷ್ ಶಾಲೆ 'ಬೆಸ್ಟ್' ಎಂದು ಹುಡುಕುವ ಕಾರ್ಯದಲ್ಲಿ ಮಗ್ನರಾಗಿದ್ದಾರೆ.

ಇನ್ನು ದೇವನೂರ ಮಹಾದೇವ ಅವರು ತಮ್ಮ ಕನ್ನಡ ಹೋರಾಟವನ್ನು ಇಂಗ್ಲಿಷ್ ಸಾಪ್ತಾಹಿಕವೊಂದರಲ್ಲಿ ಮಾತೃಭಾಷಾ ಪರವಾದ ತಮ್ಮ ಅಮಾಯಕವೆನ್ನಿಸುವ ವಾದದ ಅನುವಾದವನ್ನು ಪ್ರಕಟಿಸಿಸಿಕೊಂಡು, ಅದರಲ್ಲಿ ಮಾತೃಭಾಷೆಗಳನ್ನು ರಕ್ಷಿಸುವಂತೆ ರಾಷ್ಟ್ರಪತಿಗಳಿಗೆ ಮೊರೆ ಇಟ್ಟು ಮುಂದುವರೆಸಿದ್ದಾರೆ. ನನ್ನ ಆಶ್ಚರ್ಯವೆಂದರೆ, ಕನ್ನಡದ ಮಕ್ಕಳು ಇನ್ನೂ ಒಂದು ವರ್ಷ ಕನ್ನಡ

ಶಿಕ್ಷಣ ಮಾಧ್ಯಮದಿಂದ ವಂಚಿರಾಗುವುದನ್ನು ತಪ್ಪಿಸಲು, ಅವರು ತಮ್ಮ ಹತ್ತಿರದ ಮಿತ್ರರಾದ ಅಡ್ವೋಕೇಟ್ ಜನರಲ್ ರವಿವರ್ಮ ಕುಮಾರ್‌ಗೋ ಅಥವಾ ಮುಖ್ಯ ಮಂತ್ರಿ ಸಿದ್ಧರಾಮಯ್ಯನವರಿಗೋ, ಸರ್ವೋಚ್ಚ ನ್ಯಾಯಾಲಯಕ್ಕೆ ಪರಿಹಾರಾತ್ಮಕ ಅರ್ಜಿ ಬೇಡ; ಬದಲಿಗೆ. ತಕ್ಷಣ ಎಲ್ಲ ರಾಜ್ಯಗಳ ಮುಖ್ಯಮಂತ್ರಿ ಅಥವಾ ಪ್ರಾಥಮಿಕ ಶಿಕ್ಷಣ ಮಂತ್ರಿಗಳ ಸಭೆ ಕರೆದು ಮಾತೃಭಾಷಾ ಶಿಕ್ಷಣದ ಪರವಾದ ಒಂದು ನಿರ್ಣಯ ಕೈಗೊಂಡು ಅದನ್ನು ಮುಂದಿನ ಕಾನೂನಾತ್ಮಕ ಅಥವಾ ಸಾಂವಿಧಾನಿಕ ಕ್ರಮಕ್ಕಾಗಿ ಕೇಂದ್ರಕ್ಕೋ, ರಾಷ್ಟ್ರಪತಿಗಳಿಗೋ ಕಳಿಸುವ ವ್ಯವಸ್ಥೆ ಮಾಡುವಂತೆ ಏಕೆ ಸೂಚಿಸುತ್ತಿಲ್ಲ ಎಂಬುದು! ಬಹುಶಃ ತಮ್ಮ ಮುದ್ದು 'ಕುಸುಮಬಾಲೆ' ಇಂಗ್ಲಿಷ್ ಲಂಗ ತೊಟ್ಟು ಆಡುತ್ತಿರುವ ಆಟಪಾಠಗಳನ್ನು ನೋಡಿ ಸವಿಯುತ್ತಾ ಕನ್ನಡದ ಬಗ್ಗೆ ಸ್ಪಷ್ಟವಾಗಿ ವಿಚಾರ ಮಾಡಲಾಗುತ್ತಿಲ್ಲ ಎಂದು ಕಾಣುತ್ತದೆ. ಇಂಗ್ಲಿಷ್ ಮೋಹಿನಿಯ ಕಣ್ಣೋಟಕ್ಕೆ ಎಲ್ಲರ ಪಾಡೂ ಇದೇ ಇರಬೇಕು!

ವೀರಪ್ಪ ಮೊಯ್ಲಿ ಎಂಬ ಸಾಹಿತಿಯೂ 'ಸರಸ್ವತಿ ಸಮ್ಮಾನ್' ಎಂಬ ಪ್ರಶಸ್ತಿಯೂ

ಕನ್ನಡ ಹೀಗೆ ಕರ್ನಾಟಕದಲ್ಲಿ ಕನ್ನಡಿಗರ ಕೈಯಲ್ಲೇ ಅಸಹಾಯಕವಾಗಿ ಒದ್ದಾಡುತ್ತಿದ್ದರೂ ಅದರ 'ಕಂಪು' ಮಾತ್ರ ದೇಶಾದ್ಯಂತ ಎಗ್ಗಿಲ್ಲದೆ ಹರಡುತ್ತಿದೆ! ಮೊನ್ನೆ ನಮ್ಮ ವೀರಪ್ಪ ಮೊಯ್ಲಿಯವರ 'ಶ್ರೀ ರಾಮಾಯಣ ಮಹಾನ್ವೇಷಣಂ' ಕಾವ್ಯಕ್ಕೆ 'ಸರಸ್ವತಿ ಸಮ್ಮಾನ್' ದೊರೆತಿರುವುದೇ ಇದಕ್ಕೆ ಸಾಕ್ಷಿಯಲ್ಲವೇ? ಕರ್ನಾಟಕದಲ್ಲಿ ವಿವೇಕ ರೈ, ಸಿ.ಎನ್. ರಾಮಚಂದ್ರನ್ ಬಿಟ್ಟು ಇನ್ನಾರಾದರೂ ಇದನ್ನು ಓದಿರುವ ಸಾಕ್ಷಿ ಇಲ್ಲದಾಗ (ಕಂಬಾರ ಮತ್ತು ಹಂಪನಾ ಅದರ ಗಾತ್ರವನ್ನು ತಡವಿಯೇ ಬೆಚ್ಚಿ ಬಿದ್ದು, ಆದರೂ 'ಇರಲಿ' ಎಂದು 'ಬಹಳ ಚೆನ್ನಾಗಿದೆ ಸರ್' ಎಂದು ಮೊಯ್ಲಿಯವರಿಗೆ ಹೇಳಿರಬಹುದೆಂಬುದು ಗುಮಾನಿಯಷ್ಟೆ!) ಯಾವ ಕನ್ನೇಡತರ ಸಾಹಿತ್ಯ ರಸಿಕರು ಈ ಹೆಗ್ರಂಥದ ಪ್ರಾಯೋಜಿತ ಅನುವಾದವನ್ನು ಓದಿ ಮೆಚ್ಚಿ ಈ ಪ್ರಶಸ್ತಿ ನೀಡಿದರಪ್ಪ! ಎಂಬ ಬೆರಗಿನಲ್ಲೇ ಕನ್ನಡ ಸಾರಸ್ವತ ಲೋಕ ಬೆಚ್ಚಿಬಿದ್ದು ಎಲ್ಲೆಲ್ಲೂ ಮೌನವೇ ಮೊಯ್ಲಿಯವರನ್ನು ಎದುರುಗೊಳ್ಳುತ್ತಿದೆ. ಈ ದೃಷ್ಟಿಯಿಂದ ಕನ್ನಡ ಸಾರಸ್ವತ ಲೋಕ ತನ್ನ ಸಂವೇದನೆಯನ್ನು ಇನ್ನೂ ಕಿಂಚಿತ್ತಾದರೂ ಉಳಿಸಿಕೊಂಡಿರುವ ಸೂಚನೆ ನೀಡಿದೆ. ಆದರೂ ಸ್ವಲ್ಪ ಕಾಲ ತಡೆದೇ ಈ ಮಾತನ್ನು ಆಡಬಹುದೇನೋ... ಏಕೆಂದರೆ, ಭಜನೆ ಪಾರ್ಟಿ ಇನ್ನೂ ಗಂಟಲು ಸರಿ ಮಾಡಿಕೊಳ್ಳುತ್ತಿರಬಹುದು!

ರಾಜಕಾರಣಿಯೊಬ್ಬರು ಸಾಹಿತ್ಯ ಕೃಷಿ ಮಾಡಬಾರದು, ಅದರಲ್ಲಿ ಸಾಧನೆ ಮಾಡಲಾಗದು ಎಂದು ಯಾರೂ ಹೇಳುತ್ತಿಲ್ಲ. ಆದರೆ ಯಾವುದೇ ಕೃತಿ ಮೊದಲು ತನ್ನ ಮೂಲಭಾಷೆಯ ಸಮುದಾಯದಲ್ಲಿ ತನ್ನ ಮಾನ್ಯತೆಯನ್ನು ಸ್ಥಾಪಿಸಿಕೊಳ್ಳಬೇಕು. ಈ 'ಶ್ರೀ ರಾಮಾಯಣ ಮಹಾನ್ವೇಷಣಂ' ಮೊದಲು ಪ್ರಕಟಗೊಂಡಾಗ ಈ ಮೊಯ್ಲಿಯವರ ಸಾಹಿತ್ಯ ದಲ್ಲಾಳಿಗಳು ಪ್ರತಿ ಜಿಲ್ಲಾ ಕೇಂದ್ರದಲ್ಲೂ ಈ ಕೃತಿ

ಕುರಿತು ಗೋಷ್ಠಿಗಳನ್ನು ಏರ್ಪಡಿಸಲು ಹೇಗೆ ಹೆಣಗಿ, ಎಷ್ಟು ಖರ್ಚು ಮಾಡಿ ಹಾಸ್ಯಾಸ್ಪದರಾದರು ಎಂಬುದನ್ನು ನಾನು ವೈಯಕ್ತಿಕವಾಗಿ ಬಲ್ಲೆ.

ಅದೇನೇ ಇರಲಿ, ಇದೆಲ್ಲದರಿಂದ ನಿಜವಾಗಿ ವಿಚಲಿತರಾಗಿರಬಹುದಾದವರೆಂದರೆ, ಇತ್ತೀಚೆಗೆ ಇದೇ 'ಸರಸ್ವತಿ ಸಮ್ಮಾನ್' ಪಡೆದು ತಮ್ಮ ಅಭಿಮಾನಿಗಳ ಅಪಾರ ಹರ್ಷದ ಮಧ್ಯೆ ಸನ್ಮಾನಿತರಾಗಿದ್ದ ಎಸ್.ಎಲ್. ಭೈರಪ್ಪನವರು. ಇನ್ನು ಮುಂದೆ ಅವರ ಅಭಿಮಾನಿಗಳು ತಮ್ಮ ಈ ನೆಚ್ಚಿನ ಲೇಖಕನನ್ನು ಸರಸ್ವತಿ ಸಮ್ಮಾನ್ ಪುರಸ್ಕೃತ ಲೇಖಕ ಎಂದು ಹೆಮ್ಮೆಯಿಂದ ಹೇಳಿಕೊಳ್ಳುವರೇ? ಕಾದು ನೋಡಬೇಕು! ಇದನ್ನೆಲ್ಲ ನೋಡಿದಾಗ ಈ ಪ್ರತಿಷ್ಠಿತ ಪ್ರಶಸ್ತಿಗಳಿಗೆ ಈಗ ಒದಗಿರುವ ದುರ್ಗತಿಗೆ ಕಾರಣಗಳೇನು ಎಂದು ಗಂಭೀರವಾಗಿ ಯೋಚಿಸುವ ಕಾಲವೀಗ ಬಂದಿದೆ ಎನಿಸುತ್ತದೆ. ಇದು ಸಂಪೂರ್ಣ ಸಾಂಸ್ಕೃತಿಕ ಅವನತಿಯ ಕಾಲವೇನೋ ಎಂಬ ಸಂದೇಹವುಂಟಾಗುತ್ತದೆ.

ಪ್ರಶಸ್ತಿಯ ತಗಡು!

ಪ್ರಶಸ್ತಿಗಳ ಈ ರಾಜಕೀಯೀಕರಣ ಇಂದು ಧುತ್ತನೇ ಆಗಿದ್ದಲ್ಲ. ಚಂಪಾ ಬಹು ಹಿಂದೆಯೇ 'ಪ್ರಶಸ್ತಿಯನ್ನು ಪಡಕೊಳ್ಳುವ ಮತ್ತು ಹೊಡಕೊಳ್ಳುವ' ಮಾತುಗಳನ್ನಾಡಿದ್ದರು. ಅಂದು ಅವರು ಈ ಮಾತನ್ನಾಡಿದ ಸಂದರ್ಭದಲ್ಲಿ ಚಂಪಾ ಅವರ ಎಲ್ಲರಿಗೂ ಗೊತ್ತಿದ್ದ ಪೂರ್ವಗ್ರಹದಿಂದಾಗಿ ಅದು ಅಷ್ಟು ವಿಶ್ವಾಸಾರ್ಹವೆನಿಸಿರಲಿಲ್ಲ. ಆದರೆ ಇಂದು ಪ್ರಶಸ್ತಿಗಳ ಆಯ್ಕೆಯ ರೀತಿ ನೋಡಿದರೆ, ಅವರ ಮಾತು ಇಂದು ಹೆಚ್ಚು ನಿಜವೆನ್ನಿಸುತ್ತಿದೆ. ಬಹುಶಃ ಸಾಹಿತ್ಯ-ಸಂಸ್ಕೃತಿಗಳಿಗೆ ಸಂಬಂಧಿಸಿದಂತೆ ಕರ್ನಾಟಕದಲ್ಲಿರುವಷ್ಟು ಪ್ರಶಸ್ತಿಗಳು ಜಗತ್ತಿನಲ್ಲಿ ಇನ್ನೆಲ್ಲಿಯೂ ಇಲ್ಲವೆಂದು ಕಾಣುತ್ತದೆ! ಪ್ರತಿದಿನ ಪತ್ರಿಕೆಗಳಲ್ಲಿ ಒಂದಲ್ಲ ಒಂದು ಪ್ರಶಸ್ತಿಯ/ಗಳ ಸುದ್ದಿ ಇದ್ದೇ ಇರುತ್ತದೆ. ಇಂದು ನಮ್ಮ ಅಕಾಡೆಮಿಗಳು, ಪ್ರಾಧಿಕಾರಗಳು ಮತ್ತು ಖಾಸಗಿ ಪ್ರತಿಷ್ಠಾನ ಇತ್ಯಾದಿಗಳು ಪ್ರಕಟಿಸುತ್ತಿರುವ ಪ್ರಶಸ್ತಿಗಳು ಅಕಸ್ಮಾತ್ ಅರ್ಹರಿಗೆ ಸಂದಿದ್ದರೆ ಅವರು ಅದನ್ನು ಹೇಳಿಕೊಳ್ಳಲು ಸಂಕೋಚಪಡುವಷ್ಟು ಅವು ತಮ್ಮ ಬೆಲೆಯನ್ನು ಕಳೆದುಕೊಂಡಿವೆ. ಕಾರಣ, ಪ್ರಶಸ್ತಿ ಕೊಡುವ ಈ ಸಂಸ್ಥೆಗಳು-ಬಹುಶಃ ಒಂದೆರಡು ಅಪವಾದಗಳ ಹೊರತಾಗಿ-ತಮ್ಮ ಸಾಂಸ್ಕೃತಿಕ ಸ್ವಾಯತ್ತತೆಯನ್ನು ಕಳೆದುಕೊಂಡು ಪೂರಾ ಜಾತೀಯ, ಹುಸಿ ತತ್ವಾಂಧತೆಯ, ಚೇಲಾಗಿರಿಯ ಗೂಡುಗಳಾಗಿವೆ. ಸರ್ಕಾರವೆಂದರೆ ಈಗ ಪೂರ್ಣವಾಗಿ ಪಕ್ಷ ರಾಜಕಾರಣವೇ ಆಗಿರುವುದರಿಂದ ಅವು ತನ್ನ ಆಶ್ರಯದ ಸಾಹಿತ್ಯಿಕ-ಸಾಂಸ್ಕೃತಿಕ ಸಂಸ್ಥೆಗಳನ್ನು ತಮ್ಮ ಚೇಲಾಗಳ ಸಾಕಾಣಿಕೆ ಕೇಂದ್ರಗಳನ್ನಾಗಿ ಪರಿವರ್ತಿಸಿಕೊಂಡಿವೆ. ಹೀಗಾಗಿ ಸಾಹಿತ್ಯಿಕ-ಸಾಂಸ್ಕೃತಿಕ ಪುಢಾರಿಗಳಿಗೆ ಈಗ ಹಬ್ಬ! ಈಗ ಪ್ರಶಸ್ತಿಗಳ ಜೊತೆ ದೊಡ್ಡ ನಗದಿನ ಗಂಟೂ ಇರುವುದರಿಂದ ಅದಕ್ಕೆ ಆ ನಗದೇ ಬೆಲೆ! ಅದರ ಜೊತೆಗೆ ಕೊಡುವ 'ತಗಡು' ಯಾರಿಗೆ ಬೇಕು?

ಸಂಕ್ರಮಣದ ಸುವರ್ಣ ಸಂಪುಟ–೨

'ಸಂಕ್ರಮಣ'ದ ಎರಡನೇ ಸುವರ್ಣ ಸಂಪುಟ ಇತ್ತೀಚೆಗೆ ತಾನೇ ಹೊರಬಂದಿದೆ. ಇದು ಆಗಸ್ಟ್ ೧೯೬೬ರಿಂದ ಜೂನ್ ೧೯೬೮ರವರೆಗಿನ ಹನ್ನೊಂದು ಸಂಚಿಕೆಗಳನ್ನು ಒಳಗೊಂಡಿದೆ. ಮೊದಲ ಸಂಪುಟ ನವ್ಯ ಸಾಹಿತ್ಯದ ಹುಟ್ಟಿನ ಸಂಭ್ರಾಮಚರಣೆಯ ಬರಹಗಳ ಮೂಲಕ ಗಮನ ಸೆಳೆದಿತ್ತು. ಈಗ ಈ ಸಂಪುಟದಲ್ಲಿ ಅದು ತನ್ನ ಎರಡನೇ ತಲೆಮಾರಿನ ಲೇಖಕರನ್ನು ಸೃಷ್ಟಿಸಿಕೊಳ್ಳುತ್ತಾ ವಿಶ್ವಾಸದಿಂದ ಬೆಳೆಯುತ್ತಿರುವ ಸೂಚನೆಗಳನ್ನು ಹೊತ್ತ ಕಥೆ–ಕವನ–ಪ್ರಬಂಧ–ವಿಮರ್ಶೆ–ಸಂದರ್ಶನಗಳಿಂದ ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯ ಅಧ್ಯಯನ ಮಾಡಬಯಸುವವರ ಕುತೂಹಲವನ್ನು ಸೆಳೆಯುವಂತಿದೆ. ಶಂಬಾ, ಅಡಿಗ ಕಣವಿ, ಅಮೂರ, ಮೊಕಾಶಿ, ಗಿರಡ್ಡಿ, ಪಟ್ಟಣಶೆಟ್ಟಿ, ಚಂಪಾ, ಶಾಂತಿನಾಥ, ಲಂಕೇಶ್, ಕಾರ್ನಾಡ್, ನಾಡಿಗ, ಶ್ರೀಕೃಷ್ಣ ಆಲನಹಳ್ಳಿ, ಬಿ.ಆರ್. ಲಕ್ಷ್ಮಣರಾವ್, ಎಸ್. ದಿವಾಕರ, ರಾಜಶೇಖರ ನೀರಮಾನ್ವಿ, ಸುಬ್ರಾಯ ಚೊಕ್ಕಾಡಿ, ಸತ್ಯನಾರಾಯಣ ರಾವ್ ಅಣತಿ, ಕೆ.ನ ಶಿವತೀರ್ಥನ್, ಎಂ.ಬಿ. ನಟರಾಜ –ಹೀಗೆ ಮೂರು ತಲೆಮಾರುಗಳ ಲೇಖಕರು ಒಂದು ಸಾಹಿತ್ಯ ತಾತ್ವಿಕತೆಯನ್ನು ಕಟ್ಟುವ ಕ್ರಿಯೆಯಲ್ಲಿ ತೊಡಗಿದ ಒಂದು ಸೃಜನಶೀಲ ಸಾಹಸವೆಂಬಂತೆಯೂ ಈ ಸಂಪುಟವನ್ನು ನೋಡಬಹುದಾಗಿದೆ.

●

ಮೇ, ೨೦೧೫

ಇದು ನಮ್ಮೆಲ್ಲರ ಮೈಮರೆವಿನ ಕಾಲವೇ?

ಕನ್ನಡಕ್ಕಾಗಿ ದ್ರಾವಿಡ ಪ್ರಾಣಾಯಾಮ...

ಜಾಗತೀಕರಣದ ಭರಾಟೆಯ ಈ ದಿನಗಳಲ್ಲಿ ರಾಜ್ಯದಲ್ಲಿ ಕನ್ನಡವನ್ನು ಮತ್ತು ಶಿಕ್ಷಣದ ಅರ್ಥವನ್ನು ಉಳಿಸಿ ಬೆಳೆಸಲು ಇರುವ ಮೂಲಧಾರ ಕಾರ್ಯಕ್ರಮವೆಂದರೆ ಕನ್ನಡವನ್ನು ಶಿಕ್ಷಣದ ಅವಿಭಾಜ್ಯ ಅಂಗ ಮಾಡುವುದು; ಕನಿಷ್ಟ, ಕನ್ನಡ ಮಕ್ಕಳ ಪ್ರಾಥಮಿಕ ಶಿಕ್ಷಣವಾದರೂ ಕಡ್ಡಾಯವಾಗಿ ಕನ್ನಡದಲ್ಲಿರುವಂತೆ ಮಾಡುವುದು. ಇದಕ್ಕೆ ನ್ಯಾಯಾಂಗ ಮೂಲಭೂತ ಹಕ್ಕುಗಳ ಹೆಸರಿನಲ್ಲಿ ಅಡ್ಡಿಯುಂಟು ಮಾಡುತ್ತಿರುವಾಗ, ಇದಕ್ಕೆ ಏಕೈಕ ಪರಿಹಾರ ಮಾರ್ಗವೆಂದರೆ, ಈ ಸಂಬಂಧವಾಗಿ ತೊಂದರೆ ಕೊಡುತ್ತಿರುವ ಸಂವಿಧಾನದ ಪರಿಚ್ಛೇದಕ್ಕೆ ಸೂಕ್ತ ತಿದ್ದುಪಡಿ ತರಲು ಅಗತ್ಯವಾದ ಕ್ರಮ ಕೈಗೊಳ್ಳುವುದು. ಆದರೆ ರಾಜ್ಯ ಸರ್ಕಾರ ಏಕೋ ಮತ್ತೆ ಒಂದು ತಾತ್ಕಾಲಿಕ ಪರಿಹಾರ ಕ್ರಮಕ್ಕೆ ಕೈಹಾಕಿದಂತಿದೆ. ಅದು ತರಾತುರಿಯಲ್ಲಿ ವಿಧಾನ ಮಂಡಲದಲ್ಲಿ ಐದನೇ ತರಗತಿವರೆಗೆ ಮಾತೃಭಾಷಾ ಮಾಧ್ಯಮವನ್ನು ಮತ್ತು ರಾಜ್ಯದ ಎಲ್ಲ ಶಾಲೆಗಳಲ್ಲಿ ಕನ್ನಡವನ್ನು ಒಂದು ಭಾಷೆಯಾಗಿ ಕಲಿಸುವುದನ್ನು ಕಡ್ಡಾಯ ಮಾಡುವ ಮಸೂದೆಗಳನ್ನು ಅನುಮೋದನೆ ಪಡೆದುಕೊಂಡು ಅದಕ್ಕೆ ಕಾನೂನಿನ ರೂಪ ಕೊಡಲು ರಾಷ್ಟ್ರಪತಿಗಳ ಅಂಕಿತಕ್ಕಾಗಿ ಕಳಿಸಿದೆ. ಇದನ್ನು ನ್ಯಾಯಾಲಯಗಳ ಈ ಹಿಂದಿನ ಪ್ರತಿಕೂಲ ತೀರ್ಪುಗಳನ್ನು ಗಮನಿಸಿಯೇ ಈಗ ಈ ಕಾನೂನನ್ನು ಸಂವಿಧಾನದ ೨೦ಎ ಕಲಮಿನ ಪ್ರಕಾರವೇ ರೂಪಿಸಲಾಗಿದೆ ಎಂದು ರಾಜ್ಯದ ಅಡ್ವೊಕೇಟ್ ಜನರಲ್‌ರಾದ

ಗೆಳೆಯ ಪ್ರೊ. ರವಿವರ್ಮ ಕುಮಾರ್ ನನ್ನೊಂದಿಗೆ ಮಾತನಾಡುತ್ತಾ ಹೇಳಿದರು.

ಆದರೆ ರಾಷ್ಟ್ರಪತಿಗಳು ಇದಕ್ಕೆ ಸುಲಭವಾಗಿ ಅಂಕಿತ ಹಾಕುವರೇ ಎಂಬುದು ಪ್ರಶ್ನೆ. ಮಾತೃಭಾಷಾ ಶಿಕ್ಷಣ ಕುರಿತಂತೆ ವಿಚಾರಣಾ ಸಂದರ್ಭದಲ್ಲಿ ವಿವಿಧ ನ್ಯಾಯಾಧೀಶರುಗಳು ಆಡಿದ ಮಾತುಗಳು, ಅವರ ತೀರ್ಪಿನಲ್ಲಿ ಎತ್ತಲಾಗಿರುವ ಹಲವು ನೆಲೆಗಳ ಪ್ರಶ್ನೆಗಳು ಮತ್ತು ಶಿಕ್ಷಣ ರಾಜ್ಯ ಪಟ್ಟಿಯಲ್ಲಿದ್ದರೂ ನೀತಿಗೆ ಒಂದು ರಾಷ್ಟ್ರೀಯ ಚೌಕಟ್ಟು ಇರುವುದು – ಈ ಎಲ್ಲವೂ ಸೃಷ್ಟಿಸುವ ಜಟಿಲತೆಗಳ ನಡುವೆ ರಾಷ್ಟ್ರಪತಿಗಳು ಸುಲಭವಾಗಿ ಸಹಿ ಹಾಕುವರೆ? ಇದರ ಜೊತೆಗೆ, ಮಸೂದೆಯು ಮಾತೃಭಾಷಾ ಶಿಕ್ಷಣದ ಮಾತಾಡಿರುವುದರಿಂದ ರಾಜ್ಯದಲ್ಲಿ ಸುಮಾರು ಶೇ. ೩೫ರಷ್ಟಿರುವ ಕನ್ನಡೇತರರ ಮಕ್ಕಳಿಗೆ ಅವರವರ ಮಾತೃಭಾಷೆಗಳಲ್ಲಿಯೇ ಪ್ರಾಥಮಿಕ ಶಿಕ್ಷಣ ಕೊಡುವ ಶಕ್ತಿ–ಸಾಧ್ಯತೆ–ಸೌಕರ್ಯಗಳು ರಾಜ್ಯ ಸರ್ಕಾರಕ್ಕಿದೆಯೇ? ಅಲ್ಲದೆ, ಈ ಮಸೂದೆಗಳು ಕೇಂದ್ರ ಶಿಕ್ಷಣ ಕ್ರಮದ ಸರ್ಕಾರಿ ಮತ್ತು ಕಾರ್ಪೋರೇಟ್ ಶಿಕ್ಷಣ ಸಂಸ್ಥೆಗಳ (ಪಬ್ಲಿಕ್ ಮತ್ತು ಅಂತಾರಾಷ್ಟ್ರೀಯ ಶಾಲೆಗಳು) ಮತ್ತು ಅಲ್ಪ ಸಂಖ್ಯಾತರ ಶಾಲೆಗಳಿಗೆ (ಇವುಗಳ ವ್ಯಾಖ್ಯಾನವನ್ನು ಇದೇ ಸರ್ಕಾರ ಇತ್ತೀಚೆಗೆ ತಾನೇ ಉದಾರಗೊಳಿಸಿತಲ್ಲ?) ಅನ್ವಯವಾಗುವುದಿಲ್ಲವಾದ್ದರಿಂದ, ಶೈಕ್ಷಣಿಕ ತಾರತಮ್ಯದ ಪ್ರಶ್ನೆ ಎದ್ದು, ಮತ್ತೆ ಇದು ನ್ಯಾಯಾಂಗದ ಎದುರು ಹೋಗಿ, ಕನ್ನಡ ಶಿಕ್ಷಣದ ಪ್ರಶ್ನೆ ಮತ್ತೆ ವರ್ಷಗಟ್ಟಲೆ ನೆನೆಗುದಿಗೆ ಬೀಳಬಲ್ಲುದು ಅಲ್ಲವೇ? ಖಾಸಗಿ ಶಾಲೆಗಳ ಮಾಲೀಕರ ಸಂಘ ಈಗಾಗಲೇ ಸರ್ಕಾರದ ಕ್ರಮದ ಬಗ್ಗೆ ತನ್ನ ತೀವ್ರ ಅಸಮಧಾನ ವ್ಯಕ್ತಪಡಿಸಿ, ಕಾನೂನಿನ ಸಮರಕ್ಕೆ ಸಿದ್ಧವಾಗುತ್ತಿರುವುದಾಗಿ ಹೇಳಿದೆ.

ಇದೆಲ್ಲದರ ಹಿನ್ನೆಲೆಯಲ್ಲಿ ನನ್ನ ಒಂದು ತೀವ್ರ ಅನುಮಾನವೆಂದರೆ; ಇದನ್ನೆಲ್ಲ ತಿಳಿದೇ, ಪ್ರತಿಷ್ಠಿತ ಇಂಗ್ಲಿಷ್ ಶಾಲೆಗಳ ಮಾಲೀಕರು ಅಥವಾ ಅವರ ಗೆಣೆಕಾರರು ತುಂಬಿರುವ ನಮ್ಮ ವಿಧಾನ ಮಂಡಲ ಕಳ್ಳ ಮುಗುಳ್ನಗೆಯೊಂದಿಗೇ ಈ ಮಸೂದೆಗಳನ್ನು ಅನುಮೋದಿಸಿದೆಯೇ? ಎಂಬುದು. ಏಕೆಂದರೆ ಈ ಮಸೂದೆಗಳು ಸದ್ದಿಲ್ಲದೆ, ಚರ್ಚೆಯಿಲ್ಲದೇ ಎರಡೂ ಸದನಗಳಲ್ಲಿ ಅನುಮೋದಿತವಾದವು! ಇದನ್ನು ಇತ್ತೀಚಿಗೆ ನನ್ನ ಮನೆಗೆ ಸೌಹಾರ್ದ ಭೇಟಿಗೆಂದು ಬಂದಿದ್ದ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಕಿಮ್ಮನೆ ರತ್ನಾಕರ ಅವರಿಗೆ ಹೇಳಿದಾಗ, 'ಹಾಗಂತೀರಾ?' ಎಂದು ಮುಗಳ್ನಕ್ಕ ರೀತಿ ಈ ಎಲ್ಲವನ್ನೂ ಪ್ರಾಮಾಣಿಕವಾಗಿ ಹೇಳುವಂತಿತ್ತು. ಸಜ್ಜನರೂ, ಶಿಕ್ಷಣ ವ್ಯವಸ್ಥೆಯ ಬಗ್ಗೆ ಪ್ರಾಮಾಣಿಕ ಕಾಳಜಿ ಮತ್ತು ಬದ್ಧತೆಗಳನ್ನುಳ್ಳ ಈ ಕಿಮ್ಮನೆಯವರನ್ನು ನಾನು ಕೇಳಿದೆ: 'ಇದೆಲ್ಲ ದ್ರಾವಿಡ ಪ್ರಾಣಾಯಾಮ ಮಾಡಿಯೂ ಭರವಸೆ ಇಲ್ಲದಿರುವಾಗ, ನೇರವಾಗಿ ಸಂವಿಧಾನ ತಿದ್ದುಪಡಿಗಾಗಿ ರಾಜ್ಯ ತನ್ನ ಮೊದಲ ಹೆಜ್ಜೆಯನ್ನೇಕೆ ಇಡಬಾರದಿತ್ತು? ಈ ಹೊತ್ತಿಗಾಗಲೇ ಎಲ್ಲ ರಾಜ್ಯಗಳ ಮುಖ್ಯಮಂತ್ರಿಗಳನ್ನು ಅಲ್ಲದಿದ್ದರೂ, ಶಾಲಾ ಶಿಕ್ಷಣ ಮಂತ್ರಿಗಳದಾದರೂ ಒಂದು ಸಭೆ ಕರೆದು ಚರ್ಚಿಸಿ, ಅಗತ್ಯ ಸಂವಿಧಾನ ತಿದ್ದುಪಡಿಗಾಗಿ ಕೇಂದ್ರಕ್ಕೆ ಒಂದು ಶಿಫಾರ್ಸು ಕಳಿಸಬಹುದಿತ್ತಲ್ಲಾ? ಇಂದಿನ ಪ್ರಧಾನಿಯೂ, ಅವರ ಪಕ್ಷವೂ ರಾಷ್ಟ್ರೀಯತೆಯನ್ನು

ತನ್ನ ಪ್ರಧಾನ ಮೌಲ್ಯವಾಗಿ ನಂಬಿವೆ; ಜೊತೆಗೆ ಅವರ ಮೂಲ ಶಕ್ತಿಯಾದ ಆರೆಸ್ಸೆಸ್ ಕೂಡ ಮೊನ್ನೆ ತಾನೆ ಮಾತೃಭಾಷಾ ಶಿಕ್ಷಣಕ್ಕೆ ತನ್ನ ಬೆಂಬಲ ಘೋಷಿಸಿದೆ. ಪರಿಸ್ಥಿತಿ ಹೀಗೆ ಅನುಕೂಲಕರವಾಗಿರುವಾಗ ರಾಜ್ಯ ಸರ್ಕಾರವೇಕೆ ಈ ಅವಕಾಶವನ್ನು ಬಳಸಿಕೊಳ್ಳುತ್ತಿಲ್ಲ? ಸುಮ್ಮನೆ ಸುತ್ತುಬಳಸು ಮಾರ್ಗವನ್ನು ಪ್ರಯತ್ನಿಸುತ್ತಾ ತಾನೂ ಆಯಾಸಗೊಂಡು ಜನರನ್ನೂ ಏಕೆ ಬಳಲಿಸುತ್ತಿದೆ?' ಕಿಮ್ಮನೆಯವರು 'ಹೌದು ಇದನ್ನು ಮಾಡಬಹುದು; ಆ ದಿಸೆಯಲ್ಲೂ ಸರ್ಕಾರ ಯೋಚನೆ ಮಾಡುತ್ತಿದೆ' ಎಂದರು. ಆದರೆ ಅದರಲ್ಲಿ ಖಚಿತ ಭರವಸೆಯೇನೂ ಕಾಣಲಿಲ್ಲ. ಈ ದೃಷ್ಟಿಯಿಂದ ಸರ್ಕಾರದ ಪ್ರಾಮಾಣಿಕತೆಯೇ ಅನುಮಾನಾಸ್ಪದತೆಗೆ ಸಿಕ್ಕಿದೆ.

ಗಾಂಧಿ ಕುರಿತ ಒಂದು ಅದ್ಭುತ ನಾಟಕ

ಕಳೆದ ಐದಾರು ವರ್ಷಗಳಿಂದ, ಇಂದಿನ ಕಪಟ ಮಾರುಕಟ್ಟೆಯಲ್ಲಿ ಪುಸ್ತಕ ವ್ಯಾಪಾರ ಕಷ್ಟವಾಗುತ್ತಿದ್ದು ಪ್ರಕಾಶನವನ್ನು ಮುಚ್ಚುತ್ತೇನೆ ಎಂದು ತಮ್ಮ ಓದುಗರನ್ನೂ, ಲೇಖಕರನ್ನೂ ಹೆದರಿಸುತ್ತಲೇ ಇರುವ ಬಳ್ಳಾರಿಯ ಲೋಹಿಯಾ ಪ್ರಕಾಶನದ ಗೆಳೆಯ ಚೆನ್ನಬಸವಣ್ಣ ಮೊನ್ನೆ ಎಂಟು ಪುಸ್ತಕಗಳನ್ನು ತಮ್ಮ ಪ್ರಕಾಶನದಿಂದ ಹೊರತಂದು ತಮ್ಮ ಓದುಗ–ಲೇಖಕರಿಬ್ಬರಿಗೂ ಅಭಯ ನೀಡಿದ್ದಾರೆ ಎಂದೇ ಹೇಳಬಹುದು. ಅದಿರಲಿ, ಇತ್ತೀಚಿನ ಈ ಎಂಟು ಪುಸ್ತಕಗಳ ಮೇಲೆ ಸುಮ್ಮನೆ ಕಣ್ಣಾಡಿಸುತ್ತಾ ಹೋದಾಗ ನನ್ನ ವಿಶೇಷ ಗಮನ ಸೆಳೆದ ಮೂರು ಪುಸ್ತಕಗಳೆಂದರೆ, ರಂಜಾನ್ ದರ್ಗಾ ಅವರ ನೆಲ್ಸನ್ ಮಂಡೇಲಾರ ಜೀವನ ಚರಿತ್ರೆ, ಎ.ಎಸ್. ಹಿಪ್ಪರಗಿ ಅವರ ಸಂಕ್ಷಿಪ್ತ ಆತ್ಮ ಕತೆ 'ನನ್ನ ಬದುಕು' ಹಾಗೂ ಈ ಎರಡಕ್ಕಿಂತ ಮುಖ್ಯವಾಗಿ ಹಸನ್ ನಯೀಂ ಸುರಕೋಡರು ಹಿಂದಿಯಿಂದ ಅನುವಾದಿಸಿರುವ ಅಸ್ಗರ್ ವಜಾಹತ್ ಅವರ 'ಗಾಂಧಿಗೆ ಸಾವಿಲ್ಲ' ಎಂಬ ನಾಟಕ. ಕನ್ನಡ ಸಾಹಿತಿಗಳನ್ನ–ವಿಶೇಷವಾಗಿ ಬಂಡಾಯ ಸಾಹಿತಿಗಳನ್ನು ಬಹುವಾಗಿ ಸೆಳೆದ ನೆಲ್ಸನ್ ಮಂಡೇಲಾ ಬಗ್ಗೆ ಈವರೆಗೆ ಒಂದು ಪೂರ್ಣ ಪ್ರಮಾಣದ ಪುಸ್ತಕ ಕನ್ನಡದಲ್ಲಿ ಬಹುಶಃ ಬಂದಿಲ್ಲ ಎಂಬ ಸಂಗತಿಯ ಹಿನ್ನೆಲೆಯಲ್ಲಷ್ಟೇ ರಂಜಾನ್ ದರ್ಗಾರ ಪುಸ್ತಕ ಮುಖ್ಯವೆನಿಸುತ್ತದಾದರೆ, ಹಿಪ್ಪರಗಿಯವರ ಪುಸ್ತಕ ಹಳ್ಳಿಯ ಬಡ ಹೈದನೊಬ್ಬ ಆಕಸ್ಮಿಕವೆಂಬಂತೆ ಶಿಕ್ಷಣ ಪಡೆದು ಶಾಲಾ ಶಿಕ್ಷಕನಾಗಿ ಗ್ರಾಮಾಂತರ ಶಿಕ್ಷಣ ವ್ಯವಸ್ಥೆಗೆ ಸಲ್ಲಿಸುವ ನಿಸ್ವಾರ್ಥ ಮತ್ತು ಬಹುಮುಖ ಸೇವೆಯ ಹಿಂದಿನ ವಿಶಿಷ್ಟ ಮಾನವ ಸ್ವಭಾವ ಹುಟ್ಟಿಸುವ ಬೆರಗಿನ ಕಾರಣದಿಂದಾಗಿ ಗಮನ ಸೆಳೆಯುತ್ತದೆ.

ಇನ್ನು ಗಾಂಧಿ ಕುರಿತ ನಾಟಕ ಈವರೆಗೆ ಗಾಂಧಿ ಕುರಿತಂತೆ ಕನ್ನಡಕ್ಕೆ ಬಂದಿರುವ ನಾಟಕಗಳಲ್ಲೆಲ್ಲ ಶ್ರೇಷ್ಠ ನಾಟಕವೆನಿಸುತ್ತದೆ. ಈವರೆಗೆ ಬಂದಿರುವ ನಾಟಕಗಳು ಗಾಂಧಿಯನ್ನು ಮುಖ್ಯವಾಗಿ ಒಬ್ಬ ವ್ಯಕ್ತಿಯಾಗಿ, ಇನ್ನೊಂದು ವ್ಯಕ್ತಿಯ ಎದುರು ನಿಲ್ಲಿಸಿ ಅವರ ವ್ಯಕ್ತಿತ್ವವನ್ನು ಬಗೆಯುವ ಪ್ರಯತ್ನವಾದರೆ, 'ಗಾಂಧಿಗೆ ಸಾವಿಲ್ಲ' ಗಾಂಧಿಯನ್ನು ಒಂದು ಶಕ್ತಿಯಾಗಿ, ಒಂದು ಸಮಗ್ರ ಜೀವನ ದೃಷ್ಟಿಯ

ಒಂದು ಪ್ರತೀಕವಾಗಿ ನೋಡುವ ಮಹತ್ವಾಕಾಂಕ್ಷೆಯನ್ನು ಪ್ರಕಟಿಸುತ್ತಾ, ಅದರಲ್ಲಿ ಸಾಕಷ್ಟು ಯಶಸ್ವಿಯಾಗಿದೆ ಎಂದೇ ಹೇಳಬೇಕು. ಈ ನಾಟಕದಲ್ಲಿ ಗೋಡ್ಸೆ ಗುಂಡಿಗೆ ಸಾಯದೆ ಉಳಿಯುವ ಗಾಂಧಿ ತನ್ನ ಆಶಯದ ಸ್ವರಾಜ್ಯವನ್ನು ಸಾಕಾರಗೊಳಿಸುವಲ್ಲಿ ನೆಹ್ರೂ, ಪಟೇಲ್, ಮೌಲಾನಾ ಮುಂತಾದ ತನ್ನ ಪ್ರಿಯ ಶಿಷ್ಯರನ್ನೇ ಎದುರು ಹಾಕಿಕೊಂಡು ನಡೆಸುವ ಹೋರಾಟ ಗೋಡ್ಸೆಯೊಂದಿಗೂ ಒಂದು ಸಂವಾದದ ದಾರಿಯನ್ನು ತೆರೆದುಕೊಂಡು ಹಿಂದೂ-ಹಿಂದುತ್ವದ ನಡುವಣ ಒಂದು ತಾತ್ವಿಕ ಮುಖಾಮುಖಿಯನ್ನು ಸೃಷ್ಟಿಸಿಕೊಳ್ಳುತ್ತದೆ. ಜೊತೆಗೆ ಬ್ರಹ್ಮಚರ್ಯ ಕುರಿತ ಗಾಂಧಿ ತಿಳುವಳಿಕೆಯನ್ನೂ ನಿಷ್ಠುರವಾಗಿ ಬಗೆದು ನೋಡಲು ಹವಣಿಸುತ್ತದೆ. ಗಾಂಧಿ ವ್ಯಕ್ತಿತ್ವದ ಸಕಲ ಆಯಾಮಗಳನ್ನೂ, ಅದರ ವಿಸ್ತರಣೆಗಳೊಂದಿಗೆ ಮತ್ತು ಹಲವು ಪ್ರಶ್ನೆಗಳೊಂದಿಗೆ ಪ್ರಸ್ತುತಪಡಿಸುವ ಈ ಕೃತಿಯನ್ನು ಬರೆದವರು ಒಬ್ಬ ಮುಸ್ಲಿಂ ಎಂಬುದೂ ಇಂದಿನ ಸಂದರ್ಭದಲ್ಲಿ ನಿರ್ಲಕ್ಷಿಸಲಾಗದ ಸಂಗತಿಯೇ ಆಗಿದೆ.

ಈ ನಾಟಕ ಗಾಂಧಿಯನ್ನು ಇಂದಿಗೆ ಪ್ರಸ್ತುತಪಡಿಸುವಲ್ಲಿ ಎಂತಹ ಸೂಕ್ಷ್ಮ ಸಮತೋಲನದಲ್ಲಿದೆ ಎಂದರೆ, ಇದರ ನಿರ್ದೇಶಕರ ಆಯ್ಕೆಯೇ ಈ ನಾಟಕದ ಯಶಸ್ಸನ್ನು ನಿರ್ಧರಿಸಬಲ್ಲುದಾಗಿದೆ. ಹಾಗಾಗಿ ಕರ್ನಾಟಕದಲ್ಲಿ ಈ ನಾಟಕದ ಪ್ರಯೋಗಗಳನ್ನು ಕುತೂಹಲದಿಂದ ಎದುರು ನೋಡುವಂತಾಗಿದೆ. ಆದರೆ ಒಂದು ಮಾತು. 'ಗೋಡ್ಸೆ@ಗಾಂಧಿ.ಕಾಮ್' ಎಂಬ ಈ ನಾಟಕದ ಮೂಲ ಶೀರ್ಷಿಕೆಯನ್ನು ಅದು ಗೊಂದಲಮಯವಾಗಿದೆ ಎಂದು ಭೋಳೆಯಾಗಿ 'ಗಾಂಧಿಗೆ ಸಾವಿಲ್ಲ' ಎಂದು ಬದಲಾಯಿಸಿರುವುದು ನಾಟಕದ ಒಟ್ಟು ಸಂಕೀರ್ಣತೆಯನ್ನೇ ಮಸುಕು ಮಾಡಿದೆ ಎಂಬುದನ್ನೂ ಇಲ್ಲಿ ಹೇಳಬೇಕು. ಅದೇನೇ ಇರಲಿ, ಇಂತಹ ಅಪರೂಪದ ಕೃತಿಯನ್ನು ಕನ್ನಡಕ್ಕೆ ಕೊಟ್ಟಿರುವುದಕ್ಕಾಗಿ ಅನುವಾದಕ ಸುರಕೋಡ್ ಹಾಗೂ ಪ್ರಕಾಶಕ ಸಿ.ಚೆನ್ನಬಸವಣ್ಣನವರನ್ನು ಅಭಿನಂದಿಸಬೇಕಿದೆ.

ಚನ್ನಬಸವಣ್ಣವರಿಗೊಂದು ಪ್ರತಿಭಟನೆ

ಚನ್ನಬಸವಣ್ಣನವರನ್ನು ಅಭಿನಂದಿಸುತ್ತಿರುವ ಹೊತ್ತಿನಲ್ಲೇ ಒಂದು ಪ್ರತಿಭಟನೆಯನ್ನೂ ಅವರ ಬಗ್ಗೆ ದಾಖಲಿಸುವುದು ಅನಿವಾರ್ಯವಾಗಿದೆ. ಕೆಲ ವರ್ಷಗಳ ಹಿಂದೆ ಇವರು 'ನಾನು ಪಾಟೀಲ ಪುಟ್ಟಪ್ಪ' ಕೃತಿಯನ್ನು ಪ್ರಕಟಿಸಿದಾಗಲೇ ಅದರಲ್ಲಿ ಪಾಟೀಲ ಪುಟ್ಟಪ್ಪ ಶಿವರಾಮ ಕಾರಂತರ ವ್ಯಕ್ತಿತ್ವವನ್ನು ಅವಹೇಳನಕ್ಕೀಡುಮಾಡುವಂತಹ ಮಾತುಗಳನ್ನು ಬರೆದಿರುವ ಬಗ್ಗೆ ಚನ್ನಬಸವಣ್ಣನವರಿಗೆ ನನ್ನ ಅಸಮಧಾನವನ್ನು ಸೂಚಿಸಿದ್ದೆ. ಆದರೆ ಆ ಕೃತಿಯ ಎರಡನೇ ಆವೃತ್ತಿಯಲ್ಲೂ ಅದು ಮುಂದುವರೆದು, ಆ ಅವಹೇಳನಕಾರಿ ಮಾತುಗಳು ಕಾರಂತರ ಎಲ್ಲ ಉತ್ತರಾಧಿಕಾರತ್ವವನ್ನೂ ಪಡೆದಿರುವ ಶ್ರೀಮತಿ ಮಾಲಿನಿ ಮಲ್ಯರ ಗಮನಕ್ಕೆ ಬಂದು ಅವರು ಅದನ್ನು ಪ್ರತಿಭಟಿಸಿದಾಗಲೂ, ಪಾಟೀಲ ಪುಟ್ಟಪ್ಪ ಎಂದಿನ ತಮ್ಮ ಉದ್ಧಟತನದಿಂದ ಅದಕ್ಕೆ ಪ್ರತಿಕ್ರಿಯಿಸಿದಾಗಲೂ, ಇದಕ್ಕೆ ಸಂಬಂಧವೇ ಪಡದ ಒಂದಿಬ್ಬರು ಚೇಲಾ ಸಾಹಿತಿಗಳು ಮಾಲಿನಿ ಮಲ್ಯರನ್ನು

ಅವಮಾನಿಸುವ ರೀತಿಯಲ್ಲಿ ಹೇಳಿಕೆ ನೀಡಿದಾಗಲೂ ಮತ್ತು ಮತ್ತೆ ಈ ಸಂಬಂಧವಾಗಿ ನಾನು ಅವರಿಗೆ ಸೂಕ್ಷ್ಮವಾಗಿ 'ಈಗ ನೀವು ಸುಮ್ಮನಿರುವುದು ತರವಲ್ಲ' ಎಂದು ಸೂಚಿಸಿದಾಗಲೂ ಚನ್ನಬಸವಣ್ಣ ಮುಗುಮ್ಮಾಗಿಯೇ ಇದ್ದುಬಿಟ್ಟದ್ದು ಲೋಹಿಯಾ ಪ್ರಕಾಶನದ ಘನತೆಗೆ ತಕ್ಕುದಲ್ಲ ಎಂದು ಇಲ್ಲಿ ಹೇಳಬೇಕಿದೆ.

ಮಹಾರಾಷ್ಟ್ರದ ನಿರ್ಮಮ ಪುರೋಹಿತಶಾಹಿ

ತಿಂಗಳ ಹಿಂದೆ ಹತ್ಯೆಯಾದ ಮಹಾರಾಷ್ಟ್ರದ ವಿಚಾರವಾದಿ ಮತ್ತು ಕಮ್ಯೂನಿಸ್ಟ್ ನಾಯಕ ಗೋವಿಂದ ಪನ್ಸಾರೆ ಬಗ್ಗೆ ಪತ್ರಿಕೆಯೊಂದರಲ್ಲಿ ಓದುತ್ತಿದ್ದೆ. ಓದುತ್ತಿದ್ದಂತೆ ಮಹಾರಾಷ್ಟ್ರದ ಪರಂಪರೆಯಲ್ಲಿ ಅಂತರ್ಗತವಾಗಿದೆ ಎಂದು ನಾನು ನಂಬಿದ್ದ ಮಹಾಚೈತನ್ಯದ ಇನ್ನೊಂದು ಮುಖ ನನ್ನ ಮುಖದ ಮೇಲೆ ಅಪ್ಪಳಿಸಿತು. ಜ್ಞಾನೇಶ್ವರ, ತುಕಾರಾಮ, ಫುಲೆ, ಗೋಖಲೆ, ರಾನಡೆ, ಅಂಬೇಡ್ಕರ್, ಶಾಹು ಮಹಾರಾಜ್‌ರ ಜೊತೆಜೊತೆಗೇ ಅಲ್ಲಿ ಅನೇಕ ಅಜ್ಞಾತ ಗೋಡ್ಸೆಗಳ ಪರಂಪರೆಯೇ ಇದೆ ಎಂಬ ಅರಿವೂ ನನ್ನನ್ನು ತಾಗಿ ಮೈಜುಮ್ಮೆನ್ನುವಂತೆ ಮಾಡಿತು. ಪುರೋಹಿತಶಾಹಿಯ ಶೋಷಣಾತ್ಮಕ ಮೌಢ್ಯಾಚರಣೆಗಳ ವಿರುದ್ಧ ಅಂದೋಲನವನ್ನೇ ನಡೆಸಿದ್ದ ನರೇಂದ್ರ ಧಾಭೋಳ್ಕರ್ ಕೊಲೆಯಾಗಿ ಒಂದು ವರ್ಷ ಕಳೆದಿದ್ದರೂ ಹಂತಕರ ಸುಳಿವಿಲ್ಲ! ಈಗ ಗೋವಿಂದ ಪನ್ಸಾರೆಯವರ ಕೊಲೆಯ ನಿಗೂಢತೆ ಕೂಡ ಗಾಬರಿ ಹುಟ್ಟಿಸುವಂತಿದೆ. ನಾನು ಓದಿದ ಪತ್ರಿಕೆಯ ಪ್ರಕಾರ ಪನ್ಸಾರೆಯವರ ಕೊಲೆಗೆ ಮೂಲ ಕಾರಣ, ಅವರು ಮುಂಬೈನ ೨೬/೧೧ ದುರಂತದಲ್ಲಿ ಮಹಾರಾಷ್ಟ್ರದ ಭಯೋತ್ಪಾದನಾ ನಿಗ್ರಹ ದಳದ ನಿರ್ದೇಶಕ ಹೇಮಂತೆ ಕರ್ಕರೆಯವರು ಸಾವನ್ನಪ್ಪಿದ ರಹಸ್ಯವನ್ನು ಬೇಧಿಸುವ ಕೆಲಸದಲ್ಲಿ ನಿರತರಾಗಿದ್ದರು. ಆ ಬಗ್ಗೆ ಒಂದು ಕಿರುಪುಸ್ತಕವನ್ನೂ ಅವರು ಸಿದ್ಧಪಡಿಸಿದ್ದರು. ಇದು ಹಿಂದೂ ಮೂಲಭೂತವಾದಿಗಳ ಸಿಟ್ಟಿಗೆ ಕಾರಣವಾಗಿತ್ತು.

ಏಕೆಂದರೆ, ಹೇಮಂತ್ ಕರ್ಕರೆ ನೂರಾರು ಪಾಕಿಸ್ತಾನಿ ಮುಸ್ಲಿಂ ಪ್ರವಾಸಿಗರ ಸಾವಿಗೆ ಕಾರಣವಾಗಿದ್ದ ಸಂಝೋತಾ ಎಕ್ಸ್‌ಪ್ರೆಸ್ ದುರಂತ ಮತ್ತು ಮಾಲೆಗಾಂವ್ ಸ್ಫೋಟದ ಹಿಂದಿದ್ದ ಹಿಂದೂ ಮೂಲಭೂತವಾದಿ ಸಂಘಟನೆಗಳ ಕೈವಾಡವನ್ನು ಬೇಧಿಸಿ ಪ್ರಜ್ಞಾ ಸಿಂಗ್ ಸೇರಿದಂತೆ ಅವುಗಳ ಹಲವು ಕಾರ್ಯಕರ್ತರನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಿದ್ದರು. ವಿಚಾರಣೆ ನಿರ್ಣಾಯಕ ಘಟ್ಟ ತಲುಪಿದ್ದಾಗ ೨೬/೧೧ರ ಘಟನೆಯಲ್ಲಿ ಕರ್ಕರೆಯವರ ಸಾವು ನಿಗೂಢವಾಗಿ ಸಂಭವಿಸಿತು. ಈ ಸಾವಿಗೆ ಕಸಬ್‌ನ ಸಹಚರರು ಕಾರಣ ಎಂದು ಚಿತ್ರಿಸಲಾಯಿತಾದರೂ, ಅದು ನಡೆದಿರುವುದು ಮಹಾರಾಷ್ಟ್ರ ಪೋಲೀಸ್ ದಳದಲ್ಲಿರುವ ಹಿಂದೂ ಕೋಮುವಾದಿ ಶಕ್ತಿಗಳಿಂದ ಎಂಬ ಅನುಮಾನ ಆಗಿನಿಂದಲೂ ಇದೆ. ಕರ್ಕರೆಯವರ ಪತ್ನಿ ಕೂಡ ಈ ಬಗ್ಗೆ ದೂರು ಕೊಟ್ಟು, ಗೋಳಾಡಿ ಸುಸ್ತಾಗಿದ್ದಾರೆ.

ಮಹಾರಾಷ್ಟ್ರ ಮೊದಲಿನಿಂದಲೂ ವೈದಿಕ ಪುರೋಹಿತಶಾಹಿಯ ಭದ್ರ ನೆಲೆಯೇ ಆಗಿದೆ. ಈ ಪುರೋಹಿತಶಾಹಿಯ ದಬ್ಬಾಳಿಕೆ ಮತ್ತು ದೌರ್ಜನ್ಯಗಳ

ವಿರುದ್ಧ ದನಿ ಎತ್ತಿದ ಸಂತ ಜ್ಞಾನೇಶ್ವರನಿಗೆ ಅಸಹನೀಯ ತೊಂದರೆ ಕೊಟ್ಟ ಈ ಶಕ್ತಿಗಳು ಸಂತ ತುಕಾರಾಮರನ್ನೂ ನಿಗೂಢವಾಗಿ ಕೊಂದವೆಂಬ ಪ್ರತೀತಿ ಇದೆ. ಏಕೆಂದರೆ ತುಕಾರಾಮರು ಹೇಗೆ ಸತ್ತರು, ಅವರ ಸಮಾಧಿಯಾದರೂ ಎಲ್ಲಿದೆ ಎಂಬುದು ಯಾರಿಗೂ ಗೊತ್ತಿಲ್ಲ! ಬದಲಿಗೆ, ತುಕಾರಾಮರನ್ನು ವೈಕುಂಠದಿಂದ ಬಂದ ಪುಷ್ಪಕ ವಿಮಾನ ಕೊಂಡೊಯ್ದಿತು ಎಂಬ ದಂತಕಥೆಯನ್ನು ಕಟ್ಟಿ ಜನರನ್ನು ನಂಬಿಸಲಾಗಿದೆ. ಇನ್ನು ಜ್ಯೋತಿಬಾ ಫುಲೆ ಮತ್ತು ಅವರ ಪತ್ನಿ ಸಾವಿತ್ರಿ ಬಾಯಿಯವರಿಗೆ ಮಹಾರಾಷ್ಟ್ರದ ಪುರೋಹಿತಶಾಹಿ ನೀಡಿದ ಪ್ರಾಣಾಂತಿಕ ಹಿಂಸೆ ಮತ್ತು ಕಿರುಕುಳ ಇತ್ತೀಚಿನ ಇತಿಹಾಸವಾಗಿದೆ. ಇನ್ನೂ ಇತ್ತೀಚಿನ ಇತಿಹಾಸವೆಂದರೆ, 'ಸ್ವಾತಂತ್ರ್ಯ ನನ್ನ ಜನ್ಮ ಸಿದ್ಧ ಹಕ್ಕು' ಎಂದು ಘೋಷಿಸಿ ಬಿಟಿಷ್ ಪ್ರಭುತ್ವದ ವಿರುದ್ಧ ಸಮರ ಸಾರಿ ಅಪ್ರತಿಮ ದೇಶಭಕ್ತರೆಂದು ಪ್ರಸಿದ್ಧರಾದ ಬಾಲಗಂಗಾಧರ ತಿಲಕರು ಶೂದ್ರರು ಮತ್ತು ಮಹಿಳೆಯರಿಗೆ ಶಾಲಾ ಪ್ರವೇಶವನ್ನು ನಿಷೇಧಿಸಬೇಕೆಂದು ನಡೆಸಿದ ದೀರ್ಘ ಸಾರ್ವಜನಿಕ ಮತ್ತು ನ್ಯಾಯಾಂಗ ಹೋರಾಟ! ಇನ್ನು ಈ ಪರಂಪರೆಯ ನಿರ್ಣಾಯಕ ಸಾಕ್ಷಿಯಾಗಿ, ಗಾಂಧಿ ಕೊಲೆ ಏಕೆ ಮತ್ತು ಯಾರಿಂದಾಯಿತು ಎಂಬ ಚರಿತ್ರೆ ಇದ್ದೇ ಇದೆ. ಅದಕ್ಕಿಂತ ಮುಖ್ಯವಾಗಿ ಈ ಧರ್ಮಲಂಡ ಕೊಲೆಗಾರ ಪರಂಪರೆ ಇನ್ನೂ ಜೀವಂತವಿದೆ ಮತ್ತು ಹೆಚ್ಚೆಚ್ಚು ಪರಿಣಿತಿಯನ್ನು ಸಾಧಿಸುತ್ತಿದೆ ಎಂಬುದು ಗಾಬರಿ ಹುಟ್ಟಿಸುವ ಸಂಗತಿಯಾಗಿದೆ.

ದಾಭೋಳ್ಕರ್ ಮತ್ತು ಪನ್ಸಾರೆಯವರ ಕೊಲೆಯನ್ನು ಎಷ್ಟು ಪರಿಪೂರ್ಣವಾಗಿ ನಿಯೋಜಿಸಿ ಎಸಗಿದ್ದಾರೆಂದರೆ, ಅವನ್ನು ಬೇಧಿಸಲು ಯಾವ ಸುಳಿವೂ ಪೋಲೀಸರಿಗೆ ಇನ್ನೂ ಸಿಗದಾಗಿದೆ. ಕೊಲೆಯ ನಿರ್ವಹಣೆಯನ್ನು ಇಷ್ಟು ಪರಿಪೂರ್ಣವಾಗಿ ಸಿದ್ಧಿಸಿಕೊಂಡಿರುವ ಈ ಮತೀಯ ಮೂಲಭೂತವಾದಿಗಳು ಗಾಂಧಿ ಕೊಲೆಯ ನಂತರ ಹಿಂದೂತ್ವದ ಪಠ್ಯದ ಭಾಗವಾಗಿಯೇ ಏನೋ ಹತ್ಯೆಯ ವಿದ್ಯೆಯಲ್ಲಿ ಪರಿಪೂರ್ಣ ಕೌಶಲ್ಯವನ್ನು ಸಾಧಿಸಿರುವಂತೆ ತೋರುತ್ತಿದೆ. ಈಗ ಹೇಳಿ, ಸಾರ್ವಜನಿಕ ಬದುಕಿನಲ್ಲಿ ಧರ್ಮವೆಂದರೆ ನಿಜವಾಗಿ ಮತ್ತು ನಿರ್ಣಾಯಕವಾಗಿ ಏನು?

ಈ ಪ್ರಶ್ನೆ ಇಂದು ರಾಷ್ಟ್ರಾದ್ಯಂತ ಎಲ್ಲ ಕಡೆ ಹಲವು ನೆಲೆಗಳಲ್ಲಿ ಮಾರ್ದನಿಸುತ್ತಿದೆ. ಗುಜರಾತ್‌ನ ಗಾಂಧಿ ವಿದ್ಯಾಪೀಠ, ಗಾಂಧಿ ಸಾಹಿತ್ಯ ಪ್ರಕಟಣಾ ಸಂಸ್ಥೆ ನವಜೀವನ ಟ್ರಸ್ಟ್ ಮತ್ತು ಸಬರ್ಮತಿ ಆಶ್ರಮವೂ ಸೇರಿದಂತೆ ರಾಷ್ಟ್ರದ ಎಲ್ಲ ಶೈಕ್ಷಣಿಕ ಮತ್ತು ಸಂಶೋಧನಾ ಮಂಡಳಿಗಳನ್ನೂ–ಚಲಚಿತ್ರ ಸೆನ್ಸಾರ್ ಮಂಡಳಿಯೂ ಸೇರಿದಂತೆ–ಧರ್ಮದ ಈ ಸಾರ್ವಜನಿಕೀಕರಣದ ಶಕ್ತಿಗಳ ಕೈಗೆ ಒಪ್ಪಿಸಲಾಗಿದೆ. ಇದರ ಉದ್ದೇಶ, ತನ್ನೆಲ್ಲ ಕೃತ್ಯಗಳನ್ನೂ ನೀತಿ ನಿರಪೇಕ್ಷಗೊಳಿಸಿ ಅವುಗಳ ಪರವಾದ ಸಾರ್ವಜನಿಕ ಸಮ್ಮತಿಯನ್ನು ಉತ್ಪಾದಿಸಲು ಸೂಕ್ತವಾದ ಮಾನಸಿಕ ವಾತಾವರಣವನ್ನು ಸೃಷ್ಟಿಸುವುದೇ ಆಗಿದೆ. ಹಾಗಾಗಿಯೇ ವೆಂಡರ್‌ಳ ಹಿಂದೂ ಧರ್ಮ ಕುರಿತ ಪುಸ್ತಕದ ನಿಷೇಧವನ್ನು ಸಂಸ್ಕೃತಿ ರಕ್ಷಣೆಯ ಹೆಸರಿನಲ್ಲಿ ಕ್ಷಮಿಸಿಬಿಡುತ್ತೇವೆ, ಪೆರುಮಾಳ್ ಮುರುಗನ್ 'ನಾನು ಸತ್ತೆ' ಎಂದರೆ, 'ಅದು ನಿನ್ನ ಆಯ್ಕೆ' ಎಂದು

ಸುಮ್ಮನಿದ್ದುಬಿಡುತ್ತೇವೆ; 'ಡಾಟರ್ ಆಫ್ ಇಂಡಿಯಾ' ಸಾಕ್ಷ್ಯಚಿತ್ರದ ನಿಷೇಧವನ್ನು ದೇಶಭಕ್ತಿಯ ಹೆಸರಲ್ಲಿ ಸಮರ್ಥಿಸುತ್ತೇವೆ. ಗೋಮಾಂಸದ ಜೊತೆಗೆ ಎಲ್ಲ ರೀತಿಯ ಪಶುಮಾಂಸದ ನಿಷೇಧದಿಂದ ಜನಸಾಮಾನ್ಯರ ಆಹಾರ ಪದ್ಧತಿ ಮತ್ತು ಹಕ್ಕಿಗೆ ಕುತ್ತು ಬಂದಿದ್ದರೂ, ಅದು ಬಹುಸಂಖ್ಯಾತರ ಭಾವನಾತ್ಮಕತೆಯ ಪ್ರಶ್ನೆ ಎಂದು ಅದನ್ನು ಪ್ರಜಾಪ್ರಭುತ್ವೀಕರಿಸಿ ಒಪ್ಪಿಬಿಡುತ್ತೇವೆ. ಅಲ್ಲಾ, ನಾವು ಎತ್ತ ಸಾಗುತ್ತಿದ್ದೇವೆ? ನಮಗೆ ಮೈಮೇಲೆ ಎಚ್ಚರವಿದೆಯೇ? ಕೇಳಿಕೊಳ್ಳುವ ಕಾಲ ಬಂದಿದೆ ಅನಿಸುವುದಿಲ್ಲವೇ?

ಜೂನ್, ೨೦೧೫

ನೀನಾಸಂ ವಿದ್ಯಾರ್ಥಿಗಳ ಎರಡು ವಿಶಿಷ್ಟ ರಂಗಪ್ರಯೋಗಗಳು

ಹೆಗ್ಗೋಡಿನ ನೀನಾಸಂನ ರಂಗಶಿಕ್ಷಣ ಕೇಂದ್ರದ ೨೦೧೪-೧೫ನೇ ಸಾಲಿನ ವಿದ್ಯಾರ್ಥಿಗಳು ಕಳೆದ ಮೇ ೧೧ರಿಂದ ೧೪ರವರೆಗೆ ತಮ್ಮ ಪಠ್ಯಕ್ರಮದ ಭಾಗವಾಗಿ ಅಭ್ಯಾಸ ಮಾಡಿದ ಐದು ವಿಭಿನ್ನ ರಂಗಪ್ರದರ್ಶನಗಳನ್ನು ಸಾರ್ವಜನಿಕರಿಗೆ ನೀಡಿದರು. ಅವುಗಳಲ್ಲಿ ನಾನು ನೋಡಿದ ಎರಡು ಪ್ರದರ್ಶನಗಳ ಬಗ್ಗೆ ಇಲ್ಲಿ ಬರೆಯುತ್ತಿದ್ದೇನೆ.

ಮೊದಲನೆಯದು, ೧೧ರಂದು ಪ್ರದರ್ಶಿತವಾದ ಹಳೆಗನ್ನಡ ಮತ್ತು ಹೊಸಗನ್ನಡ ಕಾವ್ಯ ಭಾಗಗಳನ್ನು ಸಂಕಲಿಸಿದ ರಂಗಪ್ರಯೋಗ: 'ಕವಿತೆ ಅಂದರೆ ಏನರಿ? ವಿನಯ ವಿಸ್ಮಯ ವೈಖರಿ!' ಈ ವಿನೂತನ ಪ್ರಯೋಗದ ಮೊದಲ ಭಾಗದಲ್ಲಿ ಪಂಪ, ರನ್ನ, ನಾಗಚಂದ್ರ, ರಾಘವಾಂಕ, ಕುಮಾರವ್ಯಾಸ, ಲಕ್ಷೀಶ ಮತ್ತು ನರಹರಿಯ ಕಾವ್ಯದ ಆಯ್ದ ಭಾಗಗಳನ್ನೂ ಹಾಗೂ ಅಕ್ಕನ ಒಂದು ವಚನವನ್ನೂ ವಿವಿಧ ಲಯ ವಿನ್ಯಾಸಗಳಲ್ಲಿ ಅಭಿನಯಿಸಿ ತೋರುವ ಪ್ರಯತ್ನ ಮಾಡಿದರು. ವಿದ್ಯಾರ್ಥಿಗಳ ಬಾಯಿಂದ ಹಳೆಗನ್ನಡ ಅಸ್ಖಲಿತವಾಗಿ ಮೂಡಿಬಂದುದು ನಿರ್ದೇಶಕ ವೆಂಕಟರಮಣ ಐತಾಳರ ಒಂದು ಸಾಧನೆಯೇ ಎನಿಸಿದರೂ, ಆ ಅಸ್ಖಲಿತತೆಯಲ್ಲಿ ಅರ್ಥದೀಪ್ತಿ ಕಾಣದಿದ್ದುದು ನಿರಾಶೆಯನ್ನುಂಟುಮಾಡಿತೆಂದೇ ಹೇಳಬೇಕು. ಜೊತೆಗೆ ಐತಾಳರ ಪ್ರಯೋಗಗಳಲ್ಲಿ ಯಕ್ಷಗಾನ, ಕಥಕ್ಕಳಿ, ಕಲರಿ ಪಟ್ಟು ಇತ್ಯಾದಿ ಕರಾವಳಿ ಕುಣಿತಗಳ ಲಯಗಾರಿಕೆಯ ಏಕತಾನತೆ ಕಾಣತೊಡಗಿದೆ. ಅವರು ಹುಲಿವೇಷ, ತಮ್ಮಟೆ, ಸೋಮನ ಕುಣಿತ, ಕಂಸಾಳೆ ಇತ್ಯಾದಿ ಬಯಲುಸೀಮೆಯ ಲಯಗಳ ಕಡೆ ಗಮನ ಹರಿಸಿದರೆ ಅವರ ಇಂತಹ

ಪ್ರಯೋಗಗಳು ಇನ್ನಷ್ಟು ಕಳೆಕಟ್ಟಬಲ್ಲವು.

ಎರಡನೇ ಭಾಗ ಕೆ.ವಿ. ಅಕ್ಷರ ಮತ್ತು ಮಂಜು ಕೊಡಗು ನಿರ್ದೇಶಿಸಿದ ಹೊಸಗನ್ನಡ ಪದ್ಯಗಳನ್ನು ಆಧರಿಸಿದ್ದು, ಇದರಲ್ಲಿ ಬೇಂದ್ರೆ, ಕೆಎಸ್‌ನ, ಪ್ರತಿಭಾ, ರಾಮಾನುಜನ್, ಎಕ್ಕುಂಡಿ, ಶಿವಪ್ರಕಾಶ್, ಸಿದ್ದಲಿಂಗಯ್ಯ, ಅಡಿಗ, ಪಂಜೆಯವರ ಪದ್ಯಗಳನ್ನು ರಂಗರೂಪಗಳಿಗೆ ಅಳವಡಿಸುವ ಪ್ರಯತ್ನ ಮಾಡಲಾಗಿತ್ತು. ಇವುಗಳಲ್ಲಿ ಗಮನ ಸೆಳೆದವುಗಳೆಂದರೆ ಎಕ್ಕುಂಡಿಯವರ 'ನಾಗಿಯ ಕಥೆ' ಮತ್ತು ಪಂಜೆಯವರ 'ತೆಂಕಣಗಾಳಿಯಾಟ'. 'ನಾಗಿಯ ಕಥೆ'ಯಂತೂ ಪದ್ಯದ ತನ್ನ ಸರಳ ಲಯಗಾರಿಕೆ ಹಾಗೂ ಚಿತ್ರವತ್ತಾದ ಕಲ್ಪನಾಶೀಲತೆ ಮತ್ತು ಅದಕ್ಕೆ ಹೊಂದುವ ಹದವರಿತ ನಿಧಾನ ಚಲನೆ ಹಾಗೂ ಕರುಣರಸ ಜಿನುಗುವ ನಿವೇದನಾ ಶೈಲಿಯಿಂದ ಪ್ರೇಕ್ಷಕರ ಎದೆಮುಟ್ಟಿತು. ಇನ್ನು ಪಂಜೆಯವರ ಪದ್ಯ ಇದಕ್ಕೆ ವಿರುದ್ಧವಾಗಿ, ಪದ್ಯದ ವಸ್ತುವಿಗೆ ತಕ್ಕಂತೆ ರಭಸದ ಚಲನಾವಿನ್ಯಾಸಗಳು ಆವೇಗಪೂರ್ಣವಾದ ಗೀತಗಾರಿಕೆಯಿಂದಾಗಿ ಪರಿಣಾಮಕಾರಿ ಎನಿಸಿತು. ಪ್ರತಿಭಾರ ಪದ್ಯ 'ನಾವು ಹುಡುಗಿಯರೇ ಹೀಗೆ' ತನ್ನ ಸರಳ ವಿನ್ಯಾಸ ಮತ್ತು ನಿರೂಪಣೆಯಿಂದಾಗಿಯೇ ಪದ್ಯದಲ್ಲಿನ ವ್ಯಂಗ್ಯವನ್ನು ಹದವಾಗಿ ಹೊರಹೊಮ್ಮಿಸುವಲ್ಲಿ ಯಶಸ್ವಿಯಾಯಿತು. ಶಿವಪ್ರಕಾಶರ 'ಸಿಂಹಾವಲೋಕನ' ಅತಿ ನಾಟಕೀಯತೆಯಿಂದ ಸ್ವಲ್ಪ ಸ್ಥೂಲವೆನಿಸಿದರೆ, ಸಿದ್ಧಲಿಂಗಯ್ಯನವರ 'ಸಾವಿರಾರು ನದಿಗಳು' ಸೇನಾಗೀತೆಯ ಮಟ್ಟಿಗೆ ಬಿದ್ದು ಹಾಡಿನೊಳಗಿನ ಅದ್ಭುತ ಚಲನೆಗಳು ಮತ್ತು ಚಿತ್ರವತ್ತತೆಗಳು ಅನ್ಯಾಯಕ್ಕೊಳಗಾದವು ಎನಿಸಿತು. ಅಡಿಗರ ಮತ್ತು ರಾಮಾನುಜನ್‌ರ ಪದ್ಯಗಳು ರಂಗಪ್ರಸ್ತುತಿಗೆ ಹೊಂದಿಲ್ಲದಂತಿದ್ದು, ಅಡಿಗರ 'ಸಾಮಾನ್ಯನಂತೆ ನಾನು' ಪದ್ಯದ ವಾಚನ ನಟರು ವೇದಿಕೆ ಮುಂದೆ ಬಂದು ಬೈದು ಬೈದು ಹೋದಂತಿದ್ದರೆ, ರಾಮಾನುಜನ್‌ರ ಪದ್ಯ 'ಪಿತ್ರಾರ್ಜಿತ'ದ ವ್ಯಂಗ್ಯ ಅತಿ ನಟನೆಯಲ್ಲಿ ಕಳೆದೇ ಹೋಯಿತು. ಇನ್ನು ಬೇಂದ್ರೆಯವರ 'ಭಾವಗೀತ' ಮತ್ತು ಕೆಎಸ್‌ನರ 'ಕನಕ' ಅವುಗಳ ಪಥ್ಯಕ್ಕೆ ಸಲ್ಲದ ವಾಚನ ಶೈಲಿಗಳಿಂದಾಗಿ ಅವುಗಳ ಕಾವ್ಯಮಯತೆಗೇ ಘಾಸಿಯಾದೆಂತೆನಿತು.

ಅದೇನೇ ಇರಲಿ, ರಂಗಶಿಕ್ಷಣಾರ್ಥಿಗಳಿಗೆ ಕನ್ನಡ ಕಾವ್ಯಪರಂಪರೆಯೊಂದಿಗೆ ಮುಖಾಮುಖಿ ಮಾಡಿ ಅದರ ರುಚಿ ಹತ್ತಿಸಲು ನಡೆಸಿರುವ ಈ ಪ್ರಯೋಗ ನೀನಾಸಂನ ಸಾಂಸ್ಕೃತಿಕ ಸೃಜನಶೀಲತೆ ಮತ್ತು ಸಾಹಸಶೀಲತೆಗೆ ಸಾಕ್ಷಿಯೆನಿಸಿತು. ಸಂಬಂಧಪಟ್ಟ ಕರಪತ್ರದಲ್ಲಿ ಶಿಕ್ಷಣಾರ್ಥಿಗಳು 'ಕಾವ್ಯ ಅಂದರೆ ಏನರಿ?' ಎಂಬ ಪ್ರಶ್ನೆಗೆ ದಾಖಲಿಸಿರುವ ಉತ್ತರಗಳು ಸಾಕಷ್ಟು ಸ್ವಾರಸ್ಯಕರವೂ, ಕುತೂಹಲಕಾರಿಯೂ ಆಗಿದ್ದು ನೀನಾಸಂನ ಈ ಪ್ರಯತ್ನ ಶಿಕ್ಷಣಾರ್ಥಿಗಳ ನೆಲೆಯಿಂದಲೂ ಸಾರ್ಥಕವಾದಂತೆ ಕಾಣುತ್ತದೆ. ಆದರೆ ಈ ಕಾವ್ಯಭಾಗಗಳ ಮತ್ತು ಪದ್ಯಗಳ ಆಯ್ಕೆಯ ಮಾನದಂಡದ ಅಸ್ಪಷ್ಟತೆ ಈ ಪ್ರಯೋಗಕ್ಕೊಂದು ದೃಷ್ಟಿಕೇಂದ್ರವಿಲ್ಲದಂತೆ ಮಾಡಿದೆ. ಇದರಿಂದಾಗಿಯೇ, ಮೊದಲ ಭಾಗದಲ್ಲಿ ರಗಳೆಯ ಒಂದು ತುಣುಕಾದರೂ ಇಲ್ಲದಿದ್ದುದು ಮತ್ತು ಎರಡನೇ ಭಾಗದಲ್ಲಿ ಕುವೆಂಪು ಕಾಣೆಯಾಗಿದ್ದುದು ಏಕೆಂದು ಗೊತ್ತಾಗಲಿಲ್ಲ.

೧೩ರಂದು ಪ್ರದರ್ಶಿತವಾದದ್ದು ಕಂಪನಿ ಶೈಲಿಯ ಪೌರಾಣಿಕ ನಾಟಕ, 'ಕುರುಕ್ಷೇತ್ರ' ಬಿ. ಪುಟ್ಟಸ್ವಾಮಯ್ಯ, ಪಿ. ವಜ್ರಪ್ಪ, ಮತ್ತು ಕಲ್ಲೂರ್ ಶ್ರೀನಿವಾಸರ ಪಠ್ಯಗಳ ಜೊತೆ ಕುವೆಂಪು ಅವರ 'ಸ್ಮಶಾನ ಕುರುಕ್ಷೇತ್ರ'ವನ್ನೂ (ಹಾಗೂ ಕೊಟ್ಟೂರಪ್ಪನವರ 'ದಾನಶೂರ ಕರ್ಣ'ದ ಕೆಲ ಭಾಗಗಳನ್ನೂ ಸಹ) ಸೇರಿಸಿ ಒಂದು ರೀತಿಯ ಚೌಚೌ ಭಾತ್‌ಆಗಿ(ರುಚಿಯಲ್ಲೂ!) ಸಿದ್ಧಪಡಿಸಲ್ಪಟ್ಟಿರುವ ಈ ನಾಟಕದ ನಿರ್ದೇಶನ ಮಾಡಿದವರು ಎಂ. ಗಣೇಶ. ಹಳೆಯ ಕನ್ನಡ ನಾಟಕ ಪರಂಪರೆಯನ್ನು ಪ್ರದರ್ಶನ ಮೌಲ್ಯಗಳ ನೆಲಗಟ್ಟಿನಿಂದ ಶಿಕ್ಷಣಾರ್ಥಿಗಳಿಗೆ ಪರಿಚಯಿಸುವ ಪ್ರಯತ್ನದಂತೆ ತೋರಿದ ಈ ಪ್ರಯೋಗ, ಆಧುನಿಕ ನಾಟಕಗಳ ಬೌದ್ಧಿಕ ಏಕತಾನತೆಯಿಂದ ಬೇಸತ್ತಿರುವ ಪ್ರೇಕ್ಷಕರನ್ನು ತನಗೇ ವಿಶಿಷ್ಟವಾದ ರಂಗ ಸಂಗೀತ, ಪ್ರಸಾಧನ, ಅಭಿನಯ ಶೈಲಿ, ಬಣ್ಣ ಬೆಡಗುಗಳಿಂದ ಕೂಡಿದ ತನ್ನ ಸಗಟು ಮನರಂಜನಾ ಮೌಲ್ಯದಿಂದ ಸೆಳೆಯುವಂತಿತ್ತು. ಆದರೆ ಈ ಸಗಟು ಬೆರಕೆಯಲ್ಲಿ ಕುವೆಂಪು ಅವರ ಸೂಕ್ಷ್ಮ ದರ್ಶನ ಬೆರೆಯದೆ ಮೂಲ ಕಂಪನಿ ನಾಟಕದ ವಿಶಿಷ್ಟ ರಸಾಸ್ವಾದನೆಗೆ ಭಂಗ ಉಂಟಾಯಿತೇನೋ ಎನಿಸಿತು.

ಅಂದು ನಾನು ನೋಡಿದ ಈ ಪ್ರದರ್ಶನ ಬಾಲ್ಯದಲ್ಲಿ ನನ್ನ ಬದುಕಿನ ಭಾಗವೇ ಆಗಿ ಹೋಗಿದ್ದ ಪೌರಾಣಿಕ ರಂಗ ಪ್ರದರ್ಶನಗಳಿಗೆ ಹೋಲಿಸಿದರೆ ಅಭಿನಯ ಮತ್ತು ಹಾಡುಗಾರಿಕೆ ಸರಾಸರಿ ಮಟ್ಟದ್ದೆನಿಸಿ, ಒಟ್ಟು ಪರಿಣಾಮದಲ್ಲಿ ಸಾಧಾರಣವೆನಿಸಿತಾದರೂ, ಇದು ಆಧುನಿಕ ರಂಗಶಿಕ್ಷಣದ ಭಾಗವಾಗಿ ಹೊಸ ತಲೆಮಾರಿನ ಶಿಕ್ಷಣಾರ್ಥಿಗಳಿಂದ ಮೂಡಿದ ಒಂದು ಪ್ರಯೋಗವಾಗಿ ಯಶಸ್ವಿಯೆನಿಸಿತು. ನಿರ್ದೇಶಕ ಗಣೇಶರ ಬಾಲ್ಯದ ಬಯಲುಸೀಮೆಯ ರಂಗ ನೆನಪುಗಳು ಇಲ್ಲಿ ಸಾರ್ಥಕವಾಗಿ ಸಾಕಾರಗೊಂಡಿದ್ದವು. ಆಧುನಿಕ ರಂಗಭೂಮಿ ಮತ್ತು ರಂಗ ಶಿಕ್ಷಣಕ್ಕೆ ಈಗ ಸುದೂರವಾಗಿರುವಂತೆ ತೋರುವ ಇಂತಹ ರಂಗಪ್ರಯೋಗಗಳು ಒಂದು ಸ್ಥಗಿತತೆಗೆ ಬಂದಂತಿರುವ ಆಧುನಿಕ ರಂಗ ಭೂಮಿಗೆ ಪ್ರೇಕ್ಷಕನೊಡನೆ ಹೊಸ ನೆಲೆಯ ಸಮೀಕರಣವನ್ನು ಸಾಧಿಸಿಕೊಳ್ಳುವ ಸಂಬಂಧವಾಗಿ ಹೊಸ ಹೊಳಹುಗಳನ್ನು ನೀಡಬಲ್ಲವು ಎಂದು ಈ ಪ್ರಯೋಗವನ್ನು ನೋಡುತ್ತಿದ್ದಾಗ ನನಗನ್ನಿಸಿತು. ಉದಾಹರಣೆಗೆ, ಇದರ ಶೈಲೀಕೃತ ಸಂಭಾಷಣೆ, ಶೈಲೀಕೃತ ಅಭಿನಯ, ದಟ್ಟ ಸಂಗೀತಮಯತೆಗಳು ಇಂದು ಆಧುನಿಕ ರಂಗಪ್ರಯೋಗಗಳಿಗೆ ಹೊಸ ಹುರುಪು ಮತ್ತು ಉಪಾಯಗಳನ್ನು ಒದಗಿಸಬಹುದೆನ್ನಿಸಿತು. ರಂಗಕರ್ಮಿಗಳು ಯೋಚಿಸಲಿ.

●

ಜುಲೈ, ೨೦೧೫

ಶೋಧನೆಯ ಸುಳಿವಿಲ್ಲದ 'ಸತ್ಯಶೋಧಕ'

ಪ್ರೊ. ಜಿ.ಪಿ. ದೇಶಪಾಂಡೆ ವಿರಚಿತ ಮರಾಠಿ ನಾಟಕ 'ಸತ್ಯಶೋಧಕ' ಬಹು ಪ್ರಸಿದ್ಧ ಮತ್ತು ಚರ್ಚಿತವಾದ ನಾಟಕ. ಅದು ಜ್ಯೋತಿಬಾ ಫುಲೆ ದಂಪತಿಗಳ ಚಿಂತನೆ ಮತ್ತು ಹೋರಾಟಗಳನ್ನು ಆಧರಿಸಿದ 'ಕ್ರಾಂತಿಕಾರಿ' ನಾಟಕ. ಇದರ ಕನ್ನಡ ಆವೃತ್ತಿಯನ್ನು ಹೆಗ್ಗೋಡಿನ 'ಜನಮನದಾಟ'ದ ತಂಡ ಇತ್ತೀಚೆಗೆ ಹೆಗ್ಗೋಡಿನ ನೀನಾಸಂ ಸಭಾಂಗಣದಲ್ಲಿ ಪ್ರದರ್ಶಿಸಿತು. ಇದೇ ಪ್ರದರ್ಶನ ರಾಜ್ಯಾದ್ಯಂತ ನಡೆಯಲೂ ಏರ್ಪಾಟಾಗಿದ್ದು ಅದು ಈಗಾಗಲೇ ಹಲವು ಕಡೆ ನಡೆದಿದೆ ಕೂಡ.

'ಸತ್ಯ ಶೋಧಕ' ನಾಟಕದ ಈ ಕನ್ನಡ ಆವೃತ್ತಿಯನ್ನು ನಿರ್ದೇಶಿಸಿರುವವರು ಮೂಲ ಮರಾಠಿ ನಾಟಕವನ್ನು ನಿರ್ದೇಶಿಸಿರುವ ಅತುಲ್ ಪೇಠೆಯವರೇ. ಹಾಗಾಗಿಯೇ ಈ ಕನ್ನಡ ಆವೃತ್ತಿಯಲ್ಲಿ ಮರಾಠಿಯ ಗಮಲು ದಟ್ಟವಾಗಿಯೇ ಇದೆ. ಗಮಲು ಎಂದರೆ ಜನಪ್ರಿಯ ಮರಾಠಿ ರಂಗಸಂಗೀತ ಮತ್ತು ನೃತ್ಯಗಳ ವಿಜೃಂಭಣೆ. ಹಾಗೆ ನೋಡಿದರೆ, ಇದೇ ಈ ನಾಟಕದ ನಿಜ ಆಕರ್ಷಣೆಯೂ ಆಗಿದೆ ಎಂದರೆ ತಪ್ಪಾಗಲಾರದು. ಏಕೆಂದರೆ, ಇದನ್ನು ನಾಟಕವೆಂದು ಕರೆಯಲಾಗಿದ್ದರೂ, ಇದರಲ್ಲಿ ಭರ್ಜರಿ ಎನಿಸುವ ಈ ಹಾಡು–ಕುಣಿತಗಳ ಹೊರತಾಗಿ ನಿಜವಾದ ನಾಟಕವೆನ್ನುವುದು ಹೆಚ್ಚೇನೂ ಇಲ್ಲ.

೧೯ನೇ ಶತಮಾನದಲ್ಲೇ ಜಾತಿ ತಾರತಮ್ಯ, ಸ್ತ್ರೀ ಶೋಷಣೆ ಮತ್ತು ಮೂಢ ನಂಬಿಕೆಗಳ ವಿರುದ್ಧ ಹಾಗೂ ಶೂದ್ರಾತಿಶೂದ್ರರ ಮತ್ತು ಸಕಲ ಜಾತಿ–ಧರ್ಮಗಳ ಸ್ತ್ರೀಯರ ಶಿಕ್ಷಣಕ್ಕಾಗಿ ತೀವ್ರ ಪ್ರತಿಕೂಲ

ವಾತಾವರಣದಲ್ಲಿಯೂ ದೊಡ್ಡ ಹೋರಾಟವನ್ನೇ ಆರಂಭಿಸಿದ ಮತ್ತು ಗೆದ್ದ ಫುಲೆ ದಂಪತಿಗಳ ಬದುಕು ಎಲ್ಲ ಅರ್ಥದಲ್ಲೂ ಕ್ರಾಂತಿಕಾರಿಯಾದದ್ದೇ. ಆದರೆ ಅದು ಇಲ್ಲಿ ತುಣುಕು ತುಣುಕುಗಳಲ್ಲಿ, ತೀರಾ ವಾಚ್ಯವಾಗಿ ಮತ್ತು ಅತಿ ಅಬ್ಬರದೊಂದಿಗೆ ಪ್ರಚಾರಾತ್ಮಕ ಸಾಕ್ಷ್ಯಚಿತ್ರದಂತೆ ಪ್ರಸ್ತುತಗೊಂಡಿದೆ. ಅಂದರೆ, ಇಲ್ಲಿ 'ಒಳ'ನಾಟಕ ಕಡಿಮೆ. 'ಹೊರ'ನಾಟಕವೇ ಜಾಸ್ತಿ. ಫುಲೆ ಶೂದ್ರಾತಿಶೂದ್ರರ ಬದುಕಿನ ಸಕಲ ಸ್ತರಗಳ ಏಳಿಗೆಗಾಗಿ ಎಲ್ಲ ರೀತಿಯ ಸವಾಲುಗಳನ್ನೂ ಎದುರಿಸಿ ಅಖಂಡ ನಿಸ್ಪೃಹತೆಯಿಂದ ಹೋರಾಟ ನಡೆಸಿದರೂ, ಒಂದು ಘಟ್ಟದಲ್ಲಿ ಆ ಶೂದ್ರಾತಿಶೂದ್ರರೇ ಅವರ ವಿರುದ್ಧ ತಿರುಗಿಬಿದ್ದಾಗ ಅವರು ಕೈಗೊಂಡ ಒಂದು 'ಒಳ ಪ್ರಯಾಣ'ದ ದೃಶ್ಯದ ಹೊರತಾಗಿ ಇಡೀ ನಾಟಕ ಮೇಲ್ಮೈಯಲ್ಲೇ ಚಲಿಸಿ ನಮ್ಮನ್ನು ಕಾಡದೇ ಉಳಿದುಬಿಡುತ್ತದೆ. ಅನೇಕ ಬಾರಿ, ಸಿದ್ಧರಾಮಯ್ಯನವರ ಪ್ರಸಕ್ತ 'ಅಹಿಂದ' ರಾಜಕಾರಣಕ್ಕೆ ಪಕ್ಕವಾದ್ಯವಾಗಿ ಈ ಕನ್ನಡ ಆವೃತ್ತಿಯನ್ನು ತಯಾರಿಸಲಾಗಿದೆಯೇನೋ ಎಂಬ ಅನುಮಾನವೂ ಉಂಟಾಗುತ್ತದೆ!

ಅದೇನೇ ಇರಲಿ, ಈ ಎಲ್ಲ ಹೊರ ನಾಟಕದ ಸ್ಥೂಲತೆಯನ್ನು ಮೀರಿ ಇಡೀ ನಾಟಕವನ್ನು ಕೂತು ನೋಡುವಂತೆ ಜೀವಂತವಾಗಿಡುವುದು ಫುಲೆ ದಂಪತಿಗಳ ಪಾತ್ರ ವಹಿಸಿರುವ ಶಕೀಲ್ ಅಹಮದ್ ಮತ್ತು ಸಂಧ್ಯಾ ಅರಕೆರೆಯವರ ಸಂಯಮದ ಮನೋಜ್ಞ ಅಭಿನಯ. ಹಾಗೇ, ನಾಟಕದ ಸೂತ್ರಧಾರರ ಪಾತ್ರ ವಹಿಸಿದ ಡಿಂಗ್ರಿ ನರೇಶ್ ಮತ್ತು ಬಿ.ಸವಿತಾ ಅವರ ವಾಚನಾಭಿನಯವೂ ಉಲ್ಲೇಖಾರ್ಹ. ಜೊತೆಗೇ ಉಲ್ಲೇಖಿಸಬಹುದಾದ ಇನ್ನೊಂದು ಸಂಗತಿ ಎಂದರೆ, ನಾಟಕದ ಒಳ ಕೊರತೆಗಳನ್ನು, ತಮ್ಮ ಪರಿಣಾಮಕಾರಿ ಸಂಗೀತ ಸಂಯೋಜನೆ ಮತ್ತು ಪತ್ರಿಕಾ ವರದಿಯ ಭಾಷೆಯಲ್ಲಿ ರಚಿತವಾಗಿರುವ ಇಲ್ಲಿನ ಹಾಡುಗಳನ್ನು ಮಧುಮಧುರವಾಗಿ ಕೇಳಿಸುವಂತೆ ಮಾಡುವ ಸೃಜನಶೀಲ ಹಾಡುಗಾರಿಕೆಯ ಮೂಲಕ ಹೊರಗಿನಿಂದ ಆದಷ್ಟೂ ತುಂಬಲು ಯತ್ನಿಸಿರುವ ಪುರುಷೋತ್ತಮ ಬಳ್ಳಾರಿಯವರ ಪ್ರಯತ್ನ.

ಡಿ.ಎಸ್. ಚೌಗುಲೆ ಅವರ ಅನುವಾದ ಸಂವಹನಶೀಲವಾಗಿದೆಯಾದರೂ, ಹಾಡುಗಳ ಸಾಹಿತ್ಯಗುಣ ಸುಧಾರಿಸಬಹುದಿತ್ತು ಮತ್ತು ಫುಲೆ ದಂಪತಿಗಳು ಸುಧಾರಣೆಗಳ ಬಗ್ಗೆ ಮಾತಾಡುವಾಗ ಅವರ ಬಾಯಲ್ಲಿ ಇಂದಿನ ಎಡಪಂಥೀಯ ಪಾರಿಭಾಷಿಕ ನುಡಿಗಟ್ಟುಗಳಿಂದ ಕೂಡಿದ ಭಾಷೆಗೆ ಬದಲಾಗಿ ಸರಳ ಆಡುಮಾತುಗಳ ಭಾಷೆಯನ್ನಾಡಿಸಿದ್ದರೆ ಚೆನ್ನಿತ್ತು ಎನ್ನಿಸದಿರದು. ಅತುಲ್ ಪೇತೆಯವರ ನಿರ್ದೇಶನದ ಬಗ್ಗೆ ಹೇಳುವುದಾದರೆ, ಅದು ಸಮಕಾಲೀನ ಮರಾಠಿ ರಂಗಭೂಮಿಯ ಸಾಮಾಜಿಕತೆಯ ಬೆಡಗನ್ನು ಮಾತ್ರ ಪರಿಚಯಿಸಿದಂತಿತ್ತು.

* * *

ಈ ನಾಟಕದ ನಿರ್ಮಾಣವನ್ನು ಪ್ರಾಯೋಜಿಸಿರುವ 'ಜನಮನದಾಟ'ದ ಹಿಂದಿನ ಶಕ್ತಿ ಡಾ. ಎಂ. ಗಣೇಶ್ ನೀನಾಸಂ ರಂಗಶಿಕ್ಷಣ ಕೇಂದ್ರದಲ್ಲಿ ಅಧ್ಯಾಪಕರು.

ಪ್ರತಿಭಾವಂತ ರಂಗನಿರ್ದೇಶಕರು. ಕಡಿಮೆ ಖರ್ಚಿನಲ್ಲಿ ಹೆಚ್ಚು ಪರಿಣಾಮಕಾರಿ ನಾಟಕಗಳನ್ನು ತಯಾರು ಮಾಡುವ ಅಪರೂಪದ ನಿರ್ದೇಶಕರೆಂದೇ ಹೆಸರಾದವರು. ಅವರ ಉಚಲ್ಯ, ಊರುಕೇರಿ, ಗಾಂಧಿ ವರ್ಸಸ್ ಗಾಂಧಿ, ಬದುಕು ಬಯಲು ಮುಂತಾದವು ಇದಕ್ಕೆ ಉದಾಹರಣೆಗಳು. ಅವರು ಈ 'ಸತ್ಯಶೋಧ' ನಾಟಕದ ತಯ್ಯಾರಿ ನಡೆದಿದ್ದಾಗ ನನಗೊಂದು ಕರೆ ಮಾಡಿ ಈ ನಾಟಕ ನಿರ್ಮಾಣಕ್ಕೆ ಒಂದೂವರೆ ಲಕ್ಷ ರೂಪಾಯಿಗಳು ಖರ್ಚಾಗುತ್ತಿದೆ ಎಂದಾಗ ನಾನು ನನ್ನ ಅಸಮಧಾನ ಸೂಚಿಸಿದೆ. ಇಂತಹ ಪ್ರಯೋಗಗಳಿಂದ ನಿಮ್ಮ ಪ್ರತಿಭಾ ವಿಶೇಷತೆಯನ್ನು ಕಳೆದುಕೊಳ್ಳುವಿರಿ ಎಂದು ಎಚ್ಚರಿಸಿದೆ ಕೂಡ.

ಆದರೆ ಗಣೇಶ ಅವರು ಮುಂಬೈನಿಂದ ಬಂದ ನಿರ್ದೇಶಕರು ಮತ್ತು ಅವರ ತಂಡದ ನಿರ್ವಹಣೆಯ ಖರ್ಚಿನ ಅನಿವಾರ್ಯತೆಯನ್ನು ವಿವರಿಸಿದಾಗ, ಸ್ವಲ್ಪ ಸಹಾನುಭೂತಿ ಉಂಟಾಗಿ 'ಹೊಸ ಮನುಷ್ಯ' ಪತ್ರಿಕೆಯ ಪರವಾಗಿ ಗೆಳೆಯರಿಂದ ಒಂದಿಷ್ಟು ಹಣ ಸಂಗ್ರಹಿಸಿ, ಅದಕ್ಕೆ ನಾನೂ ಒಂದಷ್ಟು ಸೇರಿಸಿ ಒಟ್ಟು ಹದಿನೈದು ಸಾವಿರ ರೂಪಾಯಿಗಳನ್ನು ನೀಡಿದೆ. ಈ ನನ್ನ ಸಹಾನೂಭೂತಿಯ ಪ್ರಯತ್ನಕ್ಕೆ ಕೈಜೋಡಿಸಿ ತಮ್ಮ ಶಕ್ತ್ಯಾನುಸಾರ ಹಣ ನೀಡಿದ ಟಿ.ಎಲ್. ರೇಖಾಂಬ, ಟಿ.ಅವಿನಾಶ್, ಬಿ.ಎಸ್. ದಿವಾಕರ್, ಎಂ.ರಾಜು, ಶೇಖರ್ ಗೌಳೇರ್, ಎಂ. ಚಂದ್ರಶೇಖರಯ್ಯ, ನಿಸಾರ್ ಅಹಮದ್, ಮಲ್ಲಿಕಾರ್ಜುನ ಮೇಟಿ, ಸಬಿತಾ ಬನ್ನಾಡಿ, ದಿವಾಕರ ಹೆಗ್ಡೆ, ಸಿರಾಜ್ ಅಹಮದ್ ಮತ್ತು ಎಂ.ರಾಘವೇಂದ್ರ ಅವರಿಗೆ ಪತ್ರಿಕೆಯ ಪರವಾಗಿ ಕೃತಜ್ಞತೆಗಳನ್ನು ತಿಳಿಸಬಯಸುತ್ತೇನೆ.

●

ಸೆಪ್ಟೆಂಬರ್, ೨೦೧೫

ಒಂದು ಅಗಲಿಕೆ ಮತ್ತು ಇಬ್ಬರು ಗೆಳೆಯರ ಪುಸ್ತಕಗಳು

ಗಡಿನಾಡಿನ ಕನ್ನಡ ಕಾವಲುಗಾರನ ಕಣ್ಮರೆ

ಕಾಸರಗೋಡಿನ ಕವಿ ಕಯ್ಯಾರ ಕಿಂಯ್ಞಣ್ಣ ರೈ ಇನ್ನಿಲ್ಲ. ಅವರು ಇನ್ನು ನೆನಪಾಗುವುದು ಅಥವಾ ನೆನಪಿನಲ್ಲಿ ಉಳಿಯುವುದು ಬಹುಶಃ ಕವಿಯಾಗಿ ಅಲ್ಲ. ಏಕೆಂದರೆ ಅವರ ಕವಿತೆಗಳು ಕಾಲದಲ್ಲಿ ಕಳೆದುಹೋಗುವಂತಹವು. ಆದರೆ ತಮ್ಮ ಶತಾಯುಷ್ಯದ ಬದುಕಿನುದ್ದಕ್ಕೂ ಅವರು ತಾವಿದ್ದ ಕಾಸರಗೋಡು ಪ್ರದೇಶದಲ್ಲಿ ಕನ್ನಡದ ಪೋಷಣೆ ಮತ್ತು ಉಳಿವಿಗಾಗಿ ಹಾಗೂ ಅದನ್ನು ಕರ್ನಾಟಕದಲ್ಲಿ ವಿಲೀನಗೊಳಿಸಲು ನಡೆಸಿದ ಹೋರಾಟವನ್ನು ಕನ್ನಡಿಗರು ಮರೆಯುವುದಿಲ್ಲ. ಏಕೆಂದರೆ ಇಂತಹ ಹೋರಾಟ ನಡೆಸಿದ ಕಯ್ಯಾರರು ಹುಟ್ಟಿನಿಂದ ತುಳುವರು; ಇದ್ದುದು ಮಲೆಯಾಳದಲ್ಲಿ. ಆದರೆ ಕನ್ನಡ ನಾಡು-ನುಡಿ ಕುರಿತ ಅವರ ಈ ಬದ್ಧತೆ ಬೆರಗುಗೊಳಿಸುವಂತಹದ್ದು.

ನಾನು ಇದನ್ನೆಲ್ಲ ಇಲ್ಲಿ ನೆನಪಿಸಿಕೊಳ್ಳಲು ಕಾರಣ, ಮೂರು ತಿಂಗಳ ಹಿಂದೆ ನಮ್ಮ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕನ್ನಡ ನಾಡು ನುಡಿಗಳಿಗಾಗಿ ಕ್ರಿಯಾಶೀಲರಾಗಿ ಹೋರಾಡುತ್ತಾ ಬಂದ ಧೀಮಂತರಿಗೆ 'ಸಂಗೊಳ್ಳಿ ರಾಯಣ್ಣ' ಹೆಸರಿನ ಪ್ರಶಸ್ತಿ ನೀಡಲು ಹೆಸರುಗಳನ್ನು ಸೂಚಿಸುವಂತೆ ನನ್ನನ್ನು ಕೇಳಿತ್ತು. ಕಳೆದ ವರ್ಷ ಈ ಪ್ರಶಸ್ತಿಯನ್ನು ವಾಟಾಳ್ ನಾಗರಾಜರಿಗೆ ನೀಡಿದ್ದಾಗಿಯೂ ತಿಳಿಸಿತ್ತು. ಪ್ರಶಸ್ತಿ ದೊಡ್ಡ ಮೊತ್ತದ ನಗದನ್ನೂ ಒಳಗೊಂಡಿದ್ದರಿಂದ ನಾನು ಸಾಕಷ್ಟು ಯೋಚಿಸಿ ಮೂರು ಹೆಸರುಗಳನ್ನು ಸೂಚಿಸಿದೆ.

ಮೊದಲನೆಯದು ಕಯ್ಯಾರರದ್ದಾದರೆ, ಮಿಕ್ಕೆರಡು ಡಾ. ಪಾಟೀಲ ಪುಟ್ಟಪ್ಪ ಮತ್ತು ಡಾ. ಚಿದಾನಂದಮೂರ್ತಿಯವರದ್ದಾಗಿತ್ತು. ಆದರೆ ಇಲಾಖೆ ಈ ಪ್ರಶಸ್ತಿಯನ್ನು ಘೋಷಿಸಿದ್ದು ಯಾರಿಗೆ ಗೊತ್ತೆ? ಶ್ರೀಮತಿ ಬಿ.ಟಿ. ಲಲಿತಾ ನಾಯಕರಿಗೆ! ನನ್ನ ಅಭಿಪ್ರಾಯದಲ್ಲಿ ಇವರಿಗೆ ಈ ಪ್ರಶಸ್ತಿ ಕೊಡುವುದಾದರೆ, ಅದಕ್ಕೆ ಮುನ್ನ ಕನಿಷ್ಠ ೨೫ ಜನರಿಗೆ ಈ ಪ್ರಶಸ್ತಿಯನ್ನು ನೀಡಬೇಕಾಗುತ್ತದೆ!

ಸಾಮಾಜಿಕ ನ್ಯಾಯದ ಹೆಸರಿನಲ್ಲಿ ಈ ಸರ್ಕಾರ ಮಾಡುವ ಅನ್ಯಾಯಗಳಿಗೆ ಎಣೆಯೇ ಇಲ್ಲವೆಂದು ಕಾಣುತ್ತದೆ.

'ಲಂಕೇಶ್, ಇಂತೀ ಕೆಲವು ಪ್ರಶ್ನೆಗಳು...!'

ಗೆಳೆಯ ಎನ್.ಎಸ್. ಶಂಕರ್ ಲಂಕೇಶರನ್ನು ಕುರಿತಂತೆ 'ಲಂಕೇಶ್; ಇಂತಿ ಕೆಲ ಪ್ರಶ್ನೆಗಳು...!' ಎಂಬ ಒಂದು ಪುಟ್ಟ ಪುಸ್ತಕವನ್ನು ಹೊರತಂದಿದ್ದಾರೆ. ಪುಸ್ತಕದ ಶೀರ್ಷಿಕೆಯೇ ಸೂಚಿಸುವಂತೆ ಈ ಪುಸ್ತಕ ನಟರಾಜ ಹುಳಿಯಾರ್ ಅವರು ಲಂಕೇಶ್ ಮತ್ತು ಡಿ.ಆರ್. ನಾಗರಾಜ್‌ರ ಬಗ್ಗೆ ಬರೆದ 'ಇಂತೀ ನಮಸ್ಕಾರಗಳು' ಪುಸ್ತಕಕ್ಕೆ ನೀಡಿದ ಒಂದು ಪ್ರತಿಕ್ರಿಯೆಯೂ ಆಗಿದ್ದು (ಇದನ್ನು ಪುಸ್ತಕದಲ್ಲಿ ಪದೇ ಪದೇ ನಿರಾಕರಿಸಲಾಗಿದೆಯಾದರೂ!) ಲಂಕೇಶರ ವ್ಯಕ್ತಿತ್ವ ಮತ್ತು ಸಾಹಿತ್ಯ ಕುರಿತಂತೆ ಹುಳಿಯಾರರು ಮಾಡಿರುವ ಹಲವು ವ್ಯಾಖ್ಯಾನಗಳನ್ನು ಪ್ರಶ್ನಿಸುತ್ತಾ ತಮ್ಮದೇ ಮಾತುಗಳನ್ನೂ ಆಡುತ್ತಾರೆ. ಶಂಕರ್ ಮತ್ತು ನಟರಾಜ್ ಒಂದು ಕಾಲದಲ್ಲಿ ಲಂಕೇಶರೊಂದಿಗೆ ಅವರ ಪತ್ರಿಕೆಯಲ್ಲಿ ಒಟ್ಟಿಗೆ ಕೆಲಸ ಮಾಡಿದವರಾದ್ದರಿಂದ ಶಂಕರ್ ಅವರ ಬರವಣಿಗೆಗೊಂದು ಸಾಂದರ್ಭಿಕ ಅಥೆಂಟಿಸಿಟಿಯೂ ಒದಗಿದೆ. ಶಂಕರ್ ಅವರ ಪ್ರಕಾರ ಮುಖ್ಯವಾಗಿ ಲಂಕೇಶರ ಒಡೆದ ವ್ಯಕ್ತಿತ್ವ, ಮೀಸಲಾತಿ ಕುರಿತ ಅವರ ಬದ್ಧತೆ, ಮನುಷ್ಯ ಮೂಲತಃ *ಈವಿಲ್* ಎಂಬ ಅವರ ನಂಬಿಕೆ – ಇವುಗಳನ್ನು ನಟರಾಜ್‌ರು ಆರಾಧನೆಯ ಮಳೆಯಲ್ಲಿ ತೊಯ್ದು ತಮ್ಮ ತುಂಬ ಸರಳೀಕೃತ ಮತ್ತು ಒಂದು ರೀತಿಯಲ್ಲಿ ರೋಚಕವೆನ್ನಬಹುದಾದ ಶೈಲಿಯ ಬರವಣಿಗೆಯ ಕಾರಣದಿಂದಾಗಿ ವೈಭವೀಕರಿಸಿದ್ದಾರೆ. ಆದರೆ ಅವುಗಳ ಪ್ರಾಮಾಣಿಕ ಮತ್ತು ನಿಷ್ಠುರ ಶೋಧನೆ ಲಂಕೇಶರ ವ್ಯಕ್ತಿತ್ವದ ದೌರ್ಬಲ್ಯಗಳನ್ನು ಹೊರಹಾಕಬಲ್ಲುದು ಎಂದು ಶಂಕರ್ ಹಲವು ಉದಾಹರಣೆಗಳ ಮೂಲಕ ವಾದಿಸುತ್ತಾರೆ.

ಹುಳಿಯಾರ್ ಮತ್ತು ಶಂಕರ್‌ರ ವಾದಗಳನ್ನು ಇಲ್ಲಿ ವಿವರವಾಗಿ ಪರಿಶೀಲಿಸಲು ಸಾಧ್ಯವಿಲ್ಲವಾದ್ದರಿಂದ, ನಾನೂ ಈ ಇಬ್ಬರಿಗಿಂತ ಬಹು ಮುಂಚೆ ಲಂಕೇಶರೊಂದಿಗೆ ಅವರ ಪತ್ರಿಕೆಗಾಗಿ ಕೆಲಸ ಮಾಡಲು ಹೆಣಗಿದವನಾಗಿ ಈ ಸಂಬಂಧ ಈ ಒಂದು ಮಾತನ್ನು ಹೇಳಬಲ್ಲೆ: ಲಂಕೇಶ್‌ರನ್ನು ಓರ್ವ ಲೇಖಕರಾಗಿ ಮತ್ತು ಓರ್ವ ಪತ್ರಕರ್ತರಾಗಿ ಒಟ್ಟಿಗೇ ಹಿಡಿದು ನೋಡಲು, ತೀರ್ಮಾನಗಳನ್ನು ಹೇಳಲು ಸಾಧ್ಯವಿಲ್ಲ. ಏಕೆಂದರೆ ಲೇಖಕ ಮಾಡುವ ಶೋಧನೆಯ ನೆಲೆಗಳೇ ಬೇರೆ ಮತ್ತು ಅದರ ಪರಿಶೀಲನೆಯ ನೆಲೆಗಳೇ ಬೇರೆ. ಹಾಗೇ ಪತ್ರಕರ್ತನ ಶೋಧನೆಯ ನೆಲೆಗಳೂ,

ಅದರ ಪರಿಶೀಲನೆಯ ನೆಲೆಗಳೂ. ಈ ದೃಷ್ಟಿಯಿಂದ ಹೇಳುವುದಾದರೆ, ಕಥೆಗಾರನಾಗಿ, ನಾಟಕಕಾರನಾಗಿ ಲಂಕೇಶ್ ನಡೆಸಿರುವ ಜೀವನ ಶೋಧನೆಯ ನೆಲೆಗಳ ಬಗ್ಗೆ ಹಲವು ತಕರಾರುಗಳನ್ನು ಎತ್ತಬಹುದಾದರೂ, ಅದರ ಪ್ರಾಮಾಣಿಕತೆಯನ್ನು ಪ್ರಶ್ನಿಸುವುದು ಕಷ್ಟ. ಆದರೆ ಇದೇ ಮಾತನ್ನು ಅವರ ಪತ್ರಕರ್ತತನದ ಬಗ್ಗೆ ಹೇಳಲಾಗದು. ಲಂಕೇಶ್, ನನಗೆ ಅನಿಸಿದಂತೆ, ಸ್ಥಗಿತತೆಗೆ ಬಂದಂತಿದ್ದ ತಮ್ಮ ಸೃಜನಶೀಲತೆಯನ್ನು ಪುನರ್ಶ್ಚೇತನಗೊಳಿಸಿಕೊಳ್ಳುವ ಒಂದು ಪ್ರಯತ್ನವಾಗಿ ಆರಂಭಿಸಿದ ಹವ್ಯಾಸಿ ಪತ್ರಕರ್ತತನ, ಅದು ಯಶಸ್ವಿ ವೃತ್ತಿಯಾಗಿ ಹಣದ ರಾಶಿ ತರುತ್ತಿದ್ದಂತೆ ಅವರು ದಾರಿ ತಪ್ಪಿದರು. ಅದು–ದೈಹಿಕ ಅಸ್ವಸ್ಥತೆ ಮತ್ತು ಸಾವಿನ ನೆರಳು ಬಿದ್ದು–ಅವರಿಗೆ ಗೊತ್ತಾಗುವ ವೇಳೆಗೆ ಅವರ ವ್ಯಕ್ತಿತ್ವಕ್ಕೆ ಸಾಕಷ್ಟು ಜಖಂ ಆಗಿತ್ತು. 'ಲಂಕೇಶ್ ಮಾಫಿಯಾ' ಎಂಬು ಪದ ಆಗಲೇ ನಮ್ಮ ಸಾಂಸ್ಕೃತಿಕ ಲೋಕದಲ್ಲಿ ಚಾಲ್ತಿಗೆ ಬಂದಿತ್ತು. ಆದರೆ ಆಶ್ಚರ್ಯವೆಂಬಂತೆ ಅವರ ಮೇರುಕೃತಿ 'ಗುಣಮುಖ' ಸೃಷ್ಟಿಯಾದದ್ದು ಆಗಲೇ ಅಲ್ಲವೆ? ಹಾಗಾಗಿ ಇಂತಹ ಸಂದರ್ಭಗಳಲ್ಲಿ ಇಂತಹವರನ್ನು ಕುರಿತು ಆರಾಧನಾ ಸಾಹಿತ್ಯ ಅವರ ಚೇಲಾಗಳಿಂದ ಸೃಷ್ಟಿಯಾಗುವುದು ಸಹಜ. ಅದನ್ನು ಆರಾಧನಾ ಸಾಹಿತ್ಯವೆಂದೇ ಓದುವುದು ಒಳ್ಳೆಯದು. ಅದರ ಮೂಲಕ ಲೇಖಕನೊಬ್ಬನ ವ್ಯಕ್ತಿತ್ವ ಮತ್ತು ಸಾಹಿತ್ಯದ ಪರಾಮರ್ಶೆ ನಡೆಸುವುದು–ಶಂಕರ್ ಅವರ ಈ ಪರಮಾರ್ಶೆಯ ಬಗೆಗೆ ನನ್ನ ವೈಯಕ್ತಿಕ ಸಹಾನುಭೂತಿ ಇರುವುದಾದರೂ–ಅಷ್ಟೇನೂ ಫಲಪ್ರದ ಕೆಲಸವಾಗಲಾರದೆಂದೇ ನನ್ನ ಅಭಿಪ್ರಾಯ.

'ಆಸ್ಪತ್ರೆಯಲ್ಲಿ ಐವತ್ತು ನಾಲ್ಕು ದಿನಗಳು'

ನಾನು ಇತ್ತೀಚೆಗೆ ಕುತೂಹಲದಿಂದ ಓದಿದ ಇನ್ನೊಂದು ಪುಸ್ತಕ, ಗೆಳೆಯ ಶಿವರಾಮು ಕಾಡನಕುಪ್ಪೆಯವರ 'ಆಸ್ಪತ್ರೆಯಲ್ಲಿ ಐವತ್ತನಾಲ್ಕು ದಿನಗಳು'. ಹತ್ತು ವರ್ಷಗಳ ಹಿಂದೆ ಕ್ಯಾನ್ಸರ್‌ಗೆ ಒಳಗಾಗಿ, ಸಕಾಲಿಕ ಮತ್ತು ಸೂಕ್ತ ಚಿಕಿತ್ಸೆಯ ಮೂಲಕ ಅದರಿಂದ ಪಾರಾದರೂ, ಮತ್ತೆ ಕಳೆದ ವರ್ಷ ಅದರ ಅಡ್ಡ ಪರಿಣಾಮವೋ ಎಂಬಂತೆ ಮಯಸ್ತೇನಿಯಾ ಗ್ರೇವಿಸ ಎಂಬ ಶ್ವಾಸಕೋಶದ ಮಾರಕ ಕಾಯಿಲೆಗೆ ಒಳಗಾಗಿ ಐವತ್ತೈದು ದಿನಗಳ ಕಾಲ ಆಸ್ಪತ್ರೆಯಲ್ಲಿದ್ದ ಅನುಭವದ ಚಿತ್ರವೊಂದನ್ನು ಶಿವರಾಮು ಈ ಪುಸ್ತಕದಲ್ಲಿ ನೀಡಿದ್ದಾರೆ. ಅವರು ಈ ಪುಸ್ತಕವನ್ನು ನಾನು ಎರಡು ತಿಂಗಳುಗಳ ಹಿಂದೆ ಮೈಸೂರಿನಲ್ಲಿ ಅವರ ಮನೆಯಲ್ಲಿ ಭೇಟಿಯಾಗಿದ್ದಾಗ ನೀಡಿದ್ದರಾದರೂ, ಅದನ್ನು ಕೆಲ ಪುಟ ಓದಿ ಸ್ವಲ್ಪ ಕಳವಳಗೊಂಡಂತಾಗಿ ಹಾಗೇ ಇಟ್ಟುಬಿಟ್ಟಿದ್ದೆ. ಕಾರಣ, ಪುಸ್ತಕದಲ್ಲಿನ ಆಸ್ಪತ್ರೆಯ ಅನುಭವ ಅಷ್ಟು ಚಿತ್ರವತ್ತಾಗಿದ್ದು, ಆಸ್ಪತ್ರೆಯಲ್ಲಿ ಇವರಷ್ಟು ದಿನಗಳಲ್ಲದಿದ್ದರೂ, ಎರಡು ಬಾರಿ ಸಾಕಷ್ಟು ದೀರ್ಘ ಅವಧಿಗಳನ್ನು ಕಳೆದಿರುವ ನನ್ನಂಥವನಲ್ಲಿ ಹಳೆಯ ಅಹಿತಕರ ನೆನಪುಗಳನ್ನು ಕೆದಕಬಲ್ಲುದಾಗಿದ್ದುದು!

ಶಿವರಾಮು ಅವರು ಈಗ ಅಪಾಯದಿಂದ ಸಂಪೂರ್ಣ ಪಾರಾಗಿದ್ದಾರೆಂದು ಹೇಳುವಂತಿಲ್ಲವಾದರೂ, ಇಂತಹ ಪರಿಣಾಮಕಾರಿ ಪುಸ್ತಕ ಬರೆಯುವಷ್ಟು

ಚೇತರಿಸಿಕೊಂಡಿದ್ದಾರೆ ಎಂಬುದೇ ಒಂದು ಸಂತೋಷದ ಸಂಗತಿ. ಅದಕ್ಕೆ ಕಾರಣ, ಅವರ ಜೀವನ ಪ್ರೀತಿ ಮತ್ತು ಜೀವನ ಬದ್ಧತೆ. ಸಾಹಿತ್ಯದ ವಿದ್ಯಾರ್ಥಿ ಮತ್ತು ಅಧ್ಯಾಪಕರೂ ಆದ ಅವರಲ್ಲಿನ ಈ ಗುಣಗಳು ಈ ಪುಸ್ತಕದಲ್ಲಿ ಹಲವು ನೆಲೆಗಳಲ್ಲಿ ಮತ್ತು ಹಲವು ರೂಪಗಳಲ್ಲಿ ವ್ಯಕ್ತವಾಗಿವೆ: ರೋಗ ನಿದಾನ ಮತ್ತು ಚಿಕಿತ್ಸೆಯ ಸಣ್ಣ ಸಣ್ಣ ವಿವರಗಳ ಜೊತೆಗೆ ಬರುವ ತಮ್ಮ ಹೆಂಡತಿ ಮಕ್ಕಳೊಡನೆಯ ಸಂಬಂಧದ ಆಪ್ತ ವಿವರಗಳು, ವೈದ್ಯರ, ಶುಶ್ರೂಷಕರ, ಸಹಾಯಕರ, ಸಹ ರೋಗಿಗಳ ಮತ್ತು ಹಿತೈಷಿ ಗೆಳೆಯರ ನಡೆನುಡಿಗಳ ಆತ್ಮೀಯ ಚಿತ್ರಣ ಈ ಪುಸ್ತಕವನ್ನು ಒಂದು ಮಾನವೀಯ ದಾಖಲೆಯನ್ನಾಗಿಯೂ ಪರಿವರ್ತಿಸಿದೆ. ಒಟ್ಟಿನಲ್ಲಿ ಶಿವರಾಮು ಎರಡು ಬಾರಿ ಭೀಕರ ಅಸ್ವಸ್ಥತೆಯಿಂದ ಹೇಗೆ ಪಾರಾದರು ಎಂಬುದಕ್ಕೆ ಈ ಪುಸ್ತಕ ಸಾಕ್ಷಿಯಾಗಿದೆ. ಈ ಸಮಾಜವಾದಿ ಸಾಥಿಗೆ ಪತ್ರಿಕೆ ಸಕಲ ರೀತಿಯ ಶುಭ ಕೋರುತ್ತದೆ.

●

ಅಕ್ಟೋಬರ್, ೨೦೧೫

ಕಲ್ಬುರ್ಗಿಯವರ ಹತ್ಯೆ ಮತ್ತು 'ಪ್ರಗತಿಪರ'ರ ಪ್ರತಿಭಟನೆ

ಸಂಶೋಧಕ ಎಂ.ಎಂ. ಕಲ್ಬುರ್ಗಿಯವರ ಹತ್ಯೆಯಾಗಿ ಒಂದು ತಿಂಗಳ ಮೇಲಾಯಿತು. ಕೊಲೆಗಾರರ ಯಾವುದೇ ಖಚಿತ ಸುಳಿವಿಲ್ಲದೆ ನಮ್ಮ ಪೋಲೀಸರು ಸದ್ಯಕ್ಕಂತೂ ನಿರಾಶರಾಗಿದ್ದಾರೆ. ಕಲ್ಬುರ್ಗಿಯವರ ಹತ್ಯೆಯಿಂದ ತಲ್ಲಣಗೊಂಡಿರುವ ರಾಜ್ಯದ ಸಾಂಸ್ಕೃತಿಕ ಲೋಕ ಹತಾಶೆಯ ಹಂತ ತಲುಪಿದೆ. ಮಹಾರಾಷ್ಟ್ರದಲ್ಲಿ ಒಂದು ವರ್ಷಕ್ಕೂ ಹಿಂದೆ ಕೊಲೆಯಾದ ಮೂಢ ನಂಬಿಕೆಗಳ ವಿರೋಧಿ ಆಂದೋಲನದ ದಾಭೋಳ್ಕರ್ ಮತ್ತು ಆರೇಳು ತಿಂಗಳ ಹಿಂದೆ ಹತ್ಯೆಯಾದ ವಿಚಾರವಾದಿ ಗೋವಿಂದ ಪಾನ್ಸರೆಯವರ ಕೊಲೆಗಳಿಗೂ ಕಲ್ಬುರ್ಗಿಯವರ ಹತ್ಯೆಗೂ ಪೋಲೀಸರು ಅನೇಕ ಸಾಮ್ಯತೆಗಳನ್ನು ಗುರುತಿಸಿ ಒಂದಿಬ್ಬರ ವಿಚಾರಣೆ ನಡೆದಿದೆಯಾದರೂ, ಯಾವುದೇ ತೀರ್ಮಾನಗಳಿಗೆ ಇನ್ನೂ ಬರಲಾಗಿಲ್ಲವೆಂಬುದು ಆತಂಕ ಹುಟ್ಟಿಸುವ ಸಂಗತಿಯಾಗಿದೆ.

ಮಹಾರಾಷ್ಟ್ರ ತುಕಾರಾಂ, ಫುಲೆ, ಅಂಬೇಡ್ಕರ್‌ರ ಸುಧಾರಣಾವಾದಿ, ಪ್ರಗತಿಪರ ವಿಚಾರಧಾರೆಯ ಪರಂಪರೆಯ ಜೊತೆ ಜೊತೆಗೇ ಗಾಂಧಿ ಹತ್ಯೆಯ ಕಾಲದಿಂದಲೂ, ಧಾರ್ಮಿಕ ಬಹುತ್ವ ಹಾಗೂ ಉದಾರತೆ ಮತ್ತು ವೈಚಾರಿಕತೆಗಳ ವಿರುದ್ಧದ ತನ್ನ ಕೊಲೆಗಡುಕ ಕಾರ್ಯಕ್ರಮಗಳಿಗೂ (ಕು)ಪ್ರಸಿದ್ಧವಾಗಿದೆ. ಆದರೆ ಕರ್ನಾಟಕದಲ್ಲಿ, ದ.ಕ. ಜಿಲ್ಲೆಯಲ್ಲಿನ ಕೆಲ ಮತೀಯ ಶಕ್ತಿಗಳ ಅತಿವಾದಿ ಕಾರ್ಯಾಚರಣೆಗಳ ಹೊರತಾಗಿ ಕೊಲೆಗಡುಕ ಸಂಸ್ಕೃತಿಯ ಸುಳಿವಿರಲಿಲ್ಲ. ಈ ದೃಷ್ಟಿಯಿಂದ ಕಲ್ಬುರ್ಗಿಯವರ ಹತ್ಯೆ ಕರ್ನಾಟಕದ ಸಾಂಸ್ಕೃತಿಕ ರಾಜಕಾರಣದ ಇತಿಹಾಸದಲ್ಲಿ ಒಂದು ನಿರ್ಣಾಯಕ ಘಟ್ಟವೇ ಹೌದು. ಹಾಗಾಗಿ,

ನಮ್ಮ ಸಂಸ್ಕೃತಿ ಚಿಂತಕ ಸಮುದಾಯವೂ ಸೇರಿದಂತೆ ಇಡೀ ರಾಜ್ಯದ ಪ್ರಜ್ಞಾವಂತ ಜನತೆ ಈಗ ಜಾಗೃತಗೊಳ್ಳಬೇಕಿದೆ. ಮುಂದಿನ ದಿನಗಳು ಭಯಾನಕವಾಗಿದ್ದಂತೆ ತೋರುತ್ತಿದೆ.

ಹಾಗೆ ನೋಡಿದರೆ, ಕಲ್ಬುರ್ಗಿಯವರು ಅಂತಹ ಯಾವುದೇ ಪ್ರಚೋದನಾತ್ಮಕ ಹೇಳಿಕೆ ನೀಡಿರಲಿಲ್ಲ. ಅವರು ಈ ಹಿಂದಿನ ನಮ್ಮ ಎಲ್ಲ ಸಂಸ್ಕೃತಿ ಚಿಂತಕರಂತೆಯೇ, ಧರ್ಮ ವಿಮರ್ಶೆ ಮಾಡಿದ್ದರು. ಅದೂ ಅವರು ಕರ್ನಾಟಕದ ಅನುಭಾವಿ ಪರಂಪರೆಯ ಉತ್ಕೃಷ್ಟ ಪ್ರತಿನಿಧಿಯಂತಿರುವ ಬಸವಣ್ಣನ ತತ್ವಗಳ ಹಿನ್ನೆಲೆಯಲ್ಲಿ ನಡೆಸಿದ ಸಮರ್ಥ ಅಧ್ಯಯನದ ಆಧಾರದ ಮೇಲೆ. ಆದರೆ ಅದನ್ನೂ ಸಹಿಸದಂತಹ ಬೌದ್ಧಿಕ ದಾರಿದ್ರ್ಯದ ವಾತಾವರಣ ಇಂದು ನಮ್ಮನ್ನು ಸುತ್ತುವರೆದಿದೆಯೆಂದರೆ ನಾವು ನಿಜವಾಗಿಯೂ ಆತಂಕಪಡಬೇಕಾದ ಕಾಲವಿದಾಗಿದೆ ಎಂದೇ ಅರ್ಥ. ನಮ್ಮ ಆತಂಕ ನಿರ್ದಿಷ್ಟವಾಗಿ ಕಳವಳದ ರೂಪ ಪಡೆಯುವುದು, ಸಾಕಷ್ಟು ಸುಭದ್ರವಾಗಿಯೇ ಇದ್ದ ಕನ್ನಡ ಬೌದ್ಧಿಕ ಪರಂಪರೆಯ ಕತ್ತು ಹಿಸುಕಲು ಕನ್ನಡದ ಹೊರಗಿನ ಶಕ್ತಿಗಳಿಗೆ ಇಂದು ಸಾಧ್ಯವಾಗಿದೆ ಎಂಬ ಸಂದೇಹ. ಮತ್ತು ಅಷ್ಟೇ ಕಳವಳವನ್ನುಂಟು ಮಾಡುವ ಇನ್ನೊಂದು ಸಂಗತಿ ಎಂದರೆ, ಇದಕ್ಕೆ ಕನ್ನಡದ ಒಳಗಿನ ಶಕ್ತಿಗಳೇ ಇಂಬು ಕೊಟ್ಟಿರಬಹುದೆಂಬ ಶಂಕೆ. ಕಲ್ಬುರ್ಗಿಯವರ ಹತ್ಯೆ ಕುರಿತಂತೆ ನಮ್ಮ ಬೌದ್ಧಿಕ ಲೋಕದ ಪ್ರತಿಕ್ರಿಯೆಗಳ ಆತಂಕಕಾರಿ ವೈವಿಧ್ಯತೆಯೇ ಇದಕ್ಕೆ ಸಾಕ್ಷಿ. ಓರ್ವ ಗೌರವಾನ್ವಿತ ಸಂಶೋಧಕ ಮಹಾಶಯರಂತೂ, ತಮ್ಮ ಯಾವುದೋ ವೈಯಕ್ತಿಕ ನೆಲೆಯ ಹತಾಶೆಯನ್ನು ಮುಂದೊಡ್ಡಿಕೊಂಡು ಈ ಕೊಲೆಯನ್ನು ಕೇವಲ ಕಾನೂನು ಮತ್ತು ಶಿಸ್ತಿನ ಸಮಸ್ಯೆಯೆಂದು ಬಣ್ಣಿಸುವ ಮಟ್ಟಕ್ಕೆ ಇಳಿದರು. ಈ ವಿಶ್ಲೇಷಣೆಯನ್ನು ಪ್ರಕಟಿಸಿದ ಕನ್ನಡದ ಬೌದ್ಧಿಕತೆಯ ಮಹಾಪೋಷಕನೆಂದೇ ಹೇಳಿಕೊಳ್ಳುವ ದಿನಪತ್ರಿಕೆಯು ಈ ವಾದದ ಅಪಾಯವನ್ನು ಗುರುತಿಸಿ ಬರೆದ ಪ್ರತಿಕ್ರಿಯೆಯೊಂದನ್ನು ಪ್ರಕಟಿಸಲೂ ನಿರಾಕರಿಸುತ್ತದೆ ಎಂದರೆ ಏನು ಹೇಳುವುದು?

ಕಲ್ಬುರ್ಗಿಯವರು ತಮ್ಮ ದಿಟ್ಟ ಮತ್ತು ನಿಷ್ಠುರ ಧರ್ಮ ವಿಮರ್ಶೆಯ ಹೊರತಾಗಿ ಕೂಡ ಕನ್ನಡ ಸಂಸ್ಕೃತಿ ಅಧ್ಯಯನಕ್ಕೆ–ವಿಶೇಷವಾಗಿ 'ಕವಿರಾಜ ಮಾರ್ಗ' ಕೃತಿಯನ್ನು ಕನ್ನಡದ ಜಾಗತಿಕ ಹೆಮ್ಮೆಯಾಗಿ ಪ್ರಸ್ತುತಪಡಿಸಿರುವ ಅನನ್ಯ ಸಂಶೋಧನೆಯ ಮೂಲಕ– ಅಪೂರ್ವ ಕೊಡುಗೆಯನ್ನೂ ಕೊಟ್ಟಿರುವರು. ಇದನ್ನು ಲೆಕ್ಕಿಸದೆ ಅವರನ್ನು ಕೊಲ್ಲುವ ಮಟ್ಟಕ್ಕೆ ತನ್ನ ಸಾಮಾಜಿಕ ವಾತಾವರಣವನ್ನು ಕುಲಗೆಡಿಸಿಕೊಂಡಿರುವ ಈ ಕನ್ನಡ ಸಮಾಜದ ಸದ್ಯದ ಬೌದ್ಧಿಕತೆಯ ಬಗೆಗೂ ಇಂದು ಗಂಭೀರವಾಗಿ ಪರ್ಯಾಲೋಚಿಸಬೇಕಿದೆ.

ನಿಜ, ಬೌದ್ಧಿಕತೆಯ ವಿರುದ್ಧವೇ ಕೆಲ ವರ್ಷಗಳಿಂದೀಚೆಗೆ ರಾಷ್ಟ್ರಾದ್ಯಂತ ಒಂದು ಆಂದೋಲನವನ್ನು ಪ್ರಜ್ಞಾಪೂರ್ವಕವಾಗಿಯೇ ಕಟ್ಟಲಾಗುತ್ತಿದೆ. ಕರ್ನಾಟಕವೂ ಈ ಆಂದೋಲನದ ದಟ್ಟ ಪ್ರಭಾವಕ್ಕೆ ಒಳಗಾದ ಒಂದು ರಾಜ್ಯ. ಇದಕ್ಕೆ ಮುಖ್ಯ ಕಾರಣ, ತನ್ನನ್ನು ಬುದ್ಧಿಜೀವಿ ಎಂದು ಕರೆದುಕೊಳ್ಳುವ ವರ್ಗ ಸಮಾಜಮುಖಿ

ಎಂದರೆ ಎಡಪಂಥೀಯವೇ ಆಗಿರಬೇಕು ಮತ್ತು ಎಡಪಂಥೀಯವೆಂದರೆ ಭೌತವಾದಿ ಆಲೋಚನಾ ಕ್ರಮವನ್ನೇ ಅನುಸರಿಸಬೇಕೆಂಬ (ಪ್ರಗತಿಪರತೆಯ) ಮೂಢನಂಬಿಕೆಯಿಂದ ಹೊರಬರಲಾಗದೆ ತನ್ನದೇ ಪರಿಭಾಷೆಯಲ್ಲಿ ಮಾತಾಡಿಕೊಳ್ಳತೊಡಗಿ ಪೂರ್ಣವಾಗಿ ಜನಸಂಪರ್ಕ ಕಡಿದುಕೊಂಡಿರುವುದು. ಇದರ ಪರಿಣಾಮವೆಂದರೆ, ಬುದ್ಧಿಜೀವಿಗಳೆಂದರೆ ಜನಸಾಮಾನ್ಯರ ನಂಬಿಕೆ-ಆಚರಣೆಗಳನ್ನು ಪ್ರಶ್ನಿಸುತ್ತಾ ಅವರನ್ನು ಎರಡನೇ ದರ್ಜೆಯ ಪ್ರಜೆಗಳಂತೆ ಕಾಣುವವರು ಎಂಬ ಭಾವನೆ ಸಮಾಜದಲ್ಲಿ ಬೆಳೆದಿರುವುದು. ಇದರ ಲಾಭ ಪಡೆದವರು, ಜನಾಂತರಂಗವನ್ನು ಮುಟ್ಟಿದ್ದ ಗಾಂಧಿಯವರ ಜನ ಸಾಮಾನ್ಯರ ಪರಿಭಾಷೆಯ ಅಧ್ಯಾತ್ಮಿಕ ರಾಜಕಾರಣದ ಪ್ರಭಾವದಿಂದಾಗಿ ಹಿನ್ನೆಲೆಗೆ ಸರಿದಿದ್ದ ಧರ್ಮಲಂಡರು ಮತ್ತು ಅವರ ಜಾಲದ ವಿಸ್ತರಣೆಯ ಮೂಲಕ ತಮ್ಮ ರಾಜಕಾರಣವನ್ನು ಕಟ್ಟಿಕೊಳ್ಳಬಯಸುವ ಕೋಮುವಾದಿ ಶಕ್ತಿಗಳು. ಇದರ ಜೊತೆಗೇ ಸಂಭವಿಸಿದ್ದು, ಈ ಬುದ್ಧಿಜೀವಿ ವರ್ಗವನ್ನು ಈ ಕೋಮುವಾದಿ ರಾಜಕಾರಣದ ಎದುರು ತನ್ನ ರಾಜಕೀಯ ಉಳಿವಿಗಾಗಿ ಪೋಷಿಸುತ್ತಿದ್ದ ರಾಷ್ಟ್ರೀಯ ಹೋರಾಟದ ಹಿನ್ನೆಲೆಯಿದ್ದ ಎಲ್ಲ ಟಿಸಿಲುಗಳ ರಾಜಕಾರಣವೂ ಭ್ರಷ್ಟಗೊಳ್ಳುತ್ತಾ ಹೋಗಿ ಈಗ ಸಂಪೂರ್ಣವಾಗಿ ಜನರ ವಿಶ್ವಾಸ ಕಳೆದುಕೊಂಡಿರುವುದು.

ಇನ್ನು ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸುವಂತೆ ಮಾಡಿರುವುದು, ಮಾರುಕಟ್ಟೆ ಆರ್ಥಿಕತೆಯ ಉತ್ಪನ್ನವಾದ ನಮ್ಮ ಇಂದಿನ ಹೊಸ ಮಾಧ್ಯಮ ಸಂದರ್ಭ. ನಾಯಿಕೊಡೆಗಳಂತೆ ಬೆಳೆದು ನಿಂತಿರುವ ಈ ಮಾಧ್ಯಮಗಳಲ್ಲಿನ ಪ್ರತಿಯೊಬ್ಬನ/ಳಲ್ಲೂ ಎಲ್ಲ ವಿಷಯಗಳ ಬಗೆಗೂ ಪರಿಣಿತರಂತೆಯೇ ಮಾತಾಡುವ ಭಂಡ ಧೈರ್ಯ ಎಗ್ಗಿಲ್ಲದೆ ಬೆಳೆದು ನಿಂತಿದೆ. ಹಾಗಾಗಿ ಇಂದು ಯಾರೂ ಇವರ ಮುಂದೆ ಯಾವುದೇ ಸೂಕ್ಷ್ಮ ವಿಷಯಗಳನ್ನು ಮಾತಾಡದಂತೆ ಮಾಡಿಬಿಟ್ಟಿದೆ. ಉದಾಹರಣೆಗೆ, ಮೊನ್ನೆ ರಾಷ್ಟ್ರಮಟ್ಟದ ಇಂಗ್ಲಿಷ್ ಟಿವಿ ವಾಹಿನಿಯೊಂದರ ಚರ್ಚೆಯಲ್ಲಿ ಓರ್ವ ಆರೆಸ್ಸೆಸ್ ನಾಯಕರು, 'ಕಲ್ಬುರ್ಗಿಯವರು ಹಿಂದೂ ದೇವತಾಮೂರ್ತಿಗಳ ಮೇಲೆ ಉಚ್ಚೆ ಹುಯ್ಯಲು ಹೇಳಿದ್ದಾರೆ' ಎಂದು ಕಲ್ಬುರ್ಗಿ ಹತ್ಯೆಗೆ ಕಾರಣ ಕೊಡುತ್ತಿದ್ದರು. ಆದರೆ ಆ ಚರ್ಚೆಯ ನಿರ್ವಾಹಕನೂ ಸೇರಿದಂತೆ ಚರ್ಚೆಯಲ್ಲಿ ಪಾಲ್ಗೊಂಡಿದ್ದ ಯಾವ ವಿದ್ವಾಂಸನೂ ಇದು ಸುಳ್ಳು ಎಂದು ಹೇಳುವ ಸ್ಥಿತಿಯಲ್ಲಿರಲಿಲ್ಲ! ಇದೇ ಸಂಬಂಧವಾಗಿ ಇಲ್ಲಿ ನಾನು ಇನ್ನೊಂದು ಮುಖ್ಯ ಸಂಗತಿಯನ್ನೂ ಹೇಳಬೇಕು. ಕಲ್ಬುರ್ಗಿಯವರ ಹತ್ಯೆಯ ಬಗ್ಗೆ ನಮ್ಮ ಜನಸಾಮಾನ್ಯರ ನಡುವೆ ಸೃಷ್ಟಿಸಲಾಗಿರುವ – ಮೊನ್ನೆ ನನ್ನ ಗೆಳೆಯರೊಬ್ಬರ ತೋಟದ ಬಳಿಯ ಒಬ್ಬ ಸಾಮಾನ್ಯ ರೈತ ಆಡಿದ ಮಾತಿನ ವೈಖರಿ ಇದು: 'ಆ ಕಲಬುರ್ಗಿ ಈ ಸಾಬರ, ಕಿರಿಸ್ತಾನರ ಧರ್ಮದ ಮುಂದೆ ನಮ್ಮ ಹಿಂದೂ ಧರ್ಮ ಒಂದು ಕೀಳು ಧರ್ಮ. ಅದನ್ನು ಬಿಟ್ಟುಬಿಡಿ ಅಂತ ಹೇಳವನಂತೆ. ಅವನಿಗೆ ತಕ್ಕ ಶಾಸ್ತಿಯೇ ಆಗಿದೆ...'! – ಭಯಾನಕ ವಾತಾವರಣದ ಬಲಿಪಶು ಕಲ್ಬುರ್ಗಿಯವರು.

ಪರಿಸ್ಥಿತಿ ಹೀಗೆ, ಇಷ್ಟು ಕೈಮೀರಿ ಹೋಗಿರುವಾಗ ನಮ್ಮ ಬುದ್ಧಿಜೀವಿ ವರ್ಗ ಮೊದಲು ತನ್ನ ವೈಚಾರಿಕತೆಯ ಗುತ್ತೇದಾರಿಕೆಯ ಒಣ ಹಮ್ಮಿನಿಂದ ಹೊರಬಂದು ಒಂದು ನಿಷ್ಠುರ ಆತ್ಮಾವಲೋಕನಕ್ಕೆ ಸಜ್ಜಾಗಬೇಕಿದೆ. ಎಲ್ಲ ರಾಜಕೀಯ ಪೋಷಣೆಯ ದಾಕ್ಷಿಣ್ಯಗಳಿಂದ ಬಿಡುಗಡೆಗೊಂಡು ತನ್ನದೇ ಸ್ವತಂತ್ರ ಸಾಂಸ್ಕೃತಿಕ ಗುರುತನ್ನು ಸಾಧಿಸಿಕೊಳ್ಳಬೇಕಿದೆ. ಕೋಮುವಾದಿ ರಾಜಕಾರಣದ ವಿರುದ್ಧ ಟೊಳ್ಳು, ಹುಂಬ ಗುಟುರುಗಳನ್ನು ಹಾಕುವ, ನಮ್ಮ ಸಾಂಸ್ಕೃತಿಕ ಪರಂಪರೆಯ ಸಂಕೀರ್ಣತೆಗಳನ್ನು ಮರೆಮಾಚಿ ಅಗ್ಗದ ಜನಪ್ರಿಯತೆಯ ಮಾತುಗಳನ್ನಾಡುವುದನ್ನು ನಿಲ್ಲಿಸಿ, ಒಂದು ಬೌದ್ಧಿಕ ಘನತೆಯ, ತನ್ನದೇ ಸ್ವಾಯತ್ತ ರಾಜಕಾರಣವನ್ನು ಆರಂಭಿಸಬೇಕಿದೆ. ಆಗ ಮಾತ್ರ ಕಲ್ಬುರ್ಗಿಯವರ ಹತ್ಯೆಯ ವಿರುದ್ಧದ ಪ್ರತಿಭಟನೆ–ಹೋರಾಟಗಳಿಗೆ ಜನರ ಸಹಾನುಭೂತಿ ದೊರಕುತ್ತದೆ. ಇಲ್ಲದೇ ಹೋದರೆ, ದೇಶದ ಜೊತೆ ಇವರೂ–ಅಂದರೆ ನಾವೆಲ್ಲರೂ–ಮುಳುಗುವುದು ಖಂಡಿತ.

ಈ ಮಧ್ಯೆ, ರಾಜ್ಯ ಸರ್ಕಾರ ಕೂಡ ಕಲ್ಬುರ್ಗಿಯವರ ಹತ್ಯೆಯನ್ನು ಕರ್ನಾಟಕದ ಸಾಂಸ್ಕೃತಿಕ ಘನತೆಯ ಹತ್ಯೆ ಎಂದೇ ತಿಳಿದು ತನಿಖೆಗೆ ಇನ್ನಷ್ಟು ಚುರುಕು ತರಬೇಕಿದೆ.

●

ನವೆಂಬರ್, ೨೦೧೫

ಕೆಲ ರಾಜ್ಯೋತ್ಸವ ಟಿಪ್ಪಣಿಗಳು:

ಭಾಷೆ-ದೈವ-ಧರ್ಮ-ಪ್ರಶಸ್ತಿ-ಪ್ರತಿಭಟನೆ ಇತ್ಯಾದಿ ಇತ್ಯಾದಿ...

ಇನ್ನೊಂದು ರಾಜ್ಯೋತ್ಸವ ಬಂದಿದೆ. ಕನ್ನಡ ಜನದ ಕರ್ನಾಟಕ ಸರ್ಕಾರ ಕನ್ನಡವನ್ನೇ ಮರೆತಿರುವ ದುರದೃಷ್ಟಕರ ಸಂಗತಿ ಮತ್ತೆ ಈಗ ನೆನಪಾಗುತ್ತಿದೆ. ಜಾಗತೀಕರಣದ ಈ ಪ್ರತಿಕೂಲ ದಿನಗಳಲ್ಲಿ ಕರ್ನಾಟಕದಲ್ಲಿ ಕನ್ನಡವನ್ನು ಉಳಿಸಿ ಬೆಳೆಸುವ ಖಚಿತ ಮಾರ್ಗ, ಅದನ್ನು ಶಾಲಾ ಶಿಕ್ಷಣದ ಮಟ್ಟಿಗಾದರೂ ಶಿಕ್ಷಣದ ಮಾಧ್ಯಮವನ್ನಾಗಿ ಮಾಡುವುದಾಗಿತ್ತು. ಆದರೆ ಇದಕ್ಕೆ ನಮ್ಮ ಸಂವಿಧಾನವೇ ಅಡ್ಡಿಯಾಗಿದೆ ಎಂಬ ವಿಪರ್ಯಾಸದ ಸಂಗತಿ ಸರ್ವೋಚ್ಚ ನ್ಯಾಯಾಲಯದ ಮೂಲಕ ಬೆಳಕಿಗೆ ಬಂತು. ಆಗ ಭಾರತೀಯ ಭಾಷೆಗಳ ಉಳಿವಿಗಾಗಿ ಸಹಜವಾಗಿ ಉಳಿದ ಏಕೈಕ ಮಾರ್ಗವೆಂದರೆ, ಸಂವಿಧಾನವನ್ನೇ ತಿದ್ದುಪಡಿ ಮಾಡುವುದು. ಈ ದಿಸೆಯಲ್ಲಿ ಸ್ವಲ್ಪ ಕಾಲ ಮಾತನಾಡಿದ ಕರ್ನಾಟಕ ಸರ್ಕಾರ ಏಕೋ ಮನಸ್ಸು ಬದಲಿಸಿ, ಕನ್ನಡವನ್ನು ಶಿಕ್ಷಣ ಮಾಧ್ಯಮವನ್ನಾಗಿ ಮಾಡಲು ಸಂವಿಧಾನ ಅಡ್ಡಿ ಬರದ ಮಾರ್ಗವೊಂದನ್ನು ಕಂಡು ಹಿಡಿದಿರುವುದಾಗಿ ಹೇಳಿಕೊಂಡು, ಅದಕ್ಕೆ ಸಂಬಂಧಿಸಿದ ಮಸೂದೆಗಳಿಗೆ ನಮ್ಮ ವಿಧಾನಮಂಡಲದ ಒಪ್ಪಿಗೆಯನ್ನೂ ಪಡೆದು ರಾಷ್ಟ್ರಪತಿಗಳ ಅಂಕಿತವೊಂದೇ ಈಗ ಬಾಕಿ ಇರುವುದು ಎಂದು ಹೇಳಿತು. ಆದರೆ ಪ್ರಸ್ತುತ ಶೈಕ್ಷಣಿಕ ವರ್ಷ ಅರ್ಧ ಮುಗಿದರೂ ಸರ್ಕಾರದಿಂದ ಅದರ ಬಗ್ಗೆ ಸುದ್ದಿಯಿಲ್ಲ!

ಇದರ ಅರ್ಥ ಏನು? ಕನ್ನಡ ಬಗ್ಗೆ ತಾನು ಏನೆಲ್ಲ ಮಾಡಬಹುದೋ ಅದನ್ನೆಲ್ಲ ತಾನು ಮಾಡಿದ್ದೇನೆ ಎಂದು ಕನ್ನಡಿಗರಿಗೆ ಹೇಳಿ ಅದು ತನ್ನ ಕೈತೊಳೆದುಕೊಳ್ಳಬೇಕಾಗಿತ್ತು, ಅಷ್ಟೆ! ಅದನ್ನು ಅದು ಮಾಡಿದೆ.

(ಇಲ್ಲಿನ ದುರದೃಷ್ಟಕರ ಸಂಗತಿಯೆಂದರೆ ಇದರಲ್ಲಿ ಮಾತೃಭಾಷಾವಾದಿಯೂ, ಲೋಹಿಯಾ ಸಮಾಜವಾದಿಯೂ ಎಂದು ಗುರುತಿಸಿಕೊಂಡಿದ್ದ ನಮ್ಮ ಅಡ್ವೊಕೇಟ್ ಜನರಲ್ ರವಿವರ್ಮ ಕುಮಾರ್ ಅವರೂ ಶಾಮೀಲಾಗಿದ್ದುದು.) ಕನ್ನಡದ ಪರಿಸ್ಥಿತಿ ಮಾತ್ರ ಹಾಗೇ ಉಳಿದಿದೆ. ವಾಸ್ತವವಾಗಿ, ಮೋದಿಯವರ 'ಡಿಜಿಟಲ್ ಇಂಡಿಯಾ' ಆಂದೋಳನ ಆರಂಭವಾದ ಮೇಲಂತೂ ಕನ್ನಡದ ಸ್ಥಿತಿ ಇನ್ನೂ ಚಿಂತಾಜನಕವಾಗಿದೆ. ಇದಾವುದರ ನೆದರೂ ಇಲ್ಲದ ಸರ್ಕಾರ ಮತ್ತು ಕನ್ನಡ 'ಓರಾಟ'ಗಾರರು ಮತ್ತೊಂದು ರಾಜ್ಯೋತ್ಸವದ ಸಂಭ್ರಮದ ಆಚರಣೆಗೆ ಸಿದ್ಧವಾಗುತ್ತಿದ್ದಾರೆ. ಕನ್ನಡಿಗರ ಪಾಲಿಗೆ ಇದಕ್ಕಿಂತ ದೊಡ್ಡ ಆತ್ಮದ್ರೋಹ ಇನ್ನೊಂದಿರಲಾರದು. ಇನ್ನು ಕನ್ನಡಕ್ಕಾಗಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ತ್ಯಾಗ ಮಾಡಿ ಹೋರಾಟ ಮುಂದುವರೆಸುವುದಾಗಿ ಹೇಳಿದ ಲೇಖಕ ಮಹಾಶಯರೊಬ್ಬರು ಸುಸ್ತಾಗಿ ಮನೆ ಸೇರಿದಂತಿದೆ. ಕನ್ನಡ ಈಗ ಯಾರಿಗೂ ಬೇಡವಾದಂತಿದೆ. ಕನ್ನಡವೆನ್ನುವುದೇ ಕನ್ನಡಿಗರಿಗೆ ತಮ್ಮ ಭವಿಷ್ಯಕ್ಕೆ ಕುತ್ತಿನಂತೆ ಕಾಣುತ್ತಿರುವಂತಿದೆ. ಆದರೆ ಅವರು ಕಾಣುತ್ತಿರುವ ಈ ಭವಿಷ್ಯ ಎಂತಹುದು ಎಂಬುದು ಅವರ ಅರಿವಿಗೆ ಬರಲಾಗದಂತಹ ದಿನಗಳಿವು ಎಂಬುದನ್ನಷ್ಟೇ ಇಲ್ಲಿ ಹೇಳಬಹುದು.

ಹೀಗೆ ಈ ಅರಿವಿಗೆ ಎರವಾದವರಲ್ಲಿ, ನಮ್ಮ ಲೇಖಕ-ಬುದ್ಧಿಜೀವಿಗಳೂ ಸೇರಿದ್ದಾರೆ ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಿಲ್ಲ. ಏಕೆಂದರೆ, ಹಿರಿಯ ಸಂಶೋಧಕ ಎಂ.ಎಂ. ಕಲಬುರ್ಗಿಯವರ ಹತ್ಯೆಯೇ ನೆಪವಾಗಿ ತಮ್ಮ ಪ್ರಶಸ್ತಿ-ಬಹುಮಾನಗಳನ್ನು ಹಿಂದಿರುಗಿಸುತ್ತಿರುವ ಇವರು ಕನ್ನಡವನ್ನು ಉಳಿಸುವುದಕ್ಕಾಗಿ ಇಂತಹ ಒಂದು ಪ್ರತಿಭಟನೆ-ಕೆಚ್ಚಿಗೆ ಮುಂದಾಗಲಿಲ್ಲ. ಹಾಗಾಗಿ ಕರ್ನಾಟಕದ ಮಟ್ಟಿಗಾದರೂ ಹೇಳುವುದಾದರೆ, ಈ ಪ್ರಶಸ್ತಿ ವಾಪಸಾತಿ ಚಳುವಳಿ, ಅದರ ವಿರೋಧಿಗಳು ಆಪಾದಿಸುತ್ತಿರುವಂತೆ ಅಭಿಪ್ರಾಯ ಸ್ವಾತಂತ್ರ್ಯದ ದಮನದ ವಿರುದ್ಧವಾಗಿರುವುದಕ್ಕಿಂತ ಹೆಚ್ಚಾಗಿ ರಾಜಕೀಯ ಪ್ರೇರಿತವೇ ಆಗಿರುವಂತೆ ಕಾಣುತ್ತದೆ. ಪ್ರಶಸ್ತಿ ವಾಪಸ್ ನೀಡಿದವರ ರಾಜಕೀಯ ನಿಷ್ಠೆಯನ್ನೊಮ್ಮೆ ನೋಡಿದರೂ ಇದು ನಿಜವೆನ್ನಿಸುತ್ತದೆ. ಬಹುಶಃ ಚಂಪಾ ಮತ್ತು ಕೆಲ ಕಿರಿಯ ಸಾಹಿತಿಗಳ ಹೊರತಾಗಿ ಇವರಾರೂ ಕಲ್ಬುರ್ಗಿ ಹತ್ಯೆಗೆ ಕಾರಣರಾದವರನ್ನು ಪತ್ತೆ ಹಚ್ಚುವಲ್ಲಿ ಸೋತಿರುವ ರಾಜ್ಯ ಸರ್ಕಾರದ ಜಡತೆಯನ್ನು ಪ್ರಶ್ನಿಸಿದಂತಿಲ್ಲ. ಅದಕ್ಕೆ ಛೀಮಾರಿ ಹಾಕಿಲ್ಲ. ಈ ಸಂಬಂಧ ರಾಜ್ಯ ಸರ್ಕಾರಕ್ಕೂ ಕೆಲ ಅಗತ್ಯ ಪ್ರಶ್ನೆಗಳನ್ನು ಹಾಕಿದ್ದರೆ ಈ ಸಾಹಿತಿಗಳ ವಿಶ್ವಾಸಾರ್ಹತೆ ಹೆಚ್ಚುತ್ತಿತ್ತು.

ಅಂದ ಮಾತ್ರಕ್ಕೆ, ಪ್ರಶಸ್ತಿ ವಾಪಸಾತಿ ಆಂದೋಲನದಿಂದ ಪ್ರಯೋಜನವಿಲ್ಲವೆಂದು ನಾನು ಹೇಳುತ್ತಿಲ್ಲ. ದಾದ್ರಿ ಘಟನೆಯ ನಂತರವಂತೂ, ದೇಶದಲ್ಲಿ ಹೆಚ್ಚುತ್ತಿರುವ ಎಲ್ಲ ರೀತಿಯ ಅಸಹಿಷ್ಣುತೆ ಮತ್ತು ಅದು ವ್ಯಕ್ತವಾಗುತ್ತಿರುವ ಹಿಂಸಾತ್ಮಕ ರೂಪಗಳ ವಿರುದ್ಧ ವಿವೇಕಿಗಳೆನಿಸಿಕೊಂಡವರೆಲ್ಲರೂ ಗಟ್ಟಿಯಾಗಿಯೇ ದನಿ ಎತ್ತುವ ಕಾಲ ಬಂದಿದೆ. ಲೇಖಕರೇನೂ ಇದಕ್ಕೆ ಹೊರತಾದವರಲ್ಲ. ಹೊರತಾಗಿಯೂ ಇಲ್ಲ. ಹಾಗಾಗಿಯೇ

ರಾಷ್ಟ್ರಮಟ್ಟದಲ್ಲಿ ಅನೇಕ ಗಣ್ಯ ಸಾಹಿತಿಗಳು ತಮ್ಮ ಸಾಹಿತ್ಯ ಪ್ರಶಸ್ತಿಗಳನ್ನೂ ಸ್ಥಾನ-ಮಾನಗಳನ್ನೂ ಹಿಂತಿರುಗಿಸಿದ್ದಾರೆ. ಕಲ್ಬುರ್ಗಿಯವರ ಹತ್ಯೆಯ ಎಚ್ಚರಿಕೆಯ ಕರೆಗಂಟೆಗೆ ಕಿವುಡಾದ ಬರಹಗಾರ ಮತ್ತೇನನ್ನೂ ಕೇಳಲಾರ;ನೋಡಲಾರ. ಅರುಣ್ ಜೇಟ್ಲಿಯಂತಹವರು ಏನೇ ಹೇಳಲಿ, ಪ್ರತಿಭಟನೆಯ ಧ್ವನಿಯನ್ನು ಸೃಷ್ಟಿಸುವುದು ಇಂದಿನ ತುರ್ತು ಅಗತ್ಯವಾಗಿದೆ. ಈ ಮಧ್ಯೆ ಸಾಹಿತಿಗಳು ಅತ್ತೂ ಕರೆದು ಔತಣ ಮಾಡಿಸಿಕೊಂಡಂತೆ ಕೇಂದ್ರ ಸಾಹಿತ್ಯ ಅಕಾಡೆಮಿಯಿಂದ ಈಗ ಕಲ್ಬುರ್ಗಿಯವರ ಹತ್ಯೆಯನ್ನು ಖಂಡಿಸುವ ಮತ್ತು ಲೇಖಕರ ಸ್ವಾತಂತ್ರ್ಯವನ್ನು ಎತ್ತಿಹಿಡಿಯುವ ನಿರ್ಣಯವೊಂದನ್ನು ಪಾಸು ಮಾಡಿಸಿಕೊಂಡಿದ್ದಾರೆ. ಇದು ಎಷ್ಟು ಜನ ಸಾಹಿತಿಗಳಿಗೆ ತೃಪ್ತಿ ತಂದಿದೆಯೋ, ಮುಂದಿನ ದಿನಗಳಲ್ಲಿ ಕಾದು ನೋಡಬೇಕು.

ಭಗವಾನ್‌ಗೆ ಮಾತ್ರ ಮೆರಿಟ್ ಪ್ರಶಸ್ತಿ!

ಪ್ರಶಸ್ತಿಗಳ ಬಗ್ಗೆ ಮಾತನಾಡುತ್ತಿರುವ ಈ ಸಂದರ್ಭದಲ್ಲೇ ಈ ಬಾರಿಯ ನಮ್ಮ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಕಟಿಸಿರುವ ಗೌರವ (ಜೀವಮಾನ ಸಾಧನೆಯ!) ಪ್ರಶಸ್ತಿಗಳ ಬಗ್ಗೆಯೂ ಒಂದು ಮಾತು ಹೇಳಬೇಕು. ಕಳೆದ ಕೆಲವು ವರ್ಷಗಳಿಂದ ಈ ಪ್ರಶಸ್ತಿಗಳನ್ನು ರೆವಿನ್ಯೂ ವಿಭಾಗವಾರು ನೋಡಿ, ಸಾಹಿತ್ಯ ನ್ಯಾಯವೊಂದನ್ನು ಬಿಟ್ಟು ಇನ್ನೆಲ್ಲ-ಸಾಮಾಜಿಕ, ಅಲ್ಪಸಂಖ್ಯಾತ, ಲಿಂಗ, ಪ್ರಾದೇಶಿಕ ಇತ್ಯಾದಿ-ನ್ಯಾಯಗಳನ್ನು ಪರಿಗಣಿಸಿ ಪಡಪೋಶಿ ಸಾಹಿತಿಗಳಿಗೆಲ್ಲ ನೀಡುತ್ತಿದ್ದ ಅಕಾಡೆಮಿ ಈ ಬಾರಿ ಈ ನ್ಯಾಯಗಳನ್ನು ಮೀರಿದ ಸಾಹಿತ್ಯ ನ್ಯಾಯವನ್ನೇ ಪರಿಗಣಿಸಿ ಚೆನ್ನಿ, ರಹಮತ್, ಮೊಗಳ್ಳಿ, ಸುಮಿತ್ರಾಬಾಯಿಯವರಂತಹ ಅರ್ಹರಿಗೇ ನೀಡಿದೆ ಎಂದು ಸಮಾಧಾನದ ನಿಟ್ಟುಸಿರು ಬಿಟ್ಟೆ. ಆದರೆ ಆ ನಿಟ್ಟುಸಿರು ಮುಗಿಯುವ ಮುನ್ನವೇ ಗೊತ್ತಾದ ಸಂಗತಿ ಎಂದರೆ, ಇವರಿಗೆ ಈ ಪ್ರಶಸ್ತಿಗಳನ್ನು ನೀಡಿರುವುದೂ ಕ್ರಮವಾಗಿ ಪ್ರಾದೇಶಿಕ, ಅಲ್ಪಸಂಖ್ಯಾತ, ದಲಿತ, ಮಹಿಳಾ ಇತ್ಯಾದಿ ಕೋಟಗಳ ಪ್ರಕಾರವೇ ಅಂತೆ. ಭಗವಾನ್ ಒಬ್ಬರಿಗೇ ಜನರಲ್ ಕೋಟಾದಲ್ಲಿ (ಅಂದರೆ ಸಾಹಿತ್ಯ ನ್ಯಾಯಕ್ಕನುಸಾರವಾಗಿ) ಪ್ರಶಸ್ತಿ ನೀಡಿರುವುದಂತೆ! ಹಾಗಾಗಿ, ನಾನು ಈ ಮೊದಲು ಸಲ್ಲಿಸಿದ್ದ ಅಭಿನಂದನೆಯನ್ನು ಹಿಂದಕ್ಕೆ ಪಡೆಯಲು ಚೆನ್ನಿಯವರಿಗೆ ಕರೆ ಮಾಡಿ ಇದನ್ನು ತಿಳಿಸಿದಾಗ ಅವರು ಬಿದ್ದು ಬಿದ್ದು ನಕ್ಕರು. ಅವರು ನಕ್ಕದ್ದು ಭಗವಾನ್‌ಗೆ ಸಂದ ಪ್ರಶಸ್ತಿಯ ಬಗೆಗೋ ಅಥವಾ ತಮಗೆ ಸಂದ ಪ್ರಶಸ್ತಿಯ ಬಗೆಗೋ ಗೊತ್ತಾಗಲಿಲ್ಲ!

ಅದೇನೇ ಇರಲಿ, ಬಹುಶಃ ಇದೆಲ್ಲ ನನ್ನಂತೆಯೇ ಇತಿಹಾಸ ಸಂಶೋಧಕ ರಾಮಚಂದ್ರ ಗುಹಾರಿಗೂ ಗೊತ್ತಾಗಿಯೋ ಏನೋ, ಅವರು ಮೊನ್ನೆ ಅಖಿಲ ಭಾರತ ಟಿವಿ. ವಾಹಿನಿಯೊಂದರಲ್ಲಿ ಮಾತನಾಡುತ್ತಾ, ಭಗವಾನ್ ಮತ್ತು ಎಂ.ಎಫ್. ಹುಸೇನರ ಹೆಸರುಗಳನ್ನು ಒಟ್ಟಿಗೇ-ಒಂದೇ ಉಸಿರಿನಲ್ಲಿ-ಪ್ರಸ್ತಾಪಿಸಿ, 'ಹುಸೇನರಿಗೆ ಕೊಟ್ಟಂತಹ ಕಿರುಕುಳವನ್ನೇ ಬಲಪಂಥೀಯ ಪುಡಿ ಗುಂಪುಗಳು ನನ್ನ ರಾಜ್ಯ ಕರ್ನಾಟಕದ ಓರ್ವ ಅಪೂರ್ವ ವಿಚಾರವಾದಿಯಾದ ಕೆ.ಎಸ್. ಭಗವಾನ್‌ರಿಗೂ

ಕೊಡುತ್ತಿವೆ' ಎಂದದ್ದು ಎಂದು ಕಾಣುತ್ತದೆ! ಅಖಿಲ ಭಾರತೀಯ ಬೌದ್ಧಿಕತೆ ಎಂದರೆ ಇದೇ ಇರಬೇಕು!

ಬಾಬಾಬುಡನ್‌ಗಿರಿಯ ನೆತ್ತಿಯಲ್ಲಿ...

ನಮ್ಮ ಮಿತ್ರ ಬಳಗದ ಕೆಲ ಕುಟುಂಬಗಳು ಇತ್ತೀಚೆಗೆ ಒಟ್ಟಿಗೆ ಬಾಬಾ ಬುಡನ್‌ಗಿರಿ-ಕಳಸ-ಕುಂದಾದ್ರಿ ಪ್ರವಾಸ ಕೈಗೊಂಡಿದ್ದೆವು. ಕರ್ನಾಟಕದ ಪ್ರಕೃತಿ ಸೌಂದರ್ಯ, ಅದರಲ್ಲೂ ಮಲೆನಾಡಿನಲ್ಲಿ ಮಳೆಗಾಲ ಮುಗಿದ (ಅದು ಎಷ್ಟೇ ದುರ್ಬಲವಾಗಿದ್ದರೂ) ನಂತರ ಗರಿಗೆದರಿ ನಿಲ್ಲುತ್ತದೆ. ಚಿಕ್ಕಮಗಳೂರಿನಿಂದ ಕಳಸದವರೆಗಿನ ಸುಮಾರು ಅರವತ್ತು-ಎಪ್ಪತ್ತು ಕಿ.ಮೀ.ಗಳ ರಸ್ತೆಯ ಇಕ್ಕೆಲಗಳಲ್ಲೂ ಕಾಣುವ ಅರಣ್ಯ ಸಂಪತ್ತು ಮತ್ತು ಜೊತೆಗೇ ಸೇರಿಕೊಂಡಿರುವ ಕಾಫಿ ಮತ್ತು ಚಹಾ ತೋಟಗಳ ವಿಹಂಗಮ ನೋಟ ನಯನಮನೋಹರವೆಂದರೇನು ಎಂಬುದನ್ನು ತಿಳಿಸಿಕೊಡುವಂತಿದೆ. ದಟ್ಟ ಕಾವಳ ಕವಿದ ಸಂಜೆಯಲ್ಲಿ ಆಗುಂಬೆ ಬಳಿಯ ಕಡಿದಾದ ಕುಂದಾದ್ರಿ ಬೆಟ್ಟವನ್ನು ಏರಿ, ಅದರ ತುದಿಯಲ್ಲಿ ಅನುಭವಿಸಿದ ಅವ್ಯಕ್ತ ಆನಂದ ಬಹಳ ದಿನ ಮನದಲ್ಲಿ ಉಳಿಯುವಂತಹದ್ದು. ನಮ್ಮ ಜೊತೆಯಲ್ಲಿದ್ದ ಕಲ್ಬುರ್ಗಿ ಕಡೆಯ ದಂಪತಿಗಳಿಗಂತೂ ಇದೊಂದು ಅಪೂರ್ವ ಅನುಭವ.

ಆದರೆ ಇದೇ ಸಂದರ್ಭದಲ್ಲಿ-ಬಾಬಾಬುಡನ್‌ಗಿರಿಗೆ ಹೋದಾಗ-ನನಗಾದ ಒಂದು ಜಿಗುಪ್ಸೆಯ ಸಂಗತಿಯೊಂದನ್ನೂ ಇಲ್ಲಿ ಹೇಳಬೇಕು. ೨೫ ವರ್ಷಗಳ ಹಿಂದೆ ನಾನು ನೋಡಿದ್ದ ಬಾಬಾಬುಡನ್‌ಗಿರಿ ಬದಲಾಗಿದೆ. ನಾನು ಯೂರೋಪಿನ ಆಲ್ಪ್ಸ್ ಪರ್ವತದ ತುತ್ತತುದಿಗೂ ಹೋಗಿ ಬಂದಿದ್ದೇನೆ. ಆದರೆ ಬಾಬಾ ಬುಡನ್ ಗಿರಿಯ ತುತ್ತತುದಿಯಲ್ಲಿನ ದೈವೀಕವೆನ್ನಿಸುವ ಮಂಜು ಕವಿದ ಹಸಿರು ಗುಡ್ಡಗಳ ಬಯಲಿನ ಆನಂದ ಎಲ್ಲೂ ಸಿಗುವುದಿಲ್ಲ. ಆದರೆ ಆ ಆನಂದದ ರುಚಿ ಕೆಡುವಂತೆ ಬಾಬಾಬುಡನ್ ಪ್ರದೇಶವನ್ನೀಗ ದತ್ತಮಾಲಾದವರ ಕಾಟದಿಂದ ರಕ್ಷಿಸಲು ಕಬ್ಬಿಣದ ಪಂಜರವನ್ನಾಗಿ ಪರಿವರ್ತಿಸಲಾಗಿದೆ. ಇಲ್ಲಿ ಧರ್ಮ ಕಬ್ಬಿಣದ ಪಂಜರದಲ್ಲಿ ಸೆರೆಯಾಗಿದೆ. ಬಾಬಾ ಬುಡಾನ್ ದತ್ತಾತ್ರೇಯ ಪೀಠದ ಸುತ್ತಣ ಗುಡ್ಡಗಳಲ್ಲಿ ಹರಡಿರುವ ತಮ್ಮ ಹಿರಿಯರ ಗೋರಿಗಳಿಗೆ ಹೂ ಇರಿಸಲು ಆ ಕಬ್ಬಿಣದ ಪಂಜರದ ಮಧ್ಯೆ ಜಾಗ ಮಾಡಿಕೊಂಡು ತೂರಿ ಹಾರುವ ಸಾಹಸ ಮಾಡುತ್ತಿದ್ದ ಕೆಲವು ಮುಸ್ಲಿಂ ಶ್ರದ್ಧಾಳು ಯುವಕರನ್ನು ಕಂಡು ನನ್ನ ಕಣ್ಣುಗಳು ತುಂಬಿಕೊಂಡವು. ಇದನ್ನೆಲ್ಲ ಯಾರಿಗೆ ಹೇಳುವುದು?

ಕನ್ನಡದ ವಿಶಿಷ್ಟ ಲೇಖಕ ತೇಜಸ್ವಿ

(ಇದೇ ಸಂಚಿಕೆಯ 'ಸಮಕಾಲೀನ' ಪುಟಗಳಡಿ 'ನಮ್ಮ ಇಬ್ಬರು ವಿಶಿಷ್ಟ ಲೇಖಕರು' ಶೀರ್ಷಿಕೆಗಾಗಿ ಬರೆದ ಟಿಪ್ಪಣಿ)

ಹಲವು ವಿವಾದಗಳ ನಡುವೆಯೂ ತನ್ನದೇ ಒಂದು ಬೃಹತ್ ಓದುಗ ವರ್ಗವನ್ನು ಸೃಷ್ಟಿಸಿಕೊಂಡಿರುವ ಭೈರಪ್ಪನವರಿಗೆ, ಯಾವುದೇ ವಿವಾದದ

ಗೊಡವೆಯೂ ಇಲ್ಲದೆ ಸರಿಸಮನಾಗಿ ಅಥವಾ ಇನ್ನೂ ಹೆಚ್ಚಿನ ಸಂಖ್ಯೆಯ ಮತ್ತು ವೈವಿಧ್ಯದ ಓದುಗ ವರ್ಗವನ್ನು ಸೃಷ್ಟಿಸಿಕೊಂಡಿರುವ ತೇಜಸ್ವಿ ಎಂದೇ ಜನಪ್ರಿಯರಾದ ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಆರಂಭದಲ್ಲಿ ನವ್ಯ ಮಾರ್ಗದಲ್ಲೇ ಬರೆದವರು. ಆದರೆ ಬಹುಬೇಗ ಇದು 'ಕಲಿತ ಮೇಷ್ಟ್ರು'ಗಳ ಅಕ್ಷರ ವಾಮಾಚಾರದ ಸಾಮ್ರಾಜ್ಯ, ಇದಕ್ಕೂ ನಮ್ಮ ಸುತ್ತಲಿನ ಸಮಾಜಕ್ಕೂ ಯಾವುದೇ ಸಂಬಂಧವಿಲ್ಲ ಎಂಬ ತೀರ್ಮಾನಕ್ಕೆ ಬಂದು ಹಳ್ಳಿಗೆ ಹೋಗಿ ನೆಲೆಸಿದರು. ಇದಕ್ಕೆ ಸ್ಫೂರ್ತಿ 'ಕುವೆಂಪು ಅವರ ಕಲಾಸೃಷ್ಟಿ, ಕಾರಂತರ ಜೀವನ ದೃಷ್ಟಿ ಮತ್ತು ಲೋಹಿಯಾ ಅವರ ತತ್ವ ಚಿಂತನೆ' ಎಂದು ಅವರೇ ಹೇಳಿಕೊಂಡಿದ್ದಾರೆ.

ಹಳ್ಳಿಗಾಡಿನಲ್ಲಿ ತೇಜಸ್ವಿ ನಮ್ಮ ಗ್ರಾಮೀಣ ಸಮಾಜವು ತನ್ನ ಬದುಕನ್ನು ಆಕ್ರಮಿಸಿಕೊಳ್ಳುತ್ತಿದ್ದ ಆಧುನಿಕತೆಯ ಪ್ರಭಾವವನ್ನು ಮುಖಾಮುಖಿಯಾಗುತ್ತಿದ್ದ ಬಗೆಗಳನ್ನು ದೂರನಿಂತು ವಿನಯದಿಂದ ವೀಕ್ಷಿಸಿದರು. ಆ ಮುಖಾಮುಖಿ ಮನುಷ್ಯ-ಮನುಷ್ಯರ ನಡುವಣ ಮುಖಾಮುಖಿಯನ್ನೂ ಮೀರಿ ಮನುಷ್ಯ ಮತ್ತು ಅವನ ಸುತ್ತಲಿನ ಜೀವ ಪರಿಸರದ ಮುಖಾಮುಖಿಯನೂ ಒಳಗೊಂಡಿದೆ ಎಂಬುದನ್ನು ಅರಿತರು. ಆ ಅರಿವಿನ ದಾರಿಯಲ್ಲಿ ಸ್ಥಳೀಯ ಜ್ಞಾನಪರಂಪರೆಯ ಸತ್ಯ ಮತ್ತು ಸತ್ವಗಳು ಅವರಿಗೆ ಗೋಚರವಾಗಿ ಉಂಟಾದ ಬೆರಗನ್ನು ಅವರು ಅದೇ ಬೆರಗಿನಲ್ಲಿ 'ಅನ್ನ ತಿನ್ನುವ ಎಲ್ಲರಿಗೂ ಸಂವಹನಗೊಳ್ಳುವ' ಭಾಷೆ ಮತ್ತು ಧಾಟಿಗಳಲ್ಲಿ ಬರೆದರು. ಜನ ಅದರಲ್ಲಿ ತಮ್ಮನ್ನೇ ಕಂಡುಕೊಂಡು ಅದು ತಮ್ಮದೇ ಸಾಹಿತ್ಯವೆಂಬಂತೆ ಮುಗಿಬಿದ್ದು ಓದತೊಡಗಿದರು. ಕಥೆ-ಕಾದಂಬರಿಗಳ ಜೊತೆಗೇ ತೇಜಸ್ವಿ ಸಾಮಾನ್ಯ ಮಾನವ ಕುತೂಹಲದ ಐತಿಹಾಸಿಕ ಮತ್ತು ವೈಜ್ಞಾನಿಕ ಆಖ್ಯಾಯಿಕೆ ಮತ್ತು ಸಾಹಸಗಳ ಕಥೆಗಳನ್ನೂ ಬರೆದು ಈವರೆಗೆ ಯಾರೂ ಗಮನಕೊಡದಿದ್ದ ಕನ್ನಡ ಜನಸಾಮಾನ್ಯರ ಲೌಕಿಕ ಜ್ಞಾನದ ಹಸಿವನ್ನು ನೀಗಿಸುವ ದೊಡ್ಡ ಪ್ರಯತ್ನ ಮಾಡಿದರು. ನಮ್ಮ ಕಾಲದ ದೊಡ್ಡ ಲೇಖಕರಷ್ಟೇ ಅಲ್ಲ, ಮಾರ್ಗಪ್ರವರ್ತಕ ಲೇಖಕರೆಂಬ ಅಭಿದಾನಕ್ಕೂ ಒಳಗಾದರು. ಸಾಹಿತ್ಯಕ್ಕೆ ತೇಜಸ್ವಿಯವರ ಬಹುದೊಡ್ಡ ಕೊಡುಗೆಯೆಂದರೆ ಸಾಹಿತ್ಯವನ್ನು ಅದರ ಪೂಜ್ಯತೆಯ ಪೀಠದಿಂದ ಇಳಿಸಿ, ಅದರ ಅಧಿಕಾರ ಕೇಂದ್ರೀಯತೆಯಿಂದ ಅದನ್ನು ಬಿಡುಗಡೆಗೊಳಿಸಿದ್ದು.

ಸಾಹಿತ್ಯ ಚಿಂತನಾ ಕ್ಷೇತ್ರದಲ್ಲೂ ಹೊಸ ಒಳನೋಟಗಳ ಬರಹಗಳನ್ನು ನೀಡಿರುವ ತೇಜಸ್ವಿ ಕನ್ನಡ ಸಾಹಿತ್ಯ ಚರಿತ್ರೆ ಮತ್ತು ಪಂಪ-ಕುಮಾರವ್ಯಾಸ-ಕುವೆಂಪುರಾದಿಯಾಗಿ ಕನ್ನಡದ ಮುಖ್ಯ ಲೇಖಕರನ್ನು ಗ್ರಹಿಸಬೇಕಾದ ಹೊಸ ನೆಲೆಗಳ ಬಗ್ಗೆಯೂ ಬರೆದು ಕುತೂಹಲ ಕೆರಳಿಸಿದರು. ಆದರೆ ತನ್ನದೇ ಮಡಿ-ಮೈಲಿಗೆಗಳ ಪ್ರಪಂಚದಲ್ಲಿ ಬಂದಿಯಾಗಿರುವ ನಮ್ಮ ಸಾಹಿತ್ಯದ ಅಕಡೆಮಿಕ್ ಲೋಕ ಸಹಜವಾಗಿಯೇ ಈ ಚಿಂತನೆಗಳನ್ನು ನಿರ್ಲಕ್ಷಿಸುತ್ತಲೇ ಬಂದಿದೆ.

●

ಡಿಸೆಂಬರ್, ೨೦೧೫

ಮೌಢ್ಯ ನಿಷೇಧ, ಪ್ರಶಸ್ತಿ ವಾಪಸಾತಿಗಳ ಸುತ್ತಮುತ್ತ...

ಪ್ರಗತಿಪರತೆ ಎನ್ನುವುದು ಜನಪ್ರೀತಿಗಿಂತ ಹೆಚ್ಚಾಗಿ ಸ್ವಯಂವಿಚಾರ ಶ್ರೇಷ್ಠತೆಯ ಅಹಂಕಾರ ಅಥವಾ ರಾಜಕೀಯ ವೈರತ್ವ ಸಾಧನೆಯ ಮಾರ್ಗಗಳಲ್ಲೊಂದಾಗಿ, ಗೀಳಿನಂತಾದರೆ ಅದು ಜನರ ವಿಶ್ವಾಸ ಕಳೆದುಕೊಳ್ಳುತ್ತದೆ. ನಮ್ಮ ಪ್ರಗತಿಪರ ಅಥವಾ ಎಡಪಂಥೀಯ ರಾಜಕಾರಣ ಕಾಲಕ್ರಮೇಣ ಜನರಿಂದ ತಿರಸ್ಕೃತವಾಗಿ ಮೋದಿಯವರ ಬಲಪಂಥೀಯ ಸರ್ಕಾರ ಅಸ್ತಿತ್ವಕ್ಕೆ ಬಂದಿರುವುದು ಇದೇ ಕಾರಣದಿಂದಾಗಿಯೇ. ಆದರೆ ನಮ್ಮ ಕೆಲವು ಪ್ರಗತಿಪರರಿಗೆ ಇನ್ನೂ ಬುದ್ಧಿ ಬಂದಂತಿಲ್ಲ. ಹೀಗೆ ನಾನು ಯೋಚಿಸಲು ಕಾರಣವಾಗಿದ್ದು ಇತ್ತೀಚಿನ ಎರಡು ಮೂರು ಘಟನೆಗಳು:

ಗೆಳೆಯ ರಾಜೇಂದ್ರ ಚೆನ್ನಿಯವರು ಕೆಲವು ದಿನಗಳ ಹಿಂದೆ ನನಗೆ ಕರೆ ಮಾಡಿ ಮೌಢ್ಯ ನಿಷೇಧ ಕಾನೂನು ಜಾರಿಗೆ ತರಲು ಒತ್ತಾಯಿಸಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲು ಬರಬೇಕೆಂದು ಆಹ್ವಾನಿಸಿದರು. ನಾನು ಬರಲಾರೆ ಎಂದೆ. ಕಾರಣ, ಮುಖ್ಯವಾಗಿ ಮೌಢ್ಯಗಳನ್ನು ಕಾನೂನಿನ ಭಾಷೆಯಲ್ಲಿ ನಿಖರವಾಗಿ ನಿರೂಪಿಸುವುದು ಸಾಧ್ಯ ಎಂದು ನಾನು ನಂಬುವುದಿಲ್ಲ. ಅಲ್ಲದೆ ಅಂತಹ ಕಾನೂನು ನಮ್ಮ ಶಾಸನ ಸಭೆಯಲ್ಲಿ ಅನುಮೋದಿತವಾಗುವ ಸಂಭವವೇ ಇಲ್ಲ. ಹಾಗಾಗಿ ಇದೊಂದು ವ್ಯರ್ಥ ಪ್ರಯತ್ನ. ಅಕಸ್ಮಾತ್ ಹಲವರ ಆತ್ಮ ವಂಚನೆಯನ್ನೂ ಮೀರಿ ಅದು ಕಾನೂನಾದರೂ, ಅದನ್ನು ಜಾರಿಗೊಳಿಸುವವರು ಯಾರು? ಹೇಗೆ? ನಮಗೆ ತಿಳಿದಂತೆ ನಮ್ಮ ರಾಜಕಾರಣಿಗಳು, ಅಧಿಕಾರಿಗಳು, ಪೋಲೀಸಿನವರು ಸೇರಿದಂತೆ ಇಡೀ ವ್ಯವಸ್ಥೆಯೇ ಮೌಢ್ಯಾಚರಣೆಗಳಲ್ಲಿ ಮುಳುಗಿರುವಾಗ ಇದು ಜಾರಿಗೆ ಬರುವುದು ಜನಸಾಮಾನ್ಯರಿಗೆ

ಕಿರುಕುಳವಾಗಿ, ಭ್ರಷ್ಟಾಚಾರದ ಇನ್ನೊಂದು ಮಾರ್ಗವಾಗಿ ಮಾತ್ರ ಎಂಬುದು ನನ್ನ ಆತಂಕ. ಇಂತಹ ವಾತಾವರಣದಲ್ಲಿ ಪ್ರಭುತ್ವದ ಕೈಗೆ ನಾವು ಹೆಚ್ಚೆಚ್ಚು ಅಧಿಕಾರಗಳನ್ನು ಕೊಡುತ್ತಾ ಹೋಗುವುದು ಅಂತಿಮವಾಗಿ ಜನವಿರೋಧಿ ಕ್ರಮವೆಂದೇ ನನ್ನ ಅಭಿಪ್ರಾಯ.

ಅಂದಹಾಗೆ, ವಿಚಾರವಾದಿ ದಾಭೋಳ್ಕರ್ ಹತ್ಯೆಯ ಸುಳಿವು ಸಿಗದೆ, ಮೇಲಿನವರ ಒತ್ತಡಕ್ಕೆ ಒಳಗಾದ ಮಹಾರಾಷ್ಟ್ರದ ಪೋಲೀಸ್ ಆಧಿಕಾರಿ, ನೆರವಿಗಾಗಿ ಧಾವಿಸಿದ್ದು ಓರ್ವ ತಾಂತ್ರಿಕನ ಬಳಿಗೆ ಎಂಬ ವರದಿಯನ್ನು ಈ ಹಿಂದೆ ಓದಿದ ನೆನಪಿದೆ! ಹಾಗೇ ಇತ್ತೀಚೆಗೆ 'ಚಂದ್ರಯಾನ' ಅಂತರಿಕ್ಷ ನೌಕೆಯನ್ನು ಹಾರಿಸುವ ಮುನ್ನ ಇಸ್ರೋದ ಅಧ್ಯಕ್ಷರು ಅದರ ಪ್ರತಿಕೃತಿಯನ್ನು ತಿರುಪತಿ ವೆಂಕಟರಮಣನ ಸನ್ನಿಧಿಗೆ ಒಯ್ದು ಪೂಜೆ ಮಾಡಿಸಿಕೊಂಡು ಬಂದ ಘಟನೆ ಯಾರಿಗಾದರೂ ನೆನಪಿರಬಹುದು!

ಅದಿರಲಿ, ಬೆಂಗಳೂರಿನಲ್ಲಿ ನಡೆದ ಮೌಢ್ಯ ವಿರೋಧಿ ಸಭೆ ಮೆರವಣಿಗೆಯ ನೇತೃತ್ವ ವಹಿಸಿದವರಾದರೂ ಯಾರು? ಮಠಾಧೀಶರ ಒಂದು ದಂಡೇ ಅಲ್ಲಿ ನೆರೆದಿತ್ತು. ಮಠಾಧೀಶರೆಂದರಾದರೂ ಯಾರು? ಅವರ ಜಾತಿಗಳ ಅಧಿಪತಿಗಳು. ಜಾತಿಯೇ ಅವರ ಶಕ್ತಿ. ಜಾತಿಯೇನು ವೈಜ್ಞಾನಿಕ ಆಧಾರವುಳ್ಳದ್ದೇ? ಅದೇ ನನ್ನ ಪ್ರಕಾರ ಮೂಲ ಮೌಢ್ಯ ಅಥವಾ ಮಾತೃ ಮೌಢ್ಯ. ಅದೇ ಎಲ್ಲ ಮೌಢ್ಯಗಳಿಗೆ ಆಶೀರ್ವಾದ ರೂಪಿಯಾಗಿ ಕೆಲಸ ಮಾಡುತ್ತಿರುವುದು. ರಾಜ್ಯದ ಹಲವು ಕಡೆ ಶಾಲೆಗಳಲ್ಲಿ ಮಧ್ಯಾಹ್ನದ ಬಿಸಿಯೂಟವನ್ನು ದಲಿತರು ತಯಾರು ಮಾಡುತ್ತಾರೆಂದು ಸವರ್ಣೀಯರ ಮಕ್ಕಳು ಆ ಊಟವನ್ನೇ ಬಿಟ್ಟು ಪ್ರತಿಭಟಿಸುತ್ತಿರುವ ಸಂದರ್ಭಗಳು ಎಷ್ಟಿಲ್ಲ? ಆಗ ಈ ಮಠಾಧೀಶರು ಏನು ಮಾಡುತ್ತಿದ್ದರು? ಇವರಲ್ಲಿ ಯಾರೊಬ್ಬರಾದರೂ ಅಸ್ಪೃಶ್ಯ ಮಕ್ಕಳ ಪರವಾಗಿ ಮಧ್ಯ ಪ್ರವೇಶಿಸಿದ ಉದಾಹರಣೆ ಉಂಟೆ?

ಯಾರೂ ಮೌಢ್ಯವೆಂದು ತಿಳಿದೂ ಮೌಢ್ಯಚಾರಣೆಗಳಲ್ಲಿ ತೊಡಗುವುದಿಲ್ಲ. ಇವರು ಹೇಳುವ 'ವೈಜ್ಞಾನಿಕ ಪರಿಹಾರ'ಗಳೆಲ್ಲ ವಿಫಲವಾದಾಗ ಅಥವಾ ಕೈಗೆಟಕುವ ಸ್ಥಿತಿಯಲ್ಲಿಲ್ಲದ್ದಾಗ ಮಾತ್ರ ಜನ ಅಸಹಾಯಕರಾಗಿ ಇವರು ಹೇಳುವ ಮೌಢ್ಯಾಚರಣೆಗಳ ಮೊರೆ ಹೋಗುತ್ತಾರೆ. ಅದರಲ್ಲಿ ಅಪರಾಧ ಅಥವಾ ಶೋಷಣೆ ಇದ್ದರೆ ಅವನ್ನು ನಿರ್ವಹಿಸಲು ಹೇಗೂ ಸಾಮಾನ್ಯ ಕಾನೂನುಗಳು ಇವೆ. ನಿಜವಾಗಿ ಈಗ ಅಗತ್ಯವಿರುವುದು, ಮೌಢ್ಯಾಚರಣೆಗಳಿಗೇಕೆ ಜನ ಮೊರೆ ಹೋಗುತ್ತಾರೆ ಎಂಬುದರ ಸಹಾನುಭೂತಿಯ ಪರಿಶೀಲನೆ ಮತ್ತು ಇದನ್ನು ತಪ್ಪಿಸಲು ಅಗತ್ಯವಾದ ನಾಗರೀಕ ಸೌಲಭ್ಯಗಳ ವಿಸ್ತರಣೆಗೆ ಸರ್ಕಾರದ ಮೇಲೆ ಒತ್ತಡ. ಈ ಆಚರಣೆಗಳ ಹಿಂದೆ ಇರುವುದು ತಮ್ಮ ರಾಜಕೀಯ ವಿರೋಧಿಗಳ ಜಾಲ ಎಂಬ ಮೌಢ್ಯವೇ ಈ ಸ್ವಯಂಘೋಷಿತ ವಿಚಾರವಾದಿಗಳನ್ನು ಆಗಾಗ್ಗೆ ಇಂತಹ ಸಭೆ–ಮೆರವಣಿಗೆಗಳಿಗೆ ಮೊರೆ ಹೋಗುವಂತೆ ಮಾಡುವುದೆಂದು ಕಾಣುತ್ತದೆ. ಅವರು ಮೊದಲು ಈ ಮೌಢ್ಯವನ್ನು ತೊರೆಯಬೇಕಿದೆ.

ಈ ಪ್ರಗತಿಪರರು ಇತ್ತೀಚೆಗೆ ಕೈಗೊಂಡ ಇನ್ನೆರೆಡು ಇಂತಹ ಅನುಚಿತ

ಕೆಲಸಗಳೆಂದರೆ, ಅಸಹಿಷ್ಣುತೆಯ ವಾತಾವರಣದ ವಿರುದ್ಧ ನಡೆಸಿದ ಪ್ರಶಸ್ತಿ ವಾಪಸಾತಿ ಆಂದೋಲನವನ್ನು ಒಂದು ರಾಜಕೀಯ ಬಂಡವಾಳವಾಗಿ ಕ್ರೋಢೀಕರಿಸಿಕೊಳ್ಳಲು ಬೆಂಗಳೂರಿನಲ್ಲಿ 'ಭಾರತ ಉಳಿಸಿ' ಎಂಬ ವೇದಿಕೆಯಡಿ ಮತ್ತು ಆನಂತರ ಧಾರವಾಡದಲ್ಲಿ ಆಯೋಜಿಸಿರುವ 'ಪ್ರಶಸ್ತಿ ವಾಪಸ್ ಮಾಡಿದವರ ಸಮಾಗಮ' ಎಂಬ ಕಾರ್ಯಕ್ರಮಗಳು. ಇದರ ಜೊತೆಗೆ ಈಗ ನಟ ಅಮೀರ್‌ಖಾನನ ಹಿಂದೂ ಕೋಮುವಾದ ಕುರಿತ ಉತ್ಪ್ರೇಕ್ಷಿತ ಆತಂಕದ ಅಧಿಕ ಪ್ರಸಂಗದ ಹೇಳಿಕೆ ಬೇರೆ ಸೇರಿಕೊಂಡಿದೆ!

ಬಹುಶಃ ಬಿಹಾರ ಚುನಾವಣೆಗಳ ಮೇಲೆ ಕಣ್ಣಿಟ್ಟು ಸಂಘ ಪರಿವಾರವು ಮತೀಯ ಧೃವೀಕರಣಕ್ಕಾಗಿ ಗೋಮಾಂಸ ಇತ್ಯಾದಿಗಳ ನೆಪದಲ್ಲಿ ದೇಶದಲ್ಲಿ ಸೃಷ್ಟಿಸಿದ ಅಸಹಿಷ್ಣುತೆಯ ವಾತಾವರಣ ದಟ್ಟವಾಗುತ್ತಿದ್ದಂತೆ ಅದರ ವಿರುದ್ಧ ರಾಷ್ಟ್ರದ ವಿವಿಧ ಕಡೆಗಳಿಂದ ದನಿ ಎದ್ದವು. ನಮ್ಮ ಕೆಲ ಲೇಖಕ–ಬುದ್ಧಿಜೀವಿಗಳು ತಮ್ಮ ಪ್ರಶಸ್ತಿ–ಸ್ಥಾನಮಾನಗಳನ್ನು ವಾಪಸ್ ಮಾಡಿ ಪ್ರತಿಭಟಿಸಿದ್ದು ಸರಿಯೇ. ಇದಕ್ಕೆ ಪ್ರತಿಸ್ಪಂದನವಾಗಿ ಬಿಹಾರ ಚುನಾವಣೆಗಳಲ್ಲಿ ಜನ ಈ ಅಸಹಿಷ್ಣುತೆಯ ರಾಜಕಾರಣವನ್ನು ಸಹಿಸುವುದಿಲ್ಲ ಎಂಬುದನ್ನು ಸ್ಪಷ್ಟವಾಗಿ ಸಾಬೀತುಪಡಿಸಿದ್ದೂ ಆಯಿತು. ಅಲ್ಲಿಗೆ ಈ ಪ್ರತಿಭಟನೆ ಸದ್ಯಕ್ಕಾದರೂ ನಿಲ್ಲಬೇಕಿತ್ತು. ಆದರೆ ಅದನ್ನೀಗ ಒಂದು ರಾಜಕೀಯ ಅಸ್ತ್ರವನ್ನಾಗಿ ಪರಿವರ್ತಿಸಿಕೊಳ್ಳಲು ನಡೆದಿರುವ ಪ್ರಯತ್ನ ಪ್ರಶಸ್ತಿ ವಾಪಸ್ ನೀಡಿದವರ ಉದ್ದೇಶಗಳನ್ನೇ ಅನುಮಾನಾಸ್ಪದಗೊಳಿಸುವಂತಿದೆ. ದೇಶದ ಸಂಕೀರ್ಣ ಸಾಂಸ್ಕೃತಿಕ ನಡೆಗಳನ್ನು ಬಂಡವಾಳವಾಗಿ, ತಮ್ಮ ಪಂಥೀಯ ರಾಜಕೀಯ ಹೋರಾಟಕ್ಕೆ ಬಳಸಿಕೊಳ್ಳುವುದು ಸಂಸ್ಕೃತಿಗೆ ಮಾಡುವ ಅಪಚಾರವೇ ಸರಿ.

ಮೋದಿ ಸರ್ಕಾರದ ವಿರುದ್ಧ ಹೋರಾಟ ಮಾಡಬಯಸುವವರು ಹೋರಾಟ ಮಾಡಲಿ. ಅದು ಅವರ ಹಕ್ಕು. ಆದರೆ ರಾಜ್ಯದಲ್ಲಿ ಇವರ ಈ ಸದ್ಯದ ಹೋರಾಟ, ಕಲ್ಬುರ್ಗಿಯವರ ಹತ್ಯೆಯನ್ನು ಮುಂದಿಟ್ಟುಕೊಂಡು ಈ ಹತ್ಯೆಯ ಇಡೀ ಜವಾಬ್ದಾರಿಯನ್ನು ಕೇಂದ್ರ ಸರ್ಕಾರದ ಮೇಲೆ ಹೊರಿಸುವ ರಾಜಕಾರಣದ ಒಂದು ಭಾಗವಾಗಿಯೂ ಕಾಣುತ್ತಿದೆ. ಮೊನ್ನೆ ನೋಡಿ, ರಾಜ್ಯೋತ್ಸವ ಪ್ರಶಸ್ತಿಗಳನ್ನು ಸ್ವೀಕರಿಸಲು ನಮ್ಮ ಯಾವ 'ಪ್ರಗತಿಪರ' ಸಾಹಿತಿ–ಬುದ್ಧಿಜೀವಿಗೂ ಕಲ್ಬುರ್ಗಿ ಹತ್ಯೆ ಅಡ್ಡಿಯಾಗಲಿಲ್ಲ! ಈ ಸಂಬಂಧದ ನಿರ್ಲಜ್ಜೆಯ ಪರಮಾವಧಿ ಎಂದರೆ, ಪ್ರಶಸ್ತಿ ಸ್ವೀಕರಿಸಿದ ಇಂತಹ ಮಹನೀಯರೊಬ್ಬರು ಟಿವಿ ವಾಹಿನಿಯೊಂದಕ್ಕೆ ನೀಡಿದ ಈ ಹೇಳಿಕೆ: "ಕಲ್ಬುರ್ಗಿ ಹತ್ಯೆಯ ಹಿನ್ನೆಲೆಯಲ್ಲಿ ಪ್ರಶಸ್ತಿ ಸ್ವೀಕರಿಸಲು ನಮಗೆ ಬಹಳ ಮುಜುಗರ–ಸಂಕೋಚಗಳಾಗುತ್ತಿದ್ದು, ಈ ಮುಜುಗರ–ಸಂಕೋಚಗಳೊಂದಿಗೇ ಪ್ರಶಸ್ತಿ ಸ್ವೀಕರಿಸಲು ಬೆಂಗಳೂರಿಗೆ ಹೋಗುತ್ತಿದ್ದೇವೆ"! ಹಾಗೆ ನೋಡಿದರೆ ಇಂತಹ ನಿರ್ಲಜ್ಜ ಮುಜುಗರ–ಸಂಕೋಚಗಳಿಗೆ ಸಿಕ್ಕಿರುವ ಸಾಹಿತಿ–ಬುದ್ಧಿಜೀವಿ ರಾಜ್ಯದಲ್ಲಿ ಇವರೊಬ್ಬರೇ ಅಲ್ಲ!

ನಮ್ಮ ಹಿರಿಯ ವಿಚಾರವಾದಿ ಜಿ.ಕೆ. ಗೋವಿಂದರಾಯರ 'ಮನು v/s ಅಂಬೇಡ್ಕರ್' ಎಂಬ ಶೀರ್ಷಿಕೆಯುಳ್ಳ ಪುಸ್ತಕವೊಂದನ್ನು ಇತ್ತೀಚೆಗೆ ಓದಿದೆ. ಆಶ್ಚರ್ಯವೆಂದರೆ, ಇದರಲ್ಲಿ ಎಲ್ಲಿಯೂ ಅಂಬೇಡ್ಕರ್‌ರೂ ಇಲ್ಲ; ಮನುವೂ ಇಲ್ಲ. ಬಹುಶಃ ಮಾರುಕಟ್ಟೆ ಉದ್ದೇಶದಿಂದ ಲಡಾಯಿ ಪ್ರಕಾಶನದವರು ಪುಸ್ತಕಕ್ಕೆ ಈ ಶೀರ್ಷಿಕೆ ಕೊಟ್ಟಿರಬಹುದು! ವಾಸ್ತವವಾಗಿ ಇದು ಗೋವಿಂದರಾಯರು ಪೇಜಾವರಶ್ರೀಗಳು ಕ್ರಾಂತಿಕಾರಿಯಾಗುವಂತೆ ಮನವೊಲಿಸಲು ಅವರಿಗೆ ಬರೆದಿರುವ ದೀರ್ಘ ಬಹಿರಂಗ ಪತ್ರ! ನಮ್ಮ ವಿಚಾರವಾದ ಎಲ್ಲಿಂದ ಎಲ್ಲಿಯವರೆಗೆ ಹರಿದಿದೆ ಎಂದು ತಿಳಿಯಲು ಇದನ್ನು ಓದಬಹುದು!

<u>ಒಂದು ಪತ್ರ</u>

ರಾಜೇಂದ್ರ ಚೆನ್ನಿಯವರ ಲೇಖನಕ್ಕೊಂದು ಪ್ರತಿಕ್ರಿಯೆ:

ಕಳೆದ ಸಂಚಿಕೆಯಲ್ಲಿ ರಾಜೇಂದ್ರ ಚೆನ್ನಿಯವರು ನವ್ಯ ಸಾಹಿತ್ಯ ಕುರಿತಂತೆ ಬರೆದಿರುವ ಲೇಖನದ ಬಗ್ಗೆ ನನ್ನ ಕೆಲವು ತಕರಾರುಗಳು ಹೀಗಿವೆ (ಈ ತಕರಾರುಗಳೇ ಅವರ ಅಭಿಪ್ರಾಯಗಳನ್ನು ಪರಿಚಯಿಸುತ್ತವೆ):

ನವ್ಯವು ನವೋದಯದ ದುರ್ಬಲ ಅನುಕರಣೆಯ ಲೇಖಕರನ್ನಷ್ಟೇ ಟೀಕಿಸಿತು ಮತ್ತು ಅದು ನವೋದಯದ ಮುಖ್ಯ ಕೃತಿಗಳನ್ನು ಟೀಕಿಸಲಿಲ್ಲ ಎಂಬ ಚೆನ್ನಿಯವರ ಮಾತನ್ನು ಒಪ್ಪುವುದು ಕಷ್ಟ. ಏಕೆಂದರೆ, ಯಾವುದೇ ಸಾಹಿತ್ಯ ಮಾರ್ಗ ತನ್ನ ಮೀಮಾಂಸೆಯನ್ನು ಇನ್ನೊಂದು ಸಾಹಿತ್ಯ ಮಾರ್ಗದ ದುರ್ಬಲ ಕೃತಿಗಳನ್ನು ಕುರಿತ ಟೀಕೆಯ ಆಧಾರದ ಮೇಲೆ ಕಟ್ಟಿಕೊಳ್ಳಲಾರದು. ನವ್ಯವು ತನ್ನ ಸಂಸ್ಥಾಪನೆಗಾಗಿ ಮಂಡಿಸಿದ ವಾದಗಳೆಲ್ಲವೂ ನವೋದಯದ ಪ್ರಧಾನ ಲಹರಿಯನ್ನೇ, ಅದರ ಪ್ರಧಾನ ಲೇಖಕರನ್ನೇ ಗುರಿಯಾಗಿಟ್ಟುಕೊಂಡಿತ್ತು ಎಂಬುದು ಅಡಿಗ, ಅನಂತಮೂರ್ತಿ ಮತ್ತು ಲಂಕೇಶರ ಆ ಕಾಲದ ಸಾಹಿತ್ಯ ವಿಮರ್ಶೆಯನ್ನು ಗಮನಿಸಿದರೆ ಗೊತ್ತಾಗುವುದು. ನವ್ಯರು ನವೋದಯದ ಬಗ್ಗೆ ಪೂರ್ತಿ ಕಣ್ಣುಬಿಟ್ಟು ನೋಡಿದ್ದು ತಮ್ಮ ಪ್ರಭಾವದ ಇಳಿಗಾಲದಲ್ಲಿ; ನಿರ್ದಿಷ್ಟವಾಗಿ, ಅವರನ್ನು ತೇಜಸ್ವಿ 'ಒಕ್ಕೂಟ'ದ ಅಡಿಯಲ್ಲಿ ಝಾಢಿಸಿ ಬರೆದ ಮೇಲೆ ಎಂಬುದನ್ನು ನಾವು ಗಮನಿಸಬೇಕು. ಹೀಗಾಗಿ, ಆ ಕಾಲದಲ್ಲಿ ಸಾಹಿತ್ಯದ ಕಡೆ ಆಕರ್ಷಿತರಾದ ನಮ್ಮ ತಲೆಮಾರಿನವರು ಬಹಳ ಕಾಲ ಕುವೆಂಪು, ಮಾಸ್ತಿ, ಬೇಂದ್ರೆ, ಕಾರಂತ ಮುಂತಾದವರನ್ನು ಗಂಭೀರವಾಗಿ ಓದುವ ಗೋಜಿಗೇ ಹೋಗದಂತಾಯಿತು.

ಸಾಹಿತ್ಯ ಕೃತಿಯೊಂದರ ಭಾಷೆ ಮತ್ತು ಬಂಧಗಳನ್ನು ಕುರಿತ ನವ್ಯರ ನಿಲುವುಗಳು ವಿಶಿಷ್ಟವಾದವು, ನಿಜ. ಅವನ್ನು ಒಪ್ಪುವುದು ಬೇರೆ ಮಾತಾದರೆ, ಅವೇ(ನವ್ಯರ ಆ ನಂಬಿಕೆಗಳೇ) ಸಾಹಿತ್ಯದ ವಿಶಿಷ್ಟ ಲಕ್ಷಣಗಳು ಎಂದೆನ್ನುವುದನ್ನು ಒಪ್ಪುವುದು ಕಷ್ಟ. ಹಾಗಾಗಿಯೇ ಪುತಿನ ಮತ್ತು ಕೆಎಸ್‌ನ ಅವರ ಕಾವ್ಯ ಕುರಿತು

ನವ್ಯರು ಆಡುವ ಮಾತುಗಳನ್ನು ತಾವು ಒಪ್ಪುವುದಾಗಿ ಹೇಳುವ ಚೆನ್ನಿಯವರಿಗೆ ಅವೇ ಮಾತುಗಳು ಕುವೆಂಪು ಅವರ ಕಾವ್ಯಕ್ಕೆ ಇನ್ನೂ ಚೆನ್ನಾಗಿ ಅನ್ವಯಿಸುತ್ತವೆ ಎಂಬುದೇಕೆ ಹೊಳೆಯುವುದಿಲ್ಲವೋ ತಿಳಿಯದು! ಇಂದು ನಿಂತು ನವ್ಯವನ್ನು ನೋಡುವ ನಮ್ಮ ನೋಟದಲ್ಲಿನ ಇಂತಹ ಒಡಕಿನ ಕಾರಣಗಳು ನವ್ಯದ ಸಾಹಿತ್ಯ ಮೀಮಾಂಸೆಯಲ್ಲೇ ಅಂತಸ್ಥವಾಗಿರುವುದನ್ನು ಚೆನ್ನಿಯವರು ಗಮನಿಸಿದಂತಿಲ್ಲ. ಹಾಗೇ, ನವ್ಯರಿಗೆ ಕುವೆಂಪು ಅವರ ಕಾದಂಬರಿಗಳ ಪ್ರಾಮುಖ್ಯತೆಯ ಬಗ್ಗೆ ಭಿನ್ನಾಭಿಪ್ರಾಯಗಳು ಇರಲಿಲ್ಲ ಎನ್ನುವ ಚೆನ್ನಿಯವರು, 'ಸಂಸ್ಕಾರ'ದಿಂದ 'ಗತಿಸ್ಥಿತಿ'ಯವರೆಗೆ 'ನವ್ಯ'ದ ಒಳ್ಳೆಯ ಮತ್ತು ಕೆಟ್ಟ ಕಾದಂಬರಿಗಳ ಬಗ್ಗೆ ದಂಡಿ ದಂಡಿಯಾಗಿ ಪ್ರಶಂಸಾ ವಿಮರ್ಶೆ ಬರೆದ ನವ್ಯರು ಕುವೆಂಪು ಅವರ ಕಾದಂಬರಿಗಳ ಬಗ್ಗೆ ಏನು, ಎಷ್ಟು ಮತ್ತು ಎಲ್ಲಿ ಬರೆದಿದ್ದಾರೆ ಎಂಬುದನ್ನೂ ಹೇಳಿದ್ದರೆ ಚೆನ್ನಿತ್ತು.

ನವ್ಯವು (ಸಾಹಿತ್ಯದ ಉಪ್ಪು ಎನ್ನಬಹುದಾದ) ಸಾಮುದಾಯಿಕ ಅನುಭವದ ವಿಸ್ತಾರವನ್ನು ಕಳೆದುಕೊಂಡಿತು ಎನ್ನುವ ಚೆನ್ನಿಯವರು, ಅದಕ್ಕೆ ಕಾರಣಗಳನ್ನು ಕೊಡುವುದಿಲ್ಲ ಮತ್ತು ಅದರಿಂದ ಕನ್ನಡ ಸಾಹಿತ್ಯವೆಂಬ ವಿದ್ಯಮಾನಕ್ಕೆ ಉಂಟಾದ ಆಘಾತವನ್ನು ಗಮನಿಸುವುದಿಲ್ಲ. ನವ್ಯ ಕುರಿತ ತೇಜಸ್ವಿಯವರ ಟೀಕೆ ಮುಖ್ಯವಾಗಿ ಈ ಸಂಗತಿಗಳ ಬಗೆಗೇ ಇತ್ತು. ಆದರೆ ಚೆನ್ನಿಯವರು ತೇಜಸ್ವಿಯವರ ಟೀಕೆಯನ್ನು ಚರ್ಚಿಸುವ ಗೋಜಿಗೇ ಹೋಗದೆ, ತೇಜಸ್ವಿಯವರು ಕೃತಿಯ ಕಲಾತ್ಮಕತೆ ಮುಖ್ಯ ಎಂದು ಕೊನೆಯವರೆಗೂ ವಾದಿಸಿದರೆಂಬುದನ್ನು ಮಾತ್ರ ಹೇಳಿದ್ದಾರೆ. ಆದರೆ ತೇಜಸ್ವಿಯವರ ಈ ಮಾತು ಮುಖ್ಯವಾಗಿ ಬಂಡಾಯ-ದಲಿತ ಸಾಹಿತ್ಯ ಕುರಿತಾಗಿತ್ತು ಎಂಬುದನ್ನು ನಾವು ಗಮನಿಸಬೇಕು.

ಯಾವುದೇ ಒಂದು ಸಾಹಿತ್ಯ ಮಾರ್ಗದ ಕೃತಿಗಳು ಶ್ರೇಷ್ಠವಾಗಿದ್ದು ಅದರ ವಿಮರ್ಶೆ ಸಮಸ್ಯಾತ್ಮಕವಾಗಿರಲು ಸಾಧ್ಯವಿಲ್ಲ. ಆದರೆ ಚೆನ್ನಿಯವರು ನವ್ಯದ ಬಗ್ಗೆ ಈ ಮಾತನ್ನು ಹೇಳಿದಂತಿದೆ. ನಿಜ, ನವ್ಯವು ಅನೇಕ 'ಶ್ರೇಷ್ಠ' (ಅಂದರೆ ಆಳದ ಅನುಭವಗಳ) ಕೃತಿಗಳನ್ನು ನೀಡಿದೆ. ಆದರೆ ಅವುಗಳ ತೆಕ್ಕೆ ತುಂಬಾ ಸಂಕುಚಿತವಾದದ್ದು. ಅಂದರೆ ಅವುಗಳ ಶ್ರೇಷ್ಠತೆಯ (ಅಂದರೆ ಆಳದ) ಅಳತೆಗಳು ಚಾಲ್ತಿಯಲ್ಲಿರುವುದು ಒಂದು ಸೀಮಿತ ಓದುಗ ವರ್ಗದ ಪ್ರಪಂಚದ ಎಲ್ಲೆಗಳೊಳಗೆ ಮಾತ್ರ. ಇದೇ ಚೆನ್ನಿಯವರು ಹೇಳುವ ನವ್ಯ ವಿಮರ್ಶೆಯ ರಾಜಕಾರಣಕ್ಕೂ ಕಾರಣವಾಗಿರುವುದು.

ಇದೆಲ್ಲವನ್ನೂ ಒಂದೇ ಮಾತಿನಲ್ಲಿ ಹೇಳುವುದಾದರೆ, ಪುತಿನ ಅವರು ಒಂದು ಸಭೆಯಲ್ಲಿ ಅಡಿಗರ ಕಾವ್ಯವನ್ನು ಕುರಿತು ಆಡಿದ ಈ ಮಾತನ್ನು ಉಲ್ಲೇಖಿಸಬಹುದೆಂದು ಕಾಣುತ್ತದೆ: 'Where is Adiga today? Yes, there is lot of passion in his poetry. But where is compassion?'

– **ಡಿ.ಎಸ್. ನಾಗಭೂಷಣ,** ಶಿವಮೊಗ್ಗ

('ನಿಮ್ಮ ಪತ್ರ' ಅಂಕಣದಲ್ಲಿ)

ಜನವರಿ, ೨೦೧೬

ಭಗವದ್ಗೀತೆ, ಬ್ರಾಹ್ಮಣ ಮೌಲ್ಯ ಮತ್ತು ಗಿರಿಜನ ಸೇವೆ!

ಇತ್ತೀಚಿನ ದಿನಗಳಲ್ಲಿ, ಮೊಟ್ಟ ಮೊದಲ ಬಾರಿಗೆ ನಮ್ಮ ಪ್ರಗತಿಪರ ಅಥವಾ ಎಡಪಂಥೀಯ ಗುಂಪಿನಿಂದ ಒಂದು ನಿಜವಾದ ಆತ್ಮಾವಲೋಕನದ, ಹೊಸ ವಿವೇಕದ ಮಾತು ಹೊರಬಿದ್ದಿದೆ. ಲೇಖಕ ದೇವನೂರ ಮಹಾದೇವ ಅವರು ಮೊನ್ನೆ ಮಂಗಳೂರಿನ 'ಜನನುಡಿ'ಯಲ್ಲಿ ಪ್ರಗತಿಪರರೆಂದು ಹೇಳಲಾಗುವ ಗುಂಪು ಈವರೆಗೆ ಒಂದು ಪಟ್ಟಭದ್ರ ಹಿತಾಸಕ್ತಿಯ ಗ್ರಂಥವೆಂದೇ ಹೇಳುತ್ತಾ ಬಂದಿದ್ದ ಭಗವದ್ಗೀತೆಯನ್ನು ಓದಬೇಕಾದ ಗ್ರಂಥವೆಂದು ಹೇಳಿದ್ದಾರೆ. ಅದರಲ್ಲಿನ ವರ್ಣಧರ್ಮವನ್ನು ಮಾನ್ಯ ಮಾಡುವ ಭಾಗವನ್ನು ಕೈಬಿಟ್ಟು ಓದಿದರೆ ಅದೊಂದು ಹೆಚ್ಚೂಕಡಿಮೆ ಬೌದ್ಧ ಗ್ರಂಥವೇ ಆಗಿ ಕಾಣುತ್ತದೆ ಎಂದಿದ್ದಾರೆ. ಜೊತೆಗೇ ತಮ್ಮನ್ನೂ ಸೇರಿಸಿಕೊಂಡು, ತಾವೆಲ್ಲ ಜನಸಮೂಹದ ಭಾಷೆಯಿಂದ ದೂರಾದ ತಮ್ಮದೇ ಕಲಿತ ಬೌದ್ಧಿಕ ಭಾಷೆಯಲ್ಲಿ ಮಾತಾಡುತ್ತಾ ತಮ್ಮ ಮಾತುಗಳಿಗೆ ತದ್ವಿರುದ್ಧವಾದ ಕ್ರಿಯೆಗಳು ಸಮಾಜದಲ್ಲಿ ಆಗುತ್ತಿರುವುದನ್ನು ಗಮನಿಸದೇ ನಿರರ್ಥಕ ಪ್ರವಚನಕಾರರಾಗುತ್ತಿರುವ ದುರಂತವನ್ನು ಕುರಿತು ಅವರು ಮಾತನಾಡಿದ್ದಾರೆ. ಈಗಲಾದರೂ ಪ್ರಗತಿಪರರು ಎನಿಸಿಕೊಂಡವರು ನಮ್ಮ ಗತವನ್ನು ಕಲಿತ ಸಿದ್ಧಾಂತಗಳ ಕೌಶಲ್ಯದ ಪ್ರದರ್ಶನದ ಮೂಲಕ ನೋಡದೆ ಸಹಾನುಭೂತಿಪರ ದೃಷ್ಟಿಕೋನದ ಮೂಲಕ ನೋಡುವಂತೆ ಅವರು ಸೂಚಿಸಿದ್ದಾರೆ. ಈ ಸಂಬಂಧವಾಗಿ ಅವರು ಲೋಹಿಯಾ ಮತ್ತು ಕುವೆಂಪು ಅವರ ವಿವೇಕಗಳ ಪ್ರಸ್ತಾಪ ಮಾಡಿದ್ದಾರೆ.

ನನಗೆ ತಿಳಿದಂತೆ ಮಹಾದೇವ ಅವರಿಗೆ ಇದೆಲ್ಲ ಹೊಸದಾಗಿ ಹೊಳೆದಿರುವ ಸಂಗತಿಗಳೇನಲ್ಲ. ಎಲ್ಲವನ್ನೂ ತೆರೆದ, ಸಹಾನೂಭೂತಿಯ

ಕಣ್ಣುಗಳಿಂದಲೇ ನೋಡುವ ಅವರು ತಮ್ಮ ಮನದೊಳಗಿನ ಈ ಮಾತುಗಳನ್ನು ಬಹಿರಂಗವಾಗಿ ಆಡುವ ಧೈರ್ಯವನ್ನೀಗ ತೋರಿದ್ದಾರಷ್ಟೆ. ಸಾರ್ವಜನಿಕ ಜೀವನದಲ್ಲಿ ಮಹಾ ಲೆಕ್ಕಾಚಾರದ ಮನುಷ್ಯರಾದ ಮಹಾದೇವ, ಈ ಮೋದಿ ಯುಗದವರೆಗಿನ ಪ್ರಗತಿಪರ ಗುಂಪಿನ ಎಲ್ಲ ಆಟಪಾಠಗಳನ್ನೂ ನೋಡಿ ಅವರೂ, ತಾವೂ ಇಬ್ಬರೂ ಸುಸ್ತಾಗಿರುವ ಸಮಯ ಅರಿತು ಈ ಆಯಕಟ್ಟಿನ ಮಾತುಗಳನ್ನಾಡಿದ್ದಾರೆಂದು ನನಗೆ ಅನಿಸುತ್ತಿದೆ.

ಈ ದೇಶದ ಚರಿತ್ರೆಯಲ್ಲಿ ಮತ್ತು ಸಂಸ್ಕೃತಿಯಲ್ಲಿ ಕಟ್ಟುನಿಟ್ಟಾದ ವೈದಿಕ-ಅವೈದಿಕ-ಶೂದ್ರ-ಬೌದ್ಧ-ಜೈನ ಇತ್ಯಾದಿ ವಿಂಗಡಣೆಗಳು ಇಲ್ಲ. ಜಗಳಗಳನ್ನಾಡಲು ಮಾತ್ರ ವಿದ್ವಾಂಸರಿಂದ ಇಂತಹ ವಿಂಗಡಣೆಗಳು ನಡೆದಿವೆ. ವಿಶೇಷವಾಗಿ ಪಶ್ಚಿಮದ ಪುನರುಜ್ಜೀವನ ಯುಗದ ಫಲಗಳಾದ ಕಾರ್ಟೇಸಿಯನ್ ತರ್ಕಮೂಲ ವಿಂಗಡಣೆಯ ಮತ್ತು ಸೆಮೆಟಿಕ್ (ಮರುಭೂಮಿ ಜನ್ಯ) ಧರ್ಮಗಳಿಂದ ಪಡೆದ ಏಕರೂಪಿ ಮತ ಮಾದರಿಗಳಿಂದ ಪ್ರಭಾವಿತವಾದ ಭಾರತೀಯ ಮನಸ್ಸುಗಳಷ್ಟೇ ನಮ್ಮ ಇತಿಹಾಸ ಮತ್ತು ಸಂಸ್ಕೃತಿಗಳನ್ನು ಹೀಗೆ (ಕುವೆಂಪು ಪರಿಭಾಷೆಯಲ್ಲಿ ಹೇಳುವುದಾದರೆ, 'ಪ್ರತಿಕೃತಿ' ಪರಿಶ್ರಮದ ಮೂಲಕ) ವಿಂಗಡಿಸಿ ತಮ್ಮ ಪ್ರಗತಿಪರತೆಯನ್ನು ಮೆರೆಯುವ ಹವ್ಯಾಸವನ್ನು ಬೆಳೆಸಿಕೊಂಡಿವೆಯಷ್ಟೆ. ಇದನ್ನು ನಾವು ವಿದ್ವತ್ತು ಎಂದು ಕರೆದು ಜನಸಾಮಾನ್ಯರ ವಿವೇಕವನ್ನು ಅವಮಾನಿಸುತ್ತಾ ಅವರ ಮನಸ್ಸನ್ನೂ ಒಡೆಯುತ್ತಾ ಬಂದಿದ್ದೇವಷ್ಟೆ. ಇದರ ಮಧ್ಯೆಯೇ ಮಹಾದೇವ ಪ್ರಸ್ತಾಪಿಸಿರುವ ಸ್ವತಂತ್ರ ಆಲೋಚನೆಯ ಚಿಂತಕರಾದ ಲೋಹಿಯಾ ಮತ್ತು ಕುವೆಂಪು ನಮ್ಮ ಪರಂಪರೆಯನ್ನು ಪ್ರತಿಮಾ ದೃಷ್ಟಿಯ ಮೂಲಕ ನೋಡಿ, ಸೋಸಿ ಚಿನ್ನ ಕರಗಿಸಿಕೊಳ್ಳುವ ಪ್ರತಿಭೆಯ ಪಾಠ ಹೇಳಿದ್ದಾರೆ. ಆದರೆ ಮಹಾದೇವ ಹೇಳಿದಂತೆ ಬೌದ್ಧಿಕ ಕೌಶಲ ನಿರ್ಮಾಣ ಮತ್ತು ಪ್ರದರ್ಶನದಲ್ಲೇ ಮುಳುಗಿಹೋಗಿ, ಇದನ್ನೇ ಹೇಳಿದ್ದ ಪರಮಹಂಸ, ವಿವೇಕಾನಂದ, ಲೋಹಿಯಾ, ಕುವೆಂಪು ಇತ್ಯಾದಿ ಕ್ರಮವಾಗಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ದಾರ್ಶನಿಕರ ಮಾತುಗಳನ್ನು ಅಧ್ಯಾತ್ಮ ಎಂಬ ಶಬ್ದದ ಅಲರ್ಜಿಯಿಂದಾಗಿ ತಿರಸ್ಕರಿಸುತ್ತಾ ಬಂದಿದ್ದ ನಾವು ಈಗ ದಲಿತ ನಾಯಕರು ಹೇಳಿರುವರೆಂಬ ಕಾರಣಕ್ಕಾದರೂ ಸಹಾನುಭೂತಿಯಿಂದ ಅವನ್ನು ಆಲಿಸಲು ಸಾಧ್ಯವೇ ಎಂಬುದನ್ನು ಕಾದು ನೋಡಬೇಕಿದೆ!

ಬಹುಶಃ ಇದು ಅಷ್ಟು ಸುಲಭವಲ್ಲ ಎಂಬುದು ಮಾರನೆಯ ದಿನವೇ ಅದೇ ವೇದಿಕೆಯಿಂದ ರಹಮತ್ ತರೀಕೆರೆಯವರು ಆಡಿರುವ ಮಾತುಗಳಿಂದ ಸಾಬೀತಾಗಿದೆ. ನಮ್ಮ ಶಾಲಾ ಪಠ್ಯಗಳು ಬ್ರಾಹ್ಮಣ ಮೌಲ್ಯಗಳಿಂದ ತುಂಬಿ ಹೋಗಿವೆ ಎಂದು ಅವರು ಹೌಹಾರಿದ್ದಾರೆ. ಪಠ್ಯಗಳಲ್ಲಿ ಅಸಮಾನತೆಯನ್ನು ಅಸಹಿಷ್ಣುತೆಯನ್ನು, ಮೌಢ್ಯಗಳನ್ನು ಬೋಧಿಸುವ ಅಂಶಗಳಿದ್ದರೆ ಅವನ್ನು ತೆಗೆಯಿರಿ. ಬದಲಿಗೆ, ಸಮಾಜದಲ್ಲಿ ಮತ್ತು ವಿಶೇಷವಾಗಿ ವಿದ್ಯಾರ್ಥಿ ಸಮೂಹದಲ್ಲಿ ಈ ಜಾತಿ ಪ್ರಚೋದನೆಯ ಮಾತೇಕೆ? ನಿಮ್ಮ ಮಾತುಗಳನ್ನೆಲ್ಲ ನಿಮ್ಮ ಪಠ್ಯ ವಿಮರ್ಶನ ಸಮಿತಿಯಲ್ಲಿ ಆಡಿ ಏನು

ತೀರ್ಮಾನ ತೆಗೆದುಕೊಳ್ಳುತ್ತೀರೋ ತೆಗೆದುಕೊಳ್ಳಿ. ಇದನ್ನೆಲ್ಲ ನಮ್ಮ ರಾಜಕಾರಣಕ್ಕೆ ಬಳಸಿಕೊಳ್ಳುವುದು ಬೇಡ. ಏಕೆಂದರೆ, ಮುಂದೆ 'ಅವರ' ಸರ್ಕಾರ ಬಂದರೆ ಹೇಗೂ ನಿಮ್ಮ ಪಠ್ಯಗಳನ್ನು ಪರಿಷ್ಕರಿಸಲು ಅವರಿಗೆ ನೀವು ಈ ಮೂಲಕ ಕಾರಣ ಒದಗಿಸುತ್ತಿದ್ದಂತೆ ಕಾಣುತ್ತಿದೆ. ನಮ್ಮ ಮಕ್ಕಳ ಪಠ್ಯ ಹೀಗೆ ಎಡಪಂಥೀಯತೆ ಮತ್ತು ಬಲಪಂಥೀಯತೆಯ ರಾಜಕಾರಣದ ಮಧ್ಯೆ ಸಿಕ್ಕು ದಿಕ್ಕೆಡುತ್ತಿರುವುದು ನಿಜವಾಗಿಯೂ ಖೇದಕರ.

ಇನ್ನು ನಮ್ಮ ಕರ್ನಾಟಕ ಸಾಹಿತ್ಯ ಅಕಾಡೆಮಿ ಕಡೆ ನೋಡಿ. ಮೊನ್ನೆ ಅಲ್ಲಿಂದ ನನಗೊಂದು ಆಹ್ವಾನ ಪತ್ರಿಕೆ ಬಂತು. ಅದು ಈ ಅಕಾಡೆಮಿ ಆಯೋಜಿಸಿದ್ದ ಗಿರಿಜನರ ನೋವು ನಲಿವುಗಳನ್ನು ಕುರಿತ ಎರಡು ದಿನಗಳ ಕಾರ್ಯಕ್ರಮದ ಆಹ್ವಾನ ಪತ್ರಿಕೆ. ನಾನು ಆಹ್ವಾನ ಪತ್ರಿಕೆಯನ್ನು ಇದೇನಾದರೂ ನಮ್ಮ ಸಮಾಜ ಕಲ್ಯಾಣ ಇಲಾಖೆ ಕಾರ್ಯಕ್ರಮವೇನೋ ಎಂದು ಇನ್ನೊಮ್ಮೆ ನೋಡಿದೆ. ಇಲ್ಲ, ಅದು ಸಾಹಿತ್ಯ ಅಕಾಡೆಮಿಯ ಕಾರ್ಯಕ್ರಮವೇ ಆಗಿತ್ತು. ನನ್ನ ಪ್ರಶ್ನೆ: ಸಾಹಿತ್ಯ ಅಕಾಡೆಮಿಗೆ ತನ್ನ ಕಾರ್ಯಚಟುವಟಿಕೆಗಳಿಗೆಂದು ಒಂದು ಚೌಕಟ್ಟು ಇಲ್ಲವೆ? ಸಾಹಿತ್ಯ ಅಕಾಡೆಮಿಯಾಗಿ ಅದು ಮನುಷ್ಯಾನುಭವಗಳು ಭಾಷೆಯಲ್ಲಿ ಸೃಜನಶೀಲ ಅಭಿವ್ಯಕ್ತಿಯಾಗಿ ಲಿಪಿ ರೂಪದಲ್ಲಿ ದಾಖಲಾಗುವ ಚಟುವಟಿಕೆಗಳನ್ನು ಪೋಷಿಸಲು ರಚಿಸಲಾಗಿರುವ ಸಂಸ್ಥೆಯಲ್ಲವೆ? (ಲಿಪಿ ರೂಪದಲ್ಲಿ ದಾಖಲಾಗದ ಅಭಿವ್ಯಕ್ತಿಗಳಿಗೆ ಬೇರೆಯೇ ಅಕಾಡೆಮಿಗಳಿವೆ.) ಹಾಗಿರುವಾಗ ಗಿರಿಜನರ ನೋವು ನಲಿವುಗಳ ಚರ್ಚೆಗೆ ಸಾಹಿತ್ಯ ಅಕಾಡೆಮಿ ಹೇಗೆ ವೇದಿಕೆಯಾದೀತು? ಆಹ್ವಾನಪತ್ರಿಕೆಯನ್ನು ವಿವರವಾಗಿ ನೋಡಿದೆ. ಅಲ್ಲಿ ಔಪಚಾರಿಕತೆಗಳಿಗೆಂಬಂತೆ ಕೆಲ ಸಾಹಿತಿಗಳ ಹೆಸರುಗಳಿದ್ದವಾದರೂ, ಕಲಾಪದಲ್ಲಿ ಎಲ್ಲಿಯೂ ಸಾಹಿತ್ಯದ ವಾಸನೆ ಕಾಣಲಿಲ್ಲ. ಅದೊಂದು ಪೂರ್ಣ ಸಮಾಜ ಕಲ್ಯಾಣ ಇಲಾಖೆಯ ಕಲಸುಮೇಲೋಗರದ ಕಾರ್ಯಕ್ರಮದಂತಿತ್ತು. ಈ ಪ್ರಶ್ನೆ ಕೇಳಿದೊಡನೆ ಕೇಳಿದವರಿಗೆ ಗಿರಿಜನರ ವಿರೋಧಿ ಎಂಬ ಹಣೆಪಟ್ಟಿ ಹಚ್ಚಿ (ಅಪ)ಪ್ರಚಾರಾಂದೋಲನ ನಡೆಸುವ ಒಂದು ದೊಡ್ಡ (ಸಾಮಾಜಿಕ ನ್ಯಾಯದ ಹೆಸರಿನ ಜಾತಿ ರಾಜಕಾರಣದ)ಪಡೆಯೇ ಇಂದು ರಾಜ್ಯದಲ್ಲಿ ಸಜ್ಜಾಗಿ ನಿಂತಿದೆ. ಆ ಪಡೆ ಇಂದು ಸರ್ಕಾರದ ಆಶ್ರಯದಲ್ಲಿರುವ ಸಾಹಿತ್ಯ-ಸಂಸ್ಕೃತಿ ಸಂಸ್ಥೆಗಳನ್ನು ತನ್ನ ವಶಕ್ಕೆ ಪಡೆದುಕೊಂಡುಬಿಟ್ಟಿದೆ. ಅವುಗಳ ಮುಖ್ಯಸ್ಥರಿಗೋ ಅವರ ಆ ಸ್ಥಾನಮಾನಗಳೇ ಅಲಂಕಾರ!

ಈ ಮಧ್ಯೆ ಗೆಳೆಯ ಕೆ.ವಿ. ತಿರುಮಲೇಶ್‌ಗೆ ಅವರ 'ಅಕ್ಷಯ ಕಾವ್ಯ'ಕ್ಕಾಗಿ ಈ ಬಾರಿಯ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ನೀಡಲಾಗಿದೆ. ಕನ್ನಡ ನಾಡಿನಿಂದ ದೂರವಿದ್ದರೂ (ತಿರುಮಲೇಶರ ಪ್ರಕಾರ ದೂರವಿಡಲ್ಪಟ್ಟಿದ್ದರೂ) ಕನ್ನಡದ ಸೃಜನಶೀಲ ಕೆಲಸಗಳನ್ನು ಮಾಡುತ್ತಿರುವ ಅವರು ಕವಿಯಾಗಿ, ಕಥೆಗಾರರಾಗಿ, ಕಾದಂಬರಿಕಾರರಾಗಿ, ಸಾಹಿತ್ಯ ಚಿಂತಕರಾಗಿ ಸದಾ ಹೊಸತನ್ನು ಅರಸುತ್ತಾ ಪ್ರಯೋಗಗಳಲ್ಲಿ ತೊಡಗಿಕೊಂಡವರು. 'ಅಕ್ಷಯ ಕಾವ್ಯ' ಕೂಡ ಅಂತಹ ಒಂದು

ಪ್ರಯೋಗವೇ. ಆದರೆ ಈ ಕೃತಿ ಈವರೆಗೆ ಯಾರ ಆಸಕ್ತಿಯನ್ನೂ ಸೆಳೆದಂತಿಲ್ಲ. ಹಾಗೆ ನೋಡಿದರೆ ತಿರುಮಲೇಶ್ ಎಂದೊಡನೆ ನೆನಪಾಗುವುದು ಅವರ 'ಪಾರ್ಟಿ ಮುಗಿದ ಮೇಲೆ' ಎಂಬ ಹಚ್ಚಹೊಸತನದ ಕವನವನ್ನೊಳಗೊಂಡ 'ಮುಖಾಮುಖಿ' ಹಾಗೂ ನವ್ಯ ಬೌದ್ಧಿಕತೆಯಿಂದ ದೂರಾದ, ಸರಳವಾಗಿ, ಪಾರದರ್ಶಕವಾಗಿ, ಅಂತಃಕರಣವನ್ನು ಮುಟ್ಟುವಂತಹ ಪದ್ಯಗಳನ್ನೊಳಗೊಂಡ 'ಅವಧ' ಕವನ ಸಂಕಲನಗಳು.

ಇರಲಿ, ತಿರುಮಲೇಶ್‌ಗೆ ಪತ್ರಿಕೆಯ ಅಭಿನಂದನೆಗಳು.

●

ಫೆಬ್ರವರಿ, ೨೦೧೬

ಮತ್ತೆ ಎರಡು ಟಿಪ್ಪಣಿಗಳು

ಪ್ರಸನ್ನರದ್ದು ಈಗ ರಾಷ್ಟ್ರೀಯ ಹಸಿರು ಸಮಾಜವಾದ!

ನಮ್ಮ ಹೆಗ್ಗೋಡಿನ ಚರಕದ ಪ್ರಸನ್ನ ಅವರು ಸದಾ ರಾಷ್ಟ್ರ ಮಟ್ಟದಲ್ಲೇ ಯೋಚನೆ ಮಾಡುವವರು. ಏಕೆಂದರೆ ಅವರ ವ್ಯಕ್ತಿತ್ವ 'ಸಿದ್ಧ'ವಾಗಿ ಬಂದದ್ದು ಅಲ್ಲಿಂದಲೇ. ಅವರು ಹೆಗ್ಗೋಡಿನಲ್ಲಿ 'ಚರಕ' ಮಾಡಿದ ಮೇಲೂ ಪದೇ ಪದೇ ದೆಹಲಿ, ಕಲ್ಕತ್ತಾ, ಹೈದರಾಬಾದ್ ಎಂದು ಓಡಾಡುತ್ತಿರುವಾಗ ಆಗಾಗ್ಗೆ ನಾನು ಅವರಿಗೆ 'Rolling mass does not gain weight' ಎಂಬ ಮಾತನ್ನು ಹೇಳುತ್ತಲೇ ಇರುತ್ತಿದ್ದೆ. ಇತ್ತೀಚೆಗೆ ಅವರು ನೇಕಾರರ ಸಮಸ್ಯೆ, ಬದನವಾಳು ಚಳುವಳಿ ಇತ್ಯಾದಿ ಸ್ಥಳೀಯ ಕಾರ್ಯಕ್ರಮಗಳಲ್ಲಿ ತೊಡಗಿಕೊಂಡಾಗ ಅವರ ಈ 'ಖಾಯಿಲೆ' ವಾಸಿಯಾಗಿದೆ ಎಂದುಕೊಂಡಿದ್ದೆ. ಆದರೆ ಮೊನ್ನೆ ಜನವರಿ ೧೦ರಂದು ಹೆಗ್ಗೋಡಿನಲ್ಲಿ ನಡೆದ 'ಚರಕೋತ್ಸವ'ದ ಗೋಷ್ಠಿಯಲ್ಲಿ ಅದು ದೊಡ್ಡ ರೀತಿಯಲ್ಲೇ ಮರುಕಳಿಸಿದ್ದನ್ನು ಕಂಡು ಗಾಬರಿಯಾದೆ.

ಪ್ರಸನ್ನ ಅವರ ಸುಸ್ಥಿರ ಅಭಿವೃದ್ಧಿ ಚಳುವಳಿಯ ತಂಡ ಈಗ ರಾಷ್ಟಮಟ್ಟದ ಸ್ವರೂಪ ಪಡೆದು 'ಹಸಿರು ಸಮಾಜವಾದ'ದ ಚಳುವಳಿಯಾಗಿ ಮಾರ್ಪಟ್ಟಿದೆಯಂತೆ! ಅದರ ರಾಷ್ಟ್ರೀಯ ಸಮಾವೇಶಕ್ಕೆಂದು ರಾಷ್ಟ್ರೀಯ ಲಾಂಛನವೊಂದನ್ನು ಅವರು ಅಂದು ತಮ್ಮ ಸಹ ಚಳುವಳಿಕಾರ ಮಿತ್ರ ಹಿರಿಯ ಸಮಾಜವಾದಿ ಪ. ಮಲ್ಲೇಶ್‌ರಿಂದ ಬಿಡುಗಡೆ ಮಾಡಿಸಿದರು. ಅದರಲ್ಲಿ ಚರಕಾ ಮಹಿಳೆಯೊಬ್ಬರ ಚಿತ್ರದ ಕೆಳಗೆ 'ಹರಿತ್ ಸಮಾಜವಾದ್' ಎಂಬ ಹಿಂದಿ ಲಿಪಿಯ ಶೀರ್ಷಿಕೆ

ಇದೆ. ಅದನ್ನು ನೋಡಿ ನನಗೆ ರೇಗಿ ಹೋಯಿತು. ಜೊತೆಗೆ ಅಲ್ಲಿ ಓದಲಾದ ಈ ರಾಷ್ಟ್ರೀಯ ಸಮಾವೇಶದ ಘೋಷಣಾ ಪತ್ರ ಪೂರ್ಣ ಇಂಗ್ಲಿಷ್‌ನಲ್ಲಿದ್ದು ಅದರ ಕನ್ನಡ ಅನುವಾದ ಇನ್ನೂ ಸಿದ್ಧವಾಗಬೇಕಿದೆಯೆಂದು ತಿಳಿಸಲಾಯಿತು.! ನಾನು ಪ್ರಸನ್ನರನ್ನು ಸ್ವಲ್ಪ ಕೋಪದಿಂದಲೇ ಕೇಳಿದೆ, ಸ್ಥಳಿಯವಾಗಿ ಕಟ್ಟಿದ ಚಳುವಳಿಯನ್ನು ಯಾವ ಸಾರ್ವಜನಿಕ ಸುಳಿವೂ ಇಲ್ಲದೆ ರಾಷ್ಟಮಟ್ಟಕ್ಕೆ ಹೊತ್ತೊಯ್ದು ಅದನ್ನೇಕೆ ಹೀಗೆ ಬಲಿಗೊಡುತ್ತೀರಿ? ಅದನ್ನು ಅದರ ಕಾರ್ಯಕರ್ತರಿಂದಲೇ ಏಕೆ ಹೀಗೆ ಇಂಗ್ಲಿಷ್-ಹಿಂದಿಗಳ ಮೂಲಕ ದೂರ ಮಾಡುತ್ತೀರಿ?

ಸದಾ ರಾಷ್ಟ್ರ ಮಟ್ಟದಲ್ಲೇ ಹರಿದಾಡುವ ಪ್ರಸನ್ನರ ಮನಸ್ಸಿಗೆ ಇವೆಲ್ಲ ಅರ್ಥವಾಗದ 'ಅಧಿಕ ಪ್ರಸಂಗ'. ಇನ್ನು ಈ ರಾಷ್ಟ್ರೀಯ ಲಾಂಛನವನ್ನು ಬಿಡುಗಡೆ ಮಾಡಿದ ಕನ್ನಡ ಹೋರಾಟಗಾರರೂ ಆದ ಮಲ್ಲೇಶ್‌ರನ್ನು ಕೇಳಿದರೆ, ಅವರು ವಿಷಾದದಿಂದ 'ಅಯ್ಯೋ ನಾನು ಈ ಲಾಂಛನವನ್ನು ನೋಡಿದ್ದು ಅದನ್ನು ಬಿಡುಗಡೆ ಮಾಡಿದ ಮೇಲೇ' ಎಂದು ಪೇಚಾಡಿಕೊಂಡರು! ಪಕ್ಕದಲ್ಲೇ ನಿಂತಿದ್ದ ಪ್ರಸನ್ನರ ಸದ್ಯದ ಸಹಚರಿ ಜಿ.ಎಸ್. ಜಯದೇವ ಅವರು ಕೂಡ ಇದನ್ನೆಲ್ಲ ಕಂಡು ಗಾಬರಿಯಾದಂತಿದ್ದರು!

ಪ್ರಸನ್ನ ಅವರ ಶೈಲಿಯೇ ಹಾಗೆ. ತಮಗೆ ಬೇಕಾದ್ದನ್ನು ಇತರಿಂದ ಮಾಡಿಸುವ 'ಪ್ರಜಾಪ್ರಭುತ್ವ' ಶೈಲಿ ಅವರಿಗೆ ಕರಗತವಾದಂತಿದೆ.

ಕಲ್ಬುರ್ಗಿಯವರಿಗೆ ಮಿತ್ರರ 'ಸಂಭ್ರಮ'ದ ಶ್ರದ್ಧಾಂಜಲಿ!

'ಧಾರವಾಡ ಸಾಹಿತ್ಯ ಸಂಭ್ರಮ-೨೦೧೬' ಈ ಹಿಂದಿನ ವರ್ಷಗಳಂತೆಯೇ, ಬಹು ಯಶಸ್ವಿಯಾಗಿ ಮುಗಿದಿದೆಯಂತೆ! ನನಗೆ ನಿಜವಾಗಿಯೂ ಈಗ ಕಲ್ಬುರ್ಗಿಯವರ ಬಗ್ಗೆ ಮರುಕವಾಗುತ್ತಿದೆ. ಅವರ ಕೊಲೆಯ ಬಗ್ಗೆ ಅವರ ಸುತ್ತಮುತ್ತಲಿನ ಸಾಹಿತಿ-ಮಿತ್ರರು ವ್ಯಕ್ತಪಡಿಸಿದ ಶೋಕ, ಖಂಡನೆ, ಪ್ರತಿಭಟನೆಗಳ ಬಗ್ಗೆ ತೀವ್ರ ಅಪನಂಬಿಕೆ ಶುರುವಾಗಿದೆ.

ಕಲ್ಬುರ್ಗಿಯವರು 'ಧಾರವಾಡ ಸಂಭ್ರಮ'ದ ರೂವಾರಿಗಳಲ್ಲೊಬ್ಬರು. ಕಳೆದೆರಡೂ ಸಂಭ್ರಮಗಳಲ್ಲಿ ಅದರ ಸಹ ಸಾರಥ್ಯ ವಹಿಸಿ ಸಕ್ರಿಯವಾಗಿ ಭಾಗವಹಿಸಿ ಅದಕ್ಕೊಂದು ಹಿರಿತನದ ಘನತೆ ಒದಗಿಸಿದವರು ಅವರು. ಅವರೀಗ ಕೊಲೆಯಾಗಿ ಆರು ತಿಂಗಳೂ ಆಗಿಲ್ಲ. ಅಲ್ಲದೆ ಆ ಕೊಲೆ ಆಗಿರುವುದು ಅವರ ಸಾಹಿತ್ಯಿಕ-ಸಂಶೋಧನೆಗಳಲ್ಲಿ ವ್ಯಕ್ತವಾದ ವಿಶಿಷ್ಟ ನಿಲುವಿಗಳಿಗಾಗಿ ಎಂಬುದೀಗ ಹೆಚ್ಚೂಕಡಿಮೆ ಖಚಿತವಾಗಿದೆ. ಸಾಹಿತ್ಯ ಮಿತ್ರರೆಲ್ಲ ಈ ಕೊಲೆಯ ಬಗ್ಗೆ ವಿವಿಧ ರೀತಿಗಳಲ್ಲಿ ತಮ್ಮ ದುಃಖಾವೇಶಗಳನ್ನೆಲ್ಲ ವ್ಯಕ್ತಪಡಿಸಿದ್ದು ಈ ನೆಲೆಯಲ್ಲೇ. ಆದರೆ ಈ ಕೊಲೆಯ ಹಿಂದಿರುವವರು ಯಾರು ಎಂಬುದರ ಸುಳಿವನ್ನಾದರೂ ಪಡೆಯಲು ನಮ್ಮ ಸರ್ಕಾರಕ್ಕೆ ಇನ್ನೂ ಸಾಧ್ಯವಾಗಿಲ್ಲ. ಹಾಗಿರುವ ಸಂದರ್ಭದಲ್ಲಿ ಅವರ ಸಾಹಿತ್ಯ ಮಿತ್ರರು ಈ ಸಾಹಿತ್ಯ 'ಸಂಭ್ರಮ'ವನ್ನು ಏನು ಮಾಡಬಹುದಿತ್ತು?

ಕನಿಷ್ಟ ಅದನ್ನು ಈ ವರ್ಷದ ಮಟ್ಟಿಗಾದರೂ ರದ್ದು ಮಾಡುವ ಮೂಲಕ

ಸರ್ಕಾರಕ್ಕೆ ತನ್ನ ನಿಷ್ಠುರ ಪ್ರತಿಭಟನೆಯನ್ನು ಸಲ್ಲಿಸಿ, ಕೊಲೆಯ ತನಿಖೆಯ ವೇಗದ ಬಗ್ಗೆ ತನ್ನ ಅಸಮಧಾನವನ್ನು ದಾಖಲಿಸಬಹುದಿತ್ತು. ಅಷ್ಟೇ ಮುಖ್ಯವಾಗಿ, ಕಲ್ಬುರ್ಗಿಯವರ ಕೊಲೆಯನ್ನು ಮತ್ತು ಅದರ ಹಿಂದಿನ ರಾಜಕಾರಣವನ್ನು ಕರ್ನಾಟಕದ ಸಾಹಿತ್ಯಲೋಕ ಯಾವುದೇ ಕಾರಣಕ್ಕೂ ಕ್ಷಮಿಸುವುದಿಲ್ಲ ಎಂಬ ಸಾರ್ವಜನಿಕ ಸಂದೇಶವನ್ನು ನೀಡಬಹುದಿತ್ತು. ಆದರೆ ಅದುದು ಏನು?

ಸರ್ಕಾರಿ ಅನುದಾನವನ್ನೂ ಪಡೆದು, ಕಲ್ಬುರ್ಗಿ ಅವರ ನೆನಪಿಗೆ ಈ ಬಾರಿಯ ಸಾಹಿತ್ಯ ಸಂಭ್ರಮವನ್ನು ಅರ್ಪಿಸಿ ಕೈತೊಳೆದುಕೊಳ್ಳಲಾಯಿತು. ನಂತರ ಮೂರು ದಿವಸದ ಬೌದ್ಧಿಕ ವಿಲಾಸ–ವಿಹಾರ! ಈ ವಿಲಾಸ–ವಿಹಾರಗಳಿಗೆ ಒಂದು ವರ್ಷ ಕಡಿವಾಣ ಬಿದ್ದಿದ್ದರೆ ಕನ್ನಡ ಸಾಹಿತ್ಯದ ಯಾವ ಸಂಪತ್ತು ಸೂರೆ ಹೋಗುತ್ತಿತ್ತು? ಅಥವಾ ಯಾವ ಮಹಾಪ್ರಯಾಣ ನಿಂತು ಹೋಗುತ್ತಿತ್ತು?

ನಿಜವಾಗಿಯೂ ನಾಚಿಕೆಯಾಗಬೇಕು, ತಮ್ಮನ್ನು ಕಲ್ಬುರ್ಗಿಯವರ ಮಿತ್ರರೆಂದು ಕರೆದುಕೊಳ್ಳುವ ಈ ಸಾಹಿತ್ಯೋಪಜೀವಿಗಳಿಗೆ.

●

'ತಾಯ್ನುಡಿ'ಯ ನೆನಪು ಮತ್ತು ಎರಡು ಪುಸ್ತಕಗಳು

ಫೆಬ್ರುವರಿ ೨೧, ವಿಶ್ವ ತಾಯ್ನುಡಿ ದಿನವಂತೆ. ವಿಶ್ವದಲ್ಲಿ, ವಿಶೇಷವಾಗಿ ವಸಾಹತುಶಾಹಿಗೊಳಪಟ್ಟಿದ್ದ ಪೂರ್ವದ ದೇಶಗಳಲ್ಲಿ, ನಿರ್ದಿಷ್ಟವಾಗಿ ಭಾರತದಲ್ಲಿ ತಾಯ್ನುಡಿಗಳು ಸಾರ್ವತ್ರಿಕ ಬಳಕೆಯಿಂದ ದೂರವಾಗಿ ಬಡಕಲಾಗುತ್ತಾ ತಮ್ಮ ಪ್ರಸ್ತುತತೆಯನ್ನು ಕಳೆದುಕೊಳ್ಳುತ್ತಿರುವಂತೆ ಈ ವಿಶ್ವ ತಾಯ್ನುಡಿ ದಿನಾಚರಣೆಯ ಜೋರು ಹೆಚ್ಚಾಗುತ್ತಿದೆ. ಇದೊಂದು ವಿಪರ್ಯಾಸ. ಈ ವಿಪರ್ಯಾಸ ಎದ್ದು ಕಂಡಿದ್ದು ಈ ವರ್ಷದ ಈ ದಿನವನ್ನು ನಮ್ಮ ಕರ್ನಾಟಕದಲ್ಲಿ ಒಂದು ಪ್ರಮುಖ ಪತ್ರಿಕೆ ಮತ್ತು ಕೆಲ ಬುದ್ಧಿಜೀವಿಗಳು ವಿಜೃಂಭಣೆಯಿಂದ ಆಚರಿಸಿದ ಪರಿಯಲ್ಲಿ. ಕರ್ನಾಟಕದಲ್ಲಿ ಕನ್ನಡ ಶಾಲೆಗಳು ಮುಚ್ಚುತ್ತಾ, ಮಾತೃ/ಜನಭಾಷಾ ಶಿಕ್ಷಣ ಮಾಧ್ಯಮ ಕಡ್ಡಾಯ ಸಾಧ್ಯವಿಲ್ಲ ಎಂದು ನಮ್ಮ ನ್ಯಾಯಾಲಯಗಳು ಹೇಳುತ್ತಾ ಹೋದಂತೆ ಈ ಪತ್ರಿಕೆ ಮತ್ತು ಈ ಬುದ್ಧಿಜೀವಿಗಳು ಕರ್ನಾಟಕದಲ್ಲಿ ಕನ್ನಡವನ್ನು ಉಳಿಸಲು ಸೂಚಿಸಿದ ಮಾರ್ಗ: ನಮ್ಮ ಶಾಲೆಗಳಲ್ಲಿ ಒಂದನೇ ತರಗತಿಯಿಂದಲೇ ಇಂಗ್ಲಿಷನ್ನು ಕಲಿಸುವುದನ್ನು ಕಡ್ಡಾಯ ಮಾಡುವುದು! ಇದೇನೂ ಇವರ ಸ್ವಂತ ಸಲಹೆಯಾಗಿರಲಿಲ್ಲ. ಅದನ್ನು ಸರ್ಕಾರಕ್ಕೆ 'ಶಿಫಾರ್ಸು' ಮಾಡಿದ್ದು ನಮ್ಮ ಕಾರ್ಪೋರೇಟ್ ಉದ್ಯಮ! ಅದರ ಹಿಂದೆ ಇದ್ದುದು ನಮ್ಮ 'ಅಭಿವೃದ್ಧಿ'ಗೆ ಸಾಲ ಕೊಡುವ ಜಾಗತಿಕ ಹಣಕಾಸು ಸಂಸ್ಥೆಗಳು.

ಆಯಿತು. ಇವರ ಈ ಸಲಹೆ ಜಾರಿಗೆ ಬಂದಾಯಿತಲ್ಲ, ಕನ್ನಡ ಉಳಿಯಿತೇ? ಇದರಿಂದ ಇಂಗ್ಲಿಷ್ ಶಿಕ್ಷಣದ 'ಮಹತ್ವ' ಜನಕ್ಕೆ ಹೆಚ್ಚು ಮನದಟ್ಟಾಗಿ ಕನ್ನಡ ಶಾಲೆಗಳು ಇನ್ನೂ ಹೆಚ್ಚು ವೇಗದಲ್ಲಿ ಮುಚ್ಚುತ್ತಾ ಹೋದವು! ಇಂತಹ ಭಾಷಾ ರಾಜಕಾರಣ ಮಾಡಿದವರೀಗ ತಾಯ್ನುಡಿ

ದಿನಾಚರಣೆಯ ಭಾಗವಾಗಿ ಮಾತನಾಡುವುದನ್ನು, ಬರೆಯುವುದನ್ನು ನೋಡಿದರೆ ಜಿಗುಪ್ಸೆಯಾಗುತ್ತಿದೆ. ಕನ್ನಡದ ಭವಿಷ್ಯಕ್ಕೆ ಕೊಳ್ಳಿ ಇಟ್ಟವರ ಜೊತೆ ಸೇರಿಕೊಂಡ ಇವರ ಬುದ್ಧಿಜೀವತ್ವಕ್ಕೊಂದಿಷ್ಟು ಬೆಂಕಿ ಹಾಕ ಎನ್ನಬೇಕೆನಿಸುತ್ತದೆ.

'ಶೂದ್ರರಾಗೋಣ ಬನ್ನಿ' : ಪ್ರಸನ್ನರ ಮತ್ತೊಂದು ಕರೆ!

'ಚರಕ'ದ ಪ್ರಸನ್ನ ಅವರ ಇತ್ತೀಚಿನ ಪುಸ್ತಕ 'ಶೂದ್ರರಾಗೋಣ ಬನ್ನಿ'. ಇದು ಏಳೆಂಟು ವರ್ಷಗಳ ಹಿಂದಿನ ಇವರ 'ಯಂತ್ರಗಳನ್ನು ಕಳಚೋಣ ಬನ್ನಿ' ಪುಸ್ತಕದ ವಿಸ್ತರಣೆಯೇ ಆಗಿದೆ. ಹಿಂದಿನ ಪುಸ್ತಕದಲ್ಲಿ ಯಂತ್ರ ಮೀಮಾಂಸೆಯನ್ನು ವಿವರಿಸುತ್ತಾ, ಯಂತ್ರ ಸಂಸ್ಕೃತಿ ಹೇಗೆ ಮನುಷ್ಯನ ಬದುಕಿನ ಅಶಾಂತಿಗೆ ಕಾರಣವಾಗಿದೆ ಎಂದು ವಿವರಿಸಿದ ಪ್ರಸನ್ನ ಈ ಪುಸ್ತಕದಲ್ಲಿ ಯಂತ್ರ ಸಂಸ್ಕೃತಿಯ ಜಾಗದಲ್ಲಿ ಶ್ರಮ ಸಂಸ್ಕೃತಿಯನ್ನು ಜಾರಿಗೆ ತರುವ ಅಗತ್ಯ ಮತ್ತು ಮಹತ್ವದ ಬಗ್ಗೆ ಬರೆದಿದ್ದಾರೆ.

ಪಶ್ಚಿಮದ ಆಧುನಿಕ ನಾಗರೀಕತೆಯ ಬಗ್ಗೆ ಒಂದು ನೂರು ವರ್ಷಗಳ ಹಿಂದೆಯೇ ಗಾಂಧಿ ಬರೆದ 'ಹಿಂದ್ ಸ್ವರಾಜ್' ಎಂಬ ವಿಮರ್ಶೆಯಿಂದ ಸ್ಫೂರ್ತಿಗೊಂಡ ಹಲವರು ಪ್ರಸನ್ನ ಅವರಂತೆಯೇ ಹಲವು ಪ್ರಯೋಗಗಳನ್ನೂ ಮಾಡಿದ್ದಾರೆ ಮತ್ತು ಇಂತಹ ಹಲವು ಪುಸ್ತಕಗಳನ್ನು ಬರೆದಿದ್ದಾರೆ. ಜನ ಓದಿದ್ದಾರೆ. ಆದರೆ ಆಧುನಿಕ ನಾಗರೀಕತೆ ಬಹು ಭರಾಟೆಯಿಂದಲೇ ಮುಂದುವರೆದಿದೆ. ಹಾಗೆಂದ ಮಾತ್ರಕ್ಕೆ ಇಂತಹ ವಿಚಾರಗಳ ಪ್ರಸ್ತುತಿ, ಪ್ರಚಾರ ಬೇಡವೆಂದಲ್ಲ. ಆದರೆ ಜನಸಮೂಹವೇಕೆ ಇಂತಹ ವಿಚಾರಗಳಿಗೆ ಕಿವಿಗೊಡುತ್ತಿಲ್ಲ ಎಂಬ ಪ್ರಶ್ನೆ ಕೇಳಿಕೊಂಡು ಈ ವಿಚಾರಗಳನ್ನು ಪ್ರಸ್ತುತಪಡಿಸಬೇಕಿದೆ.

ಅರಿವಿನ ಜೊತೆಯ ಶ್ರಮದ ಬಗ್ಗೆ ಪ್ರಸನ್ನ ಇಲ್ಲಿ ಬರೆದಿದ್ದಾರೆ. ಅದು ಯಾವ ಅರಿವು? ಆಧುನಿಕ ಅರಿವು ಎನ್ನುತ್ತಾರೆ ಪ್ರಸನ್ನ. ಆದರೆ ಆಧುನಿಕ ನಾಗರೀಕತೆಯನ್ನು ಅದರ ಯಂತ್ರ ಸಂಸ್ಕೃತಿಯಿಂದ ಬೇರ್ಪಡಿಸಿ ಅದರ ಅರಿವಿನ ಭಾಗವನ್ನಷ್ಟೇ ಸಂಸ್ಕರಿಸಿಕೊಳ್ಳುವುದು ಮಾತನಾಡಿದಷ್ಟು ಸುಲಭದ ಕೆಲಸವಲ್ಲ. ಶ್ರಮ ಸಂಸ್ಕೃತಿಯ ಯಶಸ್ಸಿಗೆ ಆಧುನಿಕ ಮ್ಯಾನೇಜ್‌ಮೆಂಟ್ ತಂತ್ರಗಳು ಅಗತ್ಯ ಎನ್ನುವ ಪ್ರಸನ್ನ, ಆ ಮ್ಯಾನೇಜ್‌ಮೆಂಟ್ ತಂತ್ರಗಳು ಆವಿಷ್ಕಾರವಾದದ್ದು ಯಂತ್ರ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿ ಎಂಬುದನ್ನು ಮರೆಯುತ್ತಾರೆ. ಮಧ್ಯವರ್ತಿ ಸಂಸ್ಕೃತಿಯನ್ನು ಟೀಕಿಸುವ ಪ್ರಸನ್ನ ತಮ್ಮ 'ಚರಕ'ದ ಉತ್ಪನ್ನಗಳ ಮಾರಾಟಕ್ಕೆ ದೇಸಿ' ಎಂಬ ಮಧ್ಯವರ್ತಿ ಸಂಸ್ಥೆಯನ್ನೇಕೆ ಸ್ಥಾಪಿಸಿಕೊಳ್ಳಬೇಕಾಯಿತು ಮತ್ತು ಅದರ ಮುಖ್ಯ ಕಛೇರಿಯನ್ನು ಈಗ ಅವರೇ ಹೇಳುವ ಯಂತ್ರ ಸಂಸ್ಕೃತಿಯ ಒಂದು ವಿಕಾರ ರೂಪದಂತಿರುವ ಬೆಂಗಳೂರಿನಲ್ಲಿಯೇ ಏಕೆ ಸ್ಥಾಪಿಸಿಕೊಳ್ಳಬೇಕಾಯಿತು ಎಂಬ ಪ್ರಶ್ನೆಯನ್ನು ಕೇಳಿಕೊಂಡರೆ ನನ್ನ ಮೇಲಿನ ಮಾತು ಪ್ರಸನ್ನ ಅವರಿಗೆ ಅರ್ಥವಾದೀತು.

ಈ ಪುಸ್ತಕದ ಶೀರ್ಷಿಕೆಯೂ ಸೇರಿದಂತೆ ಶ್ರಮ ಕುರಿತ ಚರ್ಚೆಯನ್ನು ಈಗ ಭ್ರಷ್ಟಗೊಂಡು ತನ್ನ ಅಳಿದುಳಿದಿದ್ದ ಪ್ರಸ್ತುತತೆಯನ್ನೇ ಕಳೆದುಕೊಂಡಿರುವ ಜಾತಿ ಪದ್ಧತಿಯ ಪರಿಭಾಷೆಗೆ ಇಳಿಸಿರುವುದು ಲೇಖಕರು ಪುಸ್ತಕದುದ್ದಕ್ಕೂ ಟೀಕಿಸುತ್ತಾ ಬಂದಿರುವ ಬುದ್ಧಿವಂತಿಕೆಯ ಪರಿಣಾಮದಂತೆಯೇ ನನಗೆ ಕಂಡಿದೆ. ಜೊತೆಗೆ ಪ್ರಸನ್ನ ಪುಸ್ತಕದ ತುಂಬ ಸಮಾಜವಾದ ಮತ್ತು ಸಮತಾವಾದಗಳನ್ನು ತಮ್ಮ ಅನುಕೂಲಕ್ಕೆ

ತರ್ಕಂತೆ ಪರ್ಯಾಯ ಶಬ್ದಗಳಂತೆ ಬಳಸಿರುವುದೂ ಈ ಬುದ್ಧಿವಂತಿಕೆಗೆ ಇನ್ನೊಂದು ಉದಾಹರಣೆಯೇ ಆಗಿದೆ. ಇಂತಹ ಕಡೆಯಲ್ಲೆಲ್ಲ ಅವರ ಗಾಂಧಿ ವಿಚಾರ ಬದ್ಧತೆ ಅನುಮಾನಕ್ಕೀಡಾಗುವಂತಿದೆ.

ಅದೇನೇ ಇರಲಿ, ಪ್ರಸನ್ನ ಶ್ರಮ ಮೂಲಭೂತವಾದದಂತೆ ಕಾಣುವ ಈ ಎಲ್ಲ ಬೌದ್ಧಿಕ ಪ್ರಾಣಾಯಾಮಕ್ಕೆ ಬದಲಾಗಿ ಯಂತ್ರ ಸಂಸ್ಕೃತಿಯನ್ನು ಶ್ರಮ ಸಂಸ್ಕೃತಿಯೊಂದಿಗೆ ಬೆಸೆದು ಅದನ್ನು ಪಳಗಿಸುವ ಬಗೆಗಳ ಬಗ್ಗೆ ಚಿಂತಿಸುವುದು ಹೆಚ್ಚು ಸಾರ್ಥಕ ಕೆಲಸವಾದೀತೆಂದು ನನ್ನ ಅನಿಸಿಕೆ.

ಸಮಾಜವಾದಿಯೊಬ್ಬರ 'ಕೌಟುಂಬಿಕ ವೃತ್ತಾಂತ'

ಜನಸೇವಕನ ನೆನಪಿನಂಗಳ' ಎಂಬ ತಮ್ಮ ಈ ಪುಸ್ತಕವನ್ನು ಹಿರಿಯ ಸಮಾಜವಾದಿ ಮತ್ತು ಪತ್ರಕರ್ತ ಅಮ್ಮೆಂಬಳ ಆನಂದರು ತಮ್ಮ 'ಜೀವನ ವೃತ್ತಾಂತ' ಎಂದು ಕರೆದುಕೊಂಡಿದ್ದಾರೆ. ಆದರೆ ಉತ್ತರ ಕನ್ನಡ ಜಿಲ್ಲೆಯಲ್ಲಿ ಐವತ್ತರ ದಶಕದಲ್ಲೇ ದೊಡ್ಡ ರೈತ-ಹೋರಾಟಗಳನ್ನು ಸಂಘಟಿಸಿ ಜಿಲ್ಲೆಯಲ್ಲಿ ಒಂದು ಉಜ್ವಲ ಸಮಾಜವಾದಿ ಆಂದೋಲನಕ್ಕೆ ಕಾರಣರಾದ ದಿನಕರ ದೇಸಾಯಿಯವರು ಆರಂಭಿಸಿದ 'ಜನ ಸೇವಕ' ವಾರಪತ್ರಿಕೆಗೆ ಅದರ ಸ್ಥಾಪನೆಯ ೧೯೫೫ರ ಜನವರಿಯಿಂದ ಹಿಡಿದು ಹದಿನೇಳೂವರೆ ವರ್ಷಗಳ ಕಾಲ ನಡೆದು ಮುಚ್ಚಿದ ದಿನದವರೆಗೆ ಸಂಪಾದಕರಾಗಿ, ಬಹುಕಾಲ ದೇಸಾಯಿಯವರ ಒಡನಾಡಿಯೂ ಆಗಿದ್ದ ಆನಂದರು ಈ ಪುಸ್ತಕದಲ್ಲಿ ಸಮಾಜವಾದಿ ಚಳುವಳಿ ಮತ್ತು ಪತ್ರಿಕೆಯ ಬಗ್ಗೆ ಬರೆದಿರುವುದು ಏಕೋ ಬಹಳ ಕಡಿಮೆ. ಪತ್ರಿಕೆಯ ತುಂಬ ತುಂಬಿರುವುದು ಅವರ ಬಂಧು–ಮಿತ್ರರ, ಸಾರ್ವಜನಿಕ ಸಂಪರ್ಕಗಳ–ಸಾಮಾನ್ಯ ಓದುಗರಲ್ಲಿ ಯಾವುದೇ ಕುತೂಹಲ ಕೆರಳಿಸದಂತಹ– ನೀರಸ ವಿವರಗಳೇ. ಆದರೆ ಪುಸ್ತಕದ ಕೊನೆಯಲ್ಲಿ ಸಮಾಜವಾದಿಗಳ ವರ್ತನೆಯನ್ನು ತುಂಬ ಸರಳವಾಗಿ ಟೀಕಿಸುತ್ತಾ ತಮ್ಮನ್ನು ಸಮಾಜವಾದಿ ಎಂದು ಕರೆದುಕೊಳ್ಳಲು ಮುಜುಗರವಾಗುತ್ತದೆ ಎನ್ನುವ ಆನಂದರಿಗೆ ಸಮಾಜವಾದಿ ಆಂದೋಲನವನ್ನು ಕಟ್ಟಿದ ತಮ್ಮಂತವರೂ ಇದರ ಜವಾಬ್ದಾರಿಯನ್ನು ಸ್ವಲ್ಪವಾದರೂ ಹೊರಬೇಕಾಗುತ್ತದೆ ಎಂಬ ಪರಿವೆ ಮಾತ್ರ ಇದ್ದಂತಿಲ್ಲ. ವಾರಸುದಾರಿಕೆ ಬರೀ ಒಳ್ಳೆಯದಕ್ಕೆ ಮಾತ್ರವಾದರೆ ಕಷ್ಟ ಎಂಬುದನ್ನು ಈ ಹಿರಿಯರಿಗೆ ಹೇಳುವ ಅಗತ್ಯವಿಲ್ಲವೆಂದು ಭಾವಿಸುವೆ.

ಈ ಪುಸ್ತಕ ಸ್ವಲ್ಪ ಮಟ್ಟಿಗೆ ಸಮಾಜವಾದಿ ಆಂದೋಲನದ ಅಧ್ಯಯನ ಮಾಡುವವರಿಗೆ ಸಹಾಯಕವಾಗಬಹುದು. ರಾಜ್ಯದಲ್ಲಿ ಸಮಾಜವಾದಿ ಪಕ್ಷದ ಆರಂಭದ ದಿನಗಳ ಮತ್ತು ಅದನ್ನು ಆಗ ಪೋಷಿಸಿದ ಜನಗಳ ಹಾಗೂ ರಾಜ್ಯದ ಬಹಳಷ್ಟು ಸಮಾಜವಾದಿಗಳಿಗೆ ಗೊತ್ತೇ ಇರದ ಉ.ಕನ್ನಡ ಜಿಲ್ಲೆಯ ಸಮಾಜವಾದಿ ಚಳುವಳಿಯ ಒಂದು ಚಿತ್ರ ಮತ್ತು ಶಂಕರ ಕೇಣಿ, ವಿ.ಜೆ. ನಾಯಕರಂತಹ ಅದರ ನಿಷ್ಠಾವಂತ ಕಾರ್ಯಕರ್ತರ ಸಣ್ಣ ಪರಿಚಯ ಈ ಪುಸ್ತಕದಲ್ಲಿ ಆನುಷಂಗಿಕ ವಿವರಗಳಾಗಿ ದಾಖಲಾಗಿವೆ. ಈ ಕಾರಣಕ್ಕಾದರೂ ಈ ಕೃತಿಯನ್ನು ಒಂದು ಸಮಾಜವಾದಿ ದಾಖಲೆಯಾಗಿ ಸ್ವಾಗತಿಸಬಹುದಾಗಿದೆ.

●

ಏಪ್ರಿಲ್, ೨೦೧೬

ಒಂದು ಪಾಕಿಸ್ತಾನಿ ಚಲಚಿತ್ರ ಹಾಗೂ ಹವಾ ನಿಯಂತ್ರಣದ ಸುಖ!

ಮುಸ್ಲಿಮರ ಬಗ್ಗೆ ಅಷ್ಟೇನೂ ಪ್ರೀತಿಯಿಲ್ಲದ ನನ್ನ ಸ್ನೇಹಿತರೊಬ್ಬರು ಮೊನ್ನೆ ಇದ್ದಕ್ಕಿದ್ದಂತೆ 'ನೀವು ಒಂದು ಪಾಕಿಸ್ತಾನಿ ಚಿತ್ರವನ್ನು ನೋಡಲೇಬೇಕು' ಎಂದು ಅದನ್ನು ಅಂತರ್ಜಾಲದಿಂದ ಇಳಿಸಿಕೊಂಡು ಬಂದು ನನ್ನ ಗಣಕಕ್ಕೆ ಏರಿಸಿ ನನ್ನ ಕೆಲಸಗಳ ಮಧ್ಯೆ ಚಿತ್ರವನ್ನು ಮತ್ತೊಮ್ಮೆ ನೋಡಲು ಕೂತಾಗ ನನಗೆ ಕಸಿವಿಸಿಯ ಜೊತೆಗೆ ಆಶ್ಚರ್ಯವೋ ಆಶ್ಚರ್ಯ. ಚಿತ್ರದ ಪ್ರತಿದೃಶ್ಯದ ಪ್ರತಿ ವಿವರವನ್ನೂ ಆಸ್ವಾದಿಸುತ್ತಾ, 'ಈತನ ಅಭಿನಯ ನೋಡಿ ಸಾರ್! ಈ ಸಂಭಾಷಣೆಯನ್ನ ಹುಷಾರಾಗಿ ಕೇಳಿಸಿಕೊಳ್ಳಿ ಸಾರ್!' ಎಂದು ಒಂದು ಚಲಚಿತ್ರ ರಸಗ್ರಹಣ ಶಿಬಿರವನ್ನೇ ಆರಂಭಿಸಿದಾಗ ನಾವು ಅವರಿಗೆ ಚಿತ್ರವನ್ನು ಬಿಡುವಾಗಿ ನೋಡಿದರೇ ಚೆಂದ ಎಂದು ಹೇಳಿ ಆ ಶಿಬಿರದಿಂದ ಪಾರಾದೆವಾದರೂ, ಮುಸ್ಲಿಂ ಸಮಾಜವನ್ನು ಕುರಿತ ಅವರ ಪೂರ್ವಗ್ರಹಗಳು ಈಗ ಸಂಪೂರ್ಣ ಕರಗಿಹೋಗಿರುವುದನ್ನು ನಾವು ಗಮನಿಸದೇ ಇರಲಿಲ್ಲ.

ಒಂದೆರಡು ದಿನಗಳಲ್ಲಿ ನಾವು ಆ ಚಲಚಿತ್ರವನ್ನು ಪೂರ್ಣ ನೋಡಿದೆವು. ಅದರ ಹೆಸರು 'ಬೋಲ್'. ಕನ್ನಡದಲ್ಲಿ ಅದನ್ನು 'ಸೊಲ್ಲು' ಅಥವಾ 'ಮಾತಾಡು' ಎಂದು ಅನುವಾದಿಸಬಹುದೇನೋ. ಅದು ಪಾಕಿಸ್ತಾನದ ಪ್ರಸಿದ್ಧ ನಿರ್ದೇಶಕ ಶೋಯಬ್ ಮನ್ಸೂರ್ ಅವರ ಇತ್ತೀಚಿನ ಚಿತ್ರ. ಚಿತ್ರ ಅಪ್ಪಟ ಉರ್ದು ಭಾಷೆಯಲ್ಲಿರುವುದರಿಂದ ಅದರ ಪ್ರತಿ ವಿವರವನ್ನೂ ಗ್ರಹಿಸುವುದು ಕಷ್ಟ. ಆದರೆ ಈ ಚಿತ್ರ ನೋಡಿದ ಯಾವ ಸಾಮಾನ್ಯ ಭಾರತೀಯನಾದರೂ ನನ್ನ ಗೆಳೆಯರಂತೆಯೇ ಪಾಕಿಸ್ತಾನ ಕುರಿತಂತೆ ಮತ್ತು ಅಲ್ಲಿನ ಮುಸ್ಲಿಂ ಸಂಸ್ಕೃತಿ ಕುರಿತಂತೆ ತಮ್ಮಲ್ಲಿರಬಹುದಾದ

ದುರಭಿಪ್ರಾಯಗಳನ್ನು ನಿಧಾನವಾಗಿಯಾದರೂ ಕಳೆದುಕೊಳ್ಳುವುದು ಖಂಡಿತ. ನಿಧಾನವಾಗಿಯಾದರೂ ಎಂದು ಏಕೆ ಹೇಳುತ್ತಿರುವೆನೆಂದರೆ, ನನ್ನ ಗೆಳೆಯರಂತೆಯೇ ಈ ಚಿತ್ರ ಅಂತಹವರಲ್ಲಿ ಅಷ್ಟು ಸುಲಭವಾಗಿ ನೆನಪಿನಿಂದ ಜಾರದೆ ಕಾಡುತ್ತಾ, ಪಾಕಿಸ್ತಾನ, ಅಲ್ಲಿನ ಮುಸ್ಲಿಂ ಸಮುದಾಯ ಎಲ್ಲ ನಮ್ಮದೇ ಭಾಗವಲ್ಲವೇ ಎಂಬ ಆಳದ ಅರಿವನ್ನು ಹುಟ್ಟುಹಾಕುತ್ತದೆ.

ಚಿತ್ರ ಲಾಹೋರ್ ಪಟ್ಟಣದಲ್ಲಿನ ಒಬ್ಬ ಮಧ್ಯಮ ವರ್ಗದ ಹಕೀಮನಿಗೆ ಏಳೆಂಟು ಹೆಣ್ಣು ಮಕ್ಕಳ ನಂತರ ಒಂದು ತೃತೀಯ ಲಿಂಗಿಯಾದ ಸಂತಾನವಾಗುವ ಸಂಗತಿಯ ಸುತ್ತ ಕಟ್ಟಿಕೊಳ್ಳುವ ಒಂದು ಕೌಟುಂಬಿಕ ದುರಂತವನ್ನು ಅದರೊಳಗೆ ಹೆಣೆದುಕೊಂಡಿರುವ, ಧಾರ್ಮಿಕ ಮೌಢ್ಯ, ಅದರಿಂದ ಬೆಂಬಲ ಪಡೆದ ಗಂಡು ಯಜಮಾನಿಕೆಯ ಕ್ರೌರ್ಯ ಮತ್ತು ಅದರ ಮಧ್ಯೆ ದಮನಗೊಂಡ ಹೆಣ್ಣು ದನಿ ಎತ್ತಲು ನಡೆಸುವ ವಿಫಲ ಪ್ರಯತ್ನ- ಇವುಗಳನ್ನು ಎಲ್ಲೂ ಯಾವುದೇ ಪಕ್ಷ ವಹಿಸದೆ ಸಾಕ್ಷಿಪ್ರಜ್ಞೆಯೊಡನೆ ಮಂಡಿಸುವ ಮೂಲಕ ನಮ್ಮನ್ನು ತೀವ್ರವಾಗಿ ಕಾಡುತ್ತದೆ. ವಿಶಾಲ ನೆಲೆಯಲ್ಲಿ ಇದು ಕೇವಲ ಪಾಕಿಸ್ತಾನದ, ಮುಸ್ಲಿಂ ಕುಟುಂಬದ ಕಥೆಯಾಗಿರದೆ ನಮ್ಮೆಲ್ಲರ ಕಥೆ ಎನಿಸುತ್ತದೆ.

ಸಾಮಾಜಿಕ ಮುಜುಗರದಿಂದ ಅಸಹಾಯಕನಾಗಿ ತನ್ನ ತೃತೀಯ ಲಿಂಗಿ 'ಮಗ'ನನ್ನು ಧಾರ್ಮಿಕ 'ಸಮ್ಮತಿ'ಯೊಂದಿಗೆ ಕೊಂದು, ಅದರ ಮೊಕದ್ದಮೆಯಿಂದ ಪಾರಾಗಲು ಹಕೀಮ ನಡೆಸುವ ಸಾರ್ವಜನಿಕ ಹಣಕಾಸಿನ ದುರುಪಯೋಗ, ಅದರಿಂದ ಮತ್ತೆ ಪಾರಾಗಲು ಮತ್ತೆ ಧಾರ್ಮಿಕ 'ಸಮ್ಮತಿ'ಯೊಂದಿಗೆ ವೇಶ್ಯಾವಾಟಿಕೆಯೊಂದಕ್ಕಾಗಿ ವೇಶ್ಯೆಯೊಬ್ಬಳಿಗೆ ಹೆಣ್ಣು ಸಂತಾನ ಕರುಣಿಸಿ ಹಣ ಪಡೆಯುವುದು; ಆದರೆ ಆ ಹೆಣ್ಣು ಮಗುವನ್ನು ವೇಶ್ಯಾವಾಟಿಕೆಗೆ ಒಪ್ಪಿಸಲಾಗದ ಹಕೀಮನ ಸಂಕಟ, ಅಲ್ಲಿನ ಪೋಲೀಸು, ಅದರ ಭ್ರಷ್ಟಾಚಾರ, ತೃತೀಯ ಲಿಂಗಿ 'ತಮ್ಮ'ನನ್ನು ಅವನ ಅಕ್ಕಂದಿರು ಪ್ರೀತಿಯಿಂದ ಲಾಲಿಸುವ ಪರಿ, ತೃತೀಯ ಲಿಂಗಿಯ ಬದುಕಿನ ಸಂದಿಗ್ಧತೆಗಳು, ಶಿಯಾ-ಸುನ್ನಿ ಒಡಕು, ಭಾರತ-ಪಾಕಿಸ್ತಾನ ಕ್ರಿಕೆಟ್ ಹುಟ್ಟಿಸುವ ಭಾವಾವೇಶ, ಇವೆಲ್ಲ ಚಿತ್ರದಲ್ಲಿ ಎಷ್ಟು ಸಹಜವಾಗಿ ಮೂಡಿ ಬಂದಿವೆಯೆಂದರೆ ಇಲ್ಲಿ ಎಲ್ಲರೂ-ಗಂಡು ದರ್ಪದ ಹಕೀಮ ಮತ್ತು ಕೊನೆಯಲ್ಲಿ ಆತನನ್ನು ಕೊಂದು ಗಲ್ಲು ಶಿಕ್ಷೆಗೆ ಒಳಗಾಗುವ ಕುಟುಂಬದ ಹಿರಿಮಗಳೂ ಸೇರಿದಂತೆ-ಬಹಿರಂಗವಾಗಿ ಧಿಕ್ಕರಿಸಲಾಗದ ವ್ಯವಸ್ಥೆಯೊಂದರ ಸಹಜ ಬಂದಿಗಳಾಗಷ್ಟೆ ಕಾಣುತ್ತಾರೆ. ಈ ವಿಷಾದವೇ ಈ ಚಿತ್ರದಲ್ಲಿ ನಮ್ಮನ್ನು ಮುತ್ತುವುದು.

ಚಿತ್ರ ನಿರೂಪಣೆಯ ತಂತ್ರವೂ ಎಷ್ಟು ಕುತೂಹಲಕಾರಿಯಾಗಿದೆಯೆಂದರೆ, ಚಿತ್ರ ನಿರೂಪಿತವಾಗುವುದು ಗಲ್ಲು ಶಿಕ್ಷೆಗೆ ಗುರಿಯಾಗಿರುವ ಹೆಣ್ಣುಮಗಳು ಹೇಳುವ ಅವಳ ಕಥೆಯಾಗಿ; ಹಾಗೂ ಅವಳ ನಿರಪರಾಧಿತ್ವವನ್ನು ಮನಗಂಡು ಅವಳನ್ನು ಗಲ್ಲುಶಿಕ್ಷೆಯಿಂದ ಪಾರು ಮಾಡಲು ಕೊನೆಯ ಕ್ಷಣದ ವಿಫಲ ಪ್ರಯತ್ನ ಮಾಡುವುದೂ ಓರ್ವ ದಿಟ್ಟ ಮಹಿಳಾ ಪತ್ರಕರ್ತೆಯೇ. ಅದೂ ಆಕೆ ನೇರವಾಗಿ ದೇಶದ ಅಧ್ಯಕ್ಷರಿಗೆ ದೂರವಾಣಿ ಕರೆ ಮಾಡಿ ಈ 'ಅನ್ಯಾಯ'ವನ್ನು ತನ್ನ ಟಿವಿ ವಾಹಿನಿಯ ಮೂಲಕ

ಬಯಲು ಮಾಡುವುದಾಗಿ ಎಚ್ಚರಿಸುವ ಮೂಲಕ! ಈ ದೃಷ್ಟಿಯಿಂದ ಇದೊಂದು ಸಾಂಪ್ರದಾಯಿಕ ಧರ್ಮ, ಸಮಾಜ, ಕುಟುಂಬ ವ್ಯವಸ್ಥೆಯ ಮೇಲೆ ಕ್ಷ-ಕಿರಣ ಬೀರುವ ಪ್ರಖರ ಮಹಿಳಾ ದೃಷ್ಟಿಕೋನದ ಚಿತ್ರ ಮಾತ್ರವಲ್ಲ, ಒಂದು ನೆಲೆಯಲ್ಲಿ ಪಾಕಿಸ್ತಾನದ ಸಮಾಜ ಮತ್ತು ಪ್ರಭುತ್ವಗಳ ಸ್ವರೂಪ ಕುರಿತಂತೆ ನಮಗೆ ಹೊಸ ಹೊಳಹು ನೀಡುವ ರಾಜಕೀಯ ಚಿತ್ರ ಕೂಡ.

ಚಿತ್ರದಲ್ಲಿ ಒಂದು ಪ್ರೇಮ ಕಥೆಯೂ ತೆಳುವಾಗಿ ಹೆಣೆದುಕೊಂಡಿದೆ. ಪ್ರೇಮ ಗೀತೆಗಳೂ, ಆಧುನಿಕ ನೃತ್ಯಗಳೂ, ಕಣ್ಸೆಳೆಯುವ ಹೊರಾಂಗಣ ದೃಶ್ಯಗಳೂ ಇವೆ. ನಟ-ನಟಿಯರು ಅಪರಿಚಿತವೆನ್ನಿಸುವುದನ್ನು ಬಿಟ್ಟರೆ, ಅವರ ಎಲ್ಲ ಭಾವ-ಭಂಗಿಗಳೂ ನಮ್ಮವೇ. ಹಾಗಾಗಿ ಇದೊಂದು ಅಪ್ಪಟ ಭಾರತೀಯ ಚಿತ್ರವೇ ಎನ್ನಿಸಿಬಿಡುತ್ತದೆ. ಒಂದು ಮುಖ್ಯ ವ್ಯತ್ಯಾಸವೆಂದರೆ, ಅಲ್ಲಿಯ ಮನೆ(ಹವೇಲಿ)ಗಳ ಒಳಾಂಗಣಗಳು. ಅದೇನೇ ಇದ್ದರೂ, ಕಲೆ-ಅದೆಷ್ಟೇ ಸಾಮಾನ್ಯವಾಗಿರಲಿ-ಅದು ಎಲ್ಲ ಅನುಚಿತ ಪೂರ್ವಾಗ್ರಹಗಳ ಗೋಡೆಗಳನ್ನು ಒಡೆಯಬಲ್ಲುದು. ಇದಕ್ಕೆ 'ಬೋಲ್' ಸಾಕ್ಷಿ.

ಹವಾಮಾನ ಬದಲಾವಣೆ v/s ಹವಾ ನಿಯಂತ್ರಣ!

ಈ ಬೇಸಿಗೆಯಲ್ಲಿ ಊರೂರಿನಲ್ಲಿ ಕೆಂಡ ಸುರಿದಂತೆ ಬಿಸಿಲು ಏರುತ್ತಿದೆ. ರಾಜ್ಯದ ಅರ್ಧಕ್ಕೂ ಹೆಚ್ಚು ಊರುಗಳಲ್ಲಿ ಉಷ್ಣಾಂಶ ೪೦ ಡಿಗ್ರಿ ಸೆ. ಮೀರಿ ದಾಖಲೆಗಳು ಸುಟ್ಟು ಬೂದಿಯಾಗುತ್ತಿವೆ. ಹಾಗೆ ನೋಡಿದರೆ ಜಗತ್ತಿನ ವಿವಿಧೆಡೆ ಉಷ್ಣಾಂಶ ಈ ವರ್ಷ ಶತಮಾನದ ದಾಖಲೆಗಳನ್ನು ಮೀರಿದ ಸುದ್ದಿಗಳು ಬರುತ್ತಿವೆ. ಹವಾಮಾನ ಬದಲಾವಣೆ ಕುರಿತ ಜಾಗತಿಕ ಒಪ್ಪಂದ ಕಾಗದಕ್ಕೆ ಸೀಮಿತವಾದಂತೆ, ಜನ ಮತ್ತು ಸರ್ಕಾರಗಳು ಮಾತ್ರ ಇದೆಲ್ಲ ಮಾಮೂಲು ಎಂಬಂತೆ ಕೆರೆ-ತೊರೆಗಳನ್ನು ಬತ್ತಿಸುತ್ತಾ, ಬೆಟ್ಟ-ಗುಡ್ಡ-ಮರಗಿಡಗಳಗಳನ್ನು ಸವರಿಹಾಕುತ್ತಾ ಊರುಗಳನ್ನು ಕಾಂಕ್ರೀಟ್-ಕಬ್ಬಿಣ-ಗಾಜಿನಿಂದ 'ಅಭಿವೃದ್ಧಿ'ಪಡಿಸುತ್ತಾ ಹೋಗುತ್ತಿದ್ದಾರೆ. ಇದರ ಮುಖ್ಯ ಫಲಾನುಭವಿಗಳಾದ ಬೆಂಗಳೂರಿನ (ಮತ್ತು ಇತರ ನಗರಗಳ) ಪ್ರತಿಷ್ಠಿತ ಜನ ಹೊರಗಿನ ಧಗೆ ಮತ್ತು ಧೂಳು ತಮ್ಮನ್ನು (ಮತ್ತು ಕುಂಟುಂಬಗಳನ್ನು) ಬಾಧಿಸದಂತೆ ರಕ್ಷಣೆ ಪಡೆಯಲೋ ಎಂಬಂತೆ ತಮ್ಮ ಕಾರುಗಳ ಕಿಟಕಿಗಳನ್ನು ಮುಚ್ಚಿಕೊಂಡು ಹವಾ ನಿಯಂತ್ರಣ ಹಚ್ಚಿಕೊಂಡು ಬಿಮ್ಮಗೆ ಓಡಾಡುತ್ತಿದ್ದಾರೆ. ಇದು ಎಷ್ಟು ದಿನ? ಅವರಿಗೆ ಗೊತ್ತಿದ್ದಂತಿಲ್ಲ! 'ದೇವರೇ ಇವರನ್ನು ಕ್ಷಮಿಸು; ತಾವೇನು ಮಾಡುತ್ತಿದ್ದಾರೆಂದು ಇವರಿಗೆ ಗೊತ್ತಿಲ್ಲ' ಎಂದು ಹೇಳಲು ಏಸು ಮತ್ತೆ ಶಿಲುಬೆಗೇರಬೇಕೋ ಏನೋ!.

●

ಮೇ, ೨೦೧೬

ಸಾಹಿತ್ಯ–ಸಂಸ್ಕೃತಿ–ಪ್ರಶಸ್ತಿ–ಪ್ರವಾಸ ಇತ್ಯಾದಿ

'ಇತ್ತೀಚೆಗೆ ನನ್ನ ಅತಿ ಆಪ್ತರೊಬ್ಬರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿಯನ್ನು ಪ್ರಕಟಿಸಲಾಯಿತು. ಇದು ನನಗೆ ಗೊತ್ತಾದಾಗ ನಾನು ಅವರಿಗೆ ಈ ಪ್ರಶಸ್ತಿಯನ್ನು ಒಪ್ಪಿಕೊಳ್ಳಬಾರದಿತ್ತು ಎಂದೆ. ಏಕೆಂದರೆ ಇವರಿಗಿಂತ ಪ್ರಶಸ್ತಿಗೆ ಅರ್ಹರಾದ ಹಲವು ಹಿರಿಯರಿದ್ದರು.

ಇದಕ್ಕೆ ಆ ನನ್ನ ಆಪ್ತರು ಹೇಳಿದ್ದು: 'ಈ ಪ್ರಶಸ್ತಿ ಕೊಡಲಾಗಿದೆಯೆಂದು ಅಕಾಡೆಮಿಯ ಸದಸ್ಯರೊಬ್ಬರು ನನಗೆ ಕರೆ ಮಾಡಿ ತಿಳಿಸಿದಾಗ ನಾನು ತಕ್ಷಣವೇ ಇದೇ ಕಾರಣಕ್ಕಾಗಿ, ಕೆಲವು ಹೆಸರುಗಳನ್ನೂ ಹೇಳಿ, ನನಗೆ ಈ ಪ್ರಶಸ್ತಿ ಬೇಡವೆಂದು ಹೇಳಿದೆ. ಆದರೆ ಅವರು ಕರೆಯನ್ನು ಸ್ಥಗಿತಗೊಳಿಸಿಬಿಟ್ಟರು. ನಂತರ ನಾನು ಆ ಕೆಲವು ಹೆಸರುಗಳನ್ನು ಸಂದೇಶ ಕೂಡ ಮಾಡಿದೆ. ಆದರೆ ಅಕಾಡೆಮಿ ಅಧ್ಯಕ್ಷರು ಸ್ವಲ್ಪ ಹೊತ್ತಿನಲ್ಲೇ ಕರೆ ಮಾಡಿ ಪ್ರಶಸ್ತಿಗಳನ್ನು ಈಗಾಗಲೇ ಸಾರ್ವಜನಿಕವಾಗಿ ಪ್ರಕಟಿಸಲಾಗಿದೆ ಎಂದು ಹೇಳಿ ಅಭಿನಂದನೆಗಳನ್ನೂ ಸಲ್ಲಿಸಿಬಿಟ್ಟರು. ನಾನು ಮೂಕಳಾದೆ. ಇಂತಹ ಪರಿಸ್ಥಿತಿಯಲ್ಲಿ ಪ್ರಶಸ್ತಿ ನಿರಾಕರಿಸಿ ಸುದ್ದಿ ಮಾಡುವುದು ನನಗೆ ಪ್ರಶಸ್ತಿ ಸ್ವೀಕರಿಸುವುದಕ್ಕಿಂತ ಹೆಚ್ಚು ಮುಜುಗರದ ಸಂಗತಿ ಎನ್ನಿಸಿತು. ಇರಲಿ ಬಿಡಿ, ಮಹಿಳಾ ಕೋಟಾದಲ್ಲಿ ನನಗೆ ಈ ಪ್ರಶಸ್ತಿ ಕೊಟ್ಟಿದ್ದಾರೆನಿಸುತ್ತದೆ. ಅದು ಅಷ್ಟೇನೂ ಮುಜುಗರದ ಸಂಗತಿಯಲ್ಲ!'

'ಅಕಾಡೆಮಿಯ ಈ ಪ್ರಶಸ್ತಿಗಳು ಅರ್ಹರಿಗೆ ವಂಚಿತವಾಗುತ್ತಿರುವುದು ಈ ಕೋಟಾ ಪದ್ಧತಿಯಿಂದಲೇ ಅಲ್ಲವೆ? ಸಾಹಿತ್ಯವೇನು ಸರ್ಕಾರಿ ಸೇವೆಯೇ, ಮೀಸಲಾತಿ ನಿಗದಿಯಾಗಲು? ಕುವೆಂಪು, ಬೇಂದ್ರೆ, ಕಣವಿ,

ಮಹಾದೇವ, ಸಿದ್ಧಲಿಂಗಯ್ಯ, ವೀಣಾ, ಸಾರಾ, ವೈದೇಹಿ ಇವರೆಲ್ಲ ಈ ಸಾಮಾಜಿಕ, ಪ್ರಾದೇಶಿಕ, ಲಿಂಗ ನ್ಯಾಯಗಳ ಕೋಟಾದ ಕೃಪೆಯಿಂದಾಗಿ ಕನ್ನಡಿಗರ ಮಧ್ಯೆ ಮಾನ್ಯತೆ ಪಡೆದರೆ?'

'ಈಗ ಏನು ಮಾಡುವುದು ಹೇಳಿ! ಅಕಾಡೆಮಿ ಕೆಲ ವರ್ಷಗಳಿಂದ ಈ ಕೋಟಾ ವ್ಯವಸ್ಥೆಯನ್ನು ಜಾರಿಗೆ ತಂದಿದೆ. ಏಕೆಂದು ನನಗೆ ತಿಳಿಯದು. ಹಾಗಿದ್ದಲ್ಲಿ ಈ ಅಕಾಡೆಮಿಯ ಎಲ್ಲ ಚಟುವಟಿಕೆಗಳನ್ನೂ ಬಹಿಷ್ಕರಿಸಬೇಕಾಗುತ್ತದೆ. ಆದರೆ ಏಕೆ ಬಹಿಷ್ಕರಿಸಬೇಕು? ಅದು ನಮ್ಮ ಹಣದಿಂದ ನಡೆಯುತ್ತಿರುವ ಸಂಸ್ಥೆಯಲ್ಲವೇ?'

ಮುಂದೆ ಮಾತಾಡುವುದು ನನಗೆ ಕಷ್ಟವಾಯಿತು. ಆದರೂ ಹೇಳಿದೆ: 'ಈ ಕೋಟಾ ವ್ಯವಸ್ಥೆ ಬರುವ ಮುನ್ನ ಕನ್ನಡದ ಯಾವ ಸಾಹಿತಿಗಾದರೂ ಅಕಾಡೆಮಿಯಿಂದ ಜಾತಿ, ಪ್ರದೇಶ ಅಥವಾ ಲಿಂಗದ ಆಧಾರದ ಮೇಲೆ ಅನ್ಯಾಯವಾಗಿತ್ತೆ? ಬೇಕಾದವರಿಗೆ ಬೇಕಾದ ನೆಪ ಹೇಳಿ ಪ್ರಶಸ್ತಿ ಕೊಡಲು. ಪುಢಾರಿ ಸಾಹಿತಿಯೊಬ್ಬರು ಅಧ್ಯಕ್ಷರಾಗಿದ್ದಾಗ ಜಾರಿಗೆ ತಂದದ್ದು ಈ ಕೋಟಾ ಪದ್ಧತಿ. ಇದನ್ನು ತೆಗೆದು ಹಾಕುವ ನೈತಿಕ ಧೈರ್ಯ ಅಕಾಡೆಮಿಯ ನಂತರದ ಯಾವ ಅಧ್ಯಕ್ಷರಿಗೂ ಬರದಿರುವುದು ಸಾಹಿತ್ಯ ಸಂವೇದನೆಯೆಂಬುದು ಇಂದು ಯಾವ ಮಟ್ಟ ಮುಟ್ಟಿದೆ ಎಂಬುದರ ಸೂಚನೆಯಾಗಿದೆಯಷ್ಟೆ. ಇತ್ತೀಚಿನ ವರ್ಷಗಳಲ್ಲಿ ಎಂಥೆಂಥವರಿಗೆ ಈ ಪ್ರಶಸ್ತಿ ಕೊಡಲಾಗಿದೆ ಎಂಬುದು ನಿಮಗೇ ಗೊತ್ತಲ್ಲ? ಇದು ಸಾಹಿತ್ಯದ ರುಚಿ ಉಳಿಸುವ ಬಹು ಮುಖ್ಯ ಪ್ರಶ್ನೆ ಅಲ್ಲವೆ?'

'ಹಾಗಾದರೆ ಮುವ್ವತ್ತು ವರ್ಷ ಕನ್ನಡದಲ್ಲಿ ಪದ್ಯ ಬರೆದಿರುವ ನನಗೆ ಈ ಪ್ರಶಸ್ತಿ ಸ್ವೀಕರಿಸುವ ಅರ್ಹತೆಯಿಲ್ಲ ಎನ್ನುವಿರಾ?'

ಮುಂದೆ ನನ್ನ ಮಾತು ನಿಂತಿತು. 'ನೀವು ಕೋಟಾದಲ್ಲಿ ಪ್ರಶಸ್ತಿ ಪಡೆಯುವಂತಹ ಅ-ಸಾಹಿತಿಯಲ್ಲ' ಎಂದು ಹೇಳಬೇಕೆನಿಸಿದರೂ ಅದು ಸ್ವಯಂ ವಿರೋಧಾಭಾಸದ ಮಾತಾದೀತೆಂದು ಸುಮ್ಮನಾದೆ.

ಸದ್ಯದ ಅಕಾಡೆಮಿ ಅಧ್ಯಕ್ಷರೂ ಸೇರಿದಂತೆ ಈ ಹಿಂದಿನ ಒಂದಿಬ್ಬರು ಅಧ್ಯಕ್ಷರುಗಳು ಅಕಾಡೆಮಿಯ ಕಾರ್ಯಕ್ರಮಗಳ ಸುಧಾರಣೆಗಾಗಿ ಸಲಹೆ ಕೇಳಿ ಪತ್ರ ಬರೆದಿದ್ದಾಗ ನಾನು ಈ ಕೋಟಾ ಪದ್ಧತಿ ಅಕಾಡೆಮಿಗೊಂದು ಅವಲಕ್ಷಣ ಎಂದು ಹೇಳಿದ್ದೆ. ಹಾಗೇ, ಎರಡು ವರ್ಷಗಳ ಹಿಂದೆ ಒಂದಿಬ್ಬರು ಶುದ್ಧ 'ಅಯೋಗ್ಯ'ರಿಗೆ (ಸಾಹಿತ್ಯದ ದೃಷ್ಟಿಯಿಂ) ಈ ಪ್ರಶಸ್ತಿ ನೀಡಿದಾಗ ನಾನು ಕನ್ನಡ ಸಂಸ್ಕೃತಿ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರಿಗೆ ಕರೆ ಮಾಡಿ ಈ ಕೋಟಾವನ್ನು ನಿಲ್ಲಿಸಲು ಏನು ತಡೆಯಾಗಿದೆ ಎಂದು ಕೇಳಿದೆ. ಅದಕ್ಕವರು ನೀಡಿದ ಉತ್ತರ: 'ವಿಧಾನ ಸಭೆಯಲ್ಲಿ ಶಾಸಕರು ಈ ಜಾತಿಯವರಿಗೆ ಈ ಭಾಗದವರಿಗೆ ಏಕೆ ಪ್ರಶಸ್ತಿ ಕೊಟ್ಟಿಲ್ಲ ಎಂದು ಕೇಳಿ ರಗಳೆ ಮಾಡುತ್ತಾರೆ ಸಾರ್!'

ಆಗ ನಾನು ಹೇಳಿದ್ದೆ: 'ಅಕಾಡೆಮಿ ಒಂದು ಸರ್ಕಾರಿ ಇಲಾಖೆಯಲ್ಲ.

ಅದನ್ನೊಂದು ಸ್ವಾಯತ್ತ ಸಂಸ್ಥೆಯಾಗಿ ನಮ್ಮ ಹಿರಿಯರು ರಚಿಸಿರುವುದೇ, 'ರಾಜಕಾರಣ' ಅದರಲ್ಲಿ ತಲೆ ಹಾಕಬಾರದೆಂಬುದಕ್ಕಾಗಿ. ಇದೊಂದು ಪರಿಣತ ಸಂಸ್ಥೆಯಾಗಿದ್ದು, ಇಂತಹ ಪ್ರಶ್ನೆಗಳಿಗೆ ಅವಕಾಶವಿಲ್ಲ; ಅದು ತನ್ನ ಪರಿಣಿತಿಯಲ್ಲಿ ಕೆಲಸ ಮಾಡಲು ಬಿಡಬೇಕೆಂದು ಆ ಶಾಸಕರಿಗೆ ಯಾರೂ ಏಕೆ ಹೇಳಲಿಲ್ಲ?'

ನನ್ನ ಮಾತು ಅವರಿಗೆ ಅರ್ಥವಾದಂತೆ ಕಾಣಲಿಲ್ಲ. ಅಥವಾ ಇದೆಲ್ಲ ಅಧಿಕ ಪ್ರಸಂಗವಾಗಿ ಕಂಡಿರಬಹುದು. ಅವರು 'ಹೋಗಲಿ ಬಿಡಿ ಸಾರ್!' ಎಂದು ಮಾತು ಮುಗಿಸಿದರು. ನಂತರ ನನಗೆ ಗೊತ್ತಾದದ್ದು, ಇದಕ್ಕೆಲ್ಲ ಅವರ ಕುಮ್ಮಕ್ಕೂ ಇದೆಯೆಂದು!

ಆದರೆ ದುಃಖದ ಸಂಗತಿ ಎಂದರೆ ಅಕಾಡೆಮಿಯ ಈ ರಾಜಕಾರಣ ನೋಡಿಯೋ ಏನೋ ಸರ್ಕಾರ ಕೂಡ ಇತ್ತೀಚಿನ ವರ್ಷಗಳಲ್ಲಿ ಅಕಾಡೆಮಿ ರಚನೆಯನ್ನೇ ಸಂಪೂರ್ಣ ರಾಜಕೀಯಗೊಳಿಸಿ ಅ-ಪರಿಣಿತಿಯನ್ನು ಅದರೊಳಕ್ಕೇ ಪ್ರತಿಷ್ಠಾಪಿಸಲಾರಂಭಿಸಿದೆ. ಅಲ್ಲಿಂದ ಇದರ ಅವನತಿ ಶುರುವಾಗಿದೆ. ಜಿಎಸ್ಸೆಸ್ ಅಧ್ಯಕ್ಷ ಸ್ಥಾನದಿಂದ ನಿರ್ಗಮಿಸಿದ ನಂತರ ಈ ಅಕಾಡೆಮಿಯ ಇತಿಹಾಸವನ್ನು ಗಮನಿಸಿದವರಿಗೆ ಇದು ಅರ್ಥವಾದೀತು. ವಿವರಗಳಿಗೆ ಈ ಸಂಸ್ಥೆಗೆ ಹಲವು ವರ್ಷ ಆಡಳಿತಾಧಿಕಾರಿಯಾಗಿದ್ದ ಟಿ.ಎಸ್. ದಕ್ಷಿಣಾಮೂರ್ತಿಯವರು ಬರೆದಿರುವ 'ಅಕಾಡೆಮಿಯ ಒಳ-ಹೊರಗು' ಎಂಬ ಪುಸ್ತಕವನ್ನು ಆಸಕ್ತರು ಗಮನಿಸಬಹುದು.

ಈ ಗೌರವ ಪ್ರಶಸ್ತಿ ಪ್ರದಾನ ಸಮಾರಂಭದ ಈ ವರ್ಷದ ಆಹ್ವಾನ ಪತ್ರಿಕೆ ನೋಡಿದೆ. ಪರಿಸ್ಥಿತಿ ಸದ್ಯಕ್ಕೇನೂ ಸುಧಾರಿಸುವ ಸೂಚನೆ ಕಾಣಲಿಲ್ಲ. ಆಹ್ವಾನ ಪತ್ರಿಕೆಯ ಒಂದು ಪುಟದ ತುಂಬಾ ರಾಜಕಾರಣಿಗಳ ಹೆಸರುಗಳೇ ಅತಿಥಿಗಳಾಗಿ ರಾರಾಜಿಸುತ್ತಿವೆ! ಈ 'ಪ್ರೊಟೋಕಾಲ್' ರಾಜಕಾರಣಕ್ಕೆ ಬೀಳುವುದರಿಂದ ಅಕಾಡೆಮಿ ತನ್ನ ನಿಜ ಸ್ಥಾನಮಾನದ ಅರಿವನ್ನೂ, ಘನತೆಯನ್ನೂ ತಾನೇ ತಾನಾಗಿ ಕಳೆದುಕೊಳ್ಳುತ್ತಿದೆ ಎನಿಸುತ್ತಿದೆ. ಇದು ತೀರಾ ವಿಷಾದದ ಸಂಗತಿ. ಅದೃಷ್ಟವಶಾತ್ ಅಕಾಡೆಮಿಯಲ್ಲಿ ಇನ್ನೂ ಸ್ಥಾನ ಪಡೆಯುತ್ತಿರುವ ಕೆಲವು ನಿಜ ಸಾಹಿಗಳಾದರೂ ಈ ಬಗ್ಗೆ ಸದುದ್ದೇಶವುಳ್ಳ; ಆದರೆ ಅಸಹಾಯಕರಾಗಿರುವಂತೆ ತೋರುವ ಅಧ್ಯಕ್ಷರ ಗಮನ ಸೆಳೆದು ಒತ್ತಡ ಹೇರಬೇಕಿದೆ. ಹಾಗೇ ಹಾಸ್ಯಾಸ್ಪದ ಮಟ್ಟದಲ್ಲಿರುವ ಪ್ರಶಸ್ತಿ ಮತ್ತು ಬಹುಮಾನಗಳ ಜೊತೆ ನೀಡುವ ನಗದು ಮೊತ್ತವನ್ನು ಸ್ವಲ್ಪ ಗೌರವಾನ್ವಿತ ಮಟ್ಟಕ್ಕೆ ಹೆಚ್ಚಿಸಲೂ ಇವರು ಪ್ರಯತ್ನಿಸಬೇಕು.

ಹಲಸಂಗಿ ಗೆಳೆಯರ ನೆನಪಲ್ಲಿ....

ಪ್ರಶಸ್ತಿ-ಬಹುಮಾನಗಳ ಬಗ್ಗೆ ಬರೆಯುತ್ತಿರುವ ಈ ಹೊತ್ತಿನಲ್ಲೇ ಇದಕ್ಕೇ ಸಂಬಂಧಿಸಿದ ನನ್ನ ಇತ್ತೀಚಿನ ಇನ್ನೊಂದು ಅನುಭವನ್ನು ಇಲ್ಲಿ ಹೇಳಬೇಕು. ಮೇಲೆ ಪ್ರಸ್ತಾಪಿಸಿದ ನನ್ನ ಅದೇ ಆಪ್ತರಿಗೆ (ಇನ್ನಿಬ್ಬರ ಜೊತೆಗೆ) ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವ್ಯಾಪ್ತಿಗೇ ಬರುವ 'ಹಲಸಂಗಿ ಗೆಳೆಯರ ಪ್ರತಿಷ್ಠಾನ'ವು ಒಂದು ದೊಡ್ಡ ಮೊತ್ತದ ಪ್ರಶಸ್ತಿಯನ್ನೇ ಪ್ರಕಟಿಸಿತು. ಪ್ರಶಸ್ತಿ ಪ್ರದಾನ ಸಮಾರಂಭ ಬಿಜಾಪುರದಲ್ಲಿ.

ಅವರೊಂದಿಗೆ ಬಿಜಾಪುರ ನೋಡಲೆಂದು ನಾನೂ ಹೋದೆ.

ಬಿಜಾಪುರದ ಬಿಸಿಲಲ್ಲಿ ಯಾವ ಮಾರಾಯ ಈ ಸಮಾರಂಭವನ್ನು ಮಧ್ಯಾಹ್ನ ೩.೩೦ಕ್ಕೆ ನಿಗದಿ ಮಾಡಿದನೋ! ನಿರೀಕ್ಷೆಯಂತೆ ಸಮಾರಂಭವಿದ್ದ ಕಂದಗಲ್ ಹನುಮಂತರಾಯ ಸಭಾ ಭವನ ಬಿಕೋ ಎನ್ನುತ್ತಿತ್ತು. ಪ್ರಶಸ್ತಿ ಪ್ರದಾನ ಮಾಡಲು ಬರಬೇಕಾದ ಮಂತ್ರಿಗಳೂ ಬರಲಿಲ್ಲ; ಜನವೂ ಬರಲಿಲ್ಲ. ಸಮಾರಂಭದ ಸಂಚಾಲಕರಾದ ಅಲ್ಲಿನ ಕನ್ನಡ-ಸಂಸ್ಕೃತಿ ಇಲಾಖೆಯ ಅಧಿಕಾರಿ ಮಾತ್ರ ಯಾವ ಮುಜುಗರವೂ ಇಲ್ಲದೆ, ಇದೆಲ್ಲ ಹೀಗೇ ಎಂಬಂತೆ ಕೂತಲ್ಲಿ ಕೂತು ಅಂತೂ ಸಮಾರಂಭವನ್ನು ಸಂಜೆ ೫ಕ್ಕೆ ಆರಂಭಿಸಿದಾಗ ಪ್ರತಿಷ್ಠಾನದ ಆರೇಳು ಸದಸ್ಯರೂ ಸೇರಿದಂತೆ ಅಲ್ಲಿ ನಲವತ್ತು-ಐವತ್ತು ಜನ ಸೇರಿದ್ದರು! ಅಭಿಮಾನದಿಂದ ದೂರದ ಬಳ್ಳಾರಿಯಿಂದ ಬಂದಿದ್ದ ಲೋಹಿಯಾ ಪ್ರಕಾಶನದ ಸಿ. ಚನ್ನಬಸವಣ್ಣನವರನ್ನೂ ಸೇರಿಸಿ ಒಂದಷ್ಟು ಜನರನ್ನು ವೇದಿಕೆ ಹತ್ತಿಸಿ ಸಮಾರಂಭವನ್ನು ಮುಗಿಸಿಯೇ ಬಿಟ್ಟರು. ಮುಖ್ಯ ಭಾಷಣಕಾರರಾಗಿ ಬಂದಿದ್ದ ಗೆಳೆಯ ರಾಜೇಂದ್ರ ಚೆನ್ನಿಯವರು ಮಾತ್ರ ಒಂದಿಷ್ಟೂ ವಿಚಲಿತರಾಗದೆ ಒಂದು ಅಚ್ಚುಕಟ್ಟಾದ ಭಾಷಣ ಮಾಡಿದ್ದೇ ಅಂದಿನ ನಮ್ಮ ಪಾಲಿನ ಭಾಗ್ಯವಾಗಿತ್ತು!

ಬಹುಶಃ ಸರ್ಕಾರಿ ಪ್ರಾಯೋಜಿತ ಎಲ್ಲ ಪ್ರಶಸ್ತಿಗಳ -ಓಹ್! ಇಂದು ಇವು ಎಷ್ಟೊಂದಿವೆ!-ಗೋಳೂ ಇದೇ ಆಗಿದೆ. ಸರ್ಕಾರ ಇವನ್ನು ಗೌರವಯುತವಾಗಿ ನಿರ್ವಹಿಸಲು ಸಾಧ್ಯವಾಗುತ್ತಿಲ್ಲ. ಯಾರಾರನ್ನೋ ಮೆಚ್ಚಿಸಲು ಅಥವಾ ಯಾವುದೋ ತುರ್ತಿಗೆ ಯಾರದೋ ಹೆಸರಲ್ಲಿ ಪ್ರಶಸ್ತಿ ಪ್ರತಿಷ್ಠಾಪಿಸಿ ಅವನ್ನೀಗ ಯಾವುದೇ ಮಾನದಂಡವಿಲ್ಲದೆ ಬೇಕಾದವರಿಗೆ ನೀಡುವ ಪರಿಪಾಠ ಬೆಳೆದಂತಿದೆ. ಕನ್ನಡ ಹೋರಾಟಗಾರರಿಗೆ ನೀಡಲೆಂದು ಸ್ಥಾಪಿತವಾಗಿ ಮೊದಲ ಬಾರಿಗೆ ವಾಟಾಳ್ ನಾಗರಾಜರಿಗೆ ನೀಡಿದ ಸಂಗೊಳ್ಳಿ ರಾಯಣ್ಣ ಪ್ರಶಸ್ತಿ ಮುಂದಿನ ವರ್ಷ ಸಂದಿದ್ದು ಬಿ.ಟಿ. ಲಲಿತಾನಾಯಕರಿಗೆ! (ಈ ಬಗ್ಗೆ ಹಿಂದೆ ಬರೆದಿದ್ದೆ.) ಈ ವರ್ಷ ಅದು ಸಂದಿರುವುದು ಕವಿ ಜಂಬಣ್ಣ ಅಮರಚಿಂತರಿಗೆ! ಜಂಬಣ್ಣ ನಮ್ಮ ಒಳ್ಳೆಯ ಕವಿ, ನಿಜ. ಅವರನ್ನು ಕವಿಯಾಗಿ ಗೌರವಿಸಿ; ಸೂಕ್ತವಾಗಿ ಗೌರವಿಸಲಾಗಿದೆ ಕೂಡ. ಆದರೆ ಅವರಿಗೆ ಈ 'ಸಂಗೊಳ್ಳಿ ರಾಯಣ್ಣ' ಪ್ರಶಸ್ತಿ ಯಾವ ಕಾರಣಕ್ಕೆ? ಕೇಳಿದರೆ ದಲಿತ ವಿರೋಧಿ ಪಟ್ಟ ಪ್ರದಾನವಾದೀತು!

ಹಲಸಂಗಿಗೊಂದು ಭೇಟಿ

ಹಲಸಂಗಿ ಗೆಳೆಯರ ಪ್ರತಿಷ್ಠಾನದ ಪ್ರಶಸ್ತಿ ಪ್ರದಾನ ಸಮಾರಂಭದ ಸುಸ್ತನ್ನು ಪರಿಹರಿಸಿಕೊಂಡ ನಾವು ಮಾರನೆಯ ದಿನ ಬಿಜಾಪುರದಿಂದ ಹಲಸಂಗಿಗೇ ಹೊರಟೆವು. ನಾವು ಅಂದರೆ ನಾನು, ಪ್ರಶಸ್ತಿ ಪಡೆದಿದ್ದ ನನ್ನ ಪತ್ನಿ ಸವಿತಾ ಮತ್ತು ಗೆಳೆಯ ಹನೂರು ಕೃಷ್ಣಮೂರ್ತಿ ಹಾಗೂ ಈ ಪ್ರವಾಸದ ಪ್ರೇರಕರಾಗಿದ್ದ ಚನ್ನಬಸವಣ್ಣ ಅವರು. ಹಲಸಂಗಿ ಗೆಳೆಯರಾದ ಮಧುರಚೆನ್ನ, ಕಾಪಸೆ ರೇವಪ್ಪ,

ಸಿಂಪಿ ಲಿಂಗಣ್ಣ ಹಾಗೂ ಧೂಲಾ ಸಾಹೇಬರನ್ನು ಭೇಟಿ ಮಾಡಲು ಹೋಗುತ್ತಿದ್ದ ಶಿವರಾಮ ಕಾರಂತರು ಆ ಊರನ್ನು ಆಗ 'ಹೊಲಸಂಗಿ' ಎಂದು ಕರೆಯುತ್ತಿದ್ದರು! ಆದರೆ ಈಗ ಒಳ್ಳೆಯ ರಸ್ತೆಯಾಗಿರುವುದರಿಂದ ಅಂಗಿ ಅಷ್ಟೇನೂ ಹೊಲಸಾಗುವುದಿಲ್ಲ. ಆದರೆ ಈ ಬೇಸಿಗೆ ಬಿಸಿಲು ತಡೆಯುವುದು ಕಷ್ಟ. ಆದರೆ ನಾವು ಮಧುರಚೆನ್ನರ ಮಗ ಪುರುಷೋತ್ತಮ ಗಲಗಲಿಯವರ ಮನೆ ಹೊಕ್ಕಾಗ ನಿಜವಾಗಿಯೂ ತಂಪೆನಿಸಿತು. ಮಧುರ ಚೆನ್ನರ ನೆನಪೂ ಇದಕ್ಕೆ ಕಾರಣವಿರಬಹುದು.

ಮಹಾರಾಷ್ಟ್ರದ ಗಡಿಗೆ ಹತ್ತಿರವಿರುವ ಈ ಕುಗ್ರಾಮದಲ್ಲಿ ಈ ಹಲಸಂಗಿ ಗೆಳೆಯರು ಎಪ್ಪತ್ತು–ಎಂಬತ್ತು ವರ್ಷಗಳಷ್ಟು ಹಿಂದೆಯೇ ಅಧ್ಯಾತ್ಮಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಮಾಡಿರುವ ಕೆಲಸ ಅಚ್ಚರಿ ಹುಟ್ಟಿಸುವಂತಹುದು. ಪಾಂಡಿಚೆರಿಯ ಅರವಿಂದರೆಲ್ಲಿ? ಈ ಕುಗ್ರಾಮವೆಲ್ಲಿ? ಹಲಸಂಗಿಯಲ್ಲಿ ನಾವು ಮುಖ್ಯವಾಗಿ ನೋಡಿದ್ದು, ಜೀರ್ಣಾವಸ್ಥೆಯಲ್ಲಿದ್ದರೂ ಮಧುರಚೆನ್ನರ ಧ್ಯಾನ ಸ್ಪಂದನಗಳು ಇನ್ನೂ ಜೀವಂತವಿರುವ ಅವರ ಹಳೆಯ ಮನೆ, ಅವರು ಗೆಳೆಯರೊಂದಿಗೆ ಸ್ಥಾಪಿಸಿರುವ, ಈಗಲೂ ಆನಂದ ಕೊಡುವಂತಿರುವ ಅರವಿಂದಾಶ್ರಮ ಮತ್ತು ಆ ಉರಿಬಿಸಿಲಿನ ಬಯಲಲ್ಲಿದ್ದರೂ ತಂಪು ನೆಳಲು ಸೂಸುವ ಮಧುರಚೆನ್ನರ ಸಮಾಧಿ.

ಈ ನಮ್ಮ ಭೇಟಿ ನಮ್ಮ ಮಧುರ ನೆನಪಿನಲ್ಲಿ ಉಳಿಯಲು ಮಧುರಚೆನ್ನರಷ್ಟೇ ಕಾರಣವಾದದ್ದು, ಅಂದು ನಮ್ಮೊಂದಿಗಿದ್ದ ಅವರ ಮಕ್ಕಳು, ಮೊಮ್ಮಕ್ಕಳ ಪ್ರೀತಿಪೂರ್ವಕ ಉಪಚಾರ ಮತ್ತು ಸಮಾಧಿ ಬಳಿ ಅದರ ಮೌನವನ್ನೇ ಶೃತಿ ಮಾಡಿಕೊಂಡಂತೆ ಮಗ ಅಲ್ಲಮಪ್ರಭು ಅವರು ಹಾಡಿದ ಮಧುರಚೆನ್ನರ ಒಂದು ಗೀತವೆಂದೇ ಹೇಳಬೇಕು. ಎಲ್ಲಕ್ಕಿಂತ ಹೆಚ್ಚಾಗಿ, ಮಧುರಚೆನ್ನರ ಬಗ್ಗೆ ಒಂದು ಪುಟ್ಟ ಪುಸ್ತಕವನ್ನೂ ಬರೆದಿರುವ ಅವರ ಮಗಳು ೯೨ ವರ್ಷ ವಯಸ್ಸಿನ ಅಜ್ಜಿ ಸರೋಜಿನಿಯವರ ಪ್ರೀತಿ ತುಂಬಿದ ಕಣ್ಣುಗಳನ್ನು ಹೇಗೆ ಮರೆಯಲು ಸಾಧ್ಯ?

●

ಜೂನ್, ೨೦೧೬

ನಮ್ಮ ಸಂಸ್ಕೃತಿ ಮಂತ್ರಿ, ಷೆಲ್ಡನ್ ಪೊಲಾಕ್ ಮತ್ತು ಮಂಡ್ಯದ ಸಮ್ಮೇಳನ

ಕಳೆದ ತಿಂಗಳು ಧಾರವಾಡದಲ್ಲಿ ನಡೆದ ಕರ್ನಾಟಕ ಸಾಹಿತ್ಯ ಅಕಾಡೆಮಿಯ ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭಕ್ಕೆ ಪ್ರಶಸ್ತಿ ಪ್ರದಾನ ಮಾಡಲು ಬರಬೇಕಿದ್ದ ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಮಂತ್ರಿ ಉಮಾಶ್ರೀಯವರು ಬರಲಿಲ್ಲ. ಸಾಹಿತ್ಯ ಅಕಾಡೆಮಿಯು ತನ್ನ ಆಹ್ವಾನ ಪತ್ರಿಕೆಯ ಒಂದು ಪುಟದ ತುಂಬ ತುಂಬಿದ್ದ ಸ್ಥಳೀಯ ರಾಜಕಾರಣಿಗಳಾರೂ ಬರಲಿಲ್ಲ. ಆದರೆ ಅಕಾಡೆಮಿಯ ಅಧ್ಯಕ್ಷೆ ಮಾಲತಿ ಪಟ್ಟಣಶೆಟ್ಟಿಯವರು ತಮ್ಮೂರೆಂದು ಅತಿ ಆಸ್ಥೆಯಿಂದ ಆಯೋಜಿಸಿದ್ದ ಸಮಾರಂಭಕ್ಕೆ ಜನ ಮಾತ್ರ ವಿದ್ಯಾವರ್ಧಕ ಸಂಘದ ಸಭಾ ಭವನ ತುಂಬಿ ತುಳುಕುವಂತೆ ಬಂದಿದ್ದರು..

ಉಮಾಶ್ರೀಯವರು ಅಕಾಡೆಮಿಯ ಕಳೆದ ಎರಡು ಮೂರು ಪ್ರಶಸ್ತಿ ಸಮಾರಂಭಗಳಿಗೂ ಬಂದಿಲ್ಲವಂತೆ. ಕನ್ನಡ ಸಂಸ್ಕೃತಿ ಮಂತ್ರಿಗೆ ಸಾಹಿತ್ಯ ಅಕಾಡೆಮಿಯ ವಾರ್ಷಿಕ ಪ್ರಶಸ್ತಿಗಳ ಸಮಾರಂಭಕ್ಕೆ ಬರುವುದಕ್ಕಿಂತ ಮಹತ್ವದ ಕೆಲಸ ಇನ್ನಾವುದಿದೆಯೋ ತಿಳಿಯದು! ಅದೂ ಡಾ. ಷ. ಶೆಟ್ಟರ್‌ರಂತಹ ಹಿರಿಯ ವಿದ್ವಾಂಸರಿಗೆ ಪ್ರಶಸ್ತಿ ನೀಡುವ ಮತ್ತು ಡಾ. ಗಣೇಶ್ ದೇವಿಯವರಂತಹ ಪ್ರಖ್ಯಾತ ಭಾಷಾ ತಜ್ಞರು ಮುಖ್ಯ ಅತಿಥಿಯಾಗಿದ್ದ ಸಮಾರಂಭಕ್ಕೆ!

ಕರ್ನಾಟಕ ಸರ್ಕಾರಗಳ ಇತಿಹಾಸದಲ್ಲೇ ಸಾಹಿತಿಯೊಬ್ಬರ ಪ್ರಾತಿನಿಧ್ಯವಿಲ್ಲದೆ ನಡೆದಿರುವ ವಿಧಾನ ಪರಿಷತ್ತನ್ನು ಹೊಂದಿರುವ ಸಿದ್ಧರಾಮಯ್ಯನವರ ಸರ್ಕಾರದ ಸಂಸ್ಕೃತಿ ಮಂತ್ರಿ ಹೇಗಿರಬೇಕೋ

ಹಾಗೇ ಇದ್ದಾರೆ ಉಮಾಶ್ರೀಯವರು. ಷ. ಶೆಟ್ಟರ್ ತಮ್ಮ ಭಾಷಣದಲ್ಲಿ ಇದನ್ನೇ ಪರೋಕ್ಷವಾಗಿ ಹೇಳಿದ್ದು ಹೀಗೆ: 'ಅವರು ಬಂದಿದ್ದರೆ ಸಂಸ್ಕೃತಿಯ ಒಂದಿಷ್ಟು ಪ್ರಾಥಮಿಕ ಪಾಠಗಳನ್ನಾದರೂ ಕಲಿಯಬಹುದಿತ್ತು! ಅದರಿಂದಲೂ ಅವರು ಇಂದು ವಂಚಿತರಾಗಿದ್ದಾರೆ!!'

* * *

ಷೆಲ್ಡನ್ ಪೊಲಾಕ್ ಕನ್ನಡ, ತಮಿಳು, ಸಂಸ್ಕೃತವೂ ಸೇರಿದಂತೆ ಹಲವು ಭಾರತೀಯ ಭಾಷೆಗಳನ್ನು ಬಲ್ಲ ಮತ್ತು ಅವುಗಳ ಸಾಹಿತ್ಯ ಹಾಗೂ ಸಾಹಿತ್ಯ ಮೀಮಾಂಸೆಗಳ ಆಳವಾದ ಅಧ್ಯಯನ ಮಾಡಿರುವ ಅಮೆರಿಕಾದ ವಿದ್ವಾಂಸ. ಅವರು ಕನ್ನಡದ ಆದಿ ಕೃತಿಯೆಂದು ಹೆಸರಾದ 'ಕವಿರಾಜ ಮಾರ್ಗ' ಕುರಿತು ಮಾಡಿರುವ ಅಧ್ಯಯನ ಈ ಕೃತಿಯ ಸಾಂಸ್ಕೃತಿಕ ಮಹತ್ವವನ್ನು ಜಗತ್ತಿಗೆ ಪರಿಚಯ ಮಾಡಿಕೊಟ್ಟಿದೆ. ಅವರು ಈ ಕೃತಿಯನ್ನು ಕನ್ನಡ–ಸಂಸ್ಕೃತಗಳ ಸಂಬಂಧವನ್ನು ಕನ್ನಡ ಮತ್ತು ಇತರ ದ್ರಾವಿಡ ಭಾಷೆಗಳ ಸಂಬಂಧಕ್ಕೆ ಪ್ರತಿಯಾಗಿ ವೈಭವೀಕರಿಸಿ ಅರ್ಥೈಸಿದ್ದಾರೆ ಎಂಬ ಕೆಲವರ ಟೀಕೆಯ ಮಧ್ಯೆಯೂ ಅವರ ವಿದ್ವತ್ತಿನ ಪ್ರಾಮಾಣಿಕತೆಯನ್ನು ಯಾರೂ ಪ್ರಶ್ನಿಸಿರಲಿಲ್ಲ.

ಆದರೆ ಈಗ ಈ ಪ್ರಾಮಾಣಿಕತೆಯನ್ನು ಪ್ರಶ್ನಿಸುವ ವಿದ್ವಾಂಸರ ಒಂದು ಪಡೆಯೇ ಹುಟ್ಟಿಕೊಂಡಿದೆ. ಪೊಲಾಕ್ ಈಗ ಇನ್ಫೋಸಿಸ್‌ನ ನಾರಾಯಣ ಮೂರ್ತಿಯವರ ಮಗ ರೋಹನ್ ಮೂರ್ತಿಯವರು ಆರಂಭಿಸಿರುವ–ಆಯ್ದ ಭಾರತೀಯ ಅಭಿಜಾತ ಕೃತಿಗಳನ್ನು ಇಂಗ್ಲಿಷ್‌ಗೆ ಅನುವಾದಿಸುವ–ಕೋಟ್ಯಾಂತರ ರೂಪಾಯಿಗಳ ವೆಚ್ಚದ 'ಮೂರ್ತಿ ಕ್ಲಾಸಿಕಲ್ ಲೈಬ್ರರಿ ಆಫ್ ಇಂಡಿಯಾ' ಯೋಜನೆಯ ಸಂಪಾದಕರಾಗಿದ್ದು, ಆ ಸ್ಥಾನದಿಂದ ಅವರನ್ನು ತೆಗೆಯಬೇಕೆಂದು ಈ ಪಡೆ ಆಗ್ರಹಿಸಿದೆ.

ಈ ಪಡೆ ಇಂತಹ ಮಹತ್ವದ ಯೋಜನೆಗೆ ಭಾರತದ ಸಾಂಸ್ಕೃತಿಕ ಪರಂಪರೆಗೆ ಸೇರಿ ಅದರಲ್ಲಿ ಆಳವಾಗಿ ಮುಳುಗೆದ್ದ ವ್ಯಕ್ತಿ ಮಾತ್ರ ಸಂಪಾದಕನಾಗಿರಬೇಕು ಎಂದು ಆಗ್ರಹಿಸಿದೆ! ಆದರೆ ಪ್ರಶ್ನೆ, ಈ 'ಸಾಂಸ್ಕೃತಿಕ ಜಾಗೃತಿ' ಇದ್ದಕ್ಕಿದಂತೆ ಈಗ ಉಂಟಾದ್ದೇಕೆ? ಇದಕ್ಕೆ ಇತ್ತೀಚಿನ ಜೆಎನ್‌ಯು ವಿವಾದದ ಸಂದರ್ಭದಲ್ಲಿ ಈ ವಿಶ್ವವಿದ್ಯಾಲಯದಲ್ಲಿರುವ ಮುಕ್ತ ಶೈಕ್ಷಣಿಕ ವಾತಾವರಣಕ್ಕೆ ಧಕ್ಕೆಯಾಗದಂತೆ ನೋಡಿಕೊಳ್ಳಬೇಕೆಂದು ಆಗ್ರಹಿಸಿದ ಜಾಗತಿಕ ವಿದ್ವಾಂಸರ ಪೈಕಿ ಷೆಲ್ಡನ್ ಪೊಲಾಕ್ ಕೂಡಾ ಒಬ್ಬರಾಗಿದ್ದುದೇ ಕಾರಣವೆಂದು ಹೇಳಲಾಗುತ್ತದೆ. ಆದರೆ ಬಲ್ಲವರ ಪ್ರಕಾರ ನಿಜವಾದ ಕಾರಣ, ರಾಮಾಯಣ ರಚಿತವಾಗಿದ್ದೇ ಭಾರತದಲ್ಲಿ ಬ್ರಾಹ್ಮಣರ ಶ್ರೇಷ್ಠತೆಯನ್ನು ಸ್ಥಾಪಿಸಲು ಎಂಬ ಅವರ ವಾದ. ಜೆಎನ್‌ಯು ಪ್ರಸಂಗ ಈ ರಾಮ ಭಕ್ತರಿಗೆ ಒಂದು ನೆಪ ಒದಗಿಸಿತಷ್ಟೆ!

* * *

ಮಂಡ್ಯದಲ್ಲಿ ಕೆಲವು ಸಮಾನ ಮನಸ್ಕ ಸಂಘಟನೆಗಳು ಸೇರಿ ಕಳೆದ ೯ರಂದು ಬಸವ ಜಯಂತಿ ಸಂದರ್ಭದಲ್ಲಿ 'ವಿಶ್ವಮಾನವ ವೇದಿಕೆ'ಯಡಿ ಜಾತ್ಯತೀತ ಒಲವಿನ ಅಂತರ್ಜಾತಿ ಮತ್ತು ಅಂತರ್‌ಧರ್ಮೀಯ ವಿವಾಹಿತರ ರಾಜ್ಯ ಮಟ್ಟದ ಸಮಾವೇಶ ನಡೆಸಿದ್ದಾರೆ. ಬಹುಶಃ ಇತ್ತೀಚೆಗೆ ಮಂಡ್ಯದ ಸುತ್ತಮುತ್ತ ನಡೆದ ಜಾತಿ ಸಂಬಂಧಿ ಮಾನಗೇಡಿ ಹತ್ಯೆಗಳಿಗೆ ಅಲ್ಲಿನ ಪ್ರಗತಿಪರರು ವ್ಯಕ್ತಪಡಿಸಿದ ಪ್ರತಿಸ್ಪಂದನ ಇದು. ಅಲ್ಲಿ ಜನ ಭರ್ಜರಿಯಾಗಿ ಸೇರಿದ್ದರೆಂದು ಅಲ್ಲಿಗೆ ಹೋಗಿಬಂದವರಿಂದ ಕೇಳಿದೆ. ಕನಿಷ್ಟ ಆ ಜನರಲ್ಲಿ ಯಾರೊಬ್ಬರೂ ಮುಂದೆ ಮರ್ಯಾದೆಗೇಡಿ ಹತ್ಯೆಗೆ ಕೈಹಾಕದಿದ್ದರೆ ಸಾಕು, ಅಲ್ಲಿ ನಮ್ಮ 'ಪ್ರಗತಿಪರ' ಗೆಳೆಯರು ಮಾಡಿದ ಭಾಷಣಗಳು ಸಾರ್ಥಕವಾದಂತೆ!

ಏಕೆಂದರೆ ನಮ್ಮ ಪ್ರಗತಿಪರರು ಯಾವಾಗಲೂ ಮನೆಗೆ ಬೆಂಕಿ ಬಿದ್ದಾಗ ಬಾವಿ ತೋಡಲು ಹೊರಡುವ ಜನ. ಜೊತೆಗೆ ಆರಂಭಶೂರತ್ವದಲ್ಲಿ ಎತ್ತಿದ ಕೈ. ಇನ್ನೊಮ್ಮೆ ಬೆಂಕಿ ಬೀಳುವವರೆಗೂ ಅವರದ್ದು ಬೇರೊಂದು ಅರ್ಥಧ 'ಪ್ರಗತಿಪರ' ಚಟುವಟಿಕೆಗಳು! ಇದನ್ನು ನಾನು ಇಲ್ಲಿ ಏಕೆ ಹೇಳುತ್ತಿರುವೆನೆಂದರೆ, ೨೦ ವರ್ಷಗಳ ಹಿಂದೆ-ಬಹುಶಃ ೧೯೯೦ರಲ್ಲಿ-ಯಾರೋ ಅನಾಮಿಕರೊಬ್ಬರು- ಒಂದಿಷ್ಟು ದೊಡ್ಡ ಮೊತ್ತದ ಹಣ ಕೊಟ್ಟರೆಂದು ಮೈಸೂರಿನ ನಮ್ಮ ಕೆಲವು 'ಪ್ರಗತಿಪರ' ಗೆಳೆಯರು 'ಮಾನವ ಮಂಟಪ' ಎಂಬ ಅಂತರ್ಜಾತಿ ಒಲವಿನ ವಿವಾಹ ವೇದಿಕೆಯನ್ನು ಕಟ್ಟಿದರು. ಅಂತರ್ಜಾತಿ ವಿವಾಹವಾಗಬಯಸುವವರಿಗೆ ಇದೊಂದು ರಾಜ್ಯಮಟ್ಟದ ವೇದಿಕೆಯಾಗಿ ಅಂತಹವರಿಗೆ ಬೆಂಬಲವಾಗಿ ನಿಲ್ಲುವ ವಿಶಾಲ ಉದ್ದೇಶ ಇದಕ್ಕಿತ್ತು. ಅದಕ್ಕೊಂದು ಪ್ರಣಾಳಿಕೆಯನ್ನೂ ಸಿದ್ಧಮಾಡಲಾಗಿತ್ತು. ಆದರೆ ಅದನ್ನು ಹಾಗೆ ಕಟ್ಟುವಾಗಲೇ ಹಣ ನಿರ್ವಹಣೆಯ ಸಂಬಂಧವಾಗಿ ಜಗಳ ಸ್ಫೋಟಿಸಿ ಅಶಾಂತಿಯ ವಾತಾವರಣ ಸೃಷ್ಟಿಯಾಯಿತು. ಈ ಅಶಾಂತಿಯ ನಡುವೆಯೇ ಬೆಂಗಳೂರಿನ ಲಾಲ್‌ಬಾಗ್‌ನಲ್ಲಿರುವ ಗಾಜಿನ ಮನೆಯಲ್ಲಿ ಇದರ ಮೊದಲ ಸಮಾವೇಶ ಡಾ. ಶಿವರಾಮ ಕಾರಂತರಿಂದ ಉದ್ಘಾಟನೆಯಾಯಿತು. ನಾನು ಸಂಪಾದಿಸಿದ್ದ 'ಒಲವು' ಎಂಬ ಸ್ಮರಣ ಸಂಚಿಕೆ ಅಲ್ಲಿ ಬಿಡುಗಡೆಯಾಯಿತು. ಜನ ಆಗಲೂ ಕಿಕ್ಕಿರಿದು ಸೇರಿದ್ದರು. ಅದು ಪತ್ರಿಕೆಗಳಲ್ಲಿ ದೊಡ್ಡ ಸುದ್ದಿಯೂ ಆಯಿತು. ಆದರೆ ನಂತರ ಆದದ್ದೇನು?

ಈ ಸಂಸ್ಥೆಯ ಹಿಂದಿದ್ದ ಒಂದಿಷ್ಟು ಹಣವೋ ಅಥವಾ ಅದರ 'ಪಟ್ಟ'ದ ಆಸೆಯೋ ಅದನ್ನು ಅಬ್ಬೇಪಾರಿ ಮಾಡಿ ಅದು ಸ್ಥಾಪಿತವಾಗಿದ್ದ ಉದ್ದೇಶವೇ ಹಿನ್ನೆಲೆಗೆ ಸರಿಯುವಂತಾಯಿತು. ಕಾಲಾಂತರದಲ್ಲಿ ಅದು ಇನ್ನಾರೋ ಒಂದಿಬ್ಬರು ಆಸಕ್ತರ ಕೈಗೆ ಸಿಕ್ಕಿ ಒಂದೆರೆಡೇನೋ 'ಸಮಾವೇಶ'ಗಳು ನಡೆದುವಾದರೂ, ಅವು ಯಾರ ಗಂಭೀರ ಗಮನವನ್ನೂ ಸೆಳೆಯಲಿಲ್ಲ. ಏಕೋ ಈಗ ಅದರ ಪ್ರಸ್ತುತ ದಾತರೂ ಎಲ್ಲ ಲೆಕ್ಕ ವ್ಯವಸ್ಥಿತಗೊಳಿಸಿ ಅದರಿಂದ ಮುಕ್ತಗೊಳ್ಳುವ ಸಿದ್ಧತೆಯಲ್ಲಿದ್ದಾರಂತೆ. ಬಹುಶಃ ಅವರಿಗೆ ಕೆಲಸ ಮಾಡುವುದು ಭಾಷಣ ಮಾಡಿದಷ್ಟು ಸುಲಭವಲ್ಲ ಎಂಬುದು ಗೊತ್ತಾಗಿರಬೇಕು!

ಇದೆಲ್ಲ ಪುರಾಣವನ್ನು ನಾನು ಇಲ್ಲಿ ಹೇಳಲು ಕಾರಣವೆಂದರೆ, 'ಮಾನವ ಮಂಟಪ' ಎಲ್ಲರನ್ನೂ ಒಳಗೊಂಡು ಆರೋಗ್ಯಪೂರ್ಣವಾಗಿ ಮತ್ತು ತನ್ನ ಮೂಲ ಆಶಯದಂತೆ ಅಂತರ್ಜಾತಿ ಹಾಗೂ ಅಂತರ್‌ಧರ್ಮೀಯ ವಿವಾಹ ಆಗಬಯಸುವವರಿಗೆ ಒಂದು ವಿಶ್ವಾಸಾರ್ಹ ಆಸರೆಯಾಗಿ ಬೆಳೆದಿದ್ದರೆ ರಾಜ್ಯದಲ್ಲಿ ಇತ್ತೀಚಿನ ವರ್ಷಗಳಲ್ಲಿ ಜಾತಿ-ಧರ್ಮಗಳನ್ನು ಮೀರಿ ವಿವಾಹವಾಗಬಯಸುವವರು ಎದುರಿಸುತ್ತಿರುವ ಹಿಂಸೆ, ಕೊಲೆ ಮತ್ತು ಆತ್ಮಹತ್ಯೆಯಂತಹ ಸಂದರ್ಭಗಳು ಉಂಟಾಗುತ್ತಿರಲಿಲ್ಲ. ಮಂಡ್ಯದ ಸಮಾರಂಭದ ವೇದಿಕೆಯಲ್ಲಿ ಈ 'ಮಾನವ ಮಂಟಪ'ದ ಆ ಕೆಲ ಹಳೆಯ ಗಿರಾಕಿಗಳೇ ಇದ್ದು ಭರ್ಜರಿ ಭಾಷಣಗಳನ್ನೂ ಬಿಗಿದರು ಎಂದು ಕೇಳಿದೆ. ಒಳ್ಳೆಯದು. ಆದರೆ ಈಗಲಾದರೂ ಇವರು ತಮ್ಮ ಮೂಲ ಸಂಘಟನೆಯನ್ನು, ಮೂಲ ಉದ್ದೇಶಗಳೊಂದಿಗೆ ಪುನರುಜ್ಜೀವನಗೊಳಿಸುವ ಪ್ರಯತ್ನ ಮಾಡಬೇಕು. ಮಂಡ್ಯದ ಸಮಾರಂಭದ ಸಂಘಟಕರು ಇದಕ್ಕೆ ಕೈಜೋಡಿಸಬೇಕು. ಆಗ ಮಾತ್ರ ಈ ಮಂಡ್ಯದ ಸಮಾರಂಭ ಸಾರ್ಥಕವಾದಂತೆ.

●

ಜುಲೈ, ೨೦೧೬

ಇನ್ನೂ ಮೂರು ಟಿಪ್ಪಣಿಗಳು

ದೇಜಗೌಗೆ ವಿದಾಯ

ದೇಜಗೌ ಎಂದೇ ಹೆಸರಾಗಿದ್ದ ದೇ. ಜವರೇಗೌಡರು ನಿಧನರಾಗಿದ್ದಾರೆ. ಈಚಿನ ತಲೆಮಾರಿಗೆ ಇವರು ಅಷ್ಟು ಪರಿಚಿತರಲ್ಲ. ಆದರೆ ನಮ್ಮ ತಲೆಮಾರಿಗೆ ಅವರು ಒಂದು ಕಾಲದ 'ಹೀರೋ'. ಕುವೆಂಪು ಅವರಿಂದ ಕನ್ನಡದ ದೀಕ್ಷೆ ತೊಟ್ಟವರು ಎಂಬ ನಂಬಿಕೆ ಮತ್ತು ಸ್ವತಃ ಅವರು ಕನ್ನಡಕ್ಕಾಗಿ ಮಾಡಿದ ಕೆಲಸಗಳೂ ಇದಕ್ಕೆ ಕಾರಣವಾಗಿದ್ದವು. ಮೈಸೂರು ವಿಶ್ವವಿದ್ಯಾಲಯದಲ್ಲಿನ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿ, ನಂತರ ಅದೇ ವಿಶ್ವವಿದ್ಯಾಲಯದ ಕುಲಪತಿಗಳಾಗಿ (ಆವರೆಗೆ ಇದ್ದ ಉಪ ಕುಲಪತಿ ಎಂಬ ಅಭಿದಾನವನ್ನು ಕುಲಪತಿ ಎಂದೂ, ಕುಲಪತಿ ಎಂಬ ಅಭಿದಾನವನ್ನು ಕುಲಾಧಿಪತಿ ಎಂದೂ ಪರಿವರ್ತಿಸಿದವರು ಅವರೇ!) ಕನ್ನಡವನ್ನು ಆಧುನಿಕ ಜ್ಞಾನದ ಎಲ್ಲ ಸ್ತರಗಳ ವಾಹಿನಿಯನ್ನಾಗಿ ಮಾಡುವ ಕುವೆಂಪು ಅವರ ಸಂಕಲ್ಪವನ್ನು ತಮ್ಮ ವಿಶ್ವವಿದ್ಯಾಲಯದ ಮೂಲಕ ಹಠ ತೊಟ್ಟಂತೆ ಜಾರಿಗೊಳಿಸಿ 'ಕನ್ನಡದ ಕಟ್ಟಾಳು' ಎಂಬ ಮಾದರಿಯೊಂದನ್ನು ನಿರ್ಮಿಸಿದವರು ಅವರು. ಆ ಮೂಲಕ ಆ ಕಾಲಕ್ಕೆ ಬರೀ ಕೂಗಾಟ–ಹಾರಾಟಗಳ ವೇದಿಕೆಯಂತಿದ್ದ ಕನ್ನಡ ಚಳುವಳಿಗೆ ಒಂದು ಘನತೆಯನ್ನು ಒದಗಿಸಿದವರೂ ದೇಜಗೌ. ಈ ಕಾರಣಕ್ಕಾಗಿ ಕನ್ನಡ ಮತ್ತು ಕನ್ನಡ ಸಮುದಾಯ ಅವರಿಗೆ ಋಣಿಯಾಗಿವೆ.

ಆದರೆ ದೇಜಗೌ ಕನ್ನಡದ ಈ ಕೆಲಸಗಳನ್ನು ಮಾಡಿದ್ದರ ಹೊರತಾಗಿ ಕುವೆಂಪು ಅವರಿಗೆ ತಕ್ಕ ಶಿಷ್ಯರೇನೂ ಆಗಿರಲಿಲ್ಲ ಎಂಬ ಅಭಿಪ್ರಾಯವೂ

ಇದೆ. ಆ ಕಾಲಕ್ಕೆ ಕುವೆಂಪು ಬಳಿಗೆ ಹೊಸ ತಲೆಮಾರಿನ ಪ್ರತಿಭಾವಂತರಾರೂ ಸುಳಿಯದಂತೆ ಅಡ್ಡಗೋಡೆ ನಿರ್ಮಿಸಿದ ಪ್ರಮುಖರಲ್ಲಿ ಸ್ವತಃ ಅಷ್ಟೇನೂ ಸಾಹಿತ್ಯ ಪ್ರತಿಭೆ ಹೊಂದಿಲ್ಲದಿದ್ದ ಅವರೂ ಒಬ್ಬರು ಎಂದೂ ಹೇಳಲಾಗುತ್ತದೆ. ತೇಜಸ್ವಿ ಬೆಳೆದು ದೊಡ್ಡವರಾಗಿ ಎಚ್ಚರಿಸುವವರೆಗೂ ಇವರ ಶೂದ್ರ ಪೌರೋಹಿತ್ಯದ ಹೊಗಳುಭಟರ ಪಡೆಯೇ ಕುವೆಂಪು ಅವರನ್ನು ಹೊನ್ನಶೂಲಕ್ಕೆ ಏರಿಸಿಟ್ಟಿದ್ದುದು ಎಂಬ ಮಾತೂ ಪ್ರಚಲಿತದಲ್ಲಿದೆ. ಇನ್ನು ಅವರನ್ನು ಕೆಲವರು ಗೌಜದೇ(ಗೌಡ ಜನಾಂಗದ ದೇವರು) ಎಂದು ವ್ಯಂಗ್ಯವಾಗಿ ಕರೆಯುತ್ತಿದ್ದುದಕ್ಕೆ ಕಾರಣವಾಗಿದ್ದ ಅವರ ಜಾತಿವಾದವೂ ಅಷ್ಟೇ ಕುಪ್ರಸಿದ್ಧವಾದದ್ದು.

ಸರ್ಕಾರಿ ಖರ್ಚಿನಲ್ಲಿ ಕನ್ನಡಾಭಿಮಾನ

ಕನ್ನಡ ಕಟ್ಟಾಳುವೊಬ್ಬರ ಬಗ್ಗೆ ಬರೆಯುತ್ತಿರುವ ಈ ಸಂದರ್ಭದಲ್ಲೇ ಇಂದಿನ ಕನ್ನಡ ಶಾಲೆಗಳ ಬಗ್ಗೆ ಎದ್ದಿರುವ ವಿವಾದದ ಬಗೆಗೂ ಬರೆಯುವುದು ಉಚಿತ. ಮೂರು ಸಾವಿರ ಸರ್ಕಾರಿ (ಅಂದರೆ ಕನ್ನಡ ಮಾಧ್ಯಮದ) ಶಾಲೆಗಳನ್ನು ವಿದ್ಯಾರ್ಥಿಗಳ ಕೊರತೆಯಿಂದಾಗಿ ಮುಚ್ಚುವ ತನ್ನ ಆದೇಶವನ್ನು ರಾಜ್ಯ ಸರ್ಕಾರ ಹಿಂತೆಗೆದುಕೊಂಡಿದೆ. ಈ ಶಾಲೆಗಳನ್ನು ಮುಚ್ಚುವ ಸುದ್ದಿ ಬಂದಾಗಲೆಲ್ಲ ತಮ್ಮ ಒರೆಗಳಿಂದ ಕತ್ತಿ ಎಳೆದು ಝಳಪಿಸುವ ಕನ್ನಡ ವೀರರು ಈ ವರ್ಷವೂ ಒಮ್ಮೆ ತಮ್ಮ ಕತ್ತಿಗಳೆನ್ನೆಳೆದು ಅವನ್ನು ಪತ್ರಿಕೆಗಳಲ್ಲಿ ಝಳಪಿಸಿ ಮತ್ತೆ ಒರೆಗೆ ಸೇರಿಸಿದ್ದಾರೆ! ಆದರೆ ಈ ಕನ್ನಡ ವೀರರು ಈ ಕನ್ನಡ ನಾಡಿನ ಜವಾಬ್ದಾರಿ ಪ್ರಜೆಗಳಾಗಿ ಈ ಒಂದು ಮೂಲಭೂತ ಪ್ರಶ್ನೆಯನ್ನೇಕೆ ಕೇಳಿಕೊಳ್ಳುತ್ತಿಲ್ಲ ಎಂದು ಆಶ್ಚರ್ಯವಾಗುತ್ತಿದೆ: ಐದು-ಹತ್ತು ವಿದ್ಯಾರ್ಥಿಗಳಿರುವ ಶಾಲೆಯೊಂದನ್ನು ಲಕ್ಷಾಂತರ ರೂಪಾಯಿಗಳ ವಾರ್ಷಿಕ ವೆಚ್ಚದೊಂದಿಗೆ ನಡೆಸುವುದು ಎಷ್ಟು ಸಾಧು? ನಮ್ಮ ಇಂತಹ ಒಣ ಕನ್ನಾಡಾಭಿಮಾನವೊಂದೇ ರಾಜ್ಯದ ಪ್ರಗತಿ ಚಕ್ರವನ್ನು ಮುನ್ನಡೆಸಬಲ್ಲುದೆ? ರಾಜ್ಯಕ್ಕೊಂದು ಆರ್ಥಿಕ ಶಿಸ್ತು ಎಂಬುದೂ ಕನ್ನಡದಷ್ಟೇ ಮುಖ್ಯವಲ್ಲವೆ?

ಇಲ್ಲಿ ನಾನು ಒಣ ಕನ್ನಡಾಭಿಮಾನ ಎಂದೆ. ಅದಕ್ಕೆ ಕಾರಣವಿದೆ. ಸಂವಿಧಾನದತ್ತವಾಗೇ ಭಾಷಾವಾರು ಪ್ರಾಂತ್ಯ ರಚನೆಯಾಗಿ, ಅದರ ಮೂಲಕ ಕರ್ನಾಟಕವು ಕನ್ನಡ ರಾಜ್ಯವಾಗಿ ರೂಪುಗೊಂಡಿರುವಾಗ, ಕನ್ನಡದ ಮಕ್ಕಳಿಗೆಲ್ಲರಿಗೂ ಪ್ರಾಥಮಿಕ ಶಿಕ್ಷಣವನ್ನಾದರೂ ಕನ್ನಡದಲ್ಲಿ ಒದಗಿಸುವ ರಾಜ್ಯ ಸರ್ಕಾರದ ಹಕ್ಕು ಸಂವಿಧಾನ ವಿರೋಧಿಯಾಗಿದೆಯಂತೆ! ನಮ್ಮ ಸರ್ವೋಚ್ಚ ನ್ಯಾಯಾಲಯದ ಈ ವಿಚಿತ್ರ ತೀರ್ಪಿಗೆ ಉತ್ತರವೇ ಇಲ್ಲವೆಂಬಂತೆ ಕನ್ನಡ ಸಮೂಹ ತೆಪ್ಪಗಾಗಿದೆ. ಇಂತಹ ಈ ವೀರ ಸಮೂಹಕ್ಕೆ, ಇಂಗ್ಲಿಷ್ ಶಾಲೆಗಳ ಹೊಡೆತಕ್ಕೆ ಸಿಕ್ಕಿ ಮುಚ್ಚುತ್ತಿರುವ ಕನ್ನಡ ಶಾಲೆಗಳ ಮೇಲೆ ಜನರ ಹಣ ಸುರಿಯಿರಿ ಎಂದು ರಾಜ್ಯ ಸರ್ಕಾರವನ್ನು ಆಗ್ರಹಿಸುವ ಯಾವ ಹಕ್ಕಿದೆ? ಈ ಕನ್ನಡ ವೀರರಲ್ಲಿ ಯಾರೂ ಯಾಕೆ, ಕನ್ನಡ ಶಿಕ್ಷಣಕ್ಕೆ ಕುತ್ತಾಗಿರುವ ಸಾಂವಿಧಾನಿಕ ಅಡೆ-ತಡೆಗಳನ್ನು ನಿವಾರಿಸಲು ಕ್ರಮ ಕೈಗೊಳ್ಳಿ ಎಂದು

ರಾಜ್ಯ ಸರ್ಕಾರವನ್ನು ಆಗ್ರಹಿಸುವ ಸ್ಥೈರ್ಯವನ್ನು ತೋರುತ್ತಿಲ್ಲ? ಏಕೆಂದರೆ, ಇಂದು ನಿಜವಾಗಿ ಕನ್ನಡವು ಯಾರಿಗೂ ಬೇಕಾಗಿಲ್ಲ. ಅದು ಎಷ್ಟು ದಿನ, ಎಷ್ಟರ ಮಟ್ಟಿಗೆ ಉಳಿದರೆ ಅಷ್ಟು ಸಾಕು ಎಂಬ ತೀರ್ಮಾನಕ್ಕೆ ಜನವೂ, ಸರ್ಕಾರವೂ ಬಂದಂತಿದೆ. ಹಾಗಾಗಿ ಕನ್ನಡ ಹೋರಾಟ ಅಥವಾ ಸಮಾನ ಶಿಕ್ಷಣ ಹೋರಾಟವೆಂಬುವುಗಳೆಲ್ಲ ಕಾಲಧರ್ಮಕ್ಕನುಸಾರವಾದ ತೋರುಹೋರಾಟಗಳೇ ಆಗಿರಬಹುದಲ್ಲವೆ?

ನಮ್ಮ ಇಂಗ್ಲಿಷ್ ಲೇಖಕರ ಹುಸಿ ರೋಮಾಂಚನದ ಘಳಿಗೆಗಳು!

ಹೀಗೆಲ್ಲ ಯೋಚಿಸುತ್ತಿರುವ ಸಂದರ್ಭದಲ್ಲೇ ನಮ್ಮ ಯು.ಆರ್. ಅನಂತಮೂರ್ತಿಯವರ ಕೊನೆಯ ಪುಸ್ತಕ 'ಹಿಂದುತ್ವ ಅಥವಾ ಹಿಂದ್ ಸ್ವರಾಜ್?' ಬಗ್ಗೆ ಪತ್ರಿಕೆಗಳಲ್ಲಿ ಇದ್ದಕ್ಕಿದಂತೆ ಒಂದಾದಮೇಲೊಂದರಂತೆ ಎರಡು ಲೇಖನಗಳು ಪ್ರತ್ಯಕ್ಷವಾದಾಗ ನಾನು ಈ ದೇಶದಲ್ಲಿನ ಇಂಗ್ಲಿಷ್ ಬರಹ ಲೋಕದ ಬಗೆಗಿನ ನನ್ನ ಆಲೋಚನೆಗಳನ್ನು ಮತ್ತೆ ತಿರುವಿಹಾಕುಂತಾಯಿತು. ಈ ಲೇಖನಗಳಲ್ಲಿ ಒಂದು, ನಲವತ್ತು ವರ್ಷಗಳಿಂದ ಬೆಂಗಳೂರಿನಲ್ಲಿದ್ದೂ ಸರಿಯಾಗಿ ಒಂದು ವಾಕ್ಯ ಕನ್ನಡ ಮಾತನಾಡಲಾಗದ ರಾಮಚಂದ್ರ ಗುಹ ಅವರದಾದರೆ ('ಪ್ರಜಾವಾಣಿ'ಯಲ್ಲಿ ಅನುವಾದಿತ ಅಂಕಣ), ಇನ್ನೊಂದು ಕನ್ನಡದವರೇ ಆದ ಗೆಳೆಯ ಚಂದನ್ ಗೌಡ ಅವರು *'ಬ್ಯಾಂಗಲೋರ್ ಮಿರರ್'* ಪತ್ರಿಕೆಯಲ್ಲಿ ಬರೆದ (ಇಂಗ್ಲಿಷ್) ಅಂಕಣ ಬರಹ. ಎರಡು ವರ್ಷಗಳಷ್ಟು ಹಳೆಯದಾದ ಈ ಪುಸ್ತಕದ ಬಗ್ಗೆ ಈಗ ಇದ್ದಕ್ಕಿದ್ದಂತೆ ಈ ಇಂಗ್ಲಿಷ್ ಅಂಕಣಕಾರರಿಗೆ ಆಸಕ್ತಿ ಮೂಡಲು ಕಾರಣಗಳಾದರೂ ಏನು? ಅದರ ಇಂಗ್ಲಿಷ್ ಅವತರಣಿಕೆಯೇನಾದರೂ ಹೊರಬಂದಿರಬಹುದೇ? ಬಂದಿರಬೇಕು. ಇಲ್ಲದಿದ್ದರೆ ಗುಹ ಹೇಗೆ ಅದನ್ನು ಓದಿಯಾರು? ಹಾಗೆ ನೋಡಿದರೆ, ಅನಂತಮೂರ್ತಿಯಂತಹವರ ಬಗ್ಗೆ ನಮ್ಮ ಈ ಇಂಗ್ಲಿಷ್ ಲೇಖಕರು ಅವರ ಈ ಪುಸ್ತಕವನ್ನು ಓದದೆ ಕೂಡ ಬರೆಯುವಷ್ಟು ಪರಿಣತರು! ಅಥವಾ ಅನಂತಮೂರ್ತಿಯವರು ಅವರನ್ನೆಲ್ಲ ಹಾಗೆ 'ತಯಾರು' ಮಾಡಿ ಹೋಗಿದ್ದಾರೆ!

ಅದೇನೇ ಇರಲಿ, ತಮ್ಮ ಮಾತೃಭಾಷೆಯಲ್ಲಿ ಬರೆಯಲು ಅಶಕ್ತರಾದ ಅಥವಾ ಬರೆಯಲು ಸಂಕೋಚಪಡುವ (ಈ ಎರಡರ ಅರ್ಥವೂ ಒಂದೇ!) ಈ ಇಂಗ್ಲಿಷ್ ಬರಹಗಾರರ ಬಗ್ಗೆ ನನಗೆ ಮೊದಲಿಂದಲೂ ಅಷ್ಟು ಗೌರವವಿಲ್ಲ. ಏಕೆಂದರೆ, ಹುಟ್ಟಿನೊಂದಿಗೇ ಚರ್ಮದಂತೆ ಕಚ್ಚಿಕೊಂಡು ಬರುವ ಮಾತೃಭಾಷೆಯನ್ನು ಬಿಟ್ಟು ಕಲಿತ ಭಾಷೆಯಲ್ಲಿ ಬರೆಯುವವರ ವ್ಯಕ್ತಿತ್ವ ಅಷ್ಟು ಅಸಲಿಯಾದದ್ದಾಗಿರಲಾರದು ಎಂದು ನನ್ನ ಅನುಮಾನ. ಆ ಅನುಮಾನ ಈ ಎರಡು ಬರಹಗಳನ್ನು ಓದಿದಾಗ ನನಗೆ ಖಚಿತವಾಯಿತು. ಅತ್ಯಂತ ಬಡಕಲಾದ ಈ ಪುಸ್ತಕವನ್ನು ಈ ಇಬ್ಬರು ಎಷ್ಟು ಆಕಾಶಕ್ಕೆ ಏರಿಸಿದ್ದಾರೆಂದರೆ, ಭೂಮಿಯ ಮೇಲಿನ ಆಳದ ಸತ್ಯ ಹೇಳುವ ಗಾಂಧಿಯ ಈ 'ಹಿಂದ್ ಸ್ವರಾಜ್' ಕೇವಲ ಆಕಾಶದ–ಅಂದರೆ ಬರೀ ಬೌದ್ಧಿಕ ಭೋಳೆಯ–ಪುಸ್ತಕದಂತೆ ಕಾಣತೊಡಗುತ್ತದೆ. ತಡೆಯಲಾಗದೆ ನಾನು ಪರಿಚಯದವರಾದ

ಚಂದನ್ ಗೌಡರಿಗೆ ಸ್ವಲ್ಪ ಸಲಿಗೆಯಿಂದಲೇ ಹೀಗೆ ಪತ್ರ ಬರೆದೆ:

ದಿನಾಂಕ: ೧೪.೬.೨೦೧೬

ಪ್ರಿಯ ಚಂದನ ಗೌಡ ಅವರಲ್ಲಿ,

ವಂದನೆಗಳು. ಅನಂತಮೂರ್ತಿಯವರ 'ಹಿಂದುತ್ವ ಅಥವಾ ಹಿಂದ್ ಸ್ವರಾಜ್' ಪುಸ್ತಕ ಕುರಿತು 'ಬ್ಯಾಂಗಲೋರ್ ಮಿರರ್'ಗಾಗಿ ನೀವು ಬರೆದ ಅಂಕಣವನ್ನು ಓದಿದೆ. ಮೊನ್ನೆ ರಾಮಚಂದ್ರ ಗುಹ ಅವರೂ 'ಪ್ರಜಾವಾಣಿ'ಯಲ್ಲಿ ಇದರ ಬಗ್ಗೆ ಬರೆದಿದ್ದರು. ಇದ್ದಕ್ಕಿದ್ದಂತೆ ಈ ಪುಸ್ತಕದ ಬಗ್ಗೆ ನಿಮಗೆಲ್ಲ ಹೀಗೆ ಆಸಕ್ತಿ ಹುಟ್ಟಿರಲು ಏನು ಕಾರಣವೋ ತಿಳಿಯದಾಗಿದೆ! ಈ ಕನ್ನಡ ಪುಸ್ತಕದ ಇಂಗ್ಲಿಷ್ ಅನುವಾದವೇನಾದರೂ ಈಗ ಹೊರಬಂದಿದೆಯೇ ತಿಳಿಯದು!

ನಿಮ್ಮ ಮತ್ತು ಗುಹ ಅವರ ಬರಹಗಳನ್ನು ಓದಿದಾಗ ನನಗೆ ಅನ್ನಿಸಿದ್ದು, ಮಾತೃಭಾಷಾ ಲೋಕದಿಂದ ಸಾವಯವವಾಗಿ ದೂರಾದ (ಅಂದರೆ ತನ್ನ ವ್ಯಕ್ತಿತ್ವದ ಅಭಿವ್ಯಕ್ತಿಯೇ ಆದ ತನ್ನೆಲ್ಲ ಬರವಣಿಗೆಯನ್ನು ಮಾತೃಭಾಷೆಯ ಮೂಲಕ ಮಾಡಲಾಗದ ಒತ್ತಡಗಳಿಗೆ ಸಿಕ್ಕಿಕೊಂಡಿರುವ) ವ್ಯಕ್ತಿಗಳಿಗೆ ಈ ನೆಲದ ಮೂಲದ್ದೆಂದು ಅನ್ನಿಸಿದ ಎಲ್ಲವೂ ರೋಮಾಂಚನವನ್ನೇ ಉಂಟು ಮಾಡುತ್ತದೆ ಮತ್ತು ಈ ರೋಮಾಂಚನ ಅದರ ಎಲ್ಲ ಗುಣಾತ್ಮಕತೆಯನ್ನೂ ನಿರ್ಲಕ್ಷಿಸಿ ಅದನ್ನು ಮೆರೆಸಲು ಹಾತೊರೆಯುತ್ತದೆ. ಬಹುಶಃ ಇದು ತಾನು ಇಂಗ್ಲಿಷ್‌ನ್ನು ಅಭಿವ್ಯಕ್ತಿ ಮಾಧ್ಯಮವನ್ನಾಗಿ ಆರಿಸಿಕೊಳ್ಳಬೇಕಾದ ಸ್ಥಿತಿಗೆ ಈಡಾಗಿರುವುದರ ಬಗ್ಗೆ ಇರುವ ಸುಪ್ತ 'ತಪ್ಪಿತಸ್ಥ' ಭಾವನೆಯಿಂದಲೋ ಅಥವಾ ಅದನ್ನು ಪರಿಹರಿಸಿಕೊಳ್ಳುವ ಪ್ರಯತ್ನವಾಗಿಯೋ ಹುಟ್ಟಿರಬಹುದು. ನೀವು ಅನಂತಮೂರ್ತಿಯವರ ಸದರಿ ಪುಸ್ತಕದ ಬಗ್ಗೆ ಬರೆದಿರುವುದನ್ನು ನೋಡಿದಾಗ ನನಗೆ ಹೀಗೆಲ್ಲ ಅನ್ನಿಸಿತು.

ಅನಂತಮೂರ್ತಿ ಆಧುನಿಕ ಕನ್ನಡದ ಪ್ರತಿಭಾವಂತ ಲೇಖಕ ಮತ್ತು ಚಿಂತಕರಲ್ಲೊಬ್ಬರು, ನಿಜ. (ಗುಹ ಪ್ರಕಾರ ಅವರು ಭಾರತದ ಪ್ರಮುಖ ಇಂಗ್ಲಿಷ್ ಲೇಖಕರಲ್ಲೊಬ್ಬರು!) ಆದರೆ ಅವರಿಗೆ ಗಾಂಧಿಯ 'ಹಿಂದ್ ಸ್ವರಾಜ್' ಬಗ್ಗೆ ಇಷ್ಟು ಕಕ್ಕುಲಾತಿಯಿಂದ ಬರೆಯುವ ಹುರುಪು ಅವರ ಬದುಕಿನ ಕೊನೆಯ ದಿನಗಳಲ್ಲಿ ಹುಟ್ಟಿದುದರ ಮರ್ಮವಾದರೂ ಏನು? ಮೋದಿಯನ್ನು ಹಣಿಯಲು ಅದನ್ನು ಬಳಸಿಕೊಂಡಿರುವುದು ಸ್ಪಷ್ಟ. ಅದೂ ಏನೂ ಆಕ್ಷೇಪಣೀಯವಲ್ಲ. ಆದರೆ ಮೋದಿ ಕುರಿತು ಇಷ್ಟು ಕೋಪ ಅನಂತಮೂರ್ತಿಯವರಿಗೆ ಉಂಟಾದುದಾದರೂ ಯಾವಾಗಲಿಂದ? ಏಕೆ? ೨೦೦೨ರಲ್ಲಿ ಗುಜರಾತ್‌ನಲ್ಲಿ ಮುಸ್ಲಿಮರ ನರಮೇಧವಾದಾಗ ಅನಂತಮೂರ್ತಿ ಎಲ್ಲಿದ್ದರು? ಏನು ಮಾಡುತ್ತಿದ್ದರು? ಏನು ಹೇಳಿದರು? ಏನಾದರೂ ದಾಖಲೆ ಇದೆಯೇ? ಈ ನರಮೇಧವಾದ ನಂತರದ ಹತ್ತು ಹನ್ನೆರಡು ವರ್ಷಗಳ ಅವಧಿಯಲ್ಲಿ ಅವರು ಈ ಬಗ್ಗೆ ಏನಾದರೂ ಮಾತಾಡಿದ ದಾಖಲೆ ಇದೆಯೆ? ಸಾಯುವ ಕಾಲದಲ್ಲಿ ಒಂದು ಪುಣ್ಯದ ಕೆಲಸ ಮಾಡಿಹೋಗುವ (ಒಳ್ಳೆಯ)

ಆಲೋಚನೆಯ ಫಲವೇ ಇದು?

ಈ ಎಲ್ಲ ಪ್ರಶ್ನೆಗಳು ಈ ಪುಸ್ತಕವನ್ನು ಬರೆಯಲು ಇರುವ ಅವರ ನೈತಿಕ ಸ್ಥೈರ್ಯಕ್ಕೆ ಸಂಬಂಧಿಸಿದ (ಪುಸ್ತಕದ ಹೊರಗಣ) ಪ್ರಶ್ನೆಗಳಾದರೆ, ಸ್ವತಃ ಆ ಪುಸ್ತಕ ಹೇಗಿದೆ? ಪಶ್ಚಿಮದ ಆಧುನಿಕ ನಾಗರೀಕತೆಯ ಅತ್ಯಂತ ತಳಹದಿಯ ವಿಮರ್ಶೆಯಾದ ಗಾಂಧಿಯ 'ಹಿಂದ್ ಸ್ವರಾಜ್' ಕೃತಿಯ ಹಿಂದಿನ ತಳಮಳಗಳ ಆಳ–ಅಗಲಗಳನ್ನು ಅರಿತವರಾರೂ ಅನಂತಮೂರ್ತಿಯವರ ಈ ಪುಸ್ತಕವನ್ನು ನೀವು ಮತ್ತು ಗುಹ ಮುಕ್ತ ಮತ್ತು ನಿರಾಳವಾಗಿ ಹಾಡಿಹೊಗಳಿದಂತೆ ಹಾಡಿಹೊಗಳಲಾರರು. ನಿಮ್ಮ ಬರಹಗಳಲ್ಲಿ ಅನಂತಮೂರ್ತಿಯವರ ನೆಪದಲ್ಲಿ ಅವರಿಗಿಂತ ಹೆಚ್ಚಾಗಿ ನೀವೇ (ನಿಮ್ಮ ಇಂಗ್ಲಿಷ್ ಭಾಷಾ ವಯ್ಯಾರ ಮತ್ತು ಪಾಂಡಿತ್ಯಗಳೊಂದಿಗೆ) ಎದ್ದು ಕಾಣುತ್ತೀರಿ. ಅದಕ್ಕೆ ಆ ಪುಸ್ತಕದ ಬಡತನ ಮತ್ತು ಬಡಕಲುತನಗಳೇ ಕಾರಣವೆಂದು ನನಗನ್ನಿಸಿದೆ. ಇಲ್ಲದಿದ್ದರೆ ನೀವು ಆ ಪುಸ್ತಕದ ಈ ಬಡತನ ಮತ್ತು ಬಡಕಲುತನಗಳನ್ನು ಗುರುತಿಸುವ ಶಕ್ತಿ ನಿಮಗೆ ದೊರಕಿರುತ್ತಿತ್ತು.

ಇದೆಲ್ಲವೂ ನನಗೆ ಭಾರತದ ಇಂಗ್ಲಿಷ್ ಲೇಖಕರು ತಮ್ಮ ಸುಪ್ತ ಅಭದ್ರತೆ ಮತ್ತು ಕೀಳರಿಮೆಗಳನ್ನು ಮೀರಲು ನಿಜವಾದ (ಮತ್ತು ಏಕೈಕವಾದ) ಮಾತೃಭಾಷಾ ಸಂವೇದನೆಯ ಬೌದ್ಧಿಕ ಲೋಕಕ್ಕೆ ಪರ್ಯಾಯವಾಗಿ ತಮ್ಮದೇ ಆದ ಒಂದು (ಹುಸಿ) ಭದ್ರ ಬೌದ್ಧಿಕ ಲೋಕವನ್ನು ಕಟ್ಟಿಕೊಳ್ಳಲು ನಡೆಸುತ್ತಿರುವ ಮಹಾ ಪ್ರಯತ್ನದ ಭಾಗವಾಗಿ ನನಗೆ ಕಾಣುತ್ತದೆ.

ನಾನು ಇದನ್ನೆಲ್ಲ ನಿಮ್ಮ ಮತ್ತು ಗುಹ ಅವರ ಸದರಿ ಬರಹಗಳನ್ನು ಓದಿದಾಗ ನನ್ನಲ್ಲಿ ಸ್ಫುರಿಸಿದ ವಿಚಾರ ಮತ್ತು ಭಾವನೆಗಳಿಂದ ಪ್ರೇರಿತನಾಗಿ ಬರೆದಿರುವೆನಷ್ಟೆ. ಇದರಲ್ಲಿ ನಿಮ್ಮನ್ನು ನೋಯಿಸುವ ಸಂಗತಿಗಳಿದ್ದರೆ ಅದು ಆನುಷಂಗಿಕ ಮಾತ್ರ. ಅದಕ್ಕಾಗಿ ನನ್ನನ್ನು ನೀವು ಕ್ಷಮಿಸುತ್ತೀರಿ ಮತ್ತು ಇದೊಂದು ವೈಯಕ್ತಿಕ ಅಭಿಪ್ರಾಯವಷ್ಟೆ ಎಂದು ತೆಗೆದುಕೊಳ್ಳುವಿರಿ ಎಂದೂ ನಾನು ನಂಬಿರುವೆ. ನನ್ನ ಮಾತುಗಳು ನಿಮಗೆ ಇನ್ನಷ್ಟು ಸ್ಪಷ್ಟವಾಗಲೆಂದು, ಅನಂತಮೂರ್ತಿಯವರ ಸದರಿ ಪುಸ್ತಕದ ಬಗ್ಗೆ ಆ ಪುಸ್ತಕ ಹೊರಬಂದ ತರುವಾಯದಲ್ಲೇ 'ಹೊಸ ಮನುಷ್ಯ'ಕ್ಕಾಗಿ (ಡಿಸೆಂಬರ್, ೨೦೧೫ರ ಸಂಚಿಕೆ) ನಾನು ಬರೆದ 'ಪುಸ್ತಕಾವಲೋಕನ'ವನ್ನು ಬಿಡುವಾದಾಗ ಓದಿರೆಂದು ಕೋರುವೆ.*

ವಂದನೆಗಳೊಂದಿಗೆ,

– ಡಿ.ಎಸ್. ನಾಗಭೂಷಣ

●

ಸೆಪ್ಟಂಬರ್, ೨೦೧೬

ಎರಡು ಗಮನಾರ್ಹ ಪುಸ್ತಕಗಳು

ಮಾಲಿಯ ಭಂಗಿ ನಡೆ!

'ರಾಗ ಮಾಲಿಕಾ' ಮೈಸೂರಿನ ಟಿ.ಎಸ್. ವೇಣುಗೋಪಾಲ್-ಶೈಲಜಾ ದಂಪತಿಗಳು ಸಿದ್ಧಪಡಿಸಿ ಪ್ರಕಾಶನ ಮಾಡುತ್ತಿರುವ ಪ್ರಸಿದ್ಧ ಸಂಗೀತಗಾರರು ಮತ್ತು ಸಂಗೀತ ರಸಗ್ರಹಣ ಕುರಿತ ಪುಸ್ತಕಗಳ ಮಾಲಿಕೆ. ಈ ಮಾಲಿಕೆಯ ಏಳನೇ ಕುಸುಮ, ಮಾಲಿ ಎಂದೇ ಜನಪ್ರಿಯರಾಗಿದ್ದ ಅಪ್ರತಿಮ ಪ್ರತಿಭಾಶಾಲಿ ಕೊಳಲುವಾದಕ ಟಿ.ಆರ್ ಮಹಾಲಿಂಗಂ ಕುರಿತು ಸಿದ್ಧಪಡಿಸಿರುವ 'ಭೃಂಗಿ ನಡೆಯ ಮಾಲಿ' ಪುಸ್ತಕ.

ಮಹಾಲಿಂಗಂ ಅವರ ಸಂಗೀತ ಪ್ರತಿಭೆ ಎಷ್ಟು ಅಪ್ರತಿಮವಾದದ್ದೋ ಅಷ್ಟೇ ವಿಚಿತ್ರವಾದದ್ದು ಅವರ ವ್ಯಕ್ತಿತ್ವ. ಮೂಲತಃ ತಮಿಳ್ನಾಡಿನವರಾದ ಮಹಾಲಿಂಗಂ ತಾವು ಸಾವನ್ನಪ್ಪುವವರೆಗೆ ಬಹುಕಾಲ ಬೆಂಗಳೂರಿನಲ್ಲಿ ನೆಲೆಸಿದ್ದವರು. ಅಪಾರ ಅಭಿಮಾನಿ ಸ್ನೇಹಿತರ ಮತ್ತು ಕೇಳುಗರ ಬಳಗವನ್ನು ಹೊಂದಿದ್ದರೂ ತಮ್ಮ ತಿಕ್ಕಲುತನಗಳಿಂದಾಗಿ 'ಒಂಟಿ' ಜೀವನಕ್ಕೆ ಪಕ್ಕಾದವರು. ಕುಡಿತದ ಮೊರೆ ಹೋದವರು. ಬಾಲ ಪ್ರತಿಭೆಯಾದ ಅವರನ್ನು ಅವರ ತಂದೆ ಕುಟುಂಬದ ಜೀವನೋಪಾಯಕ್ಕಾಗಿ ಬಳಸಿಕೊಂಡು ಅವರ ಬಾಲ್ಯವನ್ನೇ ಕಿತ್ತುಕೊಂಡ ಬಗ್ಗೆ ಅವರಿಗೆ ಆಳವಾದ ಬೇಸರವಿತ್ತು ಮತ್ತು ಅದೇ ಅವರ ಕುಡಿತ ಮತ್ತು ತಮ್ಮ ಅಭಿಮಾನಿಗಳ ಅಸಮಾಧಾನಗಳಿಗೆ ಕಾರಣವಾಗುತ್ತಿದ್ದ ಸಂಗೀತ ಕಛೇರಿಗಳಿಗೆ ಸಂಬಂಧಪಟ್ಟ 'ಅಶಿಸ್ತಿ'ನ ವರ್ತನೆಗಳಿಗೆ ಕಾರಣವಿರಬೇಕೆಂಬ ಸೂಚನೆ ಈ ಪುಸ್ತಕದಲ್ಲಿ ದೊರೆಯುತ್ತದೆ.

ವ್ಯಕ್ತಿತ್ವದ ಈ ಎಲ್ಲ ವಕ್ರತೆಗಳ ಹೊರತಾಗಿಯೂ ಅವರು 'ಲಹರಿ'ಯಲ್ಲಿದ್ದಾಗ ಪ್ರದರ್ಶಿಸುತ್ತಿದ್ದ ಅಪೂರ್ವ ಸಂಗೀತ ಪ್ರತಿಭೆ ಅವರನ್ನು ನಮ್ಮ ಕಾಲದ ಅತಿ ವಿಶಿಷ್ಟ ಕೊಳಲುವಾದಕರನ್ನಾಗಿ ಮಾಡಿದೆ. ಮಾಲಿಯವರ ಬದುಕಿನ ಈ ಎಲ್ಲ ಮಗ್ಗುಲುಗಳನ್ನೂ ಅವರ ಕಾಲದ ಹಿರಿಯ ಸಂಗೀತಗಾರರು, ಸುಪ್ರಸಿದ್ಧ ಪಕ್ಕವಾದ್ಯ ಕಲಾವಿದರು, ಅವರ ಆತ್ಮೀಯ ಗೆಳೆಯರು, ಶಿಷ್ಯರು ಮತ್ತು ರಸಿಕ ಕೇಳುಗರ ಸಂದರ್ಶನ ಮತ್ತು ಬರಹಗಳ ಮೂಲಕ ಸಂಪಾದಕ ದ್ವಯರು ಬಹು ಆತ್ಮೀಯವಾಗಿ ಕಟ್ಟಿಕೊಡುತ್ತಾರೆ. ಹಾಗೆ ನೋಡಿದರೆ ಈ ಪುಸ್ತಕವನ್ನು ಒಂದು ವಿಚಿತ್ರ ಪ್ರತಿಭೆಯ ಕುತೂಹಲಕರ ಜೀವನ ಕಥನದಂತೆಯೂ ಓದಿ ಆನಂದಿಸಬಹುದಾಗಿದೆ. ಇಲ್ಲಿ ಸಂಗ್ರಹಿಸಲಾಗಿರುವ ಮಾಲಿ ಅವರ ಬದುಕಿನ ಮತ್ತು ಸಂಗೀತ ಕಛೇರಿಗಳ ಹಾಗೂ ಇಲ್ಲಿನ ಕಥನಕಾರರ ಸಮೃದ್ಧ ಭಾವಚಿತ್ರಗಳ ಸೊಗಸು ಈ ಕೃತಿಯನ್ನು ಇನ್ನಷ್ಟು ಆತ್ಮೀಯಗೊಳಿಸುತ್ತದೆ. ಇದಕ್ಕಾಗಿ ಈ ಪುಸ್ತಕದ ವಿನ್ಯಾಸಕಾರರಾದ ಕೆ.ಜಿ. ಸಚ್ಚಿದಾನಂದರನ್ನು ಅಭಿನಂದಿಸಬೇಕಿದೆ. ಆದರೆ ಅವರು ಈ ಪುಸ್ತಕದ ಮುಖಪುಟವನ್ನು ಖಾಲಿ ಬಿಟ್ಟಿರುವುದರ ಮರ್ಮವನ್ನು ಅರ್ಥ ಮಾಡಿಕೊಳ್ಳುವುದು ಕಷ್ಟ! ಇನ್ನು ಇಲ್ಲಿನ ಬರಹಗಳನ್ನು ಆಹ್ಲಾದಕರ ರೀತಿಯಲ್ಲಿ ಕನ್ನಡಕ್ಕೆ ತಂದಿರುವ ವೇಣು-ಶೈಲಜಾರನ್ನು ಇಲ್ಲಿ ಅದಕ್ಕಾಗಿಯೂ ಅಭಿನಂದಿಸಬೇಕಿದೆ.

ಕೊನೆಯದಾಗಿ: ಈ ಪುಸ್ತಕಕ್ಕೆ 'ಭೃಂಗಿ ನಡೆ' ಎಂಬ ಶೀರ್ಷಿಕೆ ಒದಗಿ ಬಂದಿರುವುದು ಮಾಲಿಯವರ ಕೊಳಲು ವಾದನದ ನಡೆ ಶಿವನ ಆಸ್ಥಾನದ ಮೂರು ಕಾಲುಗಳ ಭೃಂಗಿಯ ನರ್ತನದ ವಿಚಿತ್ರ ನಡೆಯನ್ನು ಹೋಲುವುದರಿಂದ ಅಂತೆ. ಅದನ್ನು ಗುರುತಿಸಿ ಈ ಕೃತಿಗೆ ಈ ಹೆಸರಿಟ್ಟವರು ಸಾಹಿತಿ ದೇವನೂರ ಮಹಾದೇವ ಅವರಂತೆ. ಅವರ ಈ ಸಂಗೀತ ಪ್ರಜ್ಞೆ ಮೆಚ್ಚುವಂತಹದ್ದೇ. ಆದರೆ ಸಂಪಾದಕರು ಇದನ್ನು ಸುಮ್ಮನೆ ಒಪ್ಪಿಕೊಳ್ಳದೆ ದೇವನೂರರ ಸಾಹಿತ್ಯವೂ ಭೃಂಗಿಯ ನರ್ತನದಂತೆ ಅನಿರೀಕ್ಷಿತ ನಡೆಗಳಿಂದ ಕೂಡಿದ್ದು ಎಂದು ಹೇಳಿರುವುದು-ಮಾಲಿಯವರ ಅಮಲಿನ ವಿಚಿತ್ರ ವರ್ತನೆಗಳಂತೆಯೇ-ಸ್ವಲ್ಪ ಅತಿಯಾಯಿತೆನ್ನಿಸುತ್ತದೆ!

ಮೌಢ್ಯಾಚರಣೆ ನಿಷೇಧ ಕಾಯ್ದೆಯ ಔಚಿತ್ಯ ಕುರಿತು...

ಮಹಾರಾಷ್ಟ್ರದಲ್ಲಿ ಹತ್ಯೆಯಾದ ವಿಚಾರವಾದಿ ನರೇಂದ್ರ ದಾಭೋಲ್ಕರ್ ನೇತೃತ್ವದಲ್ಲಿ ಸಿದ್ಧವಾದ ಮೌಢ್ಯಾಚರಣೆ ನಿಷೇಧ ಕಾಯಿದೆಯ ಮಾದರಿಯಲ್ಲಿ ಕರ್ನಾಟಕದಲ್ಲೂ ಅಂತಹುದೊಂದು ಕಾಯ್ದೆಯನ್ನು ಜಾರಿಗೆ ತರಲು ಹಲವು ಪ್ರಗತಿಪರ ಚಿಂತಕರ ಮತ್ತು ಕೆಲ ಮಠಾಧೀಶರ ಪ್ರೇರಣೆಯಿಂದ ಕರ್ನಾಟಕ ಸರ್ಕಾರವೂ ಎರಡು ವರ್ಷಗಳಿಂದ ಪ್ರಯತ್ನಿಸುತ್ತಿದೆ. ಕಾಯ್ದೆಯ ಕರಡೂ ಸಿದ್ಧವಾಗಿ ಶಾಸನ ಸಭೆಯ ಅನುಮೋದನೆಗಾಗಿ ಕಾಯುತ್ತಿದೆ. ಆದರೆ ಆಡಳಿತ ಮತ್ತು ವಿರೋಧ ಪಕ್ಷಗಳೆರಡಕ್ಕೂ ಸೇರಿದ ಕೆಲ ಜನವರ್ಗಗಳ ಆಕ್ಷೇಪಣೆ ಮತ್ತು ವಿರೋಧಗಳ ನಡುವೆ ಅದು ಸ್ಥಗಿತಗೊಂಡಿದೆ. ಈ ಸನ್ನಿವೇಶದ ಹಿನ್ನೆಲೆಯಲ್ಲಿ, ಈ ಕಾಯ್ದೆ ರೂಪಿಸುವಲ್ಲಿ

ಸಲಹೆ–ಮಾರ್ಗದರ್ಶನ ನೀಡಿದ ನಾಡಿನ ಹಿರಿಯ ನ್ಯಾಯವೇತ್ತರೂ, ವೈಚಾರಿಕರೂ ಆದ ಕೋಚೆ (ಕೋ. ಚೆನ್ನಬಸಪ್ಪ) ಅವರು ಈ ಕಾಯಿದೆ ಜಾರಿಯ ಮಹತ್ವದ ಜೊತೆಗೇ ಅದನ್ನು ಜಾರಿಗೊಳಿಸುವಲ್ಲಿ ತೆಗೆದುಕೊಳ್ಳಬೇಕಾದ ಎಚ್ಚರಿಕೆಗಳು ಹಾಗೂ ಕಾಯ್ದೆ ಜಾರಿಗೆ ಬಂದಮೇಲೂ ಅದರ ಅನುಭವದ ಆಧಾರದ ಮೇಲೆ ಅದರಲ್ಲಿ ಬದಲಾವಣೆಗಳನ್ನು ಮಾಡಲು ಇರಬೇಕಾದ ಮುಕ್ತ ಮನಸ್ಸಿನ ಅಗತ್ಯವನ್ನು ವಿವರಿಸುವ ಮೌಢ್ಯಾಚರಣೆ ನಿಷೇಧ ಕಾಯ್ದೆ ಔಚಿತ್ಯ ಎಂಬ ಕಿರುಪುಸ್ತಕವನ್ನು ಪ್ರಕಟಿಸಿದ್ದಾರೆ. ಕೃತಿಯ ಮುನ್ನುಡಿಕಾರರಾದ ಬೆಂಗಳೂರು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಡಾ. ಕೆ.ಸಿದ್ದಪ್ಪನವರು ಬಹು ಸಮರ್ಪಕವಾಗಿ ವಿವರಿಸಿರುವಂತೆ ಈ ಪುಸ್ತಕ ನ್ಯಾಯಶಾಸ್ತ್ರ, ತತ್ವಜ್ಞಾನ ಮತ್ತು ವೈಜ್ಞಾನಿಕ ಚಿಂತನೆಗಳಿಂದ ಮುಪ್ಪುರಿಗೊಂಡ ಒಂದು ಪ್ರಬುದ್ಧ ಕೃತಿಯಾಗಿದ್ದು, ಈ ಕಾಯ್ದೆಯ ಜಾರಿಯ ಬಗ್ಗೆ ಅತಿ ಉತ್ಸುಕರಾಗಿರುವ ಮತ್ತು ತೀವ್ರ ಪೂರ್ವಾಗ್ರಹಗಳನ್ನು ಹೊಂದಿರುವವ ಇಬ್ಬರೂ ಓದಬೇಕಾದ ವಿಚಾರಪೂರ್ಣ ಪುಸ್ತಕವಾಗಿದೆ.

●

ಅಕ್ಟೋ-ಡಿಸೆಂ, ೨೦೧೬

ನಾನು ಮೆಚ್ಚಿದ ಎರಡು ಪುಸ್ತಕಗಳು

ರಾಜ್‌ಕುಮಾರ್‌ಗೊಂದು ಪುಸ್ತಕ ಸ್ಮಾರಕ

ನಾನು ಹಿಂದೊಮ್ಮೆ ಬರೆದಿದ್ದಂತೆ, ರಾಜ್‌ಕುಮಾರ್ ಎಂದರೆ ಆಧುನಿಕ ಕರ್ನಾಟಕದಲ್ಲಿ ಸಂಭವಿಸಿದ ಒಂದು ಪವಾಡ. ಚಲನಚಿತ್ರರಂಗದಂತಹ ಅಷ್ಟೇನೂ ಪ್ರತಿಷ್ಠಿತವಲ್ಲದ, ವಾರೆ-ಗಣ್ಣಿನಲ್ಲಿ 'ಜನಪ್ರಿಯ' ಎನ್ನಲಾಗುವ ಮಾಧ್ಯಮದಲ್ಲಿ ಕೆಲಸ ಮಾಡಿದ; ಶಾಲಾ ಶಿಕ್ಷಣವನ್ನೂ ಪೂರ್ತಿ ಮುಗಿಸದ, ರಾಜ್ಯದಾಚೆಯ ಗಡಿನಾಡ ಹಳ್ಳಿಯ ಹೈದನೊಬ್ಬ ಕನ್ನಡ ಜನಮಾನಸದಲ್ಲಿ ಏರಿದ ಎತ್ತರ ಅವರ ಸಮಕಾಲೀನರಾರೂ ಏರದ ಎತ್ತರವಾಗಿತ್ತು. ಒಂದೇ ಮಾತಲ್ಲಿ ಹೇಳುವುದಾದರೆ, ನನ್ನ ಪ್ರಕಾರ ಕನ್ನಡದ ನಮ್ಮ ತಲೆಮಾರಿನ ಪ್ರಜ್ಞೆಯನ್ನು ರೂಪುಗೊಳಿಸಿದ ಮೂವರಲ್ಲಿ ರಾಜ್‌ಕುಮಾರ್ ಕೂಡ ಒಬ್ಬರು. ಇತರರಿಬ್ಬರೆಂದರೆ ಕುವೆಂಪು ಮತ್ತು ಶಿವರಾಮ ಕಾರಂತರು.

ತಮಿಳ್ನಾಡಿನ ತಾಳವಾಡಿ ಫಿರ್ಕಾದ ದನ ಕಾಯುತ್ತಿದ್ದ ಹುಡುಗನೊಬ್ಬ ತನ್ನ ಪ್ರತಿಭೆ, ಪರಿಶ್ರಮ ಮತ್ತು ಅವುಗಳ ಮೂಲಕ ರೂಪಿಸಿಕೊಂಡ ಅಸಾಧಾರಣ ವ್ಯಕ್ತಿತದ್ವ ಪ್ರಭೆಯ ಪರಿಣಾಮಕ್ಕೆ ಸಿಲುಕದ ಕನ್ನಡಿಗನೇ ಇಲ್ಲವೆಂದು ಹೇಳಿದರೆ ತಪ್ಪಾಗಲಾರದು.

ನಿಜ, ಇತರ ರಾಜ್ಯಗಳಲ್ಲಿ, ಇತರ ಭಾಷೆಗಳಲ್ಲಿ ಅಭಿನಯದಲ್ಲಿ ಇವರನ್ನು ಮೀರಿಸಿದ ಪ್ರತಿಭೆ ಮೆರೆದ ಮತ್ತು ಇವರನ್ನು ಮೀರಿಸಿದ ಜನಪ್ರಿಯತೆ ಗಳಿಸಿ ಸಾರ್ವಜನಿಕ ಜೀವನದಲ್ಲಿ ಗಣ್ಯ ಸ್ಥಾನ ಮಾನಗಳನ್ನು ಪಡೆದ ಹಲವು ನಟ-ನಟಿಯರಿದ್ದಾರೆ. ಆದರೆ ರಾಜ್‌ಕುಮಾರ್ ಕನ್ನಡ ಜನಸಮುದಾಯದ ನಡುವೆ ಗಳಿಸಿಕೊಂಡ ಮಾನ್ಯತೆಯ

ಆಯಾಮಗಳೇ ಬೇರೆ ರೀತಿಯದು. ಅದು ಅವರು ತಮ್ಮ ಚಲನಚಿತ್ರಗಳ ಮೂಲಕ ಮಾತ್ರ ಗಳಿಸಿಕೊಂಡ ಮಾನ್ಯತೆಯಾಗಿರಲಿಲ್ಲ. ರಾಜ್‌ಕುಮಾರ್‌ಗೆ ಅದರಾಚೆಯೂ ಹಬ್ಬಿದ್ದ ವ್ಯಕ್ತಿತ್ವದ ಪ್ರಭಾವಳಿ ಇತ್ತು. ಹಾಗಾಗಿಯೇ ಅವರ ಸ್ಮಾರಕದ ಉದ್ಘಾಟನೆಯ ಸಂದರ್ಭದಲ್ಲಿ ನಟ ರಜನೀಕಾಂತ್ ಈ ಸಮಾಧಿ ಮುಂದೆ ಜನಸಾಮಾನ್ಯರ ಹರಕೆಯ ಸ್ಥಳವಾಗಲಿದೆ ಎಂದು ಹೇಳಿದ್ದೆಂದು `ಕಾಣುತ್ತದೆ.

ಇಂತಹ ವ್ಯಕ್ತಿತ್ವ ರೂಪುಗೊಂಡ, ಬೆಳೆದ, ಹಬ್ಬಿದ ಮತ್ತು ಉಳಿದುಕೊಂಡ ಬಗೆಗಳು ಸರಳ ವಿವರಣೆಗೆ ನಿಲುಕದ ಸಂಕೀರ್ಣ ವಿದ್ಯಮಾನ. ಈ ಸಂಕೀರ್ಣ ವಿದ್ಯಮಾನವನ್ನು ಕುರಿತ ಬೃಹತ್ ಸಂಕಥನವೀಗ ಎರಡು ಬೃಹತ್ ಸಂಪುಟಗಳಲ್ಲಿ ಬಿಡುಗಡೆಯಾಗಿದೆ. ಸಾವಿರ ಪುಟಗಳಿಗೂ ಮೀರಿದ ರಾಜ್‌ಕುಮಾರ್ ಅವರ ಜೀವನ ಚರಿತ್ರೆಯ ಸಂಪುಟದೊಂದಿಗೇ ಅವರು ಅಭಿನಯಿಸಿದ ೨೧೨ ಚಲನಚಿತ್ರಗಳ ಸಕಲ ವಿವರಗಳನ್ನೊಳಗೊಂಡ ಒಂಬೈನೂರೂ ಚಿಲ್ಲರೆ ಪುಟಗಳ ಇನ್ನೊಂದು ಸಂಪುಟವೂ ಕನ್ನಡಿಗರಿಗೀಗ ಲಭ್ಯವಿದೆ.

ಬಹುಶಃ ಪುಸ್ತಕ ಪ್ರಕಟಣೆಯ ಇತಿಹಾಸದಲ್ಲಿ ಯಾವುದೇ ಕ್ಷೇತ್ರದ ಒಬ್ಬ ಸಾಧಕನ ಬಗ್ಗೆ ಒಟ್ಟಿಗೇ ಇಷ್ಟೊಂದು ಬೃಹತ್ ಗಾತ್ರದ ಸಂಪುಟಗಳು ಹೊರಬಂದಿರಲಾರವು. ಇದು ರಾಜ್‌ಕುಮಾರ್‌ರನ್ನು ಕುರಿತ ಹೆಮ್ಮೆ ಹೇಗೋ ಕನ್ನಡದ ಹೆಮ್ಮೆಯೂ ಹೌದು. ಇಂತಹ ಅಪೂರ್ವ ಸಾಹಸವನ್ನು ಕೈಗೊಂಡು ಯಶಸ್ವಿಯಾಗಿ ಮುಗಿಸಿರುವವರು, ಗೆಳೆಯ ದೊಡ್ಡಹುಲ್ಲೂರು ರುಕ್ಕೋಜಿಯವರು. ನಾನೂ ಸೇರಿದಂತೆ ಅವರ ಬಹಳಷ್ಟು ಗೆಳೆಯರ ಹಾಗೇ ಬಾಲ್ಯದಿಂದಲೇ ರಾಜ್‌ಕುಮಾರ್ ಅಭಿಮಾನಿಯಾಗಿ ಬೆಳೆದ ರುಕ್ಕೋಜಿ, ರಾಜ್‌ಕುಮಾರ್‌ರಂತೆಯೇ ಕಡುಬಡತನದಲ್ಲಿ ಬೆಳೆದ ಹಳ್ಳಿಯ ಹುಡುಗ. ಜೀವನದಲ್ಲಿ ಏನಾದರೂ ಘನವಾದದ್ದನ್ನು ಸಾಧಿಸಬೇಕೆಂಬ ಹಠ ತೊಟ್ಟಂತೆ ತಮ್ಮನ್ನು ಬಾಲ್ಯದಿಂದಲೂ ಬಹುಮುಖ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಬಂದ ರುಕ್ಕೋಜಿ, ಹದಿನೈದು ವರ್ಷಗಳ ಸತತ ಶ್ರಮ ಮತ್ತು ಸಾಹಸಗಳ ಮೂಲಕ ಈ ಎರಡು ಸಂಪುಟಗಳನ್ನು ಸಿದ್ಧಪಡಿಸುವ ಮೂಲಕ ನಿಜವಾಗಿ ಘನವಾದದ್ದನ್ನೇ ಸಾಧಿಸಿದ್ದಾರೆ ಎಂದು ಹೇಳಬೇಕು.

ರಾಜ್‌ಕುಮಾರ್‌ರ ಪೂರ್ವಜರ ಚರಿತ್ರೆಯಿಂದ ಆರಂಭವಾಗುವ ಜೀವನ ಚರಿತ್ರೆಯ ಸಂಪುಟ ಅವರ ಸಾವಿನವರೆಗೂ–ವಿಶೇಷವಾಗಿ ಅಣ್ಣಾವ್ರ ದುರದೃಷ್ಟಕರ ಅರಣ್ಯವಾಸ ದಿನಗಳ ಕಥಾನಕ–ಎಷ್ಟು ಸವಿವವರವಾಗಿ, ಕುತೂಹಲಭರಿತವಾಗಿ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಅಪೂರ್ವವೆನ್ನಿಸುವ ಸಾವಿರಾರು ಚಿತ್ರಗಳ ಮೆರವಣಿಗೆಯೊಂದಿಗೆ ಹರಿದಿದೆ ಎಂದರೆ, ಅದು ಸಾವಿರ ಪುಟಗಳನ್ನು ಮೀರಿದರೂ ಎಲ್ಲಿಯೂ ತನ್ನ ಸ್ವಾರಸ್ಯವನ್ನು ಕೆಡಿಸಿಕೊಂಡಿಲ್ಲ. ಅದಕ್ಕೆ ಮುಖ್ಯ ಕಾರಣ, ಲೇಖಕರು ರಾಜ್‌ಕುಮಾರ್‌ರ ವ್ಯಕ್ತಿತ್ವ ಬೆಳೆದು ನಿಂತ ಬಗೆಯನ್ನು ಎಲ್ಲ ಸಾಧ್ಯ–ಅಂದರೆ ವೈವಿಧ್ಯಮಯ–ಮೂಲಗಳಿಂದ ಸಂಗ್ರಹಿಸಿರುವುದು. ಜೊತೆಗೆ ಜಿಎಸ್ಸೆಸ್, ರಾಜೀವ್ ತಾರಾನಾಥ್‌ರಂತಹ ಕನ್ನಡ ಸಾರ್ವಜನಿಕ ಜೀವನದ ವಿವಿಧ ಕ್ಷೇತ್ರಗಳ ಮುಖ್ಯ ವ್ಯಕ್ತಿತ್ವಗಳಿಂದ ಹಿಡಿದು

ಅವರ ಜೊತೆ ಸಿನಿಮಾಗಳಲ್ಲಿ ವಿವಿಧ ಸ್ತರಗಳಲ್ಲಿ ಕೆಲಸ ಮಾಡಿದ ಮಹನೀಯರು ಮತ್ತು ಸಾಮಾನ್ಯ ಅಭಿಮಾನಿಗಳವರೆಗಿನ ವೈವಿಧ್ಯಮಯ ಜನಸಮೂಹದಿಂದ ಅವರ ವ್ಯಕ್ತಿತ್ವ ವಿಶೇಷಗಳ ಬಗ್ಗೆ ಬರೆಸಿರುವುದು.

ಇನ್ನು ರಾಜ್‌ಕುಮಾರ್ ನಟಿಸಿರುವ ಚಿತ್ರಗಳನ್ನು ಕುರಿತ ಸಂಪುಟವಂತೂ ರಾಜ್‌ಕುಮಾರ್ ಚಿತ್ರಗಳ ಅಭಿಮಾನಿಗಳ ಪಾಲಿಗೆ ರಸದೌತಣವೆಂದೇ ಹೇಳಬೇಕು. ಅವರು ನಟಿಸಿದ ಇನ್ನೂರು ಹನ್ನೆರಡು ಚಿತ್ರಗಳ ಕಥೆ, ತಾರಾಗಣ, ತಾಂತ್ರಿಕ ಸಿಬ್ಬಂದಿ ಇತ್ಯಾದಿಗಳಿಂದೊಡಗೂಡಿದ ಸಕಲ ವಿವರಗಳ ಜೊತೆಗೆ ಸ್ವಾರಸ್ಯಕರ ಸಾಂದರ್ಭಿಕ ಉಪಕಥೆಗಳಿಂದ ಕೂಡಿದ ನಿರೂಪಣೆಗಳು ನಮ್ಮಲ್ಲಿ ಹಲವರ ನೆನಪುಗಳ ಮೆರವಣಿಗೆಯನ್ನೇ ಉದ್ದೀಪಿಸುವಂತಿವೆ. ಇವುಗಳ ಜೊತೆಗೇ, ರಾಜ್‌ಕುಮಾರ್ ನಟಿಸಬೇಕಿದ್ದ, ಆದರೆ ವಿವಿಧ ಕಾರಣಗಳಿಗಾಗಿ ನಟಿಸದೇ ಹೋದ ಹಲವಾರು ಚಿತ್ರಗಳ ಬಗೆಗಿನ ವಿವರ, ರಾಜ್‌ಕುಮಾರ್ ಎಂಬ ದಂತಕಥೆ ಸೃಷ್ಟಿಯಾದುದರ ಇತಿಹಾಸವನ್ನು ಹೇಳುವಂತಿರುವ ಅವರ ಸುತ್ತ ಅವರ ಅಭಿಮಾನಿ ಬಳಗ ವಿಸ್ತರಿಸುತ್ತಲೇ ಹೋದ ವಿವಿಧ ರೀತಿ ನೀತಿಗಳ ಸಂಭ್ರಮಪೂರ್ಣತೆ ಇಲ್ಲಿ ಸವಿವರವಾಗಿ ಚಿತ್ರಿತವಾಗಿದೆ. ಇವೆಲ್ಲಕ್ಕೆ ಕಿರೀಟವಿಟ್ಟಂತೆ ಅವರ ಎಲ್ಲ ಚಿತ್ರಗಳಿಂದ ಆಯ್ದ ಅವರ ಅಭಿನಯ ವೈವಿಧ್ಯವನ್ನು ಕಣ್ಣಿಗೆ ಕಟ್ಟಿಕೊಡುವ ಸಾವಿರಾರು ಸ್ಥಿರ ಚಿತ್ರಗಳು!

ಈ ಸಂಪುಟಗಳ ಹೂರಣ ವೈವಿಧ್ಯವನ್ನು ಸಂಕ್ಷಿಪ್ತವಾಗಿ ಹೇಳುವುದು ಕಷ್ಟವೆನಿಸುವಷ್ಟು ಬೃಹತ್ ಆಗಿರುವ ಈ ಸಂಪುಟಗಳು ರಾಜ್‌ಕುಮಾರ್ ಬಗ್ಗೆ ಹೇಳದೇ ಉಳಿದದ್ದು ಏನೂ ಇಲ್ಲವೆಂಬಷ್ಟು ಸಂಪೂರ್ಣವಾಗಿವೆ. ಒಂದೇ ಒಂದು ಕೊರತೆ ಎಂದರೆ, ರಾಜ್‌ಕುಮಾರ್ ಬದುಕು ಮತ್ತು ಚಿತ್ರಗಳ ಒಂದು ವಿಮರ್ಶಾತ್ಮಕ ನೋಟದ ಬರಹ ಇಲ್ಲಿ ಇರದಿರುವುದು. ಇರಲಿ. ಸಾಮಾನ್ಯ ಪುಸ್ತಕದ ಆಕಾರದ ಎರಡರಷ್ಟಿರುವ ಆಕಾರದ ಮತ್ತು ಹೊಳೆಯುವ ಹಾಲು ಬಿಳುಪು ಕಾಗದದಲ್ಲಿ ಮುದ್ರಿತವಾಗಿರುವ ಈ ಸಂಪುಟಗಳ ಒಟ್ಟು ತೂಕ ಹತ್ತು ಕೇಜಿ! ಹಾಗಾಗಿಯೇ ಇದನ್ನು ಹೊರತಂದಿರುವ ಪ್ರೀತಿ ಪ್ರಕಾಶನದವರು ಇವನ್ನು ಹೊರಲು ಅನುಕೂಲವಾಗುವಂತೆ ಒಂದು ಭದ್ರವಾದ ಚೀಲವನ್ನೂ ಒದಗಿಸಿದ್ದಾರೆ! ನಿಜ, ಇವುಗಳ ಒಟ್ಟು ಬೆಲೆ ಏಳೂವರೆ ಸಾವಿರ ರೂಪಾಯಿಗಳು ಸಾಮಾನ್ಯ ಓದುಗನಿಗೆ ದುಬಾರಿ ಎನಿಸಿದರೂ, ಇದರ ಹಿಂದಿರುವ ಅಪೂರ್ವವೆನಿಸುವ ಶ್ರದ್ಧೆ, ಅಪಾರವೆನಿಸುವ ಶ್ರಮ, ಅಪರೂಪದ್ದೆನಿಸುವ ಆ ವಿಶಿಷ್ಟ ಪ್ರತಿಭೆ ಮತ್ತು ಖರ್ಚುವೆಚ್ಚಗಳ ದೃಷ್ಟಿಯಿಂದ ಉಚಿತವೇ ಆಗಿದೆ ಎನ್ನಿಸದಿರದು. ಈ ಸಂಪುಟಗಳ ಖರೀದಿ ಕನ್ನಡದ ಕೆಲಸವೇ ಆಗಿದ್ದು ಈ ಸಂಪುಟಗಳನ್ನು ಜನಸಾಮಾನ್ಯರಿಗೆ ತಲುಪಿಸುವ ಕೆಲಸ ಕನ್ನಡದ ಕೆಲಸವೇ ಆಗಿದ್ದು, ಸರ್ಕಾರ ಈ ಸಂಪುಟಗಳನ್ನು ಖರೀದಿಸಿ ತನ್ನ ಗ್ರಂಥಾಲಯಗಳಿಗೆ ಒದಗಿಸುವುದು ಅದರ ಕರ್ತವ್ಯವೇ ಆಗಿದೆ.

ಎಳೆಯ ಲೇಖಕಿಯೊಬ್ಬರ ಪ್ರಬುದ್ಧ ಬರವಣಿಗೆ

ಇತ್ತೀಚೆಗೆ ನಾನು ಓದಿದ ಪುಸ್ತಕಗಳಲ್ಲಿ ನನಗೆ ಬಹು ಮೆಚ್ಚುಗೆಯಾದ ಇನ್ನೊಂದು ಪುಸ್ತಕವೆಂದರೆ, ಯುವ ಬರಹಗಾರ್ತಿ ಕಾವ್ಯಾ ಕಡಮೆ ನಾಗರಕಟ್ಟೆ ಅವರ ಕಿರು ಕಾದಂಬರಿ 'ಪುನರಪಿ'. ಇಂದು ಬಹುಚರ್ಚಿತವಾಗುತ್ತಿರುವ, ಆದರೆ ನಮ್ಮ ಬಹಳಷ್ಟು ಬರಹಗಾರರು ಬರೆಯಲು ಹಿಂಜರಿಯುವ ಸಲಿಂಗ ದಾಂಪತ್ಯವನ್ನು ವಸ್ತುವಾಗಿರಿಸಿಕೊಂಡಿರುವ ಈ ಕೃತಿ ಎಷ್ಟು ಪ್ರಬುದ್ಧ ಶೈಲಿಯಲ್ಲಿ ಬರೆಯಲ್ಪಟ್ಟಿದೆ ಎಂದರೆ, ಈ ಕೃತಿಯನ್ನು ಓದಿದ ನಂತರ ಸಲಿಂಗ ದಾಂಪತ್ಯದ ಬಗ್ಗೆ ಮಾತನಾಡಲು ನಾವು ಪಡಬಹುದಾದ ಮುಜುಗರ ನಮ್ಮ ಮನಸ್ಸಿನೊಳಗಿನ ಸಮಸ್ಯೆಯೇ ಇರಬಹುದೆನ್ನಿಸತೊಡಗುತ್ತದೆ.

ಧಾರವಾಡದ ಇಬ್ಬರು ಸುಶಿಕ್ಷಿತ ಉದ್ಯೋಗಸ್ಥ ಹುಡುಗಿಯರು ತಮಗೇ ಗೊತ್ತಿಲ್ಲದಂತೆ ಪ್ರವೇಶಿಸುವ ಪರಸ್ಪರ ಲೈಂಗಿಕ ಆಕರ್ಷಣೆಯ ಲೋಕ, ಅದರ ಸುತ್ತಲೂ ಹೆಣೆದುಕೊಳ್ಳುವ ಇತರ ಪರಸ್ಪರ ಸಂಬಂಧಗಳ ವಿಶಾಲ ಲೋಕದ ನಡುವೆ ಎಷ್ಟು ಸ್ನಿಗ್ಧ ಸಹಜವಾಗಿ ಇಲ್ಲಿ ತಾಯಿಯ ಮಡಿಲಲ್ಲಿ ಮಲಗಿದ ಮಗುವಿನಂತೆ ಮಲಗಿದೆ ಎಂದರೆ, ಈ ಕಥನವನ್ನು ಕಟ್ಟಿರುವ ಪ್ರತಿಭೆ ಅಸಾಮಾನ್ಯವೆನ್ನಿಸಿಬಿಡುತ್ತದೆ. ಈ ಕೃತಿ ತನ್ನ ಸಂದರ್ಭದಲ್ಲಿನ ಸಲಿಂಗ ಕಾಮದ ಹುಟ್ಟನ್ನು ಗುರುತಿಸುವ ಬಗೆ ಮನೋ ವಿಜ್ಞಾನದ ಪಾಠಗಳನ್ನು ಸಾಹಿತ್ಯದ ಪಾಠಗಳಾಗಿ ಪರಿವರ್ತಿಸಿಬಿಡುವಷ್ಟು ಪರಿಣಾಮಕಾರಿಯಾಗಿವೆ. ಈ ಕಥನದ ಒಬ್ಬ ನಾಯಕಿಯಾದ ಆಸ್ಮಾಳ ಸ್ವಗತದಂತಿರುವ ಅಧ್ಯಾಯವೊಂದರ ರೂಕ್ಷತೆಯ ಹೊರತಾಗಿ ಮಿಕ್ಕಂತೆ ಕೃತಿಯ ಸಾಹಿತ್ಯಿಕ ಸಾಧನೆ

– ಸನ್ನಿವೇಶ ನಿರ್ಮಾಣ, ಪಾತ್ರ ಪೋಷಣೆ ಇತ್ಯಾದಿ–ಕಾವ್ಯಾ ಅವರ ವಯಸ್ಸಿಗೆ ಮೀರಿದ್ದು ಎನಿಸಿ, ಕನ್ನಡದ ಯುವ ಪ್ರತಿಭೆಗಳ ಬಗ್ಗೆ ಅಪಾರ ಮೆಚ್ಚುಗೆ ಮೂಡುತ್ತದೆ.

ಒಂದು ನುಡಿ ನಮನ

ಕಾವ್ಯಜೋಗಿ ಎಸ್. ಮಂಜುನಾಥ್

ನಮ್ಮ ಸಮಕಾಲೀನ ಕನ್ನಡ ಸಾಹಿತ್ಯ ಲೋಕ ಎಷ್ಟು ಶಿಥಿಲವಾಗಿದೆ ಎಂದರೆ, ಈ ಶಿಥಿಲತೆಗೆ ಕಾರಣವಾಗಿರುವ ಸಾಹಿತ್ಯೇತರ ಅಂಶಗಳನ್ನು ಗಮನಿಸಿದಾಗ ಈ ಸಾಹಿತ್ಯದ ಸಾವಯತೆಯೇ ಒಮ್ಮೊಮ್ಮೆ ಪ್ರಶ್ನಾರ್ಹವೆನಿಸಿಬಿಡುತ್ತದೆ. ಎಸ್. ಮಂಜುನಾಥ್ ಅಸುನೀಗಿದ ಜನವರಿ ೩೧ರ ಆ ಸಂಜೆ (ಅಂದು ವರಕವಿ ಬೇಂದ್ರೆಯವರ ಹುಟ್ಟು ಹಬ್ಬವೂ ಆಗಿದ್ದು ಎಂಥ ಸೋಜಿಗ!) ನಾನು ನನ್ನ ಹತ್ತಾರು ಸಾಹಿತ್ಯ ಮಿತ್ರರಿಗೆ 'ಸಮಕಾಲೀನ ಕನ್ನಡ ಕಾವ್ಯದ ಅತ್ಯುತ್ತಮ ಧ್ವನಿ ಇನ್ನಿಲ್ಲ' ಎಂಬ ಸಂದೇಶ ಕಳಿಸಿದೆ. ಕೆಲವೇ ಕ್ಷಣಗಳಲ್ಲಿ ನಮ್ಮ ಹಿರಿಯ ಸಾಹಿತಿ ಚಂಪಾರಿಂದ ಕರೆ ಬಂತು. ಅವರು ಕೇಳಿದ ಪ್ರಶ್ನೆ: 'ಈ ಎಸ್. ಮಂಜುನಾಥ್ ಯಾರು? ಎಲ್ಲಿಯವರು? ಅವರೇನು ಬರೆದಿದ್ದಾರೆ?'

ಇದು ಕನ್ನಡ ಸಾಹಿತ್ಯಲೋಕದ ಇಂದಿನ ದುರಂತ. ಮಂಜುನಾಥ್ ಬಲಿಯಾದದ್ದೂ ಇಂತಹ ದುರಂತದ ಒಂದು ಪರಿಣಾಮವೇ ಎಂದು ನಾನು ಭಾವಿಸಿದ್ದೇನೆ. ನಮ್ಮ ಪತ್ರಿಕೆಯ ಮಹಾ ಅಭಿಮಾನಿಯಾಗಿದ್ದ ಮಂಜುನಾಥ್ ಈ ಪತ್ರಿಕೆಗಾಗಿ ಹಲವು ಲೇಖನಗಳನ್ನು ಬರೆದು ಕೊಟ್ಟಿದ್ದನ್ನೂ, ಅವರ ಹಲವಾರು ಪದ್ಯಗಳು ಪತ್ರಿಕೆಯಲ್ಲಿ ಪ್ರಕಟವಾಗಿರುವುದನ್ನೂ ಓದುಗರು ಗಮನಿಸಿರಬಹುದು. ಅವರಿಗೆ ನಮ್ಮ ಪತ್ರಿಕೆಯ 'ನುಡಿ ನಮನ'ವಾಗಿ 'ದ ಹಿಂದೂ' ಗಾಗಿ ಆ ಪತ್ರಿಕೆಯವರ ಕೋರಿಕೆಯ ಮೇರೆಗೆ ಮಂಜುನಾಥ್ ಬಗ್ಗೆ ನಾನು ಬರೆದ ಒಂದು ಶ್ರದ್ಧಾಂಜಲಿ ಲೇಖನದ (ಅದು ಆ ಪತ್ರಿಕೆಯ ೧೦.೨.೨೦೧೭ರ 'ಫ್ರೈಡೇ ರಿವ್ಯೂ' ಪುರವಣಿಯಲ್ಲಿ ಪ್ರಕಟವಾಗಿದೆ) ಪೂರ್ಣ ಕನ್ನಡ ರೂಪವನ್ನು ಇಲ್ಲಿ ನೀಡುತ್ತಿದ್ದೇನೆ. –ಲೇ.

ಎಸ್. ಮಂಜುನಾಥ್‌ರೊಂದಿಗೆ ಒಮ್ಮೆ ಹೀಗೇ ಲೋಕಾಭಿರಾಮವಾಗಿ ಮಾತನಾಡುತ್ತಾ, ನಿಮ್ಮ ಕಾವ್ಯ ಶಿನ್‌ಜುನ ಮಾಂಸದಂಗಡಿ ಇದ್ದಂತೆ ಎಂದೆ. ಸ್ವಲ್ಪ ಗಾಬರಿಯಿಂದಲೂ, ಸ್ವಲ್ಪ ಕುತೂಹಲದಿಂದಲೂ ಅವರು 'ಹಾಗೆಂದರೇನು?' ಎಂದು ಪ್ರಶ್ನಿಸಿದರು. ನಾನು ಆಗ ತಾನೇ ಓದಿದ್ದ ಆ ಜೆನ್ ಕಥೆಯನ್ನು ಅವರಿಗೆ ಹೇಳಿದೆ. ಜೆನ್ ಗುರು ಶಿನ್‌ಜು ಒಂದು ಮಾಂಸದಂಗಡಿ ಇಟ್ಟಿದ್ದಾನೆ. ಗಿರಾಕಿಗಳು ಬಂದು ಒಳ್ಳೆಯ ಮಾಂಸ ಕೊಡು ಎಂದು ಕೇಳಿದಾಗಲೆಲ್ಲ ಆತ ನಿರ್ಲಿಪ್ತನಾಗಿ ಹೇಳುವುದು ಒಂದೇ ಮಾತು. 'ಇಲ್ಲಿರುವುದರಲ್ಲಿ ಯಾವುದನ್ನಾದರೂ ತೆಗೆದುಕೊಳ್ಳಿ. ಇಲ್ಲಿರುವುದೆಲ್ಲ ಒಳ್ಳೆಯದೇ!' ಮಂಜುನಾಥ್‌ರ ಮುಖ ಅರಳಿತು. ಅವರು ತಮ್ಮ ಕಾವ್ಯದ ಬಗ್ಗೆ ಎಷ್ಟೇ ವಿಶ್ವಾಸ ಮತ್ತು ಹೆಮ್ಮೆಗಳನ್ನು ಹೊಂದಿದ್ದರೂ ಅವರ ಒಳಗೊಂದು ನೋವು ಹಾವಿನಂತೆ ಸರಿದಾಡುತ್ತಿತ್ತು. ಅದು, ತಾನು ತುಂಬ ಒಳ್ಳೆಯ ಕಾವ್ಯವನ್ನೇ ಬರೆದಿದ್ದರೂ ಅದನ್ನು ಹಾಗೆ ಯಾರೂ ಗುರುತಿಸುತ್ತಿಲ್ಲ ಎಂಬ ನೋವು. ಹಾಗಾಗಿಯೋ ಏನೋ ಅವರು ಹೇಳಿದರು, ' ಅಲ್ಲಾ ನೀವು ನನ್ನ ಕಾವ್ಯದ ಬಗ್ಗೆ ತಕರಾರುಗಳನ್ನೂ ಮಾಡುತ್ತೀರಿ. ಹೀಗೂ ಹೇಳುತ್ತೀರಲ್ಲ?' ನಾನು ಹೇಳಿದೆ: 'ನಿಮ್ಮ ಅಂಗಡಿಯಲ್ಲಿರುವುದೆಲ್ಲ ಒಳ್ಳೆಯದೇ ಅಂದರೆ, ಬೇರೆ ಅಂಗಡಿಗಳಲ್ಲಿ ಅದಕ್ಕಿಂತ ಒಳ್ಳೆಯದಿಲ್ಲ ಅಂತಲ್ಲವಲ್ಲ? ಅಲ್ಲದೆ ನೀವು ಅತ್ಯುತ್ತಮವಾದದ್ದನ್ನು ಬರೆದುಬಿಟ್ಟಿದ್ದೀರಿ ಎಂದೂ ಅಲ್ಲವಲ್ಲ?' ತನ್ನ ಕಾವ್ಯದ ಬಗ್ಗೆ ಸದಾ ವಿಶ್ವಾಸ ಮತ್ತು ಹೆಮ್ಮೆಗಳನ್ನು ಹೊಂದಿದ್ದ ಮಂಜುನಾಥ್ ಏನೋ ಯೋಚಿಸಿ ಹೇಳಿದರು, 'ಹಾಗಾದರೆ ನೀವೇಕೆ ನನ್ನ ಕಾವ್ಯದ ಬಗ್ಗೆ ಒಂದು ಲೇಖನ ಬರೆಯಬಾರದು? ನನಗೂ ಸಹಾಯವಾದೀತು.'

ನಾನು ಹೇಳಿದೆ, 'ನಿಮಗೆ ಗೊತ್ತಿರಬಹುದು ಮಂಜುನಾಥ್, ನಾನು ವೃತ್ತಿಪರ ವಿಮರ್ಶಕನಲ್ಲ. ಈವರೆಗೆ ನಾನಾಗಿ ನಾನು ಯಾವ ಸಾಹಿತ್ಯ ವಿಮರ್ಶೆಯನ್ನೂ ಬರೆದಿಲ್ಲ. ಅವರಿವರು ನಿರ್ದಿಷ್ಟ ಸಂದರ್ಭಗಳಿಗಾಗಿ ಕೇಳಿದರೆಂದು ಮಾತ್ರ ಬರದಿರುವುದು. ಆಯಿತು ಈಗ ನೀವು ಕೇಳಿದಿರೆಂದು ಬರೆಯುವೆ. ಆದರೆ ಕೊನೆಯಲ್ಲಿ, ಮಂಜುನಾಥ್ ಕೇಳಿದರು ಎಂದಷ್ಟೇ ಇದನ್ನು ಬರೆದಿರುವೆ ಎಂದು ಹಾಕಬೇಕಾಗುತ್ತದೆ!' ಎಂದೆ. ಒಂದು ಕ್ಷಣ ತಡವರಿಸಿದ ಮಂಜುನಾಥ್, 'ಅಯ್ಯೋ! ಹಾಗೆ ಮಾತ್ರ ಮಾಡಬೇಡಿ' ಎಂದು ನಕ್ಕರು. ಮಹಾ ಸ್ವಾಭಿಮಾನಿ ಆತ.

ಆದರೆ ಅನತಿ ಕಾಲದಲ್ಲೇ ಮಂಜುನಾಥ್ ನನ್ನನ್ನು ತಮ್ಮ ಬಲೆಗೆ ಕೆಡವಿಕೊಂಡರು. ೨೦೦೫ರಲ್ಲಿ ಪ್ರಕಟವಾದ ಅವರ ಕವನ ಸಂಕಲನ 'ಕಲ್ಲ ಪಾರಿವಾಳಗಳ ಬೇಟ'ದ ಬಿಡುಗಡೆ ಸಮಾರಂಭವನ್ನು ತಮ್ಮೂರು ಕೆ.ಆರ್. ನಗರದಲ್ಲಿ ಏರ್ಪಡಿಸಿದ್ದ ಅವರು ಅದರ ಆಹ್ವಾನ ಪತ್ರಿಕೆಯಲ್ಲಿ ಅಧ್ಯಕ್ಷತೆ ನನ್ನದೆಂದು ಅಚ್ಚು ಹಾಕಿಸಿ ಆಹ್ವಾನಿಸಿದರು. ಸ್ನೇಹಕ್ಕೆ ಕಟ್ಟು ಬಿದ್ದು ನಾನು ಹೋದೆ. ಪುಸ್ತಕ ಬಿಡುಗಡೆಗೆ ಜಯಂತ್ ಕಾಯ್ಕಿಣಿ ಬಂದಿದ್ದ ನೆನಪು. ಅಂದು ಕೂಡ ನಾನು ಹೇಳಿದ್ದು ನನ್ನ ಅದೇ ಮಾತುಗಳನ್ನೇ. ಆದರೆ ಬೇರೆ ನುಡಿಗಟ್ಟಿನಲ್ಲಿ. ನಾನು ಹೇಳಿದ್ದಿಷ್ಟು: 'ಮಂಜುನಾಥ್ ನಮ್ಮ ನಡುವಿನ ಅಪರೂಪದ ಅಪ್ಪಟ ಕವಿ. ಅವರ ಮನಸ್ಸಿನಲ್ಲಿ ಕವಿತೆ ಬಿಟ್ಟು ಇನ್ನೇನೂ ಹುಟ್ಟದ

ಸ್ಥಿತಿಯನ್ನು ಅವರು ತಲುಪಿದ್ದಾರೆ. ನೀವು ಕುವೆಂಪು ಅವರ ಕಾವ್ಯರಾಶಿಯಲ್ಲಿ ಹತ್ತಾರು ಹುಸಿ ಕವನಗಳನ್ನು ಹುಡುಕಬಹುದು. ಹಾಗೇ ಬೇಂದ್ರೆ ಕಾವ್ಯ ರಾಶಿಯಲ್ಲೂ ನಾಲ್ಕಾರು ಹುಸಿ ಕವನಗಗಳು ಕಂಡಾವು. ಆದರೆ ಮಂಜುನಾಥ್ ಬರೆದುದರಲ್ಲಿ ಒಂದೂ ಹುಸಿ ರಚನೆಯೆಂಬುದಿಲ್ಲ. ಪ್ರಯತ್ನದಲ್ಲಿ ಕೆಲವು ಸೋತಿರಬಹುದು; ಕೆಲವು ಗೆದ್ದಿರಬಹುದು. ಆದರೆ ಯಾವುವೂ ಕವನದ ಹೊರತಾಗಿ ಇನ್ನೇನೂ ಆಗಲು ಹೊರಟಂತೆ ಕಾಣುವುದಿಲ್ಲ'

ಇದು ಕೆಲವರಿಗೆ ತುಂಬ ದುಸ್ಸಾಹಸದ ಮಾತಾಗಿ ಕಂಡಿದ್ದು ನಿಜ. ಆದರೆ ನಾನು ಮಂಜುನಾಥರ ಆವರೆಗಿನ ಸುಮಾರು ಇಪ್ಪತ್ತು ವರ್ಷಗಳ ಕಾವ್ಯ ತಪಸ್ಸನ್ನು ತುಂಬ ಹತ್ತಿರದಿಂದ ಕಂಡಿದ್ದೆ. **'ಎಲ್ಲವನ್ನೂ ಮುಟ್ಟಿ ಜುಮ್ಮೆನಿಸಿಕೊಂಡು/ ಎಲ್ಲವೂ ತಾನೇ ಆಗಿ ನಕ್ಕು ಕಂಡು / ಜಗದ ನೆದರೇ ಇಲ್ಲದ ಉಡಾಳ ಹುಡುಗನ ಹಾಗೆ / ನಡೆದು ಹೋಗುತ್ತಿದೆ ಸೀಟಿ ಹಾಕಿಕೊಂಡು'** ಎಂದು ತಮ್ಮ ಅಂದಿನ ಕವಿತೆಯನ್ನು ತಾವೇ ವರ್ಣಿಸಿಕೊಳ್ಳಬಲ್ಲಷ್ಟು ಆತ್ಮವಿಶ್ವಾಸವನ್ನು ಅವರಿಗೆ ನೀಡಿದ್ದ ಹಲವು ಕವಿತೆಗಳನ್ನು ಹೊತ್ತಿದ್ದ ಈ ಐದನೇ ಕವನ ಸಂಕಲನದ ಮುನ್ನ ಅವರು 'ಸುಮ್ಮನಿರುವ ಸುಮ್ಮಾನ' ಹೆಸರಿನಲ್ಲಿ ತಾವೋ ಕವಿತೆಗಳನ್ನು ಅನುವಾದಿಸಿ, ನಂತರ 'ಬಾಹುಬಲಿ', 'ನಂದ ಬಟ್ಟಲು' ಹಾಗೂ 'ಮೌನದ ಮಣಿ' ಎಂಬ ಕವನ ಸಂಕಲನಗಳ ಮೂಲಕ ಸಾಕಷ್ಟು ಪ್ರಯೋಗಗಳನ್ನು ಮಾಡಿದ್ದರು. ಮೇಲೆ ಉಲ್ಲೇಖಿಸಿದ ಅವರ ಕವಿತೆಯೇ ಸೂಚಿಸುವಂತೆ, ಜಗತ್ತನ್ನು ಇಡಿಯಾಗಿ ಗ್ರಹಿಸಿ, ಮುಟ್ಟುವ, ರೋಮಾಂಚನಗೊಳ್ಳುವ ಕಾವ್ಯ ಸಿದ್ಧಿಯನ್ನು ಅವರು ಪಡೆದಿದ್ದರು. ಅವರು ಯಾವಾಗಲೂ ಪ್ರತಿಪಾದಿಸುತ್ತಿದ್ದ, 'ತಾನು ಬಳಸುವ ಭಾಷೆಯನ್ನು ಮತ್ತು ತಾನು ಮುಟ್ಟ ಬಯಸುವ ಮನಸ್ಸನ್ನು ಕಿಂಚಿತ್ತಾದರೂ ಹಿಗ್ಗಿಸದ್ದನ್ನು ಕವಿತೆ ಎಂದು ಕರೆಯಲಾಗದು' ಎಂಬ ಮಾತಿಗೆ ಹಲವು ಸ್ತರಗಳ ಪ್ರಾತ್ಯಕ್ಷಿಕೆಗಳಂತಿದ್ದವು ಅವರ ಕವನಗಳು ಈಗ. ಅವರ ಈ ಬೆಳವಣಿಗೆಗೆ ನಾನು ಪ್ರತ್ಯಕ್ಷ ಸಾಕ್ಷಿಯಾಗಿದ್ದೆ.

* * *

ನಾನು ಮತ್ತು ಮಂಜುನಾಥ್ ಮುವ್ವತ್ತು ವರ್ಷಗಳ ಗೆಳೆಯರು. ಅವರು ನನಗಿಂತ ಎಂಟು ವರ್ಷ ಚಿಕ್ಕವರು. ಆದರೆ ನಾನಾಗಲೀ ಅವರಾಗಲೀ ಎಂದಾದರೂ ಈ ವಯಸ್ಸಿನ ಅಂತರದಲ್ಲಿ ಮಾತಾಡಿದ ನೆನಪು ನನಗಿಲ್ಲ. ಏಕೆಂದರೆ ನಾವು ಸೇರಿದಾಗಲೆಲ್ಲ ಬಹುಪಾಲು ಮಾತನಾಡುತ್ತಿದ್ದುದು ಸಾಹಿತ್ಯದ ಬಗ್ಗೆಯೇ; ನಿರ್ದಿಷ್ಟವಾಗಿ ಕಾವ್ಯದ ಬಗ್ಗೆಯೇ. ನಾನು ವಯಸ್ಸಿನಲ್ಲಿ ಹಿರಿಯನಾದರೂ, ಕಾವ್ಯ ಕುರಿತ ಅವರ ಶ್ರದ್ಧೆ, ಪರಿಶ್ರಮ, ಅರಿವು ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಬದ್ಧತೆ ನನ್ನಲ್ಲಿ ಅವರ ಬಗ್ಗೆ ಗೌರವಪೂರ್ಣ ಪ್ರೀತಿ ಹುಟ್ಟಿಸಿತ್ತು. ಹಾಗೇ ನನ್ನ ಬಗ್ಗೆಯೂ ಅವರಿಗೆ ವಿಶೇಷ ಪ್ರೀತಿ-ಅದರಗಳಿದ್ದಂತಿತ್ತು. ಅವರಿನ್ನೂ ತಮ್ಮ ಮೊದಲ ಕವನ ಸಂಕಲನ 'ಹಕ್ಕಿ ಪಲ್ಟಿ' ಪ್ರಕಟಿಸಿದ್ದಾಗ ಅವರನ್ನು ನಾನು ೧೯೮೭ರಲ್ಲಿ ಮಹಾ ಘಟಾನುಘಟಿಗಳೊಂದಿಗೆ-

ಎಚ್. ಎಸ್. ಶಿವಪ್ರಕಾಶ್, ಸುಬ್ರಾಯ ಚೊಕ್ಕಾಡಿ, ಸ. ಉಷಾ, ಎಚ್. ಗೋವಿಂದಯ್ಯ ಮುಂತಾದವರೊಂದಿಗೆ–ಮಂಗಳೂರು ಆಕಾಶವಾಣಿಯ ರಾಜ್ಯೋತ್ಸವ ಕವಿಗೋಷ್ಠಿಗೆ ಆಹ್ವಾನಿಸಿದ್ದೆ. (ಇದಕ್ಕಾಗಿ ಮಂಜುನಾಥ್‌ರ ಹೆಸರಿಗೆ ನನ್ನ ಮೇಲಧಿಕಾರಿಗಳಿಂದ ಅನುಮೋದನೆ ಪಡೆಯಲು ಪಟ್ಟ ಪಾಡಿನ ಕಥೆ ಬೇರೆಯೇ ಇದೆ!) ಆಗ ನಾನು ಅಲ್ಲಿ ಸಾಹಿತ್ಯ ವಿಭಾಗದ ಕಾರ್ಯಕ್ರಮ ನಿರ್ವಾಹಕನಾಗಿದ್ದೆ. ಅವರ 'ಹಕ್ಕಿ ಪಲ್ಟಿ'ಯ ಬಹಳ ಪದ್ಯಗಳು ನಡೆಯಲು ಕಲಿಯುವ ಮಗುವೊಂದರ ತಿಪ್ಪ ತಿಪ್ಪ ಹೆಜ್ಜೆಗಳಂತಿದ್ದರೂ, ಅಲ್ಲಿ ಕನ್ನಡ ಕಾವ್ಯಕ್ಕೆ ಹೊಸ ಸಂವೇದನೆಯೊಂದನ್ನು ನೀಡಬಲ್ಲ 'ಅಸಲಿಯತ್ತಿನ' ಕವಿಯೊಬ್ಬನನ್ನು ನಾನು ಗುರುತಿಸಿದ್ದೆ. 'ಹಕ್ಕಿ ಪಲ್ಟಿ' ಪದ್ಯದ '**...ಮರುಕ್ಷಣ ಈ ಪ್ರಶ್ನೆ: ಏನಾದರೂ ಆಗಬೇಕೇಕೆ / ಹಕ್ಕಿಪಲ್ಟಿಯಂಥ ಘಟನೆಗಳ ಗಮನಿಸಲು ಶಕ್ಯವಿದ್ದರೆ ಸಾಲದೆ / ಇನ್ನುಳಿದಂತೆ ನಾವು ಆಗಲೆಳೆಸುವುದೆಲ್ಲ ಜಗಮೆಚ್ಚುಗೆಗಲ್ಲವೆ?**' ಎಂಬ ಸಾಲುಗಳು ನನ್ನನ್ನು ಹಿಡಿದು ನಿಲ್ಲಿಸಿದ್ದವು. ಇಲ್ಲಿನ ತನ್ನನ್ನು ತಾನು ಹೊಸದಾಗಿ ನೋಡಿಕೊಳ್ಳುವ ಪರಿ ಮತ್ತು ಧೈರ್ಯ ಬೆರಗು ಹುಟ್ಟಿಸಿತ್ತು. ಮತ್ತು ಕವನ ಸಂಕಲನಕ್ಕೆ ಈ ಪದ್ಯದ ಶೀರ್ಷಿಕೆಯನ್ನು ಕೊಡುವಲ್ಲಿ ಕೆಲಸ ಮಾಡಿದ ಅವರ ಕವಿಮನಸ್ಸಿನ ಸ್ವರೂಪವೂ ನನ್ನಲ್ಲಿ ಕುತೂಹಲ ಹುಟ್ಟಿಸಿತ್ತು. ಈ ಬಗ್ಗೆ ನನಗೆ ಈಗಲೂ ಹೆಮ್ಮೆ ಇದೆ.

ಅಂದು ಕವಿಗೋಷ್ಠಿಯ ನಂತರ ಗೋಷ್ಠಿಯ ಕೆಲವು ಕವಿಗಳು ಮತ್ತು ನನ್ನ ಇತರ ಕೆಲವು ಗೆಳೆಯರೂ ಸೇರಿ ನಡೆಸಿದ 'ಭೋಜನ ಕೂಟ'ದ ಮಾತುಕತೆಯಲ್ಲಿ ಅವರಾಡಿದ ಈ ಒಂದು ಮಾತು ನನ್ನನ್ನು ಸೆಳೆಯಿತು. 'ಕಾವ್ಯಕ್ಕೆ ಕಾವ್ಯವಾಗುವ ಗುರಿ (function) ಬಿಟ್ಟರೆ ಬೇರೆ ಗುರಿ ಇಲ್ಲ; ಇರಬಾರದು'. ಅದು 'ಬಂಡಾಯ'ದ ಉಬ್ಬರದ ಕಾಲ. ಕಾವ್ಯಕ್ಕೆ ಸಾಮಾಜಿಕ ಕಳಕಳಿ ಮುಖ್ಯ, ಅದು ಜನಪರವಾಗಿರಬೇಕು, ಜೀವಪರವಾಗಿರಬೇಕು ಇತ್ಯಾದಿ ಘೋಷಣೆಗಳೂ, ನಂಬಿಕೆಗಳೂ, ಒತ್ತಾಯಗಳೂ ಪ್ರಚಲಿತವಾಗಿದ್ದ ಕಾಲ. ಈ ಪ್ರವಾಹದ ವಿರುದ್ಧ ಸೆಟೆದು ಈಜಬಯಸುವ ಈ ಕಿರಿಯನ ಕಾವ್ಯಬದ್ಧತೆ ನನ್ನನ್ನು ಸೆಳೆಯಿತು. ನಾನವರಿಗೆ ಹೇಳಿದ್ದೆ: 'ನೀವು ಪ್ರವಾಹದ ವಿರುದ್ಧ ಈಸಿ ಜಯಿಸಬೇಕಾದರೆ, ಮೊದಲು ನಿಮ್ಮ ಕಾವ್ಯ ನವ್ಯದ ಜಟಿಲತೆಗಳನ್ನು ಬಿಟ್ಟು ಹೊರಬರಬೇಕಿದೆ.' ಏಕೆಂದರೆ ಆವರೆಗಿನ ಅವರ ಕವಿತೆಗಳ ಭಾಷೆ ಒಡೆದು ಹೋದಂತಿದ್ದು, ಅವರ ಲೋಕ ಗ್ರಹಿಕೆಯ ಪ್ರಕ್ರಿಯೆಯಲ್ಲಿ ಕೆಲವು ಕಂದಕಗಳು ಕಾಣುತ್ತಿದ್ದವು. ಇದರ ಫಲವಾಗಿ ಅವರ ಹಲವು ಕವನಗಳನ್ನು ಅವಿಶದತೆ ಆವರಿಸಿದಂತಿತ್ತು.

ಅಂದು ನನ್ನ ಆ ಮಾತಿಗೆ ಅರ್ಧ ಸಮ್ಮತಿಯ ತಲೆಯಾಡಿಸಿದ್ದ ಮಂಜುನಾಥ್‌ಗೆ ನಂತರದ ದಿನಗಳಲ್ಲಿ ಅದು ಪೂರ್ತಿ ಮನವರಿಕೆಯಾದಂತೆ (ಅದನ್ನು ಅವರು ನಂತರದ ತಮ್ಮ 'ಬಾಹುಬಲಿ' ಸಂಕಲನದ ಮುನ್ನುಡಿಯಲ್ಲಿ ಬರೆದುಕೊಂಡಿದ್ದಾರೆ) ತಮ್ಮ ಕಾವ್ಯ ಗುರುವನ್ನು ಬದಲಾಯಿಸಿಕೊಂಡರು. ಯು. ಆರ್ ಅನಂತಮೂರ್ತಿಯವರನ್ನು ಬಿಟ್ಟು ಪು.ತಿ.ನ. ಬಳಿಗೆ ಹೋದರು. (ನಂತರ ಇದನ್ನು ಅವರು ನನ್ನ ಬಳಿ ತೋಡಿಕೊಂಡಿದ್ದು ಹೀಗೆ: 'ಅಲ್ಲಾ ನೋಡಿ ನಾಗಭೂಷಣ್ ಈ ನವ್ಯದವರ ಸಣ್ಣತನ. ಅನಂತಮೂರ್ತಿ ಎಂದೂ ನನಗೆ, ನೋಡಯ್ಯಾ

ಮೈಸೂರಿನಲ್ಲಿ ಕುವೆಂಪು, ಪುತಿನರಂತಹ ದೊಡ್ಡ ಕವಿಗಳಿದ್ದಾರೆ. ಅವರನ್ನೂ ನೋಡಿ ಮಾತಾಡಿಸಿಕೊಂಡು ಬಾ ಅಂತ ಎಂದೂ ಹೇಳಲಿಲ್ಲ!') ಪು.ತಿ.ನ., ಅವರಿಗೆ 'ದೇಶೀಯತೆ, ಪ್ರಸನ್ನತೆ ಮತ್ತು ವಿಶದತೆ' ಎಂಬ ಕಾವ್ಯ ಕುರಿತ ಅವರ ಮೂರು ಮುಖ್ಯ ಪಾಠಗಳನ್ನು ಹೇಳಿದರು. ಅದರ ಪರಿಣಾಮಗಳನ್ನು ನಾವು ಅವರ ಮುಂದಿನ ಸಂಕಲನಗಳಲ್ಲಿ ಮಸುಕುಮಸುಕಾಗಿಯಾದರೂ ಕಾಣಬಹುದು. ಜೊತೆಗೆ *ತಾವೋ* ಪದ್ಯಗಳ ಅನುವಾದದ ಮೂಲಕ ಗಳಿಸಿದ ಹೊಸ ಲೋಕದೃಷ್ಟಿ ಮತ್ತು ಭಾಷಾ ಕೌಶಲ್ಯವನ್ನೂ. ಆ ಮೂಲಕ ಅವರು ವಿಶೇಷವಾಗಿ ಮನಗಂಡದ್ದು, ಈ ಭೂಮಿಯೇ ಆಕಾಶವನ್ನು ಸೃಷ್ಟಿಸಿರುವುದು ಎಂಬ ಸತ್ಯವನ್ನು. ಹಾಗಾಗಿಯೇ 'ಬಾಹುಬಲಿ' ಸಂಕಲನದ 'ಸೇಬು' ಎಂಬ ಕವನದ ಅವರ **'ಅವಳನ್ನೂ ಅವಳ ಹಲ್ಲನ್ನೂ / ನಾಲಗೆ ಎಂಜಲನ್ನೂ ದೇವರೇ ಮಾಡಿದ \ ದುಂಡಗೆ ಫಳ ಫಳ ಹೊಳೆವ \ ರಸಭರಿತ ಕೆಂಪು ಫಲ / ಈ ಸೇಬನ್ನೂ / ಆದರೂ ದೇವರು ಮಾಡಿದ ಹಣ್ಣಿಗೆ ಬೆಲೆಯಿಲ್ಲ / ಅವಳು ಕಚ್ಚಿದ ಸೇಬಿಗೆ ಸಾಟಿಯಿಲ್ಲ'** ಎಂಬ ಹಾಗೂ 'ನಂದಬಟ್ಟಲು' ಸಂಕಲನದ 'ವಸ್ತು' ಕವನದ **'ವಸ್ತುಗಳ ಜೀವ ಯಾರಿಗೆ ಕಾಣುವುದು? / ಬಲ್ಲವರು ಕಣ್ಣಲ್ಲಿ ಅದ ಭೋಗಿಸುವರು / ಅವರು ಕಣ್ಣು ಹೊರಳಿಸಲು ಬೇಸರಗೊಂಡಪ್ಸರೆಯರು / ಮರಳಿ ನಮ್ಮ ಪಾಲಿಗೆ ವಸ್ತುಗಳಾಗುವರು'** ಎಂಬ ಲೌಕಿಕ-ಅಲೌಕಿಗಳನ್ನು ಏಕತ್ರಗೊಳಿಸುವ ಅದ್ಭುತ ಸಾಲುಗಳು ಸೃಷ್ಟಿಯಾದದ್ದು.

ಹೀಗೆ **'ಮಾತು ಮಂತ್ರ ಕವಿತೆಯೆಂಬೆಲ್ಲ ಕರಣಗಳಿಂದ / ನಿನ್ನಾಕೃತಿಯ ತಡವಲು ಹವಣಿಸುತ್ತಿರುವ / ಮೂಕ ಮಕ್ಕಳು ನಾವು -ನುಡಿಯೇ / ನಿನ್ನ ಸುಳಿವೆಂತು ದೊರಕೀತು ನಮಗೆ?'** ಎಂದು ಆರ್ತಿಸುತ್ತಾ ಕಾವ್ಯವನ್ನು ಅದರ ಇಡಿತನದಲ್ಲಿ ಪಡೆಯಲು ಹವಣಿಸಿದ ಮಂಜುನಾಥ್, ಆ ಸುಮಾರು ಇಪ್ಪತ್ತು ವರ್ಷಗಳಲ್ಲಿ ಕಾವ್ಯಜೋಗಿಯಂತೆ ತಮ್ಮ ಕವನಗಳನ್ನು ಕೇಳಬಯಸುವವವರ ಮನ-ಮನೆಗಳಿಗೆಲ್ಲ ತಿರುಗಿದರು. ನಾವಿದ್ದೆಡೆಯಲ್ಲೆಲ್ಲ ಬಂದು ದಿನಗಟ್ಟಲೆ ಠಿಕಾಣಿ ಹೂಡಿ ದಣಿವರಿಯದೆ ಕವಿತೆಗಳನ್ನು ಓದುತ್ತಿದ್ದರು. ಹೋದ ಮನೆಗಳ ಮಕ್ಕಳನ್ನೂ ಬಿಡದೆ ಕವಿತೆ ಹಂಚುತ್ತಿದ್ದರು. (ಅವರ 'ಬಾಹುಬಲಿ' ಮತ್ತು 'ನಂದಬಟ್ಟಲು'ಗಳಲ್ಲಿ ಮಕ್ಕಳನ್ನುದ್ದೇಶಿಸಿ ಬರೆದ ಕವಿತೆಗಳು ಇವೆ) ಆಗಲೇ ಅವರು **'ಸಂತಸದಲ್ಲಿರುವ ಮನುಷ್ಯನತ್ತ / ಬಿಡದೆ ಮುಗುಳ್ನಗಬೇಕು/ ಹಾಡಿಗಾಗಿ ಹಾತೊರೆದವನ /ಬಳಿ ಹೋಗಿ ಹಾಡಬೇಕು / ಕವಿತೆಗಾಗಿ ಹಸಿದವನ ಬಾಗಿಲ / ನಡುರಾತ್ರಿಯಲ್ಲಿ ತಟ್ಟಬೇಕು'** ಎಂದು ಬರೆದದ್ದು. ('ಕಲ್ಲ ಪಾರಿವಾಳಗಳ ಬೇಟ')

ಎಂಥ ಹುಚ್ಚಿದು! ಆಗಲೇ ನಾವು 'ಮಂಜುನಾಥ್ ತಿಂದುಂಡು ಹಾಸಿ ಹೊದೆಯುವುದೆಲ್ಲ ಕಾವ್ಯವನ್ನೇ!' ಎಂದು ಹಾಸ್ಯ ಮಾಡುತ್ತಿದ್ದುದು. ಆದರೆ ಈ ಹುಚ್ಚು ಒಮ್ಮೊಮ್ಮೆ ಮೇರೆ ಮೀರುತ್ತಿತ್ತು. ಅದು ಅವರ ತಮ್ಮ ಕವಿತೆಗಳನ್ನು ಓದಿ ಸುಮ್ಮನಾಗದೆ ತಮ್ಮದೇ ಕಾವ್ಯ ಮೀಮಾಂಸೆಯ ಬಗ್ಗೆ ಗಂಟೆಗಟ್ಟಲೆ ಕೊರೆಯಲು. ಶುರುಮಾಡಿದಾಗ. ಅದು ಹಲವರಿಗೆ ಅವರ ಕಾವ್ಯದ ಸಮರ್ಥನೆಯಂತೆಯೂ

ಕೇಳಿಸತೊಡಗಿತ್ತು. ಅದಕ್ಕೆ ಕಾರಣವೂ ಇತ್ತು. ನಾನು ನನ್ನ ಈ ಲೇಖನದ ಆರಂಭದಲ್ಲಿ ಸೂಚಿಸಿದಂತೆ, ತಮ್ಮ ಕಾವ್ಯವನ್ನು, ಅದರ ಅನನ್ಯತೆಯನ್ನು ಯಾರೂ ಗುರುತಿಸುತ್ತಿಲ್ಲ ಎಂಬ ನೋವು ಅವರನ್ನು ತೀವ್ರವಾಗಿ ಕಾಡತೊಡಗಿತ್ತು. ಸಹಜವಾಗಿಯೇ ಅವರ ಕವನಗಳನ್ನು ಮೆಚ್ಚಿ, ಪ್ರೋತ್ಸಾಹಿಸಿ, ತಮ್ಮ ಪತ್ರಿಕೆಯಲ್ಲಿ ವೇದಿಕೆ ಒದಗಿಸಿ ಅವರಲ್ಲಿ ಹೆಮ್ಮೆ (ಮತ್ತು ಸ್ವಲ್ಪ ಹಮ್ಮೂ) ಹುಟ್ಟಿಸಿದ್ದ ಪಿ. ಲಂಕೇಶ್‌ರ ಹಠಾತ್ ನಿಧನ ಅವರನ್ನು ಕಂಗೆಡಿಸಿತ್ತು. ಅವರಿಗೆ ಕಾವ್ಯಕ್ಷೇತ್ರದ ಯಾವ ಸಾರ್ವಜನಿಕ ಮಾನ್ಯತೆಗಳೂ–ಸಾಂಸ್ಕೃತಿಕ ಉತ್ಸವಗಳ ಅಥವಾ ಅಕಾಡೆಮಿಗಳ ಕವಿ ಗೋಷ್ಠಿಗಳಾಗಲೀ, ಪುರಸ್ಕಾರಗಳಾಗಲೀ– ಸಿಕ್ಕಿರಲಿಲ್ಲ. ದೊರೆತ ಏಕೈಕ ಮಾನ್ಯತೆಯಾಗಿದ್ದ ಪುತಿನ ಪ್ರಶಸ್ತಿಯನ್ನೂ ಇನ್ನೋರ್ವ ಕವಿಯೊಂದಿಗೆ ಹಂಚಿ ಕೊಡಲಾಗಿತ್ತು. ಇದಕ್ಕೆಲ್ಲ ಮುಖ್ಯ ಕಾರಣ, ಕಾವ್ಯ ಎಂದರೇನು ಎಂಬ ಪ್ರಶ್ನೆ ಕುರಿತ ಅವರ ವ್ರತನಿಷ್ಠೆಯ ಕಟುನಿಷ್ಠುರ ಎಂಬಂತಹ ನಿಲುವು. ಈ ವ್ರತನಿಷ್ಠೆ ಒಮ್ಮೊಮ್ಮೆ ಮಾತಿನ 'ಹದ' ತಪ್ಪಿ ದೊಡ್ಡವರ (ಉದಾ: ಕುವೆಂಪು) ಕಾವ್ಯವನ್ನೂ ಎದುರು ಹಾಕಿಕೊಂಡು ಮಂಜುನಾಥ್ ಅನುಚಿತವಾಗಿ ಸಾಹಿತ್ಯ ಕ್ಷೇತ್ರದ ಸಾಮಾಜಿಕ ನ್ಯಾಯವಾದಿಗಳ ಬಹಿಷ್ಕಾರಕ್ಕೂ ಒಳಗಾದದ್ದುಂಟು. ಮಂಜುನಾಥ್‌ಗೆ ಸ್ಥಳೀಯವಾದ ಕಾವ್ಯ ರಸಿಕ ಗೆಳೆಯರ ಒಂದು ಸಣ್ಣ ಗುಂಪಿನ ಅಭಯವಿತ್ತಾದರೂ ಒಳ್ಳೆಯದನ್ನು ಬರೆದವನ ಸಹಜ ದೊಡ್ಡ ನಿರೀಕ್ಷೆಗಳೂ ಅವರಲ್ಲಿದ್ದವು. ಅವರೂ ಉಪ್ಪು ಹುಳಿ ಖಾರ ಉಣುವ ಹುಲು ಮಾನವರೇ ತಾನೆ? ಆದರೆ ಸಾಹಿತ್ಯ ಕ್ಷೇತ್ರದ ಪಾರುಪತ್ತೇದಾರರ ಕೆಟ್ಟ ಕಣ್ಣು ಅವರ ಮೇಲೆ ಬಿದ್ದಂತಿತ್ತು. ಅದರಿಂದ ಅವರು ಹಲವು ಬಾರಿ 'ಖಿನ್ನತೆ'ಗೆ ಜಾರುತ್ತಿದುದನ್ನು ನಾನು ಬಲ್ಲೆ.

ಈ ಸಂದರ್ಭದಲ್ಲೇ, ಅವರ ಕಾವ್ಯದ ನಿರ್ಣಾಯಕ ಸಾಲುಗಳೆಂದು ಇತ್ತೀಚೆಗೆ ಕೆಲವರು ಉಲ್ಲೇಖಿಸುವ 'ಭಕ್ತಿ' ಎಂಬ ಕವನದ **'ಮಾನಿನಿಯ ಮೊಲೆ ಹಿಡಿದ ಹಸ್ತಗಳಿಂದ / ನಿನ್ನ ಅಡಿ ಮುಟ್ಟಿರುವೆ / ಆ ಪುಲಕ ನಿನ್ನಡಿಯ ಮಿಡುಕಿಸಲಿ'** ಮುಂತಾದ ಸಾಲುಗಳು ಅವರಿಂದ ಹೊರಬಂದುದು. ಇವು ನನ್ನ ಪ್ರಕಾರ ಮಂಜುನಾಥ್‌ರ ನಿಜ ಸಾಲುಗಳಲ್ಲ. ಅವರೆಂದೂ ಇಷ್ಟು ಒರಟಾದ ಸಾಲುಗಳನ್ನು ಬರೆಯುವವರಲ್ಲ. (ನನ್ನ ಕವಿಪತ್ನಿ ಸವಿತಾ ಪ್ರಕಾರ ಮಂಜುನಾಥ್ ನಮ್ಮ ಮನೆಗೆ ಬಂದಿದ್ದಾಗ ಅವಳ 'ದೇವರಿಗೆ' ಪದ್ಯವನ್ನೋದಿ ಅದರಿಂದ ಸ್ಫೂರ್ತಿಗೊಂಡು ಆ ಪದ್ಯವನ್ನು ಊರಿಗೆ ಹೋಗಿ ಈ 'ಹೊಸ' ರೀತಿಯಲ್ಲಿ ಬರೆದದ್ದು.) ನನ್ನ ಊಹೆಯ ಪ್ರಕಾರ ಅವರು ಈ ಸಾಲುಗಳನ್ನು ಬರೆದದ್ದು ಕನ್ನಡ ಕಾವ್ಯ ಕ್ಷೇತ್ರದ 'ಪ್ರತಿಷ್ಠಿತ'ರನ್ನು ಮೆಚ್ಚಿಸಲು; ಎಚ್ಚರಿಸಲು! ಸಹಜವಾಗಿಯೇ ಅವರೆಲ್ಲರೂ ಆ ಸಾಲುಗಳನ್ನೋದಿ 'ಪುಲಕ'ಗೊಂಡರು. ಅದರ ಬಗ್ಗೆ, ಅವರ ಬಗ್ಗೆ ತಂತಮ್ಮ 'ಗುಂಪು'ಗಳಲ್ಲಿ ಮಾತಾಡಿಕೊಂಡರು, ಅಲ್ಲಿಲ್ಲಿ ನಾಲ್ಕು ಸಾಲು ಬರೆದರು ಕೂಡ. ಆಗಲೇ ಮಂಜುನಾಥ್‌ಗೆ ಬೆಂಗಳೂರಿನ ಪ್ರಕಾಶಕರೂ ಸಿಕ್ಕಿದ್ದು! ಅವರೆಲ್ಲ ಕವಿಯನ್ನು ಸ್ವಲ್ಪಕಾಲ ಮೆರೆಸಿ, ನಂತರ ಇಂತಹುದೇ ಇನ್ನಿತರ ಕೆಲಸಗಳ ಮಧ್ಯೆ ಮರೆತರು. ಆಗಲೇ ಸ್ವಲ್ಪ ಕಾಲ ಮಂಜುನಾಥ್ ನಮ್ಮಿಂದ ಮರೆಯಾಗಿ ಬೆಂಗಳೂರಿನ ತಾರಾ ಲೇಖಕರ ಬಿಸಿ ಸಹವಾಸದಲ್ಲಿ ಮೈಮರೆತಿದ್ದುದು!

ಎಚ್ಚರವಾದೊನೆ ಅದೆಲ್ಲ ಕನಸೆಂಬಂತೆ ಅವರು ತಮ್ಮೂರು ಕೆ.ಆರ್. ನಗರಕ್ಕೆ ವಾಪಸ್ ಬಂದರು. ತಮ್ಮನ್ನು ತಾವು ಮತ್ತೆ ಹುಡುಕಿಕೊಳ್ಳುವಂತೆ '**ಬೆಟ್ಟ ಬಳಿಗೆ ಬಂದಂತಿರುವ / ಹೊಳೆ ಸಾಗಿ ಅದನು ಮುಟ್ಟಿದಂತಿರುವ / ಪೊದೆಗಳೆಲ್ಲವೂ ಮಣಿಯನೆಣಿಸುವ / ತೋಪಿನ ಮರಗಳೆಲ್ಲವು ಮುನಿಗಳಾಗುವ / ಒಡೆದ ಮಣಿಗಳು ಇಡಿಯಾಗುವ**' 'ಜಪದ ಕಟ್ಟೆ'ಯಲ್ಲಿ ಪಟ್ಟಾಗಿ ಕೂತು ತಮ್ಮ ಆತ್ಮಚರಿತ್ರಾತ್ಮಕ ಕಾವ್ಯ 'ಜೀವಯಾನ' ಬರೆದರು.

'ಜೀವಯಾನ' ಮಂಜುನಾಥ್‌ರ ಒಟ್ಟೂ ಕಾವ್ಯದ ವ್ಯಕ್ತಿತ್ವವನ್ನು ಬಿಚ್ಚಿಟ್ಟ ಕಾವ್ಯ. ಅವರು ಆಗಾಗ ತಮ್ಮ ಬಾಲ್ಯದ ಬದುಕಿನ ಅನಿಶ್ಚಿತತೆ ಮತ್ತು ಕಷ್ಟ ಕಾರ್ಪಣ್ಯಗಳ ಬಗ್ಗೆ ಹೇಳುತ್ತಿದ್ದರಾದರೂ, ಅವರ ವ್ಯಕ್ತಿತ್ವದಲ್ಲಿ ಅಂತರ್ಗತವಾಗಿದ್ದ ಸ್ವಾಭಿಮಾನ ಅದನ್ನೆಲ್ಲ ವಿವರವಾಗಿ ಹೇಳಲು ಬಿಡುತ್ತಿರಲಿಲ್ಲ. ಅದೆಲ್ಲ 'ಜೀವಯಾನ'ದಲ್ಲಿ ಅಗಲಿಕೆ, ಹಸಿವು, ಕೆಟ್ಟ ಕನಸು, ಕನವರಿಕೆಗಳ ರೂಪದಲ್ಲಿ ಸ್ಫೋಟಗೊಂಡಿವೆ. ಅದರಲ್ಲಿ ಅಲ್ಲಲ್ಲಿ ಕೇಳುವ ವ್ಯಕ್ತಿತ್ವ ಒಡೆವ ಆತಂಕದ ಆರ್ತನಾದಗಳು ಹೃದಯ ಕಲಕುತ್ತವೆ. ಮೂಲತಃ ಮಂಜುನಾಥ್ ಕುಟುಂಬದ ವ್ಯಕ್ತಿ. ಅದರ ಛಿದ್ರೀಕರಣ ಅವರ ವ್ಯಕ್ತಿತ್ವದ ಛಿದ್ರೀಕರಣವೇ ಆಗಿದೆ. ಅವರ ಈ ಮುಂಚಿನ ಸಂಕಲನಗಳಲ್ಲೂ ಅವರು ಬಾಲಕರಿದ್ದಾಗ ಅವರ ಕುಟುಂಬ ಎದುರಿಸಿದ ದುರಂತದ ಒಂದೆರಡು ಬಿಡಿ ಚಿತ್ರಗಳಿವೆಯಾದರೂ, 'ಜೀವಯಾನ'ದಲ್ಲಿ ಈ ದುರಂತ ಒಂದು ಅಖಂಡ ಕಾವ್ಯವಾಗಿ ಹೆಪ್ಪುಗಟ್ಟಿ ಓದುಗರನ್ನು ತಲ್ಲಣಗೊಳಿಸುತ್ತದೆ. '**ಒತ್ತುತಿದೆ ಹಾರೆ ಎದೆಯೊಳಗಿನ್ನೂ**' ಎಂಬ ಭಾಗ ಈ ಇಡೀ ಕಾವ್ಯದ ಕೇಂದ್ರ ರೂಪಕವಾಗಿ ನಮ್ಮ ಎದೆಯನ್ನೂ ಇರಿಯುತ್ತದೆ. ಅವರ ಒಟ್ಟೂ ಕಾವ್ಯದ ಕೇಂದ್ರದಲ್ಲಿ ಇರುವುದು ಹಲವು ರೀತಿಗಳಲ್ಲಿ ತನಗೆ ತಾನೇ ಸಮಾಧಾನ ಮಾಡಿಕೊಳ್ಳುತ್ತಿರುವ ಈ 'ಜೀವಯಾನದ'ದ ಮಂಜುನಾಥ್ ಎಂಬ ಮಗು ಎಂಬುದು ನಮಗೆ ಈ ಇರಿತದ ನೋವಿನಲ್ಲಿ ಅರಿವಿಗೆ ಬರುತ್ತದೆ. ಅವರ ಇಡೀ ಕಾವ್ಯ ಒಂದು ವಿಚಿತ್ರ meloncholyಯನ್ನು ಪಡೆದುಕೊಂಡುಬಿಡುತ್ತದೆ. ಈ ಬಿಂದುವಿನಲ್ಲಿ ಮಂಜುನಾಥ್ ಒಬ್ಬ ಪೂರ್ಣ ಕವಿಯಾಗಿ ನಮ್ಮನ್ನು ತಾಕುತ್ತಾರೆ. ಈ ಪೂರ್ಣತೆಯ ಸಾಧನೆ ಹಿಂದೆ ಅವರು ಪುತಿನ ವ್ಯಸನದ ನಂತರ ಹಿಂಬಾಲಿಸಿದ್ದ ಅಲ್ಲಮ ಮತ್ತು ಕುಮಾರವ್ಯಾಸರ ವ್ಯಾಪಕ ಓದು ಇತ್ತೆಂಬುದೂ ನಿಜ.

ಹಾಗಾಗಿಯೇ ನಂತರದ ಅವರ 'ಮಗಳು ಸೃಜಿಸಿದ ಸಮುದ್ರ' ಮತ್ತು 'ಬೊಗಸೆ ಜಲ ಒಂದು ಬೀಜಕ್ಕಾಗಿ' ಎಂಬ ಸಂಕಲನಗಳ ಕವಿತೆಗಳು ಹೆಚ್ಚು ಆತ್ಮೀಯವೂ, ಸರಳವೂ, ಸಮಾಧಾನದವೂ ಆಗಿ ಕಾಣುತ್ತವೆ. ಪುತಿನ ಹೇಳಿದ ದೇಶೀಯತೆ, ಪ್ರಸನ್ನತೆ ಮತ್ತು ವಿಶದತೆಗಳು ಇಲ್ಲಿ ಪೂರ್ಣವಾಗಿ ಫಲಿಸಿವೆ. ಈ ಫಲಿತಗಳ ಮಾರ್ದನಿಯಂತೆ 'ಮಗಳು ಸೃಜಿಸಿದ ಸಮುದ್ರ'ಕ್ಕೆ 'ಕೊಟ್ಟ ಕುದುರೆಯನೇರಿ...' ಎಂಬ ಒಂದು ಹೊಸ ಮನವರಿಕೆಯನ್ನು ಸೂಚಿಸುವಂತಿರುವ ಮುನ್ನುಡಿಯಲ್ಲಿ 'ನನ್ನ ಕವಿತೆಯ ಪರಿವಾರ ಈಗ ಬಹಳ ಪುಟ್ಟದು. ದೊಡ್ಡ ಜಗತ್ತಿಗೋಸ್ಕರ ಬರೆಯುತ್ತಿದ್ದೇನೆ ಎಂದು ಭಾವಿಸುವುದು ಕಡಿಮೆ. ನಾನು ಒಂದು ಪುಟ್ಟ ಪದ್ಯ ಬರೆದರೆ ಮೊದಲು ಅದನ್ನು ನನ್ನ ಈ ಪುಟ್ಟ ಜಗತ್ತಿನಲ್ಲಿ ಚಲಾವಣೆಗೆ ಬಿಡುತ್ತೇನೆ. ಅಲ್ಲಿ ಅದು ಒಂದು

ಶಬ್ದ, ಒಂದು ಸಾಲು ಅಥವಾ ಒಂದು ಭಾವನೆಯಲ್ಲಿ ಸಿದ್ಧಿಸಿಕೊಂಡು ಮರಳಿದದಷ್ಟಕ್ಕೆ ನನ್ನ ಕವಿತೆ ಲೋಕಕ್ಕೆ ಸಂಪೂರ್ಣ ಪ್ರಕಟವಾಯಿತು ಎಂದು ತೃಪ್ತನಾಗಿಬಿಡುತ್ತಿದ್ದೇನೆ, ಈಚೀಚೆಗೆ.' ಎಂದು ಬರೆಯುತ್ತಾರೆ. ನಾನು ಮತ್ತು ಮಂಜುನಾಥ್ ಇತ್ತೀಚಿನ ದಿನಗಳಲ್ಲಿ ಮುಖತಃವೋ ಅಥವಾ ದೀರ್ಘ ದೂರವಾಣಿ ಮಾತುಕತೆಗಳಲ್ಲೋ (ಕರೆ ಬಹುಪಾಲು ಬರುತ್ತಿದ್ದುದು ಅವರ ಕಡೆಯಿಂದಲೇ) ಚರ್ಚಿಸುತ್ತಿದ್ದ ಗಾಂಧೀಜಿಯ 'ಹಿಂದ್ ಸ್ವರಾಜ್'ನಿಂದ ಪಡೆದ ಅರಿವು ಇದು. ತೃಪ್ತಿಯ ಹುಡುಕಾಟ ಎಂಬುದು ಹಪಾಹಪಿಯಾಗಿ ಬೆಳೆಯದೆ ಸಂತೃಪ್ತಿಯಾಗಿ ಕೊನೆಗೊಳ್ಳುವುದು 'ನೆರೆಹೊರೆ' ಎಂಬ ಪರಿಕಲ್ಪನೆ ಇದ್ದಾಗ ಎಂಬುದೇ ಸ್ವರಾಜ್ಯದ ತಳಹದಿಯ ತತ್ವ. ಮಂಜುನಾಥರ ಕಾವ್ಯ ಮೀಮಾಂಸೆ ಹೀಗೆ ಸ್ವರಾಜ್ಯ ತತ್ವದಲ್ಲಿ ತನ್ನ ಸಾರ್ಥಕತೆ ಕಂಡುಕೊಳ್ಳತೊಡಗಿತ್ತು. ಇತ್ತೀಚೆಗೆ ಈ ಬಗ್ಗೆ 'ಹೊಸ ಮನುಷ್ಯ'ಕ್ಕಾಗಿ ಮೂರ್ನಾಲ್ಕು ಅದ್ಭುತ ಲೇಖನಗಳನ್ನೂ ಅವರು ಬರೆದಿದ್ದರು. ಹಾಗಾಗಿಯೇ ಅವರೀಗ ಯಾವ ಸಂಕೋಚಗಳೂ ಇಲ್ಲದೆ ರಾಜಕೀಯ–ಸಾಮಾಜಿಕ ಎನ್ನಬಹುದಾದ ಪದ್ಯಗಳನ್ನೂ ಬರೆದರು. ಅದೂ ನಾನು ಸಂಪಾದಿಸುವ 'ಹೊಸ ಮನುಷ್ಯ' ಎಂಬ ಸಮಾಜವಾದಿ ಮಾಸಿಕಕ್ಕಾಗಿ ಬರೆದ 'ಅತಿ ಶ್ರೀಮಂತನ ಊಟದ ಮೇಜು', 'ಅಧಿಕಾರ' 'ನಾಯಕ' ಮುಂತಾದವನ್ನು ಗಮನಿಸಬಹುದು. (ನೋಡಿ: 'ಬೊಗಸೆ ಜಲ ಒಂದು ಬೀಜಕ್ಕಾಗಿ') ಅಲ್ಲದೆ 'ಹೊಸ ಮನುಷ್ಯ'ಕ್ಕಾಗಿಯೇ ಸಾಮಾಜಿಕ–ರಾಜಕೀಯ ವಿಷಯಗಳನ್ನು ಕುರಿತ ವಿಶೇಷ ಲೇಖನಗಳನ್ನೂ ಬರೆದರು

ಹೀಗೆ ತಮ್ಮ ಕಾವ್ಯಕರ್ಮ ಮತ್ತು ತತ್ವದ ಒಂದು ಪೂರ್ಣ ಸುತ್ತು ಮುಗಿಸಿದ್ದ ಮಂಜುನಾಥ್‌ರ ಕವಿ ಜೀವ ನಿರಾಳವಾಗುತ್ತಿರುವಾಗಲೇ ಅವರು ಹಠಾತ್ತನೇ ನಮ್ಮನ್ನಗಲಿ ಹೋಗಿದ್ದಾರೆ. ಇತ್ತೀಚೆಗೆ ತಾನೇ ತಮ್ಮ ಹುಟ್ಟೂರು ತಾಳಗುಪ್ಪಕ್ಕೆ ಬಂದು ಅಲ್ಲಿನ ಪರಿಸರದಲ್ಲಿನ ತನ್ನ ಬಾಲ್ಯದ ನೆನಪುಗಳನ್ನೊಮ್ಮೆ ನವೀಕರಿಸಿಕೊಂಡು, ನೆನಪಿಗಾಗಿ ಅಲ್ಲಿಂದ ಕಲ್ಲೊಂದನ್ನು ತಮ್ಮೊಂದಿಗೆ ತೆಗೆದುಕೊಂಡು ಹೋಗಿದ್ದ ಮಗುತನದ ಮಂಜುನಾಥ್ ತಮ್ಮೀ ಭೇಟಿಯ ಬಗ್ಗೆ ನನ್ನೊಂದಿಗೆ ಮನದುಂಬಿ ಮಾತಾಡಿ ತೃಪ್ತಿಪಟ್ಟಿದ್ದರು. (ಅವರು ಈ ಹಿಂದೆ ಅಲ್ಲಿ ತಾವು ಓದಿದ ಕನ್ನಡ ಶಾಲೆಯ ಬಗ್ಗೆ ಭಾವಪೂರ್ಣ ಲೇಖನವೊಂದನ್ನು 'ಹೊಸ ಮನುಷ್ಯ' ಪತ್ರಿಕೆಗಾಗಿ ಬರೆದುಕೊಟ್ಟಿದ್ದರು.)

ಅವರು ಆಕಾಶವಾಣಿಯ ರಾಷ್ಟ್ರೀಯ ಕವಿಗೋಷ್ಠಿಗೆಂದು ಸಂಸಾರ ಸಮೇತ ವಾರಾಣಾಸಿಗೆ ಹೋಗಿ ಬಂದ ನಂತರದಲ್ಲೇ ಆಸ್ಪತ್ರೆ ಸೇರಿ, ನಾವೆಲ್ಲ ಅವರು ಅಲ್ಲಿಂದ ಹೊರಬರುವುದನ್ನು ಕಾಯುತ್ತಿರುವಂತೆಯೇ ಬಾರದ ಊರಿಗೆ ತೆರಳಿಬಿಟ್ಟಿದ್ದಾರೆ. ಅವರು ವಾರಾಣಾಸಿಗೆ ಹೋಗುವ ಮುನ್ನ ನನಗೆ ಕರೆ ಮಾಡಿದ್ದರು. ನಾನು ಯಾವುದೋ ಒಂದು ಸಭೆಯಲ್ಲಿದ್ದ ಕಾರಣ 'ನಾನು ಆ ಮೇಲೆ ಮಾತಾಡುತ್ತೇನೆ' ಎಂದೆ. ಆದರೆ ಅವರು ಮತ್ತೆ ಕರೆಗೆ ಸಿಗಲೇ ಇಲ್ಲ! ಸಿಕ್ಕಿದ್ದರೆ ನಾನು ಅವರಿಗೆ 'ಈ ರಾಷ್ಟ್ರೀಯ ಕವಿಗೋಷ್ಠಿ ಎಂಬುದೆಲ್ಲ ಈಗ ಬರಿ ಬುರ್ನಾಸು' ಎಂದು ಹೇಳಿ,

ವಾರಾಣಾಸಿಗೆ ಹೋಗದಂತೆ ಸೂಚಿಸುತ್ತಿದ್ದೆ. ಏಕೆಂದರೆ ಆ ಹೊತ್ತಿಗಾಗಲೇ ಅವರ ಆರೋಗ್ಯ ಸೂಕ್ಷ್ಮವಾಗಿತ್ತು. ನಿರಂತರ ಚಿಕಿತ್ಸೆಯಲ್ಲಿದ್ದರು. ಆದರೆ ಆ ಕುಟುಂಬದ ಮನುಷ್ಯ ತನ್ನ ಕುಟುಂಬದ ಸಮ್ಮುಖದಲ್ಲಿ ರಾಷ್ಟ್ರೀಯ ಕವಿಗೋಷ್ಠಿಯಲ್ಲಿ ಭಾಗವಹಿಸುವ ಆಳದಲ್ಲೆಲ್ಲೋ ಇನ್ನೂ ಉಳಿದುಕೊಂಡಿದ್ದ ಸುಪ್ತ ಆಸೆಯನ್ನು ತಣಿಸಿಕೊಳ್ಳಲೆಂದೋ ಅಥವಾ ತನ್ನನ್ನು ಸಾಕಿ ಬದುಕುಳಿಸಿದ 'ಚಿಕ್ಕಿ'ಯ(ಸಾಕು ತಾಯಿ) ಕಾಶಿ ಯಾತ್ರೆಯ ಆಸೆಯನ್ನು ನೆರವೇರಿಸುವ ಪವಿತ್ರ ಕರ್ತವ್ಯಕ್ಕಾಗಿಯೋ ಅಲ್ಲಿಗೆ ಹೋಗಿ ಅಲ್ಲಿ ಮಸಣ ಕಾಯುವವನಿಗೆ ಪ್ರಿಯರಾದವರಂತೆ ಅವನ ಕೈ ತುತ್ತಾದರು. ಆದರೆ ಕನ್ನಡದ ಕಾವ್ಯಾಭಿಮಾನಿಗಳು ಇನ್ನೂ ಹಲವು ವರ್ಷಗಳ ಕಾಲ ಓದಿ, ಚರ್ಚಿಸಿ ಆನಂದಿಸುವಷ್ಟು ಕಾವ್ಯರಾಶಿಯನ್ನು ಅವರು ಬಿಟ್ಟು ಹೋಗಿದ್ದಾರೆ. ಅದೇ ಸದ್ಯಕ್ಕೆ ನಮ್ಮ ಸಮಾಧಾನ. ಇಷ್ಟಂತೂ ನಿಜ: ಮಂಜುನಾಥ್ ನಮ್ಮ ನಡುವೆ ಈಗಲೂ ಬದುಕಿದ್ದಾರೆ.

ಮಂಜುನಾಥ್ ಸಾವು-ಬದುಕುಗಳ ನಡುವೆ ತುಯ್ಯುತ್ತಾ ಆಸ್ಪತ್ರೆಯ ಹಾಸಿಗೆಯಲ್ಲಿ ಮಲಗಿದ್ದ ದಿನಗಳುದ್ದಕ್ಕೂ ನನ್ನನ್ನು ಇರಿಯುತ್ತಿದ್ದುದು, ಅವರು ನಮ್ಮ 'ಹೊಸ ಮನುಷ್ಯ' ಪತ್ರಿಕೆಯ ಹೋದ ವರ್ಷದ ವಿಶೇಷಾಂಕಕ್ಕಾಗಿ ಕಳಿಸಿದ್ದ, ಇವರಂತೆಯೇ ಆಸ್ಪತ್ರೆಯ ಹಾಸಿಗೆಯಲ್ಲಿ ಸಾವು ಬದುಕುಗಳ ನಡುವೆ ತುಯ್ಯುತ್ತಾ ಮಲಗಿದ್ದ ಸಮಾಜವಾದಿ ನಾಯಕ ಶಾಂತವೇರಿ ಗೋಪಾಲಗೌಡರನ್ನು ನೋಡಲು ಕವಿ ಗೋಪಾಲಕೃಷ್ಣ ಅಡಿಗರು ಬಂದು ಭೇಟಿಯಾದ ಸಂದರ್ಭವನ್ನನುಸರಿಸಿ ಅವರು ಬರೆದಿದ್ದ ಈ ಪುಟ್ಟ ಪದ್ಯ:

ಅವನ ಹಾಸಿಗೆ ಮೇಲೆ ಹದ್ದು
ಹಾರಾಡುವಾಗಲೂ
ಕವಿತೆಯ ಸಾಲೊಂದ ಧ್ಯಾನಿಸುವುದು
ಆಶ್ಚರ್ಯವೆನಿಸಿದರು ಸಹಜ
ತಳದಲ್ಲಿ ಕೊನೆಗುಟುಕು ಗಂಜಿ ಇರುವರೆಗೆ
ಕವಿತೆಯಭಿವ್ಯಕ್ತಿ ಅಂಥವರಿಗೆ-
ಜೀವನ ಪ್ರೀತಿಗೆ ವ್ಯಂಗ್ಯಕ್ಕೆ
ವಿಷಾದಕ್ಕೆ ಮರುಕಕ್ಕೆ ಎಲ್ಲಾ

ಹಾಗಿಲ್ಲದಿನ್ಹೇಗೆ?
ಕವಿತೆಯಂಥಾ ಕವಿತೆ-ಅದು
ಒಂದುಸಿರ ಹೆಚ್ಚಿಸದಿದ್ದರೆ?

(ಅಡಿಗರು 'ಶಾಂತವೇರಿಯವರನ್ನು 'ಹೇಗಿದ್ದೀಯಾ ಗೋಪಾಲ್?' ಎಂದು ಕೇಳಿದ್ದಕ್ಕೆ ಗೌಡರು ಅಡಿಗರ ಕವಿತೆಯೊಂದರ ಸಾಲನ್ನೇ ಹಿಡಿದು,;ಕುಟುಕು ಕುಟುಕಿನ ಸಫಲ ನಾಟ್ಯ' ಎಂದರಂತೆ!)

●

ಅನುಬಂಧ:

ಜಿಎಸ್ಸೆಸ್‌ಗೊಂದು ಶ್ರದ್ಧಾಂಜಲಿ

ಕನ್ನಡ ಸಾರಸ್ವತ ಲೋಕಕ್ಕೆ ಜಿಎಸ್ಸೆಸ್ ಎಂದೇ ಪರಿಚಿತರಾಗಿದ್ದ ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪನವರು ತಮ್ಮ ೮೭ನೇ ವಯಸ್ಸಿನಲ್ಲಿ ನಿಧನರಾಗಿದ್ದಾರೆ. (೨೩.೧೨.೨೦೧೩) ಶ್ರೇಷ್ಠ ಕವಿಯಷ್ಟೇ ಅಲ್ಲದೆ, ಶ್ರೇಷ್ಠ ಅಧ್ಯಾಪಕ, ವಿಮರ್ಶಕ, ಸಾಹಿತ್ಯ ಮೀಮಾಂಸಕ, ಸಾಹಿತ್ಯ ಆಡಳಿತಗಾರರಾಗಿ ಸಾಮಾಜಿಕ ಬದ್ಧತೆಯುಳ್ಳ ಸಾಂಸ್ಕೃತಿಕ ನಾಯಕರಾಗಿದ್ದ ಜಿಎಸ್ಸೆಸ್ ಕುವೆಂಪು ನಂತರ ಕನ್ನಡ ಸಾಹಿತ್ಯ–ಸಂಸ್ಕೃತಿ ಲೋಕದ ಸಾಕ್ಷಿ ಪ್ರಜ್ಞೆಯಾಗಿ ಅದರ ರೂಹುಗಳನ್ನು ರೂಪಿಸಿದವರು. ಅವರ ನಿಧನದಿಂದ ಕನ್ನಡ ಸಾರಸ್ವತ ಲೋಕ ತನ್ನ ಗೌರವಾನ್ವಿತ ಯಜಮಾನರನ್ನು ಕಳೆದುಕೊಂಡು ನಿಜವಾಗಿ ಬಡವಾಗಿದೆ. ಅವರ ನೆನಪಿನಲ್ಲಿ ಅವರ ಗೌರವ ಗ್ರಂಥ 'ಹಣತೆ'ಯಿಂದಾಯ್ದ (ಸಂ: ಡಿ.ಎಸ್. ನಾಗಭೂಷಣ, ನಟರಾಜ ಬೂದಾಳು, ಸವಿತಾ ನಾಗಭೂಷಣ: ೨೦೦೧) ಲೇಖನವೊಂದನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ–ಸಂಪಾದಕ

ತಲೆಮಾರು–ವಿಚಾರಗಳನ್ನು ಬೆಸೆದ ಅಪೂರ್ವ ಚೇತನ: ಜಿ.ಎಸ್.ಎಸ್

ನಾ ಕಂಡ ಜಿಎಸ್ಎಸ್ ಯಾವಾಗಲೂ ಶ್ವೇತ ಶುಭ್ರ ಉಡುಪು ಮತ್ತು ನಿರ್ಮಲ ವ್ಯಕ್ತಿತ್ವದವರು. ಅಂತರಂಗ ಮತ್ತು ಬಹಿರಂಗ–ಎರಡೂ ಒಂದಾಗಿರುವ ಅವರ ನಡೆ ನುಡಿಯ ಪ್ರಭಾವದ ಪರಿಧಿ ಎಷ್ಟೊಂದು ಮೋಹಕ, ಚುಂಬಕ ಎಂದರೆ–ಸಾಹಿತ್ಯವಲಯದ ಸಹೃದಯಿಯೊಬ್ಬ ಅದರಿಂದ ವಂಚಿತನಾದರೆ ಕಿಂಚಿತ್ತಾದರೂ ಏನನ್ನೋ ಕಳೆದುಕೊಂಡಂತೆ ಎಂದು ಹೇಳುವಷ್ಟು. ಕಾರಣ ಇಷ್ಟೆ: ಯಾವುದೇ ಸಮಕಾಲೀನ ಸಾಹಿತ್ಯದ ಪ್ರಭಾವ, ಚಳುವಳಿ, ಪಂಥ, ಪ್ರಭಾವಗಳನ್ನು ಪ್ರೀತಿಯಿಂದ ಸ್ವೀಕರಿಸಿ ಹುಡುಗರನ್ನು ದೊಡ್ಡವರನ್ನಾಗಿ ಬೆಳೆಸುವ ಅವರ ಹಿರಿಯ

ಗುಣ.

ನಾನು ಅವರನ್ನು ಮೊದಲ ಬಾರಿ ಕಂಡದ್ದು ೧೯೭೦ರಲ್ಲಿ ಲಂಕೇಶರೊಟ್ಟಿಗೆ, ಅವರ ಮನೆಯಲ್ಲಿ. ೩-೪ ಕಥೆಗಳಷ್ಟನ್ನೇ ಬರೆದಿದ್ದ ನನ್ನನ್ನು ಪ್ರೀತಿಯಿಂದ ಮಾತನಾಡಿಸಿ, ಬೆನ್ನು ತಟ್ಟಿದ್ದರು. ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗದಲ್ಲಿ ಸಾಹಿತ್ಯ-ಸಂಸ್ಕೃತಿಗಳನ್ನು ಹೊಸ ಹೊಸ ನೆಲೆಗಳಲ್ಲಿ ನೋಡುವ ಅನೇಕ ವಿಚಾರ ಸಂಕಿರಣಗಳನ್ನು ಏರ್ಪಡಿಸಿ 'ತಲೆಮಾರು' ಕಟ್ಟಿದ ಆ ದಿನಗಳಲ್ಲಿ ಅವರನ್ನು ಅಲ್ಲಿ ಇಲ್ಲಿ ಗಮನಿಸುತ್ತಾ ಅವರ ಕವಿತೆಗಳ ಸರಳ ಸಹಜ ಮುಗ್ಧ ಗುಣವನ್ನು ನಾನು ನಿಬ್ಬೆರಗಾಗಿ ಗಮನಿಸುತ್ತಾ ಓದಿದೆ. ಪ್ರಭಾವಿತನಾಗಿಲ್ಲವೆಂದು ಹೇಳುವ ಧೈರ್ಯವಾದರೂ ನನಗೆ ಎಲ್ಲಿದೆ?

ಶಿವರುದ್ರಪ್ಪನವರನ್ನು ನಾನು ಮುಂದೆ ಅನೇಕ ಬಾರಿ ಕಾಣುವಾಗಲೆಲ್ಲ ಗೆಳೆಯ ಡಿ.ಎಸ್. ನಾಗಭೂಷಣ್ ಜೊತೆಗಿದ್ದರು. ೧೯೮೫ರಲ್ಲಿ ಭದ್ರಾವತಿ ಆಕಾಶವಾಣಿಯಲ್ಲಿದ್ದ ನಾಗಭೂಷಣ್‌ರನ್ನು ಕಾಣಲು ಅವರು ಬಂದಿದ್ದರು. ಅಂದು ಡಿ.ಎಸ್.ಎನ್. ಮನೆಯಲ್ಲಿ ಪಂಚಾಕ್ಷರಿ ಗವಾಯಿಗಳಿಂದ ಭಾವಗೀತೆಗಳ ಗಾಯನ. ಜಿಎಸ್‌ಎಸ್ ಗಾಯನ ಆನಂದಿಸಿದ ದೃಶ್ಯ – ಧ್ಯಾನಿಸಿ, ತಲೆದೂಗಿ, ತಲ್ಲೀನರಾಗಿ –ನನಗೆ ಮರೆಯಲು ಸಾಧ್ಯವಾಗಿಲ್ಲ. ತಮ್ಮ ಭಾವಗೀತೆಗಳನ್ನೇ ಹಾಡುತ್ತಿದ್ದಾಗ ಕುವೆಂಪು, ಬೇಂದ್ರೆ ಗೀತೆಗಳನ್ನು ಹಾಡಲು ಸೂಚಿಸುತ್ತಿದ್ದರು. ೧೯೮೯ರಲ್ಲಿ ಮತ್ತೊಮ್ಮೆ, ಜಿಎಸ್‌ಎಸ್ ಅಕಾಡೆಮಿ ಅಧ್ಯಕ್ಷರಾಗಿದ್ದಾಗ ಅವರ ಕಛೇರಿಗೆ ಹೋಗಿದ್ದೆ. 'ಶೂದ್ರ'ದಲ್ಲಿ ಜಿಎಸ್‌ಎಸ್ ಕುರಿತು ಒಂದು ಲೇಖನ ಬರೆದಿದ್ದೆ. ನಾಗಭೂಷಣ್ ಅದನ್ನು ಅವರ ಗಮನಕ್ಕೆ ತಂದರು. ನಾನು ಸುಮ್ಮನಿದ್ದೆ. ಹೇಳಿದರು, 'ಅದು ಹಾಗಲ್ಲ; ನನ್ನ ಕವಿತೆಗಳನ್ನು ಹೀಗೆ ನೋಡಬೇಕೆಂದು ನಾನು ಹೇಳಲಾರೆ. ಆದರೆ ನೀವು ಇನ್ನೊಂದು ದೃಷ್ಟಿಯಿಂದ ನೋಡಬೇಕಿತ್ತು'. ಪೆಚ್ಚಾದರೂ ನಾನು ಒಪ್ಪಿಕೊಂಡೆ. ಅವರ ಪಾರದರ್ಶಕ ಗುಣವೂ ತೀಕ್ಷ್ಣವಾದುದ್ದು. ಆದರೆ ಕಹಿಯಿಲ್ಲದ್ದು. ಹಾಗಾಗಿಯೇ ಬಹುಶಃ ಅವರು ಬೆಂಗಳೂರು ವಿ.ವಿ.ದ ಕನ್ನಡ ಅಧ್ಯಯನ ಕೇಂದ್ರವನ್ನು ಸಾಹಿತ್ಯದ ಒಂದು ದೊಡ್ಡ ಸೃಜನಶೀಲ ಕೇಂದ್ರವನ್ನಾಗಿ ಕಟ್ಟಲು ಸಾಧ್ಯವಾದದ್ದು.

ಶಿವಮೊಗ್ಗದ ಅಕ್ಕಮಹಾದೇವಿ ಮಂದಿರದಲ್ಲಿ ಚಿಕ್ಕ ಸಾಹಿತ್ಯ ಸಭೆ ನಡೆದಿತ್ತು. ಅವರನ್ನು ಅಲ್ಲಿ ನಾಲ್ಕಾರು ಬಾರಿ ಸಮನ್ವಯ ಕವಿ ಎಂದು ಗುರ್ತಿಸಿದಾಗ ಸ್ವಲ್ಪ ಸಿಡಿಮಿಡಿಗೊಂಡರು. "ನಾನು ಸಮನ್ವಯ ಕವಿಯಲ್ಲ, ಕವಿ. ಸಾಹಿತ್ಯದಲ್ಲಿ ಸಮನ್ವಯ ಇಲ್ಲವೇ ಇಲ್ಲ. ಸುಮ್ಮನೆ ನನಗೆ ಹಚ್ಚಿರುವ ಈ ಲೇಬಲ್ ಇಷ್ಟವಿಲ್ಲ" ಎಂದು ಗುಡುಗಿದರು. ಸಮನ್ವಯದ ಮಾತು ಮುದುರಿ ಬೇರೆ ದಿಕ್ಕು ಹಿಡಿಯಿತು. ಅವರ ಮುಖ ನೋಡಿದೆ. ಮೋಡ ಚದುರಿದ ಆಗಸದಂತೆ ಮತ್ತೆ ಶಾಂತವಾಗಿತ್ತು.

ಭದ್ರಾವತಿಗೆ ಒಮ್ಮೆ ಜಿಎಸ್‌ಎಸ್ ಪ್ರೊ॥ ಬಿ.ಕೃಷ್ಣಪ್ಪನವರನ್ನು ನೋಡಲು ಬಂದಿದ್ದರು. ಕೃಷ್ಣಪ್ಪ ನವರು ಇರಲಿಲ್ಲ. ನಾನು ಸರ್.ಎಂ.ವಿ. ಕಲಾ ಕಾಲೇಜಿನಲ್ಲಿ

ಸಾಹಿತ್ಯ ಗೋಷ್ಠಿ ಸಂಚಾಲಕ. ರಣರಣ ಬಿಸಿಲು. ದಣಿದಿದ್ದರು, 'ನಮ್ಮ ಹುಡುಗರಿಗೆ ಒಂದಿಷ್ಟು ಮಾತಾಡಿ' ಅಂತ ಕೇಳಿಕೊಂಡೆ. 'ಆಗಲಪ್ಪ' ಅಂದರು. ಕಲಾಮಂದಿರ ಕಿಕ್ಕಿರಿದು ತುಂಬಿತು, ಮೈಕ್ ಇರಲಿಲ್ಲ. ಭಾರತೀಯ ಕಾವ್ಯ ಮೀಮಾಂಸೆ–ಪಾಶ್ಚಾತ್ಯ ಕಾವ್ಯ ಮೀಮಾಂಸೆ ಇವೆರಡರ ಸಾರದ ನೆರಳಿನಲ್ಲಿ ಬೆಳೆದು ಅರಳಿರುವ ಕನ್ನಡ ಕಾವ್ಯ ಪರಂಪರೆ ಕುರಿತು ಒಂದೂವರೆ ತಾಸು ನಿರರ್ಗಳ ಭಾಷಣ. ಹುಡುಗರು ಅಲುಗಾಡಲಿಲ್ಲ, ಯಾತಕ್ಕೋ ಬಂದ ಅವರ ಬಳಿ ಒಂದು ಚಿಕ್ಕ ಚೀಟಿ ತುಂಡಿನ ಟಿಪ್ಪಣಿ ಕೂಡಾ ಇರಲಿಲ್ಲ! ಅಧ್ಯಾಪಕನಾದ ನಾನು ಎಷ್ಟೋ ಬಾರಿ ಆ ವಿದ್ವತ್ತನ್ನು ನಾಚಿಕೆಯಿಂದ ನೆನಪಿಸಿಕೊಂಡಿದ್ದೇನೆ. ಕಾವ್ಯ ಮೀಮಾಂಸೆ ಕುರಿತಂತೆ ನಾನು ಇನ್ನೆಲ್ಲೂ ಅಂತಹ ನಿರರ್ಗಳ ಮಾತುಗಳನ್ನು ಕೇಳುವುದಕ್ಕೆ ಸಾಧ್ಯವಾಗಿಲ್ಲ. ಐಚ್ಛಿಕ ಕನ್ನಡದ ಹುಡುಗರಿಗೆ ತೀನಂಶ್ರೀಯವರ 'ಭಾರತೀಯ ಕಾವ್ಯ ಮೀಮಾಂಸೆ' ಬಿಟ್ಟರೆ ಬೇರೆ ಯಾವ ಕೃತಿ ಇದೆ ಎಂದು ಕೇಳುತ್ತಿದ್ದ ಅಧ್ಯಾಪಕರು ಈಗ ಮಾತು ಬದಲಿಸಬೇಕಾಗಿದೆ. ಜಿಎಸ್‌ಎಸ್ ಅವರ 'ಕಾವ್ಯಾರ್ಥ ಚಿಂತನ' ಓದಲು ಮರೆತೀರಿ– ಎಂದು ಹೇಳಲೇ ಬೇಕಾಗಿದೆ. ಪರಂಪರೆಗೆ ಜಿಎಸ್‌ಎಸ್ ಕೊಡುಗೆ ಈ ತೆರನಾದದ್ದು.

ಶಿವಮೊಗ್ಗದ 'ಆಸಕ್ತಿ' ಬಳಗ ಎರಡು ವರ್ಷದ ಹಿಂದೆ ಜಿಎಸ್‌ಎಸ್‌ಗೆ ಸನ್ಮಾನ ಮತ್ತು ಅವರನ್ನು ಕುರಿತ ವಿಚಾರ ಸಂಕಿರಣವನ್ನು ಆಯೋಜಿಸಿ ಆಹ್ವಾನಿಸಿದ್ದರು. ಆಗ ಭದ್ರಾವತಿಯಲ್ಲಿದ್ದ ಮಿತ್ರ ನಾಗಭೂಷಣ್‌ರ ಮನೆಗೆ ಅವರನ್ನು ನೋಡಲು ಬಂದಿದ್ದರು. ಪುನಃ ನಾನು ಅವರನ್ನು ಆಹ್ವಾನಿಸಿ ನಮ್ಮ ಹುಡುಗರಿಗೆ ಮಾತನಾಡಿ ಎಂದು ಕಾಲೇಜಿಗೆ ಕರೆದುಕೊಂಡು ಬಂದೆ. ನೆನಪಿಗೆ ಒಂದು ಹಿತ್ತಾಳೆ ಕರಂಡವನ್ನು ಕೊಟ್ಟಿದ್ದೆವು. ಅದನ್ನು ಬೆಂಗಳೂರಿಗೆ ಒಯ್ಯಲಾರದೆ 'ಇದನ್ನು ನಾಗಭೂಷಣ್‌ಗೆ ಬಿಟ್ಟು ಹೋಗುತ್ತೇನೆ. ನಿಮ್ಮ ಆಕ್ಷೇಪಣೆ ಇಲ್ಲ ತಾನೇ?' ಎಂದು ನಕ್ಕರು. ನಾನೂ ನಕ್ಕುಬಿಟ್ಟೆ. ಹೀಗೆ ತಮ್ಮ ನೆನಪುಗಳನ್ನು ಆತ್ಮೀಯರಿಗೇ ಬಿಟ್ಟು ಹೋಗುವುದು ಅವರ ಜಾಯಮಾನ.

ಅವರ ಸಾರ್ಥಕ ಬದುಕಿನುದ್ದಕ್ಕೂ ಹೀಗೆ ಬಿಟ್ಟು ಹೋಗಿರುವುದನ್ನು; ಕೊಟ್ಟು ಹೋಗಿರುವುದನ್ನು; ಪ್ರೀತಿ ತುಂಬಿ ಹರಸಿ ಹೋಗಿರುವುದನ್ನು ನಾವು ಎಷ್ಟು ಉಳಿಸಿಕೊಂಡು ನಮ್ಮ ಮುಂದಿನವರಿಗೆ ಎಷ್ಟು ಬಿಟ್ಟು ಹೋಗುತ್ತೇವೆ? ನೆನಪಾದಾಗ ಗಾಬರಿಯಾಗುತ್ತದೆ. ಯಾಕೆಂದರೆ ಅಂತಹ ಹರಸುವ ಚೈತನ್ಯಗಳು ಮುಂದಿನ ತಲೆಮಾರಿಗೆ ಇವೆಯೇ? ಪರಂಪರೆ ಉಳಿಯುತ್ತದೆ, ನಿಜ. ಅದು ಯಾವ ಪರಂಪರೆ? ಜಿಎಸ್‌ಎಸ್ ಪರಂಪರೆಯೇ ನಮ್ಮ ನಡುವಿನ ತಲೆಮಾರು–ವಿಚಾರಗಳನ್ನು ಬೆಸುಗೆ ಹಾಕುವ ಕೊಂಡಿ.

– ಪ್ರೊ. ಎಂ. ಚಂದ್ರಶೇಖರಯ್ಯ

('ಹೊಸ ಮನುಷ್ಯ' ಜನವರಿ, ೨೦೧೪)

ಇದೇ ಲೇಖಕರ ಇತರ ಕೃತಿಗಳು

ಗಮನ (ಸಾಹಿತ್ಯ ವಿಮರ್ಶೆ–ವಿಚಾರ)

ಅನೇಕ (ಸಾಹಿತ್ಯ ವಿಮರ್ಶೆ–ವಿಚಾರ)

ಕುವೆಂಪು ಸಾಹಿತ್ಯ ದರ್ಶನ (ಕುವೆಂಪು ಸಾಹಿತ್ಯಾವಲೋಕನ)

ಈ ಭೂಮಿಯಿಂದ ಆ ಆಕಾಶದವರೆಗೆ (ಸಾಹಿತ್ಯ ವಿಮರ್ಶೆ–ವಿಚಾರ)

ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ (ವ್ಯಕ್ತಿ ಹಾಗೂ ಸಾಹಿತ್ಯ ಪರಿಚಯ)

ಸಮತೆಯ ಸಾಕಾರಮೂರ್ತಿ ರಮಣ ಮಹರ್ಷಿ (ರಮಣ ದರ್ಶಿಕೆ)

ರೂಪರೂಪಗಳನು ದಾಟಿ (ಈವರೆಗಿನ ಸಾಹಿತ್ಯ ವಿಮರ್ಶೆಗಳ ಸಮಗ್ರ ಸಂಗ್ರಹ)

ಭೂಮಿಯನ್ನು ಹಂಚಿಕೊಳ್ಳುವ ಬಗೆಗಳು (ಆಧುನಿಕತೆ, ಅಭಿವೃದ್ಧಿ ಮತ್ತು ಸಾಮಾಜಿಕ ನ್ಯಾಯ ಕುರಿತ ಲೇಖನಗಳು)

ಕನ್ನಡ ಮನಸ್ಸು ಮತ್ತು ಇತರ ಲೇಖನಗಳು (ಸಂಕೀರ್ಣ)

ಕಾಲಕ್ರಮ ('ಹೊಸ ಮನುಷ್ಯ' ಪತ್ರಿಕೆಯ ಸಂಪಾದಕೀಯ ಮತ್ತು ಕೆಲ ಪೂರಕ ಬರಹಗಳು)

ಲೋಹಿಯಾ ಸಮಾಜವಾದ ದರ್ಶನ (ಸಮಾಜವಾದ ಪರಿಚಯ, ವಿಶ್ಲೇಷಣೆ)

ಮರಳಿ ಬರಲಿದೆ ಸಮಾಜವಾದ! (ಸಮಾಜವಾದಿ ವಿಚಾರ ವೈವಿಧ್ಯ)

ಬೇರು ಬಿಳಲು (ಸಮಾಜವಾದಿ ಸಂಕಥನಗಳು–೧)

ಇದು ಭಾರತ! ಇದು ಭಾರತ!! (ಸಮಾಜವಾದಿ ಸಂಕಥನಗಳು–೨)

ವಸಿಷ್ಠರು ಮತ್ತು ವಾಲ್ಮೀಕಿಯರು (ಸಮಾಜವಾದಿ ಸಂಕಥನಗಳು–೩)

ಇಲ್ಲಿ ಯಾವುದೂ ಅಮುಖ್ಯವಲ್ಲ (ಸಮಾಜವಾದಿ ಸಂಕಥನಗಳು–೪)

ಕಂಡದ್ದು ಕಾಡಿದ್ದು (ಸಮಾಜವಾದಿ ಸಂಕಥನಗಳು–೫)

ಲೋಹಿಯಾ ಜೊತೆಯಲ್ಲಿ (ಲೋಹಿಯಾ–ಗಾಂಧಿ–ಅಂಬೇಡ್ಕರ್–ಮಾರ್ಕ್ಸ್ ಚಿಂತನೆಗಳು)

ಕನ್ನಡ–ಕರ್ನಾಟಕ: ಸಂಕಥನಗಳು (ಕನ್ನಡ ನಾಡು ನುಡಿ ಚಿಂತನೆಗಳು)

ರೈತ ಭಾರತ: ಅವಸಾನದ ಅಂಚಿನಲ್ಲಿ (ರೈತರ ಆತ್ಮಹತ್ಯೆ ವಿಶ್ಲೇಷಣೆ)

ಒಂದನೇ ತರಗತಿಯಿಂದ ಇಂಗ್ಲಿಷ್ ಏಕೆ ಬೇಡ? (ಭಾಷಾ ನೀತಿ ಜಿಜ್ಞಾಸೆ)

ಲೋಹಿಯಾ ಕೈಪಿಡಿ

ಲೋಹಿಯಾ ವಾಣಿ

ಜೆಪಿ ಕೈಪಿಡಿ

ಸಂಪಾದನೆ:

ನಮ್ಮ ಸಮಾಜವಾದಿಗಳು (ಸಮಾಜವಾದಿ ನಾಯಕರ ಪರಿಚಯ ಲೇಖನಗಳು)

ಲೋಹಿಯಾ: ವ್ಯಕ್ತಿ–ವಿಚಾರ–ವಿಮರ್ಶೆ (ಲೋಹಿಯಾ ಕುರಿತ ಅಧ್ಯಯನ)

ಕುವೆಂಪು: ಒಂದು ಪುನರನ್ವೇಷಣೆ (ಶತಮಾನೋತ್ಸವ ಸಂಪುಟ)

ಆ ಗಣರಾಜ್ಯ ಈ ಕರ್ನಾಟಕ (ಸುವರ್ಣ ಕರ್ನಾಟಕ ಸಂಪುಟ)

ಒಲವು (ಅಂತರ್ಜಾತಿ ವಿವಾಹಿತರ ಮೊದಲ ಸಮಾವೇಶದ ಸ್ಮರಣ ಸಂಪುಟ)

'ಹೊಸ ಮನುಷ್ಯ' ಮಾಸಿಕ (ಸಮಾಜವಾದಿ ಚಿಂತನೆಯ ನಿಯತಕಾಲಿಕ)

ಸಹ ಸಂಪಾದನೆ:

ಕಾಡಿನ ಹುಡುಗ ಕೃಷ್ಣ (ಶ್ರೀಕೃಷ್ಣ ಆಲನಹಳ್ಳಿ ನೆನಪಿನ ಸಂಪುಟ)

ಮಾಸ್ತಿ ಸಾಹಿತ್ಯ: ಸಮಗ್ರ ದರ್ಶನ (ಶತಮಾನೋತ್ಸವ ಸಂಪುಟ)

ಹಣತೆ (ಡಾ. ಜಿ. ಎಸ್ ಶಿವರುದ್ರಪ್ಪ ಅಭಿನಂದನ ಗ್ರಂಥ)

ಉರಿದ ಪಂಜು (ಕೆ. ರಾಮದಾಸ್ ಸ್ಮರಣ ಸಂಪುಟ)

ನಮ್ಮ ಶಾಮಣ್ಣ (ಕಡಿದಾಳು ಶಾಮಣ್ಣ ಗೌರವ ಗ್ರಂಥ)

ಸಾಹಿತ್ಯ ಸಂವಾದ (ಸಾಹಿತ್ಯ ದ್ವೈಮಾಸಿಕ)

ಅನುವಾದ:

ಜೆಪಿ ಸೆರೆಮನೆ ದಿನಚರಿ



‘ಹೊಸ ಮನುಷ್ಯ’ ಸಮಾಜವಾದಿ ಮಾಸಿಕಕ್ಕಾಗಿ ಬರೆದ ಬಿಡಿ ಟಿಪ್ಪಣಿಗಳ ಈ ಸಂಗ್ರಹವು ಕರ್ನಾಟಕದ ಪ್ರಚಲಿತ ಸಾಹಿತ್ಯಿಕ-ಸಾಂಸ್ಕೃತಿಕ ವಿದ್ಯಮಾನಗಳ ಒಂದು ವಿಮರ್ಶಾತ್ಮಕ ಅವಲೋಕನವಾಗಿದೆ. ಡಿ ಎಸ್ ನಾಗಭೂಷಣರದ್ದೇ ಎನ್ನಬಹುದಾದ ಅನನ್ಯ ಸಮಾಜವಾದಿ ಒಳನೋಟಗಳ ಕಾರಣದಿಂದ, ಇವು ನಮ್ಮ ಸಾಮಾನ್ಯ ಪತ್ರಿಕಾ ಬರಹಗಳ ರೀತಿ ದೂರ ನಿಂತು ಮಾಡುವ ನಿರ್ಲಿಪ್ತ ವಿಮರ್ಶೆಯಾಗಿರದೆ ಘಟನೆಗಳ ಮಧ್ಯೆ ನಿಂತು ನೋಡಿದ್ದರಿಂದಾಗಿ ಮೂಡಿದ ಜವಾಬ್ದಾರಿಯುತ ಮತ್ತು ಕ್ರಿಯಾಶೀಲ ಬರಹಗಳಾಗಿವೆ. ಅದು ಎಸ್ ಎನ್ ಬಾಲಗಂಗಾಧರರ ಸಂಶೋಧನೆಯ ಲೊಳಲೊಟ್ಟೆತನವಿರಬಹುದು, ರಾಜಕಾರಣಿಗಳೆದುರು ವಿದೂಷಕರಂತಾಗಿರುವ ನಮ್ಮ ಸಾಹಿತಿಗಳ ವರ್ತನೆ ಇರಬಹುದು ಅಥವಾ ತಮ್ಮೆಲ್ಲ ಸ್ವಾಯತ್ತತೆಯನ್ನು ಕಳೆದುಕೊಂಡು ಸರ್ಕಾರಿ ಸಂಸ್ಥೆಗಳಂತಾಗಿರುವ ನಮ್ಮ ಅಕಾಡೆಮಿಗಳು ನಡೆಯುತ್ತಿರುವ ರೀತಿ-ನೀತಿಗಳಿರಬಹುದು ಅಥವಾ ಐಕಾನ್‌ಗಳಾಗಿಬಿಟ್ಟಿರುವ ಹಿರಿಯ ಸಾಹಿತಿಗಳ ದ್ವಂದ್ವ ನೀತಿಯೇ ಇರಬಹುದು.

ಇಲ್ಲಿನ ಬರಹಗಳು ಸಿನಿಮಾ, ರಂಗಭೂಮಿ, ಸಾಹಿತ್ಯ ವಿಮರ್ಶೆ, ಸಂಶೋಧನೆ, ವಿಜ್ಞಾನ, ಶಿಕ್ಷಣ, ಅಧ್ಯಾತ್ಮ ಮುಂತಾದ ಸಾರ್ವಜನಿಕ ಮಹತ್ವದ ಮತ್ತು ಆಸಕ್ತಿಯ ಹಲವು ವಿಷಯಗಳನ್ನು ಕುರಿತಾಗಿವೆಯಾದರೂ, ನಾಗಭೂಷಣರ ಲೋಕ ಗ್ರಹಿಕೆಯ ಕ್ರಮದಲ್ಲಿನ ಸಮಗ್ರತೆಯಿಂದಾಗಿ ಆಂತರ್ಯದಲ್ಲಿ ಇವೆಲ್ಲವೂ ಪರಸ್ಪರ ಅಂತಃಸಂಬಂಧಿಗಳಾಗಿ ಸಂಸ್ಕೃತಿಯನ್ನು ರೂಪಿಸುವ ಬಗೆಯನ್ನು ಅನಾವರಣ ಮಾಡುತ್ತಾ ತಮ್ಮ ಅರ್ಥಪೂರ್ಣತೆಯನ್ನು ಸಾದಿಸಿಕೊಳ್ಳುತ್ತವೆ. ಇದರಲ್ಲಿನ ಹಲವು ವಿಚಾರಗಳು ಚರ್ಚಾಸ್ಪದ ಎನಿಸಿದರೂ ಮತ್ತು ಕೆಲ ವಿಚಾರಗಳು ಕೆಲವೆಡೆ ಪುನರಾವರ್ತಿತವಾದಂತೆ ತೋರುತ್ತದಾದರೂ ಪ್ರತಿ ವಿಷಯವನ್ನೂ ಹೊಸದಾಗಿ ಪರಿಭಾವಿಸುವ ಅವರ ದೃಷ್ಟಿಕೋನ ಕುತೂಹಲ ಮೂಡಿಸುತ್ತದೆ.

ಡಾ ಟಿ ಎನ್ ವಾಸುದೇವಮೂರ್ತಿ

ಸಾಂಸ್ಕೃತಿಕ ಟಿಪ್ಪಣಿಗಳು
Cultural Notes

ISBN 93-86278-84-7

9789386278845 05

ಬೆಲೆ: ₹ 150

ವಸಂತ ಪ್ರಕಾಶನ
ನಂ. 360, 10ನೇ ‘ಬಿ’ಮುಖ್ಯ ರಸ್ತೆ, 3ನೇ ಬ್ಲಾಕ್
ಜಯನಗರ, ಬೆಂಗಳೂರು - 560 011
ದೂರವಾಣಿ: 22443996
email: info@vasanthaprakashana.com
www.vasanthaprakashana.com